ದುಡಿವ ಜನರ ಪ್ರಾಣ ಮಿತ್ರ

ಐಕ್ಯರಂಗ

ಸೆಪ್ಟೆಂಬರ್ 2006

ಸುವರ್ಣ ರಾಜ್ಯೋತ್ಸವ ವಿಶೇಷ ಸಂಚಿಕೆ




ಕರ್ನಾಟಕದ ಅಭಿವೃದ್ಧಿಯಲ್ಲಿ ಕಾರ್ಮಿಕ ವರ್ಗದ ಪಾತ್ರ	ಆಧುನಿಕ ಭಾರತ ರೂಪುಗೊಂಡ ಬಗೆ ಮತ್ತು ಭಾಷಾವಾರು ಪ್ರಾಂತ್ಯಗಳ ರಚನೆ	ಸೌಹಾರ್ದ ಪರಂಪರೆಯ ವೈವಿಧ್ಯತೆಗಳು
ಕರ್ನಾಟಕದಲ್ಲಿ ಭೂಮಿ ಪ್ರಶ್ನೆ	ಗಡಿಗಳು ಗೋಡೆಗಳೆ ?	ಕರ್ನಾಟಕದಲ್ಲಿ ಪ್ರತ್ಯೇಕತಾ ಚಳುವಳಿಗಳು

ಯಶಸ್ಸಿನ ಪಯಣ

ಬೆಂ.ಮ.ಸಾ.ಸಂಸ್ಥೆ ಭಾರತದಲ್ಲಿ ಲಾಭಗಳಿಸುತ್ತಿರುವ ಏಕೈಕ ಸಾರ್ವಜನಿಕ ವಲಯದ (ಸಾರಿಗೆ) ಸಂಚಾರ ನಿಗಮವಾಗಿದೆ. ನಾವು ಬೆಂಗಳೂರು ಮತ್ತು ಹೊರವಲಯದ ಸಾರ್ವಜನಿಕರಿಗೆ ಅತ್ಯಂತ ವಿಶ್ವಾಸಾರ್ಹ ಮತ್ತು ಅವಲಂಬನಾರ್ಹ ಸಾರಿಗೆ ವ್ಯವಸ್ಥೆಯನ್ನು ನೀಡುತ್ತಿದ್ದೇವೆ. ಈ ಯಶಸ್ಸಿನ ಪಯಣವನ್ನು ನಿಮ್ಮ ಸಹಕಾರದೊಂದಿಗೆ ಮತ್ತು ನಮ್ಮ ಕಾರ್ಯವಿಧಾನದಲ್ಲಿ ಗಮನಾರ್ಹ ಬದಲಾವಣೆ ತರುವ ಮೂಲಕ ಮುಂದುವರಿಸುವ ಗುರಿ ಹೊಂದಿದ್ದೇವೆ. ಸಾರ್ವಜನಿಕ ಸಾರಿಗೆಯು ಮಿತವ್ಯಯಕಾರಿ, ಸುರಕ್ಷಿತ, ಸ್ವಚ್ಛ ಹಾಗೂ ವೇಗದ ಸೇವೆಯಾಗಿದೆ. ತಮ್ಮ ಅನುಕೂಲಕ್ಕಾಗಿ ಈ ವ್ಯವಸ್ಥೆ.

ಬೆಂ.ಮ.ಸಾ.ಸಂಸ್ಥೆ ಒದಗಿಸುತ್ತಿರುವ ಸೌಲಭ್ಯಗಳು:

- ಮಹಿಳಾ ವಿಶೇಷ ವಾಹನಗಳು – 12 ಮಾರ್ಗಗಳಲ್ಲಿ
- 25 ಗ್ರಿಡ್ ಮಾರ್ಗಗಳು – 89 ಅನುಸೂಚಿಗಳಲ್ಲಿ
- ಪರಿಸರವಾಹಿನಿ – ಪರಿಸರ ಸ್ನೇಹಿ ಬಸ್‌ಗಳು
- ದೂರದ ಹೊರವಲಯ ಪ್ರದೇಶಗಳಿಗೆ 'ಮಿನಿ' ಬಸ್ ಸೇವೆ
- ನಗರದಲ್ಲಿ 25 'ವೋಲ್ವೋ' ಬಸ್‌ಗಳು
- ನಗರ ವೀಕ್ಷಣೆಗೆ 'ಕ್ಯುರಿಟಿಬ' ಬಸ್
- ಹೆಚ್ಚಿನ ಪ್ರಯಾಣಿಕರನ್ನು ಕರೆದೊಯ್ಯುವ 'ವೆಸ್ಟಿಬ್ಯೂಲ್' ಬಸ್‌ಗಳು (ಜಂಟಿ ವಾಹನಗಳು)
- ಶಾಪಿಂಗ್ ಅಗತ್ಯಗಳಿಗೆ 'ಮಾಲ್ ವಿಶೇಷ' ಬಸ್‌ಗಳು
- ರೋಗಿಗಳ ಅಗತ್ಯಗಳಿಗಾಗಿ ಪ್ರಮುಖ ಆಸ್ಪತ್ರೆಗಳನ್ನ ಸಂಪರ್ಕಿಸುವ ಆಸ್ಪತ್ರೆ ವಿಶೇಷ ಬಸ್‌ಗಳು



ಬೆಂ.ಮ.ಸಾ.ಸಂಸ್ಥೆ ವಿವಿಧ ರೀತಿಯ ಪಾಸುಗಳನ್ನು ನೀಡುತ್ತಿದೆ ನಿಮ್ಮ ಅಗತ್ಯಕ್ಕೆ ತಕ್ಕಂತೆ ಪಾಸುಗಳನ್ನು ಕೊಳ್ಳಬಹುದು.

1. ಮಾಸಿಕ ಪಾಸುಗಳು

(ಎ) ನಗರ ಸಾರಿಗೆ (ಕಪ್ಪು ಹಲಗೆ ಬಸ್ಸುಗಳು)	ರೂ. 360/– ಮಾಸಿಕ
(ಬಿ) ನಗರ ಮತ್ತು ಹೊರವಲಯ ಸಾರಿಗೆ (ಕೆಂಪು ಮತ್ತು ಕಪ್ಪು ಹಲಗೆ ಬಸ್‌ಗಳು)	ರೂ. 495/– ಮಾಸಿಕ
(ಸಿ) ನಗರ, ಹೊರವಲಯ ಮತ್ತು ಪುಷ್ಪಕ್ ಸೇವೆಗಳು (ಕಪ್ಪು, ಕೆಂಪು ಮತ್ತು ಪುಷ್ಪಕ್ ಸೇವೆಗಳು)	ರೂ. 530/– ಮಾಸಿಕ
(ಡಿ) ಗುರುತು ಚೀಟಿ	ರೂ. 50/– ವಾರ್ಷಿಕ

2. ದೈನಂದಿನ ಪಾಸು ರೂ. 25/–

3. ವಾರದ ಪಾಸು ರೂ. 150/–

ಪ್ರತಿ ತಿಂಗಳು ಸುಮಾರು 2,20,000 ಮಾಸಿಕ ಪಾಸುಗಳನ್ನು ವಿತರಿಸಲಾಗುತ್ತಿದೆ.
ಪ್ರತಿ ದಿನ ಸುಮಾರು 1,46,000 ದೈನಂದಿನ ಪಾಸುಗಳು ವಿತರಣೆಯಾಗುತ್ತಿದೆ







ಬೆಂಗಳೂರು ಮಹಾನಗರ ಸಾರಿಗೆ ಸಂಸ್ಥೆ


ಬೆಂ.ಮ.ಸಾ.ಸಂ. ಕೇಂದ್ರ ಕಛೇರಿ, ಶಾಂತಿನಗರ, ಬೆಂಗಳೂರು – 560 027. ದೂರವಾಣಿ: 22952535 ಕಾಲ್ ಸೆಂಟರ್: 12667
Email: bmtc@bgl.vsnl.net.in ctm@bmtcinfo.com ctmo@bmtcinfo.com URL: www.bmtcinfo.com
ಹೆಚ್ಚಿನ ಮಾಹಿತಿಗಾಗಿ ಸಂಪರ್ಕಿಸಿ: 99456 70132, 99456 70133, 99456 70134, 99456 70135, 9945224422

triple-ess.com

'ಐಕ್ಯರಂಗ' ವಾರಪತ್ರಿಕೆ

ದುಡಿವ ಜನರ ಪ್ರಾಣಮಿತ್ರ

Reg. No. 17015/64 CPM(G)/ KA /BGS-119/2006-08
PRB DECR 319-79/79 AIKYARANGA WEEKLY



ಕರ್ನಾಟಕ ಸುವರ್ಣ ರಾಜ್ಯೋತ್ಸವ ವಿಶೇಷ ಸಂಚಿಕೆ

ಸೆಪ್ಟೆಂಬರ್ - 2006

ಬೆಲೆ : ರೂ. 20/-

ಐಕ್ಯರಂಗ ವಾರಪತ್ರಿಕೆ
ನಂ.12, 18ನೇ ಅಡ್ಡರಸ್ತೆ, ಸಂಪಂಗಿರಾಮನಗರ,
ಬೆಂಗಳೂರು - 560 027
ದೂರವಾಣಿ : 080-22236462
ಇ-ಮೇಲ್ : samabalu@dataone.in

ಮುದ್ರಕರು : ಕ್ರಿಯಾ ಪ್ರಕಾಶನ ಪ್ರೈ.ಲಿ.
ನಂ.12, 18ನೇ ಕ್ರಾಸ್, ಎಸ್.ಆರ್.ನಗರ,
ಬೆಂಗಳೂರು - 560 027

ಒಳಪುಟಗಳಲ್ಲಿ.......

ಮುದ್ರಕರು : ಜಿ.ಎನ್. ನಾಗರಾಜ್

ಸಂಪಾಕದರು : ಎಸ್.ವೈ. ಗುರುಶಾಂತ್



ಕೃತಜ್ಞತೆಗಳು

- ✪ ಲೇಖಕರಿಗೆ
- ✪ ಜಾಹೀರಾತುದಾರರಿಗೆ
- ✪ ಕೆಲವು ಮಾಹಿತಿ ಹಾಗೂ ಚಿತ್ರ ಬಳಸಿಕೊಳ್ಳಲಾದ ನವ ಕರ್ನಾಟಕ ಪಬ್ಲಿಕೇಷನ್ಸ್ ಪ್ರೈ.ಲಿ., ಬೆಂಗಳೂರು
- ✪ ಕರ್ನಾಟಕ ಗೆಜೆಟಿಯರ್
- ✪ ಆರ್.ರಾಮಕೃಷ್ಣ, ವೇದರಾಜ್, ವೀರಣ್ಣ ಕಲ್ಮನಿ ಹಾಗೂ ಕ್ರಿಯಾ ಪ್ರಕಾಶನದ ಚಂದ್ರು, ರಾಮು, ರೇಖಾ, ರವಿ ಮತ್ತು ಕಾರ್ಮಿಕ ಬಂಧುಗಳಿಗೆ ಹಾಗೂ
- ✪ ಸಹಕರಿಸಿದ ಎಲ್ಲರಿಗೂ

ಪದ ಪಠಣದಲ್ಲೇ ಸೊರಗುತ್ತಿರುವ ಸರ್ಕಾರಿ ಸಂಭ್ರಮ

ಆತ್ಮೀಯರೇ,

ನವೆಂಬರ್ 1,2005ಕ್ಕೆ ಕರ್ನಾಟಕ ಏಕೀಕರಣದ 50 ವರ್ಷಗಳ ಆಚರಣೆಗೆ ಚಾಲನೆ ಸಿಕ್ಕಿದೆ. ಒಂದು ಭಾಷಿಕರು ಒಂದೆಡೆ ಬಾಳಬೇಕೆಂದು ಆಧುನಿಕ ಭಾರತದಲ್ಲಿ ಕರ್ನಾಟಕ ಸರ್ವತೋಮುಖ ಅಭಿವೃದ್ಧಿ ಸಾಧಿಸಿ ಜನತೆಯ ಬದುಕು ಹಸನಾಗಬೇಕು ಎಂಬ ಕನಸಿನೊಂದಿಗೆ ಭಾಷಾವಾರು ಪ್ರಾಂತ್ಯದ ರಚನೆಗಾಗಿ ನಡೆದ ಚಳುವಳಿ ಚಾರಿತ್ರಿಕವಾದುದು. ನಾಡು, ನುಡಿ ಸಂಸ್ಕೃತಿಗಳಿಗಾಗಿ, ಉತ್ತಮ ಬದುಕಿಗಾಗಿ ನಡೆದ ಈ ಚಳುವಳಿಯೇ ಒಂದು ತ್ಯಾಗ ಬಲಿದಾನಗಳ ಮಹಾಗಾಥೆ. ಅದು ಇತಿಹಾಸದ ಪುಟಗಳಲ್ಲಿನ ಒಂದು ಸುವರ್ಣ ಅಧ್ಯಾಯ. ಸ್ವಾತಂತ್ರ್ಯ ಸಂಗ್ರಾಮದ ಎಚ್ಚರ ಹೋರಾಟ ಸ್ಫೂರ್ತಿ ಸಹ ಇದರಲ್ಲಿದೆ. ಸ್ವತಂತ್ರಗೊಂಡ ಭಾರತ ಹೇಗೆ ಬೆಳೆಯಬೇಕು? ವೈವಿಧ್ಯತೆಗಳ ಈ ದೇಶ ಸಾಗಬೇಕಾದ ಹಾದಿಯೇನು? ಎಂಬುದಕ್ಕೆ ಜನತೆ ಆಶಿಸಿ ನಡೆಸಿದ ಪ್ರಜಾಸತ್ತಾತ್ಮಕ ಹೋರಾಟವು ಈ ಚಳುವಳಿಯ ಅಂತ:ಸತ್ವವಾಗಿದೆ. ನಾಡಿನ ಭಾಷೆ, ಸಂಸ್ಕೃತಿಯ ರಕ್ಷಣೆ, ಬೆಳವಣಿಗೆಯ ಜೊತೆಗೆ ನಾಡಿನ ಜನತೆಯ ಜೀವನದ ಸಮಗ್ರ ಪರಿವರ್ತನೆ ಹಾಗೂ ಅಭಿವೃದ್ಧಿಯ ಮಹಾ ಆಶೋತ್ತರದ ಹಿನ್ನೆಲೆಯಲ್ಲಿ ರೂಪುಗೊಂಡ ವಿಶಾಲ ಕರ್ನಾಟಕಕ್ಕೀಗ ಅರ್ಧ ಶತಮಾನಗಳ ಇತಿಹಾಸದ ಸಿಂಹಾವಲೋಕನದ ಸಂದರ್ಭ.

ಸುವರ್ಣ ಕರ್ನಾಟಕದ ಆಚರಣೆಯನ್ನು ವಿಜೃಂಭಣೆಯಿಂದ ನಡೆಸಲಾಗುವುದೆಂದು ಕರ್ನಾಟಕ ಸರ್ಕಾರ ಘೋಷಿಸಿದೆ. ಸುವರ್ಣ ಕರ್ನಾಟಕದ ಚಿಹ್ನೆ, ಒಂದಿಷ್ಟು ಜಾಹೀರಾತು ಪ್ರಕಟಣೆ ದಿಬ್ಬಣದಂತಹ ಒಂದೆರಡು ಕಾರ್ಯಕ್ರಮಗಳನ್ನು ಬಿಟ್ಟರೆ ಏಕೀಕರಣದ ಆಶಯಗಳ ಬಗೆಗಾಗಲೀ, ನಾಡು ನುಡಿಯ ಬೆಳವಣಿಗೆ ಸಾಧನೆ ಸವಾಲುಗಳ ಬಗ್ಗೆ ಅತ್ಯಂತ ಗಂಭೀರವಾದ ಚಿಂತನೆ ಹಾಗೂ ಸಾಗಬೇಕಾದ ಹಾದಿ ಕೈಗೊಳ್ಳಬೇಕಾದ ಕ್ರಮಗಳ ಬಗ್ಗೆ ಅಂತಹ ಯಾವುದೇ ಪ್ರಯತ್ನವನ್ನು, ಕೊನೆಗೆ ಕನಿಷ್ಟ ಕಾಳಜಿಯನ್ನು ತೋರಿಸಿಲ್ಲ. ಅಂತಹ ಚರ್ಚೆಗಳೂ ಆರಂಭಗೊಳ್ಳಲಿಲ್ಲ. ನಾಡು ಕಟ್ಟುವ ಕನಸಿಗೂ ಇಲ್ಲಿ ಬರವಿದೆ, ಬಹುರಾಷ್ಟ್ರೀಯ ಕಂಪನಿಗಳು, ವಿದೇಶಿ ಹಣಕಾಸಿನ ಧಣಿಗಳ, ಭೂಮಾಲೀಕ ಬಂಡವಾಳಗಾರರ ಕನಸುಗಳೇ ಸರ್ಕಾರದ ಕನಸಾಗಿ, ಕಾರ್ಯಸೂಚಿಯಾಗಿ ಮಾರ್ಪಟ್ಟಿರುವಾಗ ಜನತೆಗೆ ಸ್ಥಾನವೆಲ್ಲಿ? ಭಾಷೆ, ಸಂಸ್ಕೃತಿಯ ಬಗೆಗಿನ ದೊಡ್ಡ ಗಂಟಲಿನ ಇವರ ಮಾತುಗಳೂ ಸಹ 'ತೋರುಂಬುವ ಲಾಭ'ವಷ್ಟೇ ಜನತೆಯ ಬದುಕಿನ ನೈಜ ಪ್ರಶ್ನೆಗಳನ್ನು ಆಧರಿಸದ ಇಂತಹದ್ದನ್ನೇ ಕರುನಾಡಿನ ಕನಸು ಎಂದು ಒಪ್ಪಿಸುವ ಯತ್ನಗಳೂ ನಡೆದಿವೆ. ಇಂತಹ ಮಾಯಾ ಬಜಾರಿನಲ್ಲಿ ಕನ್ನಡದ ಕೆಲವು ಸಾಹಿತಿಗಳು, ಬುದ್ಧಿಜೀವಿಗಳು, ಕೆಲ ಚಳುವಳಿಗಾರರೂ ಓಲಾಡುತ್ತಿದ್ದಾರೆ. ಆದ್ಯತೆಗಳ ಸ್ಥಾನಪಲ್ಲಟದ ಆಟದಲ್ಲಿ ಪ್ರಜ್ಞಾಪೂರ್ವಕವಾಗಿಯೋ, ಅಪ್ರಜ್ಞಾಪೂರ್ವಕವಾಗಿಯೋ ಪಾತ್ರಧಾರಿಗಳಾಗುತ್ತಿದ್ದಾರೆ.

ಭಾಷೆ ಸಂಸ್ಕೃತಿಯ ಹಿರಿಮೆ ಗರಿಮೆಯ ಕೊಂಡಾಟ ಅವುಗಳನ್ನು ಬೆಳೆಸಿಬಿಡುತ್ತದೆ ಎಂದು, ನಂಜುಂಡಪ್ಪನವರ ವರದಿಯ ಪದಪಠಣವೇ ಪ್ರಾದೇಶಿಕ ಅಸಮಾನತೆಯನ್ನು ತೊಲಗಿಸುತ್ತದೆಯೆಂದೂ, ಅಭಿವೃದ್ಧಿಯ ಮಾತಿನ ಮಂಟಪವು ಸಮೃದ್ಧಿ ತರಲಿದೆಯೆಂದು ಜೆಡಿ(ಎಸ್)-ಬಿಜೆಪಿ ಪಕ್ಷಗಳ ಸಮ್ಮಿಶ್ರ ಸರ್ಕಾರ ಹೇಳುತ್ತಿದೆ.

ಕೋಟಿ, ಕೋಟಿ ಭೂಹೀನ ಕೃಷಿ ಕೂಲಿಕಾರರು, ತೀವ್ರ ಬಿಕ್ಕಟ್ಟನ್ನು ಎದುರಿಸುತ್ತಿರುವ ರೈತರು, ಉದ್ಯೋಗ, ಆದಾಯ ಕಳೆದುಕೊಳ್ಳುತ್ತಾ, ದಿಕ್ಕೇಡಿಗಳಾಗುತ್ತಿರುವ ಕಾರ್ಮಿಕರು, ನಿರುದ್ಯೋಗಿಗಳ ಬದುಕಿನ ಬಗ್ಗೆ, ಈ ವಿಭಾಗಗಳ ಅಭಿವೃದ್ಧಿಯೇ ನಾಡಿನ ಅಭಿವೃದ್ಧಿ ಎಂಬ ಬಗ್ಗೆ ತಾತ್ಸಾರದ, ನಿರ್ಲಕ್ಷ್ಯದ ನಿಲುವಿಗೆ ಆಳವಿದೆ.

ಅಭಿವೃದ್ಧಿ ಸಾಧಿಸಲೆಂದೇ ಅವತರಿಸಿರುವುದಾಗಿ ಕೋಮುವಾದಿಗಳು, ಜಾತ್ಯಾತೀತರ ಕೆಡಿಎಫ್ ಸರ್ಕಾರ ಡಂಗುರ ಹೊಡೆಯುತ್ತಿದೆ. ಆದರೆ ಅಭಿವೃದ್ಧಿಗೆ ಮಾರಕವಾಗಿರುವ ಉದಾರೀಕರಣ, ಜಾಗತೀಕರಣದ ಆರ್ಥಿಕ ನೀತಿಗಳ ಜಾರಿಗೆ ಬೆನ್ನು ಹತ್ತಿದೆ. 108 ತಾಲ್ಲೂಕುಗಳಲ್ಲಿ ಬರಗಾಲವಿದೆ. ಜನ, ಜಾನುವಾರು ಉಳಿಸುವ ಯಾವುದೇ ದೃಢವಾದ ಕ್ರಮಗಳು ಇನ್ನೂ ಇಲ್ಲವಾಗಿದೆ. ಗಂಜಿಗೆ ಗತಿಯಿಲ್ಲದೇ ಕೃಷಿ ಕೂಲಿಕಾರರು, ರೈತರು, ಗ್ರಾಮೀಣ ಬಡಜನ ಉದ್ಯೋಗ ಹುಡುಕಿ ಗುಳೇ ಹೊರಡುತ್ತಿದ್ದಾರೆ. ಆದರೆ ಒಲೆ ಹತ್ತಿ ಉರಿದೊಡೆ ನಿಲ್ಲಬಹುದು, 'ಧರೆ ಹತ್ತಿ ಉರಿದೆಡೆ ಹೋಗುವುದೆಲ್ಲಿಗೆ'? ಎಂಬಂತಹ ಸ್ಥಿತಿಯಲ್ಲಿ ಬರ ಪರಿಹಾರ ಕಾಮಗಾರಿ, ಕೂಲಿಗಾಗಿ ಕಾಳು, ಗ್ರಾಮೀಣ ಉದ್ಯೋಗ ಖಾತ್ರಿ ಯೋಜನೆಯ ಸಮಗ್ರ ಜಾರಿಗೆ ಎಳ್ಳಷ್ಟು ಕ್ರಮಗಳಿಲ್ಲ. ಭೂಸುಧಾರಣೆ ಎಂಬುದು ಇವರ ಪದಕೋಶದಿಂದ ಮರೆಯಾಗಿ ಹೋಗಿದೆ. ಕಾರ್ಷಿಕ ಬಿಕ್ಕಟ್ಟಿನಿಂದ ರೈತರ ಆತ್ಮಹತ್ಯೆ ಸರಣಿ ಮತ್ತೆ ಆರಂಭವಾಗಿದ್ದು ಮಣ್ಣಿನ ಹಾಗೂ ರೈತರ ಮಕ್ಕಳ ಈ ಸರ್ಕಾರಕ್ಕೆ ಇದು ಬಾಧಿಸುತ್ತಲೇ ಇಲ್ಲ. ನೀರಾವರಿ ಯೋಜನೆಗಳು, ವಿದ್ಯುತ್ ಉತ್ಪಾದನೆ, ಹೊಸ ಕೈಗಾರಿಕೆಗಳ ಆರಂಭಕ್ಕೆ ಕ್ರಮಗಳಿಲ್ಲ. ಅಕ್ರಮ ಗಣಿಗಾರಿಕೆಯ ಬಗ್ಗೆ ಎಷ್ಟೆಲ್ಲಾ ಅಲ್ಲೋಲಕಲ್ಲೋಲ ಚರ್ಚೆ, ವಾಗ್ವಾದಗಳು ನಡೆದರೂ ಅದನ್ನು ತಡೆಯುವ ಕಿರು ಬೆರಳ ಯತ್ನವೂ ಇಲ್ಲ. ಬದಲಾಗಿ ರಾಷ್ಟ್ರದ, ನಾಡಿನ ಅಮೂಲ್ಯ ಸಂಪತ್ತಿನ ಲೂಟಿಗೆ ಮುಕ್ತ ಅವಕಾಶ ಹಾಗೇ ಮುಂದುವರಿದಿದೆ. ವ್ಯಾಪಕ ಭ್ರಷ್ಟಾಚಾರ, ಅಕ್ರಮ ಭೂಪರಭಾರೆ, ಭೂಕಬಳಿಕೆಯ ಭೂಮಾಫಿಯಾಗಳಿಗೆ ಕುಮ್ಮಕ್ಕು, ಅಂದರಿಂದಾದ ಹತ್ಯಾಕಾಂಡಗಳಿಗೆ ತಡೆಯಿಲ್ಲ. ದಲಿತರ ಮೇಲೆ, ಮಹಿಳೆಯರ ಮೇಲಿನ ದೌರ್ಜನ್ಯಗಳು ಅವ್ಯಾಹತವಾಗಿ ನಡೆಯುತ್ತಿವೆ. ಅಪರಾಧಿಗಳು

ರಾಜಾರೋಷವಾಗಿ ತಿರುಗುತ್ತಿದ್ದಾರೆ. ಸಾಮಾಜಿಕ ಅಸಮಾನತೆ ಹೆಚ್ಚುತ್ತಲೇ ಇದೆ. ವಿದೇಶಿ ಹಣಕಾಸು ಸಂಸ್ಥೆಗಳ ಸಾಲ-ಶರತ್ತುಗಳಿಗೆ ಸೇವಾ ವಲಯವನ್ನು ಒಳಗೊಂಡು ಹಲವಾರು ರಂಗಗಳಲ್ಲಿ ಸಾಲದ ಉರುಳಿಗೆ ಕೊರಳು ಕೊಡಲಾಗುತ್ತಿದೆ.

ಇಂತಹ ಗಂಭೀರ ಪರಿಸ್ಥಿತಿಯು ಸುವರ್ಣ ಕರ್ನಾಟಕದ ಆಚರಣೆಯ ಅಂಗಳದಲ್ಲೇ ಇದೆ. ಇನ್ನು ಅಭಿವೃದ್ಧಿ ಸಾಧನೆಯೇ ಪರಮ ಗುರಿ ಎಂಬುದಕ್ಕೆ ಅರ್ಥವೆಲ್ಲಿ? ಸುವರ್ಣ ಕರ್ನಾಟಕದ ನಿರ್ಮಾಣವೆಲ್ಲಿ? ಹೀಗೆ ಮೂಲಭೂತ ಸಮಸ್ಯೆಗಳನ್ನು ಪರಿಹರಿಸಲು ಕಿಂಚಿತ್ತೂ ಕ್ರಮವಹಿಸದ ಸರ್ಕಾರ ಬೆಳಗಾವಿಯಲ್ಲಿ ವಿಧಾನಸಭೆಯ ಅಧಿವೇಶನ ನಡೆಸಿ ಪೌರುಷ ಪ್ರದರ್ಶನಕ್ಕೆ ಸಜ್ಜಾದದ್ದು ಅತ್ಯಂತ ನಾಚಿಕೆಗೇಡಿನ ಸಂಗತಿಯಾಗಿದೆ. ಈ ಅಧಿವೇಶನದಲ್ಲಿ ಜ್ವಲಂತ ಪ್ರಶ್ನೆಗಳ ಬಗೆಗೆ, ಅವರೇ ಸಾರಿದ ಪ್ರಾದೇಶಿಕ ಅಸಮಾನತೆ ತೊಲಗಿಸುವ ಬಗ್ಗೆ ಯಾವುದೇ ನಿರ್ಧಾರಗಳನ್ನು ಪ್ರಕಟಿಸಲು ವಿಷಯಗಳನ್ನೇ ಇಟ್ಟುಕೊಂಡಿಲ್ಲ. ಗಡಿ ವಿವಾದವನ್ನು ಉದ್ರೇಕಿಸಿ ಮಹಾರಾಷ್ಟ್ರದೊಂದಿಗೆ ಕದನಕ್ಕೆ ಪ್ರಚೋದಿಸಿರುವುದು (ಪರಸ್ಪರರೂ) ಸುವರ್ಣ ಕರ್ನಾಟಕದ ಸಂಭ್ರಮವೆಂದೇ ಜನತೆ ನಂಬಬೇಕಿದೆ. ಆಂತರಿಕ ಕಿತ್ತಾಟಗಳು, ಹಗರಣ, ಭ್ರಷ್ಟಾಚಾರಗಳಿಂದ ಬಿರಿಯುತ್ತಿರುವ ಜೆಡಿ(ಎಸ್), ಬಿಜೆಪಿಯ ಸಮ್ಮಿಶ್ರ ಸರ್ಕಾರ ಜನರ ಗಮನವನ್ನು ಬೇರೆಡೆಗೆ ಸೆಳೆದು ಬದುಕುಳಿಯಲು ಅವರಿಗೆ ಅಗತ್ಯವಿರಬಹುದು. ಜನತೆಗಲ್ಲ! ಹಾಗೆಯೇ ಬಾಬಾಬುಡನ್‌ಗಿರಿಯಲ್ಲಿ ವಿವಾದ ಹುಟ್ಟುಹಾಕಿ ಕೋಮುದ್ವೇಷ ವಿಭಜನೆ ತರುವ ಸಂಘಪರಿವಾರದ ಹುನ್ನಾರಗಳಲ್ಲಿಯೂ.

ಸುವರ್ಣ ಕರ್ನಾಟಕದ ಆಚರಣೆಯ ಹಿನ್ನೆಲೆಯಲ್ಲಿ ಸೆಪ್ಟೆಂಬರ್ ಕೊನೆಯವಾರ ಸೇರಿದ್ದ ವಿಧಾನ ಸಭೆಯ ಬೆಳಗಾವಿ ಅಧಿವೇಶನ ನಾಡಿನ ಸರ್ವತೋಮುಖ ಅಭಿವೃದ್ಧಿ ಬಗ್ಗೆ ಚರ್ಚಿಸದೇ ಹೋಗಿರುವುದಕ್ಕೆ ಪ್ರಮುಖವಾದ ಕಾರಣ ಅಂತಹ ಯಾವುದೇ ಮೂಲಭೂತ ಪ್ರಶ್ನೆಗಳನ್ನು ಕೈಗೆತ್ತಿಕೊಳ್ಳುವುದು ಆಳುವ ಭೂಮಾಲಿಕ, ಬಂಡವಾಳಶಾಹಿ ವರ್ಗಗಳಿಗೆ ಬೇಕಿಲ್ಲ ತನ್ನ ವರ್ಗ ಹಿತಾಸಕ್ತಿಗೆ ವಿರುದ್ಧವಾದುದು ಅವುಗಳು ಎಂದು ನಿರ್ಧರಿಸಿವೆ.

ಹಿಂದೆ 1956ರ ನವೆಂಬರ್ 1ರಂದು ಕರ್ನಾಟಕದ ಏಕೀಕರಣವಾದಾಗ, ಅದನ್ನು ಘೋಷಿಸಿದಾಗ ಅಂದು ಜನತೆಯಲ್ಲಿ ಸಮಾಧಾನದ, ತ್ಯಾಗಬಲಿದಾನಗಳ ಹೋರಾಟ ಸಾರ್ಥಕವಾದ ಭಾವನೆ. ಹಾಗೇ ನಾಡು, ನುಡಿ ತಮ್ಮೆಲ್ಲರ ಬದುಕು ಹಸನಾಗುವುದು, ಮುನ್ನಡೆ ಸಾಧಿಸಲಾಗುವುದು ಎಂಬ ಅಪಾರ ನಿರೀಕ್ಷೆ. ಇವುಗಳ ಸಾಕಾರಕ್ಕೆ ಅಂದಿನ ಸರ್ಕಾರ ಬದ್ಧವಂತಲೂ ಬಂದ ಭರವಸೆ ಮೇಲೆ ನಿರೀಕ್ಷೆಗಳು, ನಂಬಿಕೆಗಳು. ಆದರೆ ಮರು ತಿಂಗಳ ಬಳಿಕ ಅಂದರೆ 1956ರ ಡಿಸೆಂಬರ್ 19ರಂದು ಆರಂಭಗೊಂಡ ಏಕೀಕರಣೋತ್ತರ ಪ್ರಥಮ ವಿಧಾನಸಭೆಯ ಅಧಿವೇಶನ (1.5 ಕೋಟಿ ರೂಪಾಯಿಯ ವೆಚ್ಚದಲ್ಲಿ ಕಟ್ಟಲಾದ ವಿಧಾನಸೌಧದಲ್ಲಿ....)ದಲ್ಲಿ ಗವರ್ನರ್ ಭಾಷಣದಲ್ಲಿ ಅಂದಿನ ಪ್ರಮುಖ ಪ್ರಶ್ನೆಗಳನ್ನು ಬಗೆಹರಿಸುವ, ಎದುರಿಸುವ, ಸಾಧಿಸುವ ಯಾವುದೇ ನಿರ್ದಿಷ್ಟ ಪ್ರಸ್ತಾಪಗಳು ಇರಲೇ ಇಲ್ಲ. ಅಧಿಕಾರದ ಚುಕ್ಕಾಣಿ ಹಿಡಿದ ಕಾಂಗ್ರೆಸ್ ಪಕ್ಷದ ವರ್ಗ ಧೋರಣೆಗಳೇ ಇದಕ್ಕೆ ಕಾರಣ. ಅದರ ಲಕ್ಷ್ಯವಿದ್ದುದು ಭೂಮಾಲಕ ಬಂಡವಾಳಶಾಹಿ ಅಭಿವೃದ್ಧಿ ಪಥ ಹೊರತು, ಇಡೀ ಜನತೆಯ ಅಭ್ಯುದಯದ ಪಥವಲ್ಲ. ಹೀಗಾಗಿ 1956ರ ನಂತರ ದೇಶದಲ್ಲಿ ಅದರ ಭಾಗವಾಗಿ ರಾಜ್ಯದಲ್ಲಿ ಹಲವು ಸಾಧನೆ ಮಾಡಲಾಗಿದೆ ನಿಜ. ಒಂದಿಷ್ಟು ಜನತೆಗೂ ಪ್ರಯೋಜನ ಆಗಿರಬಹುದು. ಅವೆಲ್ಲಾ ವರ್ಗಹಿತಗಳ ನೀತಿಗಳ ಅಡಿಯಲ್ಲಿ ಎಂಬುದನ್ನು ಮರೆಯಲಾಗದು. ಇದು ಕೇವಲ ಕರ್ನಾಟಕಕಕ್ಕೆ ಸೀಮಿತವಾಗದೇ ಮುಖ್ಯವಾಗಿ ಭಾರತದ ಆಳುವ ವರ್ಗಗಳು ಅನುಸರಿಸಿದ ನೀತಿಗಳಿಂದ ಎಂಬುದು ಪ್ರಮುಖವಾದದ್ದು. ಇಂತಹ ಬಂಡವಾಳಶಾಹಿ ಅಭಿವೃದ್ಧಿ ಪಥದಿಂದಾಗಿ, ಪ್ರಾದೇಶಿಕ ಅಸಮಾನತೆ ಅನಭಿವೃದ್ಧಿ, ತಾರತಮ್ಯಗಳು ತೊಲಗದೇ ಹಾಗೆ ಉಳಿದುಬಂದಿವೆ. ಪ್ರತ್ಯೇಕವಾದಿ ವಿಭಜನವಾದೀ ಶಕ್ತಿಗಳಿಗೆ ಇದೇ ಭೂಮಿಕೆಯಾಗಿದೆ. ಇಂದು ಬೇಕಿರುವುದು ಪ್ರತ್ಯೇಕ ರಾಜ್ಯವಲ್ಲ. ರಾಷ್ಟ್ರವಲ್ಲ. ಬದಲಾಗಿ ಒಂದು ಭಾಷೆ ಮಾತನಾಡುವವರೆಲ್ಲ ಒಂದು ಕಡೆ ಇರಬೇಕಾ, ಪ್ರಜಾಸತ್ತಾತ್ಮಕ ಆಡಳಿತದಡಿ ಇರಬೇಕು. ಆಗಲೇ ಮುನ್ನಡೆ ಸಾಧ್ಯ ಎಂದು ಒಂದುಗೂಡಿದ ಆ ಸ್ಫೂರ್ತಿಯಡಿ ಸರ್ವಾಂಗೀಣ ಅಭಿವೃದ್ಧಿ ಸಾಧ್ಯವಾಗಲಿಲ್ಲ. ಇಂತಹ ಸಾಧನೆಯಾಗಬೇಕಾದರೆ ದೇಶದ ಉತ್ಪಾದನಾ ವ್ಯವಸ್ಥೆ-ಸಂಬಂಧಗಳಲ್ಲಿ ಮೂಲಭೂತ ಬದಲಾವಣೆ ಅತ್ಯಗತ್ಯ. ಇದರತ್ತ ನಡೆದ ಹೆಜ್ಜೆಯಾಗಿ ಭೂಹೀನರಿಗೆ ಭೂಮಿ ದೊರಕಿಸುವ ಪ್ರಗತಿಪರ ಭೂಸುಧಾರಣೆ. ಅದರ ಆಧಾರದಲ್ಲಿ ಬೆಳೆದ ಕೈಗಾರಿಕೆ ಇತ್ಯಾದಿ. ಇಂದಿನ ಸರ್ಕಾರಗಳು ಆಳುವ ವರ್ಗಗಳು ಹೇಳುವ ಅಭಿವೃದ್ಧಿ ಹಾದಿಯನ್ನು ಸ್ಪಷ್ಟವಾಗಿ ತಿರಸ್ಕರಿಸಿ ಜನಪರ ಪರ್ಯಾಯಕ್ಕಾಗಿ ಹೋರಾಡಬೇಕಾದುದು ಅತ್ಯಗತ್ಯ.

ಕರ್ನಾಟಕದ ಸುವರ್ಣ ರಾಜ್ಯೋತ್ಸವದ ಸನ್ನಿವೇಶದಲ್ಲಿ ಸಾಧನೆ ಸವಾಲುಗಳ ಕುರಿತಂತೆ ಸಮಗ್ರ ದೃಷ್ಟಿ ಒದಗಿಸುವಂತಹ ಲೇಖನಗಳ ಸಂಚಿಕೆ ಹೊರತರಲು ಪತ್ರಿಕೆ ನಿರ್ಧರಿಸಿತು. ಈ ಹಿಂದೆ ಅಂತಹ ಹಲವು ಸಂಚಿಕೆ ಪ್ರಕಟವಾಗಿವೆ. ವಿಶದವಾಗಿ ಲೇಖನಗಳಿಗೆ ಕೋರಲಾಯಿತು. ಆದರೆ ಈ ಬಾರಿಯೂ ನಮಗೆ ದಕ್ಕಿದಷ್ಟು ನಿಮ್ಮ ಕೈಗಿಡುತ್ತಿದ್ದೇವೆ. ನಮ್ಮ ಯತ್ನ ಅಪೂರ್ಣ ಎಂಬುದು ನಮಗರಿವಿದೆ. ಅದನ್ನು ಮುಂದಿನ ದಿನಗಳಲ್ಲಿ ನಿಮ್ಮಗಳ ಸಹಕಾರದಿಂದ ಪೂರೈಸಲಾಗುವುದು. ಈ ಸಂಚಿಕೆಯಲ್ಲಿ ವೈವಿಧ್ಯತೆಯ ವಿಷಯಗಳ ಬಗ್ಗೆ ಆಯಾ ರಂಗಗಳಲ್ಲಿನ ಪರಿಣಿತರು, ಅನುಭವಿಗಳು ತಮ್ಮ ವಿಚಾರಗಳನ್ನು ಹಂಚಿಕೊಂಡಿದ್ದಾರೆ. ಅವರಿಗೂ ಲೇಖಕರಿಗೆ, ಜಾಹೀರಾತುದಾರರಿಗೆ, ಓದುಗರಿಗೆ, ಸಿದ್ಧಪಡಿಸಲು ಶ್ರಮಿಸಿದ ಎಲ್ಲಾ ಸಂಗಾತಿಗಳಿಗೂ ಕೃತಜ್ಞತೆಗಳು. ■


ಸಂಪಾದಕರು

ಕರ್ನಾಟಕದ ಅಭಿವೃದ್ಧಿಯಲ್ಲಿ ಕಾರ್ಮಿಕ ವರ್ಗದ ಪಾತ್ರ

- ವಿ.ಜೆ.ಕೆ. ನಾಯರ್

ನಮ್ಮ ಸಮಾಜದ ಎಲ್ಲ ಸಂಪತ್ತು, ಅಭಿವೃದ್ಧಿ ಸಮಸ್ತ ಪ್ರಗತಿ ಸೃಷ್ಟಿಯ ಹಿಂದಿನ ಚಾಲಕ ಶಕ್ತಿ-ಶ್ರಮ. ಅದರಲ್ಲಿಯೂ ಆಧುನಿಕ ಸಮಾಜದಲ್ಲಿನ ಕಾರ್ಮಿಕ ವರ್ಗದ ಶ್ರಮ ನಮ್ಮ ಸಮಾಜದ ಬೆಳವಣಿಗೆಯ ಸ್ಥಿತಿಯನ್ನು ನಿರೂಪಿಸುವಲ್ಲಿ ನಿರ್ಣಾಯಕ ಪಾತ್ರ ವಹಿಸಿದೆ. ಈ ಮಾತು ಕರ್ನಾಟಕಕ್ಕೂ ಅನ್ವಯವಾಗುತ್ತದೆ.

ಕರ್ನಾಟಕದ ಸಂದರ್ಭದಲ್ಲಿ ಕರ್ನಾಟಕದ ಬೆಳವಣಿಗೆಯ ಇಂದಿನ ಸ್ವರೂಪ. ಆ ಸ್ವರೂಪವನ್ನು ನಿರ್ಧರಿಸುವಲ್ಲಿ ಐತಿಹಾಸಿಕವಾಗಿ ಇಲ್ಲಿನ ದುಡಿಯುವ ವರ್ಗ ಮತ್ತು ಆಧುನಿಕ ಕಾರ್ಮಿಕ ವರ್ಗ ವಹಿಸಿದ ಪಾತ್ರವೇನು ಎಂದು ಈ ತಮ್ಮ ಲೇಖನದಲ್ಲಿ ವಿವರಿಸಿದ್ದಾರೆ, ನಮ್ಮ ನಾಡಿನ ಹಿರಿಯ ಕಾರ್ಮಿಕ ಮುಖಂಡರೂ, ಸಿಪಿಐ(ಎಂ)ನ ರಾಜ್ಯ ಕಾರ್ಯದರ್ಶಿ ಮಂಡಳಿ ಸದಸ್ಯರೂ ಆದ ಕಾಂ.ವಿ.ಜೆ.ಕೆ. ನಾಯರ್.



ಕರ್ನಾಟಕ ಸದ್ಯಕ್ಕೆ, ಸರ್ಕಾರ ಹೇಳಿಕೊಂಡಿರುವ ಪ್ರಕಾರವಾದರೂ, ಒಂದು ವಿಶಿಷ್ಟ ಸ್ಥಾನ ಪಡೆದಿದೆ. ಅದರ ಕೈಗಾರಿಕಾ ಅಭಿವೃದ್ಧಿ ಗಮನಾರ್ಹ. ಈ ಸ್ಥಾನ ಗಳಿಸಲು ಸಾಧ್ಯವಾಗಿರುವುದು ಪ್ರಥಮತಃ ಇಲ್ಲಿಯ ಜನರ, ಆಧುನಿಕ ಯುಗದಲ್ಲಿ ಕಾರ್ಮಿಕ ವರ್ಗದ ಬೆವರಿನಿಂದ, ಜೊತೆಗೆ ಸ್ವಾತಂತ್ರ್ಯಪೂರ್ವದಲ್ಲಿ ಸರ್.ಎಂ.ವಿಶ್ವೇಶ್ವರಯ್ಯನಂತಹ ದೃಷ್ಟಾರರ ನೆರವೂ ಇತ್ತು. ಸ್ವಾತಂತ್ರ್ಯ ದೊರೆತ ಕೂಡಲೇ ಇದ್ದ ಪರಿಸ್ಥಿತಿಗಳ ಒತ್ತಡವೂ ಇದಕ್ಕೆ ನೆರವಾಯಿತು. ಹಲವು ರಾಷ್ಟ್ರೀಯ ಮುಖಂಡರು ಇದಕ್ಕೆ ಕಾರಣರಾದರು. ಅವರಲ್ಲೆಲ್ಲಾ ಬಹಳ ಮುಖ್ಯ ರಾದವರು ಪಂಡಿತ್ ಜವಾಹರಲಾಲ್ ನೆಹರೂ. 20ನೇ ಶತಮಾನದ ಆರಂಭದಲ್ಲಿ ಈ ಕಾರ್ಯಕ್ಕೆ ನೇತೃತ್ವ ನೀಡಿದ ವಿಶ್ವೇಶ್ವರಯ್ಯ ರಾಜ್ಯದ ಸಾರ್ವಜನಿಕ ಉದ್ದಿಮೆಗಳನ್ನು ಸ್ಥಾಪಿಸಿದರು. ಇವು ರಾಜ್ಯದಲ್ಲಿ ಆಧುನಿಕ ಕೈಗಾರಿಕಾ ಅಭಿವೃದ್ಧಿಗೆ ಅಡಿಗಲ್ಲು ಹಾಕಿದವು. ಈ ಅಡಿಗಲ್ಲಿನ ಮೇಲೆ ಐವತ್ತರ ದಶಕದಿಂದ ಆರಂಭಿಸಿ ಒಂದು ಬಲಿಷ್ಟ ಕಟ್ಟಡ ರಚಿಸಲು ನೆಹರೂರವರ ನೀತಿ ಚೌಕಟ್ಟಿನಿಂದಾಗಿ ಸಾಧ್ಯವಾಯಿತು. ಇದೇ ನೀತಿಯನ್ನು ಮುಂದುವರೆಸಿ ಇಂದಿರಾಗಾಂಧಿಯವರ ನೇತೃತ್ವದಲ್ಲಿ 'ಸ್ವಾವಲಂಬನೆ' ಹೆಸರಿನಲ್ಲಿ ಇನ್ನಷ್ಟು ಬಲಗೊಳಿಸಲಾಯಿತು.

ಈ ಕೈಗಾರಿಕೀಕರಣವಿಲ್ಲದೆ ಮತ್ತು ಇದರಲ್ಲಿ ಸಂಪತ್ತನ್ನು ಸೃಷ್ಟಿಸುವ ಹಾಗೂ ಅದೇ ಪ್ರಕ್ರಿಯೆಯಲ್ಲಿ ಉದ್ದಿಮೆ/ ವಾಣಿಜ್ಯ ಬೆಳೆಸಿದ ಮಾರುಕಟ್ಟೆಯ ಗ್ರಾಹಕರೂ ಆಗಿ ದ್ವಿಪಾತ್ರವಹಿಸುತ್ತಿರುವ ದುಡಿಯುವ ಜನಗಳಿಲ್ಲದೆ ಈ ಮಟ್ಟಕ್ಕೆ ಅಭಿವೃದ್ಧಿ ಹೊಂದಲು ಸಾಧ್ಯವಿರಲಿಲ್ಲ.

ಈ ಎಲ್ಲಾ ದೃಷ್ಟಾರರ, ಮುಖಂಡತ್ವದ, ಪ್ರವೃತ್ತಿಗಳ ಬಗ್ಗೆ ಹೇಳುತ್ತಿರುವುದು ಇವರಿಗೆಲ್ಲಾ ಸಲ್ಲಬೇಕಾದ ಗೌರವವನ್ನು ಸಲ್ಲಿಸಲಿಕ್ಕಷ್ಟೇ ಅಲ್ಲ; ಇಂತಹ ಬಲಿಷ್ಟ ಅಡಿಪಾಯಗಳಿಲ್ಲದೆ ಇಂದಿನ ಬೆಂಗಳೂರು, ಅದು ಒಟ್ಟುಗೂಡಿಸಿರುವ ಪ್ರದೇಶಾವಳಿ, ಇಲ್ಲಿಗೆ ಬಹುರಾಷ್ಟ್ರೀಯ ಕಂಪನಿಗಳ ಧಾವಂತ, ಮಾಹಿತಿ ತಂತ್ರಜ್ಞಾನ ಹಾಗೂ ಅದನ್ನು ಆಧರಿಸಿದ ಸೇವಾ ಸೌಲಭ್ಯಗಳ ಬೆಳವಣಿಗೆಗಳನ್ನೆಲ್ಲಾ ಅರ್ಥ ಮಾಡಿಕೊಳ್ಳಲು ಸಾಧ್ಯವಿಲ್ಲ ಎಂಬುದನ್ನು ನಾವು ಅರಿತುಕೊಳ್ಳಲು ಕೂಡಾ ಇದು ಅಗತ್ಯ. ಇಂದು ಬೆಂಗಳೂರು, ಅದರ ಸುತ್ತ ಬೆಳೆದಿರುವ ಪಟ್ಟಣಗಳು ಹಾಗೂ ಗ್ರಾಮೀಣ ಪ್ರದೇಶಗಳ ಆರ್ಥಿಕತೆಗೆ ಚಾಲನೆ ನೀಡುತ್ತಿರುವುದು 'ನಗರೀಕರಣ'ದ ಶಕ್ತಿಶಾಲಿ ಇಂಜಿನ್ನು. ನಾವು ಕಂಡ, ಕಾಣುತ್ತಿರುವ ಈ ಕೈಗಾರೀಕರಣವಿಲ್ಲದೆ ಮತ್ತು ಇದರಲ್ಲಿ ಸಂಪತ್ತನ್ನು ಸೃಷ್ಟಿಸುವ ಹಾಗೂ ಅದೇ ಪ್ರಕ್ರಿಯೆಯಲ್ಲಿ ಉದ್ದಿಮೆ/ ವಾಣಿಜ್ಯ ಬೆಳೆಸಿದ ಮಾರುಕಟ್ಟೆಯ ಗ್ರಾಹಕರೂ ಆಗಿ ದ್ವಿಪಾತ್ರವಹಿಸುತ್ತಿರುವ ದುಡಿಯುವ ಜನಗಳಿಲ್ಲದೆ ಈ ಮಟ್ಟಕ್ಕೆ ಅಭಿವೃದ್ಧಿ ಹೊಂದಲು ಸಾಧ್ಯವಿರಲಿಲ್ಲ.

ಕಾರ್ಮಿಕ ವರ್ಗದ ನಿರ್ಣಾಯಕ ಪಾತ್ರವೂ ಇಲ್ಲದೆ ಯಾವುದೇ ಅಭಿವೃದ್ಧಿ ಸಾಧ್ಯವಿರಲಿಲ್ಲ. ಏಕೆಂದರೆ ಈ ಅಭಿವೃದ್ಧಿಗೆ ಸಾರಸತ್ವವನ್ನು ನೀಡುವಂತದ್ದು ಹಾಗೂ ಅಭಿವೃದ್ಧಿ ತರುವಂತದ್ದು ಕಾರ್ಮಿಕ ವರ್ಗವೇ.

ಕಾರ್ಮಿಕ ವರ್ಗ ಸಂಪತ್ತನ್ನು ಸೃಷ್ಟಿಸುತ್ತದೆ. ಪುನರ್ ಸೃಷ್ಟಿಸುತ್ತದೆ ಮತ್ತು ಅದರ ಬೆಳವಣಿಗೆಗೆ ಕಾಣಿಕೆ ನೀಡುತ್ತದೆ. ತಮ್ಮದೇ ಗುರಿಸಾಧನೆಗೆ ಅವರು ಬದ್ಧರಾಗಿರುವುದರಿಂದ ತಮ್ಮ ಕೆಲಸದ ಪರಿಸ್ಥಿತಿಗಳನ್ನು, ಜೀವನ ಪರಿಸ್ಥಿತಿಗಳನ್ನು, ಮತ್ತು ಸಾಮಾಜಿಕ ಪರಿಸ್ಥಿತಿಗಳನ್ನು ಉತ್ತಮಪಡಿಸಿಕೊಳ್ಳಲು ಅವರು ಸತತ ಶ್ರಮ ಪಡಬೇಕಾಗುತ್ತದೆ.

ಈ ಪ್ರಕ್ರಿಯೆಯಲ್ಲಿ ಅವರು ನಿರ್ದಿಷ್ಟವಾಗಿ ತಮ್ಮ ಶೋಷಣೆಯನ್ನು ಹಾಗೂ ಒಟ್ಟಾರೆಯಾಗಿ ಎಲ್ಲರ ಶೋಷಣೆಯನ್ನು ವಿರೋಧಿಸಬೇಕಾಗುತ್ತದೆ.

ಚಾರಿತ್ರಿಕ ಸಂದರ್ಭ

ಇಲ್ಲಿ ಗಮನಿಸಬೇಕಾದ ಸಂಗತಿಯೆಂದರೆ ಮೇಲೆ ಹೇಳಿದ ಕಾರ್ಮಿಕ ವರ್ಗದ ಪಾತ್ರವನ್ನು ಅರ್ಥ ಮಾಡಿಕೊಳ್ಳಬೇಕಾದರೆ ಸ್ವತಃ ಈ ಕಾರ್ಮಿಕ ವರ್ಗ ಬೆಳೆದುಬಂದ ಸಾಮಾಜಿಕ-ಆರ್ಥಿಕ ಮತ್ತು ಚಾರಿತ್ರಿಕ ಸಂದರ್ಭವನ್ನು ಅರ್ಥ ಮಾಡಿಕೊಳ್ಳ ಬೇಕಾಗುತ್ತದೆ. ಈ ಬಗ್ಗೆ ವೈಜ್ಞಾನಿಕ ಅಭಿಪ್ರಾಯವನ್ನೇ ನಾವು ಅನುಸರಿಸ ಬೇಕಾಗುತ್ತದೆ. ವಿವಿಧ ಪ್ರದೇಶಗಳಲ್ಲಿ, ಘಟ್ಟಗಳಲ್ಲಿ ಅಂದರೆ ಜಾಗತಿಕ/ಖಂಡಾಂತರ/ನೈಸರ್ಗಿಕ ಮತ್ತು ಪ್ರಾದೇಶಿಕ ಮಟ್ಟಗಳಲ್ಲಿ ಇತಿಹಾಸದ, ಸಾಮಾಜಿಕ-ಆರ್ಥಿಕ ಪರಿಸ್ಥಿತಿಗಳನ್ನು ಸಂಕ್ಷಿಪ್ತವಾಗಿ ಗುರುತಿಸುತ್ತಾ ಈ ವಿಷಯದಲ್ಲಿ ಸುಮಾರಾಗಿ ಸರಿಯಾದ ತೀರ್ಮಾನಗಳಿಗೆ ಬರುವುದು ಅಗತ್ಯ.



ಕಾರ್ಮಿಕ ವರ್ಗದ ಬೆಳವಣಿಗೆ ಕೈಗಾರಿಕಾ ಕ್ರಾಂತಿ ಮತ್ತು ಬಂಡವಾಳಶಾಹಿ ಉತ್ಪಾದನಾ ವಿಧಾನದ ಭಾಗವಾಗಿಯೇ ನಡೆಯುವುದರಿಂದ ಅದು ಒಂದು ದೇಶಕ್ಕೆ ವಿಶೇಷವಾದ ಬೆಳವಣಿಗೆಯಲ್ಲ. ಅದರ ಆಧಾರ ಜಾಗತಿಕ, ಬಂಡವಾಳಶಾಹಿ ಪೂರ್ವ ಸಮಾಜದ ಗರ್ಭದಲ್ಲಿ ಗತಿಶೀಲವಾದ ವಿಶ್ವ ಚಾರಿತ್ರಿಕ ಪ್ರಕ್ರಿಯೆ, ಬಂಡವಾಳಶಾಹಿ ತನ್ನ ವಿವಿಧ ಘಟ್ಟಗಳಲ್ಲಿ ಹೊಂದುವ ಬೆಳವಣಿಗೆಗೆ ಅನುಸಾರವಾಗಿಯಷ್ಟೇ ಅದು ಬಲಗೂಡಿಸಿಕೊಳ್ಳುತ್ತದೆ. ಇದು ನಿಜವಾಗಿಯೂ ಜಾಗತಿಕವಾದ್ದರಿಂದ ಕಾರ್ಮಿಕ ವರ್ಗ ಮತ್ತು ಅದರ ಬೆಳವಣಿಗೆ ಕೂಡಾ ಜಾಗತಿಕ. ಅದೇ ರೀತಿ ಅದು ಆಳುವ ವರ್ಗವಾಗಿ ಪರಿವರ್ತನೆಗೊಳ್ಳುವುದು, ಕೊನೆಗೆ ಸುದೂರ ಭವಿಷ್ಯದಲ್ಲಿ ವರ್ಗಗಳೇ ಕ್ರಮೇಣ ಮಾಯವಾದಾಗ, ಅದೂ ಮಾಯವಾಗುವುದು ಕೂಡಾ ಜಾಗತಿಕ ವಿದ್ಯಮಾನ. ಆದರೆ ಇದರ ಅರ್ಥ ಯಾವುದೇ ದೇಶದ, ಪ್ರದೇಶದ ಮತ್ತು ಒಂದು ನಿರ್ದಿಷ್ಟ ಸ್ಥಳೀಯ ಕಾರ್ಮಿಕ ವರ್ಗವನ್ನು ಒಂದೇ ಮೂಗಿನ ನೇರದಲ್ಲಿ ಸರಳ ಸೂತ್ರದಲ್ಲಿ ಕಾಣಬಹುದು ಎಂದಲ್ಲ. ಅವರು ಮಾನವರು, ಒಂದು ಸ್ಥಳ, ಪ್ರದೇಶ, ದೇಶ ಇತ್ಯಾದಿಯ ಬಂಡವಾಳಶಾಹಿ ಪೂರ್ವ ಸಾಮಾಜಿಕ-ಆರ್ಥಿಕ ಪರಿಸ್ಥಿತಿಗಳಿಂದ, ಅದರಲ್ಲೂ ಇನ್ನೂ ಮುಂದುವರಿದಿರುವ ಪರಿಸ್ಥಿತಿಗಳಿಂದ ಮೂಡಿಬಂದಿರುವುದರಿಂದ ಅದರಿಂದ ಉಂಟಾದ ಜನ್ಮಚಿಹ್ನೆಗಳು ಬಹಳ ಕಾಲ ಇದ್ದೇ ಇರುತ್ತವೆ.

ವೈಜ್ಞಾನಿಕವಾಗಿ ಬಳಸುವ 'ಕಾರ್ಮಿಕವರ್ಗ' ಎಂಬ ಪದ ನಾವೆಲ್ಲಾ ಸಾಮಾನ್ಯವಾಗಿ ಬಳಸುವ 'ದುಡಿಯುವ ಜನಗಳು' ಎಂಬುದರಿಂದ ಭಿನ್ನವಾಗಿದೆ ಎಂಬುದನ್ನು ಗಮನಿಸಬೇಕು. ಮಾನವ ಸಮಾಜದ ಬೆಳವಣಿಗೆ ಆರಂಭವಾದಂದಿನಿಂದಲೇ ಶ್ರಮಿಕರು ಅಥವಾ ದುಡಿಮೆಗಾರರು, ದುಡಿಯುವ ಜನ ಇದ್ದರು. ಎಂಗೆಲ್ಸ್ ತನ್ನ ಬಹುವರ್ಣಿತ ಕೃತಿ "ವಾನರನಿಂದ ಮಾನವನ ಪರಿವರ್ತನೆಯಲ್ಲಿ ದುಡಿಮೆಯ ಪಾತ್ರ" ದಲ್ಲಿ 'ಮಾನವ ಜೀವಿ'ಗಳನ್ನು ರೂಪಿಸಿದ್ದು 'ದುಡಿಮೆ' ಎಂಬುದನ್ನು ಸ್ಪಷ್ಟಪಡಿಸುತ್ತಾರೆ. ಆದರೆ ನಾವು 'ಕಾರ್ಮಿಕವರ್ಗ' ಎಂಬ ಪದವನ್ನು ಬಳಸುವಾಗ ಹೇಳುವಂತದ್ದು ಆ ಪದದ ವೈಜ್ಞಾನಿಕ ನಿರೂಪಣೆಯನ್ನು. ಅದು ಜಾಗತಿಕವಾದದ್ದು ಹಾಗೂ ಬಂಡವಾಳಶಾಹಿ ಉತ್ಪಾದನಾ ವಿಧಾನದ ಅಸ್ತಿತ್ವದೊಂದಿಗೆ ಮತ್ತು ನಂತರ ಪರಿವರ್ತನೆ ಹೊಂದಿ ಸಮಾಜವಾದಿ ಘಟ್ಟದ ಸಂಕ್ರಮಣ ಸ್ಥಿತಿಯಲ್ಲಿ ತದ್ವಿರುದ್ಧವಾದ ಅಂದರೆ ಶೋಷಣಾತ್ಮಕವಲ್ಲದ ಸ್ವರೂಪ ಪಡೆದಾಗಲೂ ಇರುವಂತದ್ದು. 'ಸಮಾಜವಾದ'ದ ಸಂಕ್ರಮಣ ಅವಧಿಯಲ್ಲೂ (ಇದು ಕೂಡಾ ಒಂದು ಸೂತ್ರದಂತೆ ನಡೆಯುವುದಿಲ್ಲ) 'ಕಾರ್ಮಿಕ ವರ್ಗ' ವೆಂಬುದು ತನ್ನ ರಾಷ್ಟ್ರೀಯ / ಪ್ರಾದೇಶಿಕ ಲಕ್ಷಣಗಳೊಂದಿಗೆ ಅಥವಾ ವಿಶಿಷ್ಟತೆಗಳೊಂದಿಗೆ ತನ್ನೆಲ್ಲಾ ವಿಶಿಷ್ಟ ವರ್ಗ ಲಕ್ಷಣ ಗಳೊಂದಿಗೆ ಅಸ್ತಿತ್ವದಲ್ಲಿ ಮುಂದುವರೆಯುತ್ತದೆ ಎಂಬುದನ್ನು ಇಲ್ಲಿ ಒತ್ತಿ ಹೇಳಬೇಕು. ಇದು ಎಲ್ಲಾ ವರ್ಗಗಳು ನಿರ್ನಾಮಗೊಂಡು ಸಮಾಜದ ಮುಂದಿನ ನಿರ್ಣಾಯಕ ಘಟ್ಟಕ್ಕೆ ಹೋಗುವವರೆಗೂ ಇರುತ್ತದೆ.

ವೈಜ್ಞಾನಿಕವಾಗಿ ಬಳಸುವ 'ಕಾರ್ಮಿಕವರ್ಗ' ಎಂಬ ಪದ ನಾವೆಲ್ಲಾ ಸಾಮಾನ್ಯವಾಗಿ ಬಳಸುವ 'ದುಡಿಯುವ ಜನಗಳು' ಎಂಬುದರಿಂದ ಭಿನ್ನವಾಗಿದೆ ಎಂಬುದನ್ನು ಗಮನಿಸಬೇಕು.

ಆಧುನಿಕ 'ಕಾರ್ಮಿಕ ವರ್ಗ' ಬೆಳೆಯುವ ಮೊದಲು ಭಾರತ ತನ್ನ ಸ್ವಂತ ಬಳಕೆಗೆ ಹಾಗೂ ವಿನಿಮಯಕ್ಕೆ ಹಲವು ಸರಕುಗಳನ್ನು ಉತ್ಪಾದಿಸುತ್ತಿದ್ದ ದೇಶವಾಗಿತ್ತು. ಗ್ರೀಕರು, ಅರಬ್ಬರು, ಪರ್ಷಿಯನ್ನರು, ಇತರ ಯುರೋಪಿಯನ್ನರು ಭಾರತ ಮತ್ತು ಚೀಣಾದೊಂದಿಗೂ ವ್ಯಾಪಾರಕ್ಕೆ ಬಂದರು. ಏಕೆಂದರೆ ಇವರೆಡೂ ನಾಗರಿಕತೆಯ ಕೇಂದ್ರಗಳಾಗಿದ್ದವು ಹಾಗೂ ಉತ್ಪಾದಕ ದೇಶಗಳಾಗಿದ್ದವು. 'ಕೇಪ್ ಆಫ್ ಗುಡ್ ಹೋಪ್' ನ್ನು (ಹಾಗೂಇಡೀ ಜಗತ್ತನ್ನು) ಸುತ್ತುವರೆದು ಪೋರ್ಚುಗೀಸರು, ಡಚ್ಚರು, ಇಂಗ್ಲೀಷರು ಮತ್ತು ಫ್ರೆಂಚರು ಬರುವ ಮೊದಲು ಅರಬ್ಬರು 'ಮಾನ್ಸೂನ್' ಗಾಳಿಗಳ ಬಳಕೆ ಮಾಡಿದರು. ಈ ಮೂಲಕ ಅದರ ಮೊದಲಿನ ಯುಗದಲ್ಲಿದ್ದ ಭೂಮಾರ್ಗ/ ಕಾರವಾನ್‌ಗಳು, ಸಿಲ್ಕ್ ರೂಟ್‌ಗಳು

ಇತ್ಯಾದಿಗಳಿಗೆ ಮಾರಣಾಂತಿಕ ಏಟು ನೀಡಿದರು.

ನಮ್ಮ ದೇಶದ, ತಕ್ಷಣಕ್ಕೆ ನಮ್ಮ ಆಸಕ್ತಿಯ ಪ್ರದೇಶವಾದ ದಖನ್/ ಕರ್ನಾಟಕದಲ್ಲಿ ಐತಿಹಾಸಿಕ ಬೆಳವಣಿಗೆಗಳನ್ನು ಈ ಸಿಲ್ಕ್ ರೂಟ್, ಮಾನ್ಸೂನ್ - ಆಧಾರಿತ ನೌಕಾಯಾನ ಮತ್ತು ಸುತ್ತುವರೆದು ಬಂದ ನೌಕಾಯಾನಗಳ ಮೂಲಕ ಗುರುತಿಸಬಹುದು. ನಂತರದ ಘಟ್ಟಗಳಾದ ವಸಾಹತುಶಾಹಿ, ಸ್ವತಂತ್ರ ಹಾಗೂ ಸದ್ಯದ ಪರಸ್ಪರ - ಅವಲಂಬೀ ಜಾಗತೀಕರಣದ ಅವಧಿಯಲ್ಲಂತೂ ಅದೇ ರೀತಿ ಗುರುತಿಸಬಹುದು.

ನಮ್ಮ ಸದ್ಯದ ಆಸಕ್ತಿಯಾದ ಕರ್ನಾಟಕಕ್ಕೇ ಸೀಮಿತವಾಗಿ ಬಂಡವಾಳಶಾಹಿ - ಪೂರ್ವ ಅವಧಿಯಲ್ಲಿ ಹಾಗೂ ವಸಾಹತುಶಾಹಿ ಮತ್ತು ನಂತರದ ಅವಧಿಯಲ್ಲಿ ಕೈಗಾರಿಕೆಗಳ ಬೆಳವಣಿಗೆಗಳನ್ನು ಗುರುತಿಸುವುದು ಕಷ್ಟಕರ. ಆದರೂ ಕಾರ್ಯಸಾಧ್ಯ. ಈ ವಿಧಾನವನ್ನು ಬಳಸಿದರೆ ಮಾತ್ರವೇ ಕರ್ನಾಟಕದಲ್ಲಿ ಕೈಗಾರಿಕಾ ಅಭಿವೃದ್ಧಿ ಮತ್ತು ಕಾರ್ಮಿಕ ವರ್ಗದ ಪಾತ್ರವನ್ನು ಅರಿಯಲು ಸಾಧ್ಯ.



ಭಾರತದಲ್ಲಿ ಬಂಡವಾಳಶಾಹಿಯ ಬೆಳವಣಿಗೆಯ ಹೊಸ್ತಿಲಲ್ಲಿ ದಖ್ಖಣ (ಡೆಕ್ಕನ್) ದ ಭವ್ಯ ಪಾತ್ರದ ಟಿಪ್ಪಣಿ ಮಾಡಿಕೊಳ್ಳುವ ಪ್ರಯೋಜನ ಈ ಲೇಖಕನಿಗೆ ಸಿಕ್ಕಿತು. ವಿ.ಐ.ಪಾವ್ಲೋವ್ ರವರ Historical Premises for development of Capitalism in India (ಭಾರತದಲ್ಲಿ ಬಂಡವಾಳಶಾಹಿಯ ಬೆಳವಣಿಗೆಯ ಚಾರಿತ್ರಿಕ ಆಧಾರಗಳು) 15/16 ಶತಮಾನಗಳಲ್ಲಿ ದಖ್ಖಣದ ಪ್ರಾಧಾನ್ಯತೆಯ ಬಗ್ಗೆ ಇಂತಹ ಒಂದು ಒಳನೋಟವನ್ನು ಕೊಟ್ಟಿದೆ. ಪಾವ್ಲೋವ್ ಈ ಭಾಗದಲ್ಲಿ ಪರ್ಯಟಿಸಿ ತಾನು ಕಂಡದ್ದನ್ನು ದಾಖಲಿಸಿದ ಬುಖಾನನ್‌ರವರನ್ನು ಉದ್ಧರಿಸುತ್ತಾರೆ. ಬಿಜಾಪುರ, ಗೋಲ್ಕೊಂಡ ಹಾಗೂ ಅಹಮದ್ ನಗರ ಸುಲ್ತಾನರ ಆಡಳಿತವನ್ನು ಒಳಗೊಂಡು ದಖ್ಖಣ ಪ್ರದೇಶ ಕಸಬು, ಉತ್ಪಾದನೆ, ನೇಯ್ಗೆ, ಹಿತ್ತಾಳೆ ಸಾಮಗ್ರಿಗಳು ಇತ್ಯಾದಿಗಳ ಕೇಂದ್ರವಾಗಿತ್ತು ಎಂದು ತಿಳಿದು ಬರುತ್ತದೆ. ಈ ಪ್ರದೇಶದಲ್ಲಿ ಬಂಡವಾಳಶಾಹಿ - ಪೂರ್ವ ಕೈಗಾರಿಕೆಯ ಬೆಳವಣಿಗೆಯೇ 12ನೇ ಶತಮಾನದಲ್ಲಿ ವೀರಶೈವ ಆಂದೋಲನದ ಬೆಳವಣಿಗೆಯ ಮೂಲ. ಅಲ್ಲದೇ ಈ ಪ್ರದೇಶ ಚಕಿತಗೊಳಿಸುವ ವಾಸ್ತುಶಿಲ್ಪ ವೈಭವದಿಂದ ಓತಪ್ರೋತವಾಗಿದೆ. ಅವೆಲ್ಲಾ ಈ ಭವ್ಯ ಕಾಲಾವಧಿ ಯವೇ. ಅಜಂತಾ-ಎಲ್ಲೋರಾದಿಂದ ಹಿಡಿದು ಬಾದಾಮಿ ಗುಹೆಗಳು, ಚಾಲುಕ್ಯ ದೇವಾಲಯಗಳು, ಗೋಲಗುಂಬಜ್‌ಗಳು, ಗೋಲ್ಕೊಂಡಾ ಕೋಟೆ ಇತ್ಯಾದಿಗಳವರೆಗೆ ಇಲ್ಲಿದ್ದು ಈ ಪ್ರದೇಶದಲ್ಲಿ ಬದುಕು ನಡೆಸಿದ್ದ ಜನ ತಮಗಾಗಿ, ತಮ್ಮ ಮುಂದಿನ ಪೀಳಗೆಗಳಿಗಾಗಿ ಸೃಷ್ಟಿಸಿದ ಇತಿಹಾಸವನ್ನು ಸಾರುತ್ತಿವೆ.

ಈ ಸುಲ್ತಾನ ಪ್ರಭುತ್ವಗಳ ಗಡಿಗಳಿಗೆ ಹೊಂದಿಕೊಂಡಂತೆ ವಿಜಯನಗರ ಸಾಮ್ರಾಜ್ಯ ಬೆಳವಣಿಗೆಯಾಯಿತು, ವಿಶೇಷವಾಗಿ ಬಿಜಾಪುರಕ್ಕೆ ಕಾಣುವಂತೆ ಹಂಪಿಯನ್ನು ತುಂಗಭದ್ರೆಯ ದಕ್ಷಿಣ ತಟದಲ್ಲಿ ಕಟ್ಟಲಾಯಿತು. ಇದು ಸುಲ್ತಾನ ಪ್ರಭುತ್ವಗಳಿಗೆ ಸವಾಲಾಗಿ ಮೂಡಿಬಂತು ಎಂಬುದು ಈ ಲೇಖಕನ ತಿಳುವಳಿಕೆ. ತಾಳಿಕೋಟೆಯ ಕದನವನ್ನು ಈ ಸುಲ್ತಾನರ ಒಕ್ಕೂಟ ವಿಜಯನಗರವನ್ನು ಸೋಲಿಸಿ ಗೆಲ್ಲಲು ಕಾರಣ ಅವರಲ್ಲಿದ್ದ ಮೇಲ್ಮಟ್ಟದ ತಂತ್ರಜ್ಞಾನ ಹಾಗೂ ಉತ್ಪಾದಕ ಶಕ್ತಿಗಳಿಂದಾಗಿ ಎಂಬುದು ಗಮನಾರ್ಹ. ವಿಜಯನಗರ ಅಷ್ಟೊಂದು ಅಲ್ಪ ಅವಧಿಯಲ್ಲಿ ಅದನ್ನು ಮೀರಿ ಮುಂದಕ್ಕೆ ಹೋಗುವುದು ಸಾಧ್ಯವಿರಲಿಲ್ಲ.

ಆದರೆ ವಿಜಯನಗರ ಕೂಡಾ ಸಮೃದ್ಧಿಹೊಂದಿತು ಎಂದು ಖಂಡಿತ ಅಂದಾಜು ಮಾಡಬಹುದು. ಮಾನ್ಸೂನ್ ಗಾಳಿಗಳನ್ನು ಬಳಸಿ ಗೋವಾ ಬಂದರಿನಿಂದ ದಖ್ಖಣದೊಂದಿಗೆ ವ್ಯಾಪಾರದಲ್ಲಿ ಅರಬ್ಬರ ಪ್ರಾಬಲ್ಯ ಬಂದಾಗ ಈ ಹಿಂದೆ ಸಿಲ್ಕ್ ರೂಟ್‌ನ ಕಾಲದಲ್ಲಿ ಸಮೃದ್ಧಿ ಹೊಂದಿದ ಪ್ರದೇಶಗಳ ಬದಲಾಗಿ ಈಗ ದಖ್ಖಣದ ಪ್ರದೇಶಗಳು ಪ್ರಾಧಾನ್ಯ ಗಳಿಸಿದವು. ನಿಜ, ಗುಜರಾತ್ ಮತ್ತು ಅದಕ್ಕೆ ಹೊಂದಿಕೊಂಡ ಪ್ರದೇಶಗಳು ಇದಕ್ಕೆ ಅಪವಾದವಾಗಿರಬಹುದು. ಏಕೆಂದರೆ ಈ ಎಲ್ಲಾ ಅವಧಿಗಳಲ್ಲಿ ಆ ಪ್ರದೇಶಗಳು ಪ್ರಾಧಾನ್ಯ ಗಳಿಸಿದ್ದವು. ಇನ್ನು ಗಂಗಾ ಬಯಲು ಮತ್ತು ಅದರ ಮುಖಜ ಭೂಮಿ, ಮುಖ್ಯವಾಗಿ ಢಾಕ್ಕಾ ಇತ್ಯಾದಿಗಳ ಬಗ್ಗೆ ನಾವಿಲ್ಲಿ ಚರ್ಚಿಸುವುದಿಲ್ಲ. ಏಕೆಂದರೆ ಅದು ನಮ್ಮ ಅಧ್ಯಯನದ ಚೌಕಟ್ಟನ್ನು ಇನ್ನಷ್ಟು ವ್ಯಾಪಕಗೊಳಿಸುತ್ತದೆ. ಆದರೆ ವಸಾಹತುಶಾಹೀ ಅವಧಿಯ ಬಗ್ಗೆ ಹೇಳುವಾಗ ಅದನ್ನು ಪರಿಶೀಲಿಸಬೇಕಾಗುತ್ತದೆ.

> ದಖ್ಖಣ ಪ್ರದೇಶ ಕಸಬು ಉತ್ಪಾದನೆ, ನೇಯ್ಗೆ, ಹಿತ್ತಾಳೆ ಸಾಮಗ್ರಿಗಳು ಇತ್ಯಾದಿಗಳ ಕೇಂದ್ರವಾಗಿತ್ತು ಎಂದು ತಿಳಿದು ಬರುತ್ತದೆ. ಈ ಪ್ರದೇಶದಲ್ಲಿ ಬಂಡವಾಳಶಾಹಿ - ಪೂರ್ವ ಕೈಗಾರಿಕೆಯ ಬೆಳವಣಿಗೆಯೇ 12ನೇ ಶತಮಾನದಲ್ಲಿ ವೀರಶೈವ ಆಂದೋಲನದ ಬೆಳವಣಿಗೆಯ ಮೂಲ.

ದಖ್ಖಣದ ಆಳರಸಲು ಅರಬ್ ಕುದುರೆಗಳನ್ನು ತಂದರು. ಇದಕ್ಕೆ ಬದಲಾಗಿ, 16 ಮತ್ತು 17ನೇ ಶತಮಾನಗಳಲ್ಲಿ ಬಂದ ಪೋರ್ಚುಗೀಸ್ ಮತ್ತಿತರರು ಮುಖ್ಯವಾಗಿ ಈ ಪ್ರದೇಶದ ಉತ್ಪನ್ನಗಳನ್ನು ಖರೀದಿಸಲೆಂದೇ ಬಂದವರು. ಅದಕ್ಕೆ ಅವರು ತಮ್ಮ ಚಿನ್ನ, ಬೆಳ್ಳಿಯಿಂದ ಪಾವತಿ ಮಾಡಬೇಕಾಯಿತು. ಯಾಕೆಂದರೆ ಆಗಿನ ಸಮಯದಲ್ಲಿ ಸುಲಭವಾಗಿ ವಿನಿಮಯ

ಮಾಡಿಕೊಳ್ಳಬಹುದಾದ ಯಾವುದೇ ಉತ್ಪನ್ನ ಅವರ ಬಳಿಯಿರಲಿಲ್ಲ. ಈ ಎಲ್ಲಾ ಶಕ್ತಿಗಳು, ಅಂದರೆ ಈ ಸುಲ್ತಾನರು, ವಿಜಯನಗರ ಸಾಮ್ರಾಜ್ಯ, ವಿದೇಶೀಯರು, ಇವರೆಲ್ಲಾ ಕೇವಲ ವ್ಯಾಪಾರ ಮಾತ್ರ ನಡೆಸಿರಲಿಕ್ಕಿಲ್ಲ, ದಂಡಯಾತ್ರೆ, ಯುದ್ಧಗಳಲ್ಲೂ ತೊಡಗಿರಬಹುದು. ಈ ಪ್ರಕ್ರಿಯೆಯಲ್ಲಿ ಪರಸ್ಪರ ವಿರೋಧಿಸಿರಬಹುದು. ಇದು ಸಮಾಜದ ಬೆಳವಣಿಗೆಯನ್ನು ಇನ್ನಷ್ಟು ತ್ವರಿತಗೊಳಿಸಿರುತ್ತದೆ.

ದಖ್ಖಣದ ಸುಲ್ತಾನರು ಮತ್ತು ಅವರಿಗೆ ತಮ್ಮ ದಕ್ಷಿಣದಿಂದ ಬಂದ ವಿಜಯನಗರದ ಸವಾಲಿನ ಮಧ್ಯೆ ತಾಕಲಾಟಗಳಿದ್ದರೂ, ಇಬ್ಬರೂ ಸೇರಿ ಈ ಪ್ರದೇಶದ ಸಾರ್ವತ್ರಿಕ ಸಮೃದ್ಧಿಗೆ ಕಾಣಿಕೆ ನೀಡಿದರು. ಆದರೂ ಸರಕುಗಳನ್ನು ತಯಾರಿಸುತ್ತಿದ್ದ ಕೈಕಸುಬುದಾರರು ಮತ್ತು ಅವುಗಳ ವ್ಯಾಪಾರ ಮಾಡುತ್ತಿದ್ದ ವ್ಯಾಪಾರಿಗಳನ್ನು ಆಧುನಿಕ ಯುಗದ ಕಾರ್ಮಿಕ ವರ್ಗದೊಂದಿಗಾಗಲೀ ಅಥವಾ ಬಂಡವಾಳಶಾಹಿಗಳೊಂದಿಗಾಗಲೀ ಹೋಲಿಸಲು ಸಾಧ್ಯವಿಲ್ಲ.


ಇಲ್ಲಿ ಭಾರತದ ಉಳಿದ ಭಾಗಗಳು ಹಾಗೂ ವಸಾಹತುಶಾಹಿಗಳು ಭಾರತವನ್ನು ಕೈವಶ ಮಾಡಿಕೊಳ್ಳುವುದಕ್ಕಿಂತ ಮೊದಲಿನ ಕೈಗಾರಿಕಾ ಬೆಳವಣಿಗೆಯ ಒಂದು ಸಂಕ್ಷಿಪ್ತ ನೋಟ ಪಡೆಯುವುದು ಅಗತ್ಯ. ಮೊಘಲರ, ನವಾಬರುಗಳ ಬಲಾತ್ಕಾರ, ಬಲಾತ್ಕಾರದ ಆರ್ಥಿಕದಲ್ಲಿ 'ಕಾರ್ಖಾನೆ' ಗಳ ಬಗ್ಗೆ ಪಾವ್ಲೊಲ್ ಹೇಳುತ್ತಾರೆ. ಮಹಾ ಮೊಘಲ್ ಸೇನೆಗೆ ಸರಕುಗಳನ್ನು, ಸಾಧನಗಳನ್ನು, ಅದರ ಶಸ್ತ್ರಾಸ್ತ್ರಗಳನ್ನು, ಈಟಿಗಳು, ಖಡ್ಗಗಳು, ಲೋಹಕವಚಗಳು ಇತ್ಯಾದಿಗಳನ್ನು ತಯಾರಿಸಿದ ಕೈಕಸಬುದಾರರು ಅಷ್ಟೊಂದು ಪ್ರಮಾಣದ, ಗುಣಮಟ್ಟದ ಉಕ್ಕನ್ನು ತಯಾರಿಸುತ್ತಾರೆ. ಇವೆಲ್ಲಾ ಆಳುವ ಜನಗಳ ಬಲಾತ್ಕಾರದಿಂದ ನಡೆಸುತ್ತಿದ್ದ 'ಕಾರ್ಖಾನೆ'ಗಳಲ್ಲಿ ತಯಾರಾದವು. ಈ ಪ್ರದೇಶಗಳಲ್ಲಿ ಅವುಗಳ ವಿನಿಮಯವೂ ಬಹಳ ಕಮ್ಮಿ. ಸಾವಿರಾರು ಆನೆಗಳು, ಕುದುರೆಗಳು ಮತ್ತು ಪದಾತಿಗಳನ್ನು ನಮ್ಮ ದೇಶದಲ್ಲಿನ ಉತ್ಪಾದನೆಯಿಂದಲೇ ಸಜ್ಜುಗೊಳಿಸಲಾಗುತ್ತಿತ್ತು. ಆಧುನಿಕ ಯುಗದಲ್ಲಾಗಿರುವಂತೆ ಅದಕ್ಕೆ ನಮ್ಮ ಉತ್ಪನ್ನಗಳಿಗಿಂತ ಪಾಶ್ಚಿಮಾತ್ಯ ಉತ್ಪನ್ನಗಳನ್ನೇ ಹೆಚ್ಚಾಗಿ ಅವಲಂಬಿಸಿದ ಪರಿಸ್ಥಿತಿಯಿರಲಿಲ್ಲ. ಅದೇರೀತಿ ಅತ್ಯುತ್ತಮ ಗುಣಮಟ್ಟದ, ಆಭರಣಗಳು, ಉಡುಪುಗಳು, ರೇಶ್ಮೆ, ಪರದೆಗಳು, ಹಾಸುಗಳು ಮತ್ತಿತರ ಅರಮನೆಗಳಿಗೆ, ಅಂತಃಪುರಗಳಿಗೆ ಬೇಕಾಗುವ ಬಟ್ಟೆಗಳನ್ನೆಲ್ಲಾ ಈ ಕಾರ್ಖಾನೆಗಳಲ್ಲಿ ಮಾತ್ರವಲ್ಲದೆ ಜಾತಿ ಸಂಘಗಳಾಗಿ ವ್ಯವಸ್ಥೆಗೊಂಡ ಕರಕುಶಲಗಾರರ ಸಮುದಾಯಗಳಲ್ಲೂ ಉತ್ಪಾದನೆಯಾಗುತ್ತಿದ್ದವು ಹಾಗೂ ಅಂತಹುದೇ ವ್ಯವಸ್ಥೆಗಳಲ್ಲಿ ವ್ಯಾಪಾರ ನಡೆಯುತ್ತಿತ್ತು.

ಯುರೋಪಿಯನ್ನರು ಈ ಉತ್ಪನ್ನಗಳನ್ನು ಖರೀದಿಸಲು ಬಂದರು, ಅವರು ಈ ಸರಕುಗಳನ್ನೇ ತಮ್ಮದೇ ದೇಶದ ಉತ್ಪಾದನೆಗಳೆಂಬಂತೆ ಮಾರಾಟ ಮಾಡುವುದನ್ನು ಕಂಡಾಗ, ವಿಶೇಷವಾಗಿ ಬಟ್ಟೆಗಳನ್ನು ಮಾರಾಟ ಮಾಡುವುದು ಕಂಡುಬಂದಾಗ ವಿರೋಧವನ್ನು ಎದುರಿಸಬೇಕಾಯಿತು (ಸ್ವದೇಶಿ ಆಂದೋಲನ) ಹಾಗೂ ಸ್ವಾತಂತ್ರ್ಯ ಹೋರಾಟದ ಫಲಿತಾಂಶವಾಗಿ ಹಿಂದೆ ಸರಿಯಬೇಕಾಯಿತು. ಭಾರತ ಮತ್ತು ಯುರೋಪ್ (ನಿರ್ದಿಷ್ಟವಾಗಿ ಇಂಗ್ಲೆಂಡ್) ನಡುವಿನ ಉತ್ಪಾದನಾ ಸಂಬಂಧಗಳನ್ನು ಅರಿಯಬೇಕು. ನಮ್ಮ ದೇಶವನ್ನು 1757 ರ ಪ್ಲಾಸೀ ಕದನದೊಂದಿಗೆ ವಸಾಹತುಶಾಹೀ ಅಡಿಯಾಳುತನಕ್ಕೆ ಗುರಿಪಡಿಸಿದ ಚಾರಿತ್ರಿಕ ಘಟ್ಟಗಳು, 1799 ರಲ್ಲಿ ಶ್ರೀರಂಗಪಟ್ಟಣದ ಪತನ, ಅದೇ ರೀತಿ ಅಮೆರಿಕಾದ ವಸಾಹತೀಕರಣದ ಚಾರಿತ್ರಿಕ ಪ್ರಕ್ರಿಯೆ, ಗುಲಾಮ ವ್ಯಾಪಾರ, ಅಮೆರಿಕನ್ ಸ್ವಾತಂತ್ರ್ಯ ಯುದ್ಧ, ಹತ್ತಿ ವ್ಯಾಪಾರ, ಅದಕ್ಕಾದ ಅಡಚಣೆ ಹಾಗೂ ದಖ್ಖಣದಲ್ಲಿ ವಾಣಿಜ್ಯ ಆಧಾರದಲ್ಲಿ ಹತ್ತಿ ಉತ್ಪಾದನೆಯ ಬೆಳವಣಿಗೆ 1770 ರ ದಶಕದಲ್ಲಿ ಬ್ರಿಟಿಶ್ ಕೈಗಾರಿಕಾ ಕ್ರಾಂತಿಯನ್ನು ಆರಂಭಿಸಿದವು. ಹಾಗೂ ಮತ್ತಷ್ಟು ಬೆಳೆಸಿದವು. ಇವು ಬೆಳವಣಿಗೆಯ ಮಹತ್ವದ ಹಂತಗಳು. ಇಲ್ಲಿ ಕರ್ನಾಟಕದಲ್ಲಿ ಉಂಟಾದ ಸಂರಚನಾ ಬದಲಾವಣೆಗಳನ್ನು ಅರ್ಥಮಾಡಿಕೊಳ್ಳಲು ಇವೆಲ್ಲಾ ಅಗತ್ಯ.

ಹೈದರಾಲಿ ಬೆಂಗಳೂರಿನಲ್ಲಿ ಅಭಿವೃದ್ಧಿ ಪಡಿಸಿದ 'ರಾಕೆಟ್'ಗಳು ಅತಿಕ್ರಮಿಸಿಕೊಂಡು ಬರುತ್ತಿದ್ದ ವಸಾಹತುಶಾಹೀ ಪಡೆಗಳನ್ನು ಧ್ವಂಸ ಮಾಡಿದವು. ಟಿಪ್ಪುವು ಬೆಳೆಸಿದ ಉನ್ನತ ತಂತ್ರಜ್ಞಾನ, ಸಶಸ್ತ್ರ ಪಡೆಗಳನ್ನು ರಚಿಸಿ, ಸನ್ನದ್ಧಗೊಳಿಸುವಲ್ಲಿ ಯುರೋಪಿಯನ್ ಮಾದರಿಯ ಬಳಕೆ, ಫ್ರೆಂಚ್ ಬಳಕೆ, ಇವೆಲ್ಲದರಿಂದಾಗಿಯೇ 'ಮೈಸೂರು' ನಾಲ್ಕು ಯುದ್ಧಗಳಲ್ಲಿ ಗಟ್ಟಿಯಾಗಿ ನಿಲ್ಲಲು ಸಾಧ್ಯವಾಯಿತು. ಕೊನೆಗೂ ಬ್ರಿಟಿಷರು ತಮ್ಮ 'ಭ್ರಷ್ಟಾಚಾರ'ದ ಹಾಗೂ ಬೇಹುಗಾರಿಕೆಯ ತಂತ್ರಗಳನ್ನು ಬಳಸಿ ಟಿಪ್ಪುವನ್ನು ಮುಗಿಸಿಬಿಟ್ಟರು ಹಾಗೂ ಈ ಪ್ರಕ್ರಿಯೆಯಲ್ಲಿ ಭಾರತದಾದ್ಯಂತ ಕಂಪನಿ ಆಡಳಿತದ ಕ್ರೋಢೀಕರಣ ಮಾಡಿದರು. ಫ್ರಾನ್ಸಿನ ಉನ್ನತ ಮಟ್ಟದ ಬಂದೂಕುದಾರ ಸೇನಾನಿ, 'ಪ್ರಜಾಸತ್ತಾತ್ಮಕ' ಕ್ರಾಂತಿಯಾದ ಕೂಡಲೇ ಅಧಿಕಾರಕ್ಕೆ ಬಂದು, ಅದರ ಹೆಸರಿನಲ್ಲೇ ತನ್ನನ್ನು ಸಾಮ್ರಾಟನೆಂದು ಸಾರಿಕೊಂಡ ನೆಪೋಲಿಯನ್ ಭೂಮಾರ್ಗವಾಗಿ ಭಾರತವನ್ನು ತಲುಪುವ ನಿರೀಕ್ಷೆ ಇಟ್ಟುಕೊಂಡಿದ್ದ ಎಂಬುದನ್ನು ಗಮನಿಸಬಹುದು. ಟಿಪ್ಪುವಿಗೆ ಪಾರ್ಲಿಮೆಂಟರಿ ವ್ಯವಸ್ಥೆಯ ಯಶಸ್ಸಿನೊಂದಿಗೆ ಆದಾಗಲೇ ಬೆಳೆದಿದ್ದ ಬ್ರಿಟಿಶ್ 'ಚಕ್ರಾಧಿಪತ್ಯ'ದ ಬದಲು ಇಂತಹ 'ಪ್ರಜಾಸತ್ತಾತ್ಮಕ' ಸಾಮ್ರಾಜ್ಯದತ್ತವೇ ಹೆಚ್ಚಿನ ಒಲವು ಇತ್ತು.

ಟಿಪ್ಪೂ ಪತನ ಹಾಗೂ ಭಾರತ ಅಡಿಯಾಳಾದ ನಂತರ ಕರ್ನಾಟಕ ಬ್ರಿಟಿಷರ ಪದತಲದಲ್ಲಿ ಅವರಿಗೆ ಆತಿಥ್ಯ ನೀಡುತ್ತಾ, ಅವರ ನೀತಿಗಳನ್ನು ಪಾಲಿಸಲಾರಂಭಿಸಿತು. ಕಿತ್ತೂರು ಚೆನ್ನಮ್ಮ, ಸಂಗೊಳ್ಳಿ ರಾಯಣ್ಣ ಮುಂತಾದವರ ಪ್ರತಿರೋಧಗಳು

ಮುಂದುವರೆದರೂ ಬ್ರಿಟಿಷ್ ಆಡಳಿತ ಕರ್ನಾಟಕದ ಹಿನ್ನಾಡನ್ನು ಹತ್ತಿ ಬೆಳೆಯುವ, ರಫ್ತು ಮಾಡುವ ಪ್ರದೇಶವಾಗಿ ಪರಿವರ್ತಿಸಿತು. ಆ ಪ್ರಕ್ರಿಯೆಯಲ್ಲಿ ಪ್ರಖ್ಯಾತಿ ಪಡೆದಿದ್ದ ಈ ಪ್ರದೇಶದ ಕುಶಲಕಲೆ ಉದ್ದಿಮೆಗಳನ್ನು ಧ್ವಂಸ ಮಾಡಿತು. ಮ್ಯಾಂಚೆಸ್ಟರ್‌ಗೆ ಅಮೆರಿಕಾದ ಹತ್ತಿಯ ಬರ ಕಾಣಲಾರಂಭಿಸಿದಾಗ ಕುಮಟಾವನ್ನು ಹತ್ತಿ ರಫ್ತು ಮಾಡುವ ಬಂದರಾಗಿ ಅವರು ಬೆಳೆಸಿದರು. ಈಗಿನ ಹಾವೇರಿ, ಧಾರವಾಡ, ಗದಗ ಪ್ರದೇಶಗಳಲ್ಲಿ ಬೆಳೆದ ಹತ್ತಿ ಈ ಬಂದರಿನ ಮೂಲಕ ರಫ್ತಾಗುತ್ತಿತ್ತು. ಇಲ್ಲಿನ ಎಲ್ಲಾ ರಸ್ತೆಗಳು ಕಾರವಾರದತ್ತ ಹೋಗುವುದಿಲ್ಲ, ಕುಮಟಾಕ್ಕೆ ಹೋಗುತ್ತವೆ ಎಂಬುದನ್ನು ಗಮನಿಸಬೇಕು. ದಖ್ಖಣದಲ್ಲಿ ಬೆಳೆದ ಕುಮಟಾ ಹತ್ತಿಯ ವ್ಯಾಪಾರ ಮುಂಬೈಯಲ್ಲೂ ನಡೆಯುತ್ತಿತ್ತು. ಅಲ್ಲಿನ ಕೋಟೆ ಪ್ರದೇಶದಲ್ಲಿ ಈಗಲೂ ಕುಮಟಾ ರಸ್ತೆ ಎಂಬುದೊಂದಿದೆ. ಸಮಸ್ತ ಉತ್ತರ ಕರ್ನಾಟಕದ ಜನಗಳನ್ನು ಕರಕುಶಲ ಸರಕುಗಳ ಉತ್ಪಾದಕರಾಗಿ ಬೆಳೆಸದೆ ಹತ್ತಿಯ ಉತ್ಪಾದಕರಾಗಿ ಪರಿವರ್ತಿಸಲಾಯಿತು. ಇಲ್ಲಿಯ ಪಾರಂಪರಿಕ ಕರಕುಶಲ ಉದ್ದಿಮೆಗಳನ್ನು ಸಂಪೂರ್ಣವಾಗಿ ಅಳಿಸಿ ಹಾಕಲಾಯಿತು ಎಂದೇನಲ್ಲ. ಆದರೆ ಕರಕುಶಲ ಉದ್ಯಮ ಮತ್ತು ಅದನ್ನು ಆಧರಿಸಿದ ಸಮಾಜವನ್ನು 'ಹಣದ ಬೆಳೆ' ಗಳ ಸಾಗುವಳಿಯ ಒಂದು ಸಮಾಜವಾಗಿ ಬೆಳೆಸಲಾಯಿತು; ಅಂದರೆ ದಖ್ಖಣ ಪ್ರಸ್ಥ ಭೂಮಿಯಲ್ಲಿ ಹತ್ತಿ ಹಾಗೂ ಪಶ್ಚಿಮ ಘಟ್ಟಗಳು ಮಸಾಲೆ ಜಿನಸುಗಳು. ಅವೂ ನಿಧಾನವಾಗಿ ತೋಟಗಳಾಗಿ ಬದಲಾದವು. ಬಡತನಕ್ಕೀಡಾದ ಈ ಪ್ರದೇಶದ ಜನ ಸಹಜವಾಗಿಯೇ ಆಧುನಿಕ ವಿಧದ ಕಾರ್ಮಿಕ ವರ್ಗದ ಪ್ರಾರಂಭಿಕ ರೂಪವಾಗಿ ಹೊರಹೊಮ್ಮಿದರು.



ಒಟ್ಟು ಸಾರಾಂಶ ವೆಂದರೆ ಗ್ರಾಮೀಣ ಪ್ರದೇಶಗಳು ಬಡತನಕ್ಕೀಡಾದುದರಿಂದ ಅಲ್ಲಿ ಬದುಕುಳಿಯಲಿಕ್ಕಾಗಿ ತಮ್ಮ ಶ್ರಮಶಕ್ತಿಯನ್ನು ಮಾರಬೇಕಾಗಿ ಬಂದ ಒಂದು ವರ್ಗದ ಸೃಷ್ಟಿಯಾಯಿತು. ಅವರ ಪೂರ್ವಜರಾದ ಕರಕುಶಲ ಮಂದಿಯೂ ಬಂಡವಾಳಶಾಹಿ-ಪೂರ್ವ ಸಮಾಜದಲ್ಲಿನ ದುಡಿಮೆಗಾರರರಾಗಿದ್ದದ್ದು ನಿಜ. ಆದರೆ ಅವರು ಆಧುನಿಕ ಕಾರ್ಮಿಕ ವರ್ಗದಂತಿರಲಿಲ್ಲ, ಬಹುಮಟ್ಟಿಗೆ ತಮ್ಮ ಇಷ್ಟದಂತೆ ಉತ್ಪಾದನೆ ಮಾಡುತ್ತಿದ್ದರೂ ಹೆಚ್ಚಿನ ಸಂದರ್ಭಗಳಲ್ಲಿ ಉತ್ಪಾದನಾ ಸಾಧನಗಳು ವೈಯಕ್ತಿಕ ಅಥವಾ ಸಾಮೂಹಿಕ ಒಡೆತನದಲ್ಲಿ ಇದ್ದವು ಹಾಗೂ ಅವರು ಒಂದು ತಮಗೆ ತಿಳಿದಿದ್ದ ಮಾರುಕಟ್ಟೆಗಾಗಿ ಉತ್ಪಾದಿಸುತ್ತಿದ್ದರು. ಹೀಗೆ ಅವರು ಎಂಗೆಲ್ಸ್ ನಿರೂಪಿಸಿದಂತೆ ವೈಯಕ್ತಿಕ ಒಡೆತನ, ವೈಯಕ್ತಿಕ ಉತ್ಪಾದನೆ ಹಾಗೂ ವೈಯಕ್ತಿಕ ವಿನಿಯೋಗದ ಸಮರಸಪೂರ್ಣ ಸಂಬಂಧ ಹೊಂದಿದ್ದರು. ಇದು ಸಂಕ್ಷಿಪ್ತವಾಗಿ ಕರ್ನಾಟಕದಲ್ಲಿ ಕಾರ್ಮಿಕವರ್ಗದ ಮೂಲ. ಕರ್ನಾಟಕದ ಅಭಿವೃದ್ಧಿಗೆ ಅವರ ಕೊಡುಗೆಗಳು ಇದಕ್ಕೆ ಅನುಸಾರವಾಗಿ ಇದೆ.

ಕರ್ನಾಟಕದಲ್ಲಿ ಕಾರ್ಮಿಕವರ್ಗದ ಪಾತ್ರವನ್ನು ಗಮನಿಸುವ ಮೊದಲು ಕಾರ್ಮಿಕ ವರ್ಗದ ವೈಜ್ಞಾನಿಕ ನಿರೂಪಣೆಯನ್ನು ಅರ್ಥಮಾಡಿಕೊಂಡು ಅದನ್ನು ನಮ್ಮ ಸಮಾಜಕ್ಕೆ ಅನ್ವಯಿಸೋಣ.

ಹಿಂದಿನ ಸಮಾಜ ವ್ಯವಸ್ಥೆ ಧ್ವಂಸವಾದಾಗ, 'ದರಿದ್ರ'ರಾದ, ತಮ್ಮ ಬದುಕಿಗಾಗಿ ಭೂಮಿಯನ್ನು ಅವಲಂಬಿಸಬೇಕಾಗಿ ಬಂದ, ಆದರೆ ಕೃಷಿ ವ್ಯವಸ್ಥೆಯೇ ಮಾರುಕಟ್ಟೆಗಾಗಿ ಉತ್ಪಾದಿಸುತ್ತಿದ್ದುದರಿಂದ ಉತ್ಪಾದಕ ಕೆಲಸ ಸಿಗಲಾರದ ಜನರ ಪ್ರವಾಹ ಆಧುನಿಕ ಶ್ರಮಜೀವಿ ವರ್ಗದ ಸಂಖ್ಯೆಯನ್ನು ಹೆಚ್ಚಿಸಿತು. ಅವರು ಉತ್ಪಾದನಾ ಸಾಧನಗಳ ಒಡೆಯರಾಗಿರಲಿಲ್ಲ, ಒಂದು ಸಮೂಹಕ್ಕಾಗಿ ಅವರು ಕೆಲಸ ಮಾಡಬೇಕಾಗಿ ಬಂತು. ಸಹಕಾರ ಎಂಬುದು ಉತ್ಪಾದನೆಯ ಮುಖ್ಯ ಭಾಗವಾಗಿತ್ತು, ಬಳಕೆ ವೈಯುಕ್ತಿಕವಾಗಿತ್ತು. ಈ ರೀತಿ ಇದು ಕೈಕಸುಬು ಉತ್ಪಾದನೆಯಲ್ಲಿ ಇದ್ದ ಸಾಮರಸ್ಯವನ್ನು ಅಸ್ಥಿರಗೊಳಿಸಿತು. ಆ ಸಾಮರಸ್ಯ ಹೋಗಿ ಅದರ ಸ್ಥಾನದಲ್ಲಿ ಬಂಡವಾಳಶಾಹಿಯ ಅಡಿ ಅಸಾಮರಸ್ಯ ಹುಟ್ಟಲಾರಂಭಿಸಿತು. ಎಂಗೆಲ್ಸ್ ಹೇಳಿದಂತೆ ಒಡೆತನ ಮತ್ತು ಬಳಕೆ ಎರಡೂ ಸಾಮೂಹಿಕವಾದಾಗ ಮಾತ್ರವೇ ಅಂದರೆ ಸಮಾಜವಾದದ ಅಡಿಯಲ್ಲಿ ಮಾತ್ರವೇ ಆ ಸಾಮರಸ್ಯ ಮತ್ತೆ ಸ್ಥಾಪಿತಗೊಳ್ಳಲು ಸಾಧ್ಯ. ಇಂತಹ ಪರಿಸ್ಥಿತಿಗಳಲ್ಲೇ ಸಮಾಜದ ಹಿತಾಸಕ್ತಿಗಳ ರಕ್ಷಣೆ ಸಾಧ್ಯ.

ಇಡೀ ದೇಶವನ್ನು, ನಮ್ಮ ಕರ್ನಾಟಕವನ್ನು ವಸಾಹತುವನ್ನಾಗಿ ಮಾಡಿ, ಜನಗಳನ್ನು ವಿವಿಧ ಆಡಳಿತ ಪ್ರದೇಶಗಳಾಗಿ ಒಡೆದು, ವಿಭಿನ್ನ ಪ್ರಮಾಣದಲ್ಲಿ ಆರ್ಥಿಕವನ್ನು ಬೆಳೆಸಿದರು. ತೋಟಗಳು, ಗಣಿಗಳನ್ನು ರಚಿಸಿದರು, ನಿಧಾನವಾಗಿ ರೈಲ್ವೆ, ಬಂದರುಗಳು, ಅಂಚೆ-ತಂತಿ, ಮುದ್ರಣಾಲಯ, ಶೈಕ್ಷಣಿಕ ಹಾಗೂ ಆಡಳಿತ ವ್ಯವಸ್ಥೆ, ಸೇನೆ, ಪೋಲೀಸ್, ಜೈಲುಗಳು, ನ್ಯಾಯಾಂಗ ಮತ್ತಿತರ ಸಂಸ್ಥೆಗಳನ್ನು ಬೆಳೆಸಿದರು, ಆರೋಗ್ಯ ಸೇವೆ ಮುಂತಾದ ಸಾಮಾಜಿಕ ಸೇವೆಗಳ ಪ್ರಾರಂಭಿಕ ರೂಪಗಳೂ ಮೂಡಿಬಂದವು; ತಮ್ಮ ಮುನಿಸಿಪಾಲಿಟಿಗಳು ಮತ್ತು ದಂಡು ಪ್ರದೇಶ (ಕಂಟೋನ್ಮೆಂಟ್)ಗಳನ್ನು ನಡೆಸಲು ಸರಕುಗಳು ಮತ್ತು


ಹತ್ತಿಯ ಹೊಲ

ಸೇವೆಗಳನ್ನು ಖರೀದಿಸಲಾರಂಭಿಸಿದರು. ಇವೆಲ್ಲಾ ಉದ್ದಿಮೆ ಬೆಳವಣಿಗೆಯ ಅವಶ್ಯಕತೆಗಳನ್ನು ಪೂರೈಸಿದವು. ಕರ್ನಾಟಕದ ಕೈಗಾರಿಕೀಕರಣ ಆರಂಭವಾದದ್ದು ಹೀಗೆ.


ಪೋರ್ಚುಗೀಸರ ಪ್ರವೇಶದಿಂದ, ಅವರು ಭರದಿಂದ ನಡೆಸಿದ ಮತಾಂತರಗಳಿಂದಾಗಿ ವ್ಯಾಪಾರೀ ಬಂಡವಾಳ ಗೋವಾದ ದಕ್ಷಿಣ ಭಾಗಕ್ಕೆ ಓಡಿಹೋಯಿತು. ಅವರೆಲ್ಲಾ ದಕ್ಷಿಣ ಕನ್ನಡ, ಮಲಬಾರ್ ಮತ್ತು ಅದರ ದಕ್ಷಿಣದಲ್ಲಿ ನೆಲೆಸಿದರು. ಅವರಿಂದ ಬ್ಯಾಂಕುಗಳ ಬೀಜರೂಪ ಅಂಕುರ ಗೊಳ್ಳಲಾರಂಭಿಸಿತು; ಲೇವಾದೇವಿ ಮತ್ತು ಗಿರವಿಯಿಂದ ಆರಂಭಿಸಿ ನಂತರ ಕೈಕಸುಬು ಉದ್ಯಮವನ್ನು ಆಧುನಿಕ ರೀತಿಯಲ್ಲಿ ನಡೆಸುವವರೆಗೆ ಬೆಳೆಸಿದರು. ಬ್ಯಾಂಕಿಂಗ್ ಸಂಸ್ಥೆಗಳು, ಸಾರಿಗೆ ಮತ್ತು ಮುದ್ರಣಾಲಯಗಳೊಂದಿಗೆ ಈ ಪ್ರದೇಶದ ಬೀಡಿ ಉತ್ಪಾದಕರು ಇಲ್ಲಿ ಬೆಳೆದ ಹೋಟೆಲ್ ಮಾಲೀಕರು ಇತ್ಯಾದಿ ಇಲ್ಲಿಯ ಸ್ಥಳೀಯ ಬೂರ್ಜ್ವಾ ವರ್ಗದ ಬೆಳವಣಿಗೆ.

ತೋಟಗಳು:

ಕರ್ನಾಟಕದ ಕೈಗಾರಿಕಾ ಬೆಳ- ವಣಿಗೆ ಗಳನ್ನು ಗುರುತಿಸುವಾಗ ನಾವು ಪ್ಲಾಂಟೇಶನ್ ಗಳ ಅಂದರೆ ತೋಟ ಗಳ ಬೆಳವಣಿಗೆ ಯನ್ನು ಗಮನಕ್ಕೆ ತಗೊಳ್ಳ ಬೇಕು. ಪ್ರಮುಖವಾಗಿ ಪಶ್ಚಿಮ ಘಟ್ಟಗಳ ಪೂರ್ವದ ಇಳಿಜಾರಿನಲ್ಲಿ ನೀಲಗಿರಿ, ವೈನಾಡ್ ಇತ್ಯಾದಿಗಳಲ್ಲಿ ಇಂತಹ ತೋಟಗಳಿಗೆ ಹೊಂದಿಕೊಂಡಂತೆ ಇವು ಬೆಳೆದವು. ಹೀಗೆ ಸುಮಾರಾಗಿ ಇಡೀ ಕೊಡಗು, ದಕ್ಷಿಣ ಕನ್ನಡದ ಘಟ್ಟ ಭಾಗದಲ್ಲಿನ ಕೆಲವು ಪ್ರದೇಶಗಳು, ನಂತರ ಹಾಸನದ ಸಕಲೇಶಪುರ ಮತ್ತು ಚಿಕ್ಕಮಗಳೂರಿನ ಸುಮಾರು ಇಡೀ ಬೆಟ್ಟ ಪ್ರದೇಶದಲ್ಲಿ ಶಿವಮೊಗ್ಗದ ಜಿಲ್ಲೆಯ ಗಡಿಯವರೆಗೂ ತೋಟಗಳು, ಮುಖ್ಯವಾಗಿ ಕಾಫಿ ತೋಟಗಳು ಬೆಳೆದವು. ನಂತರದ ಅವಧಿಯಲ್ಲಿ ಕೆಳ ಪ್ರದೇಶಗಳಲ್ಲಿ ರಬ್ಬರ್ ಸಾಗುವಳಿಯೂ ಇವೆ. ಇದು ಮೂಲತಃ ಬ್ರಿಟಿಶ್ ಬಂಡವಾಳವನ್ನು ಆಕರ್ಷಿಸಿತು ಹಾಗೂ ತೋಟಗಳು, ಮುಖ್ಯವಾಗಿ ದಕ್ಷಿಣ ಕನ್ನಡ, ಮಲಬಾರ್ ಹಾಗೂ ತಮಿಳುನಾಡಿನಿಂದ ಕಳಿಸಲ್ಪಟ್ಟ ಶ್ರಮಿಕರನ್ನು ಬಳಸಿ ಬೆಳೆಯಿತು.

ಈ ಶ್ರಮಿಕರ ಕಥೆಗಳು, ಸಂಕಟಗಳು ಎಷ್ಟೊಂದು ಮನಕರಗಿಸುವಂತದ್ದೆಂದರೆ ಸ್ವಾತಂತ್ರ್ಯ ಹೋರಾಟದ ಕಾಲದಲ್ಲಿ ರಚನೆಗೊಂಡ ಸಾಹಿತ್ಯ ಕೃತಿಗಳಲ್ಲಿ ಇದನ್ನು ಕಾಣಬಹುದು. ಶಿವರಾಮಕಾರಂತರ 'ಚೋಮನದುಡಿ' ಕೃಷಿ ಕೂಲಿಕಾರರು ಪ್ಲಾಂಟೇಶನ್ ಕೂಲಿಕಾರರಾಗಿ ಪರಿವರ್ತನೆಗೊಳ್ಳುವ ಒಂದು ನಿರ್ದಿಷ್ಟ ಘಟ್ಟವನ್ನುಚಿತ್ರಿಸುತ್ತದೆ. ಕಂಗಾಣಿಗಳು ಈ ಗುಲಾಮ

ಈ ಶ್ರಮಿಕರ ಕಥೆಗಳು, ಸಂಕಟಗಳು ಎಷ್ಟೊಂದು ಮನಕರಗಿಸುವಂತದ್ದೆಂದರೆ ಸ್ವಾತಂತ್ರ್ಯ ಹೋರಾಟದ ಕಾಲದಲ್ಲಿ ರಚನೆಗೊಂಡ ಸಾಹಿತ್ಯ ಕೃತಿಗಳಲ್ಲಿ ಇದನ್ನು ಕಾಣಬಹುದು.



ರೀತಿ ಅಸ್ತಿತ್ವಕ್ಕೆ ಒಟ್ಟು ಈ ಜನಗಳ ನಿರಂತರವಾದ, ಅಮಾನವೀಯ ಸಂಕಟಗಳು, ತ್ಯಾಗಗಳನ್ನು ಗಮನಿಸದೆ ಕರ್ನಾಟಕದ ಬೆಳವಣಿಗೆ ಯನ್ನು ಅರ್ಥ ಮಾಡಿ ಕೊಳ್ಳುವುದು ನಮಗೆ ಸಾಧ್ಯವಿಲ್ಲ.

ಅತ್ಯಂತ ಪ್ರತಿಕೂಲಕರ ಪ್ರದೇಶಗಳಲ್ಲಿ, ಅಪೌಷ್ಟಿಕತೆ, ನಾಗರಿಕ ಸೌಲಭ್ಯಗಳ ಅಭಾವ, ಮಳೆ, ಮಲೇರಿಯಾ, ಕಾಲರಾ, ಅತಿಭೇದಿ, ಕ್ಷಯರೋಗ ಇತ್ಯಾದಿ ಗಳನ್ನು ಅನುಭವಿಸಿ ದೈಹಿಕ ಸವಾಲುಗಳನ್ನು ಮೀರಿ ನಿಂತ ದಟ್ಟದರಿದ್ರ ಕಾರ್ಮಿಕ ವರ್ಗದ ಪಾತ್ರವನ್ನು ಗಮನಿಸಬೇಕು. ಈ ಸಮಸ್ಯೆಗಳು, ಇವೆಲ್ಲಕ್ಕೂ ಹೆಚ್ಚಾಗಿ ಮಹಿಳಾ ಶ್ರಮಿಕರ ಮೇಲಿನ ಲೈಂಗಿಕ ಶೋಷಣೆ ಇವೆಲ್ಲಾ ಒಂದು ಕಡೆಯಾದರೆ, ಇನ್ನೊಂದೆಡೆ ಈ ಕಾರ್ಮಿಕರೇ ಸೃಷ್ಟಿಸಿದ ವೈಭೋಗದಲ್ಲಿ ತೇಲಾಡುವ ಮಾಲಕರು ಮತ್ತು ಏಜೆಂಟರು. ಇದು ಕಟುವಾಸ್ತವವನ್ನು ತೋರಿಸುವಂತದ್ದು. ಇತ್ತೀಚಿನವರೆಗೂ, ಅತ್ಯಂತ ಹೆಚ್ಚು ತಲಾ ಆದಾಯ ದಾಖಲಾಗಿರುವುದು ಕೊಡಗು ಮತ್ತು ಇತರ ಪ್ಲಾಂಟೇಶನ್ ಪ್ರದೇಶಗಳಲ್ಲಿ. ತೋಟ ಕಾರ್ಮಿಕರ ಅತ್ಯಂತ ಅಲ್ಪ ಆದಾಯದ ಎದುರು ಕೂಡಾ ಇಲ್ಲಿಯ ಪ್ಲಾಂಟರುಗಳು ಮತ್ತು ಅವರ ಏಜೆಂಟರು ಗಳಿಸಿದ ಸಂಪತ್ತಿನ ಪ್ರಮಾಣ ಅಷ್ಟು ಅಗಾಧ. ಹಲವಾರು ಉದ್ದಿಮೆಗಳು, ಉತ್ಪಾದನಾ ಚಟುವಟಿಕೆಗಳಿರುವ ಬೆಂಗಳೂರು ಕೂಡಾ ಇತ್ತೀಚಿನವರೆಗೂ ಕೊಡಗಿನ ತಲಾ ಆದಾಯವನ್ನು ಸರಿಗಟ್ಟಲಾಗಿರಲಿಲ್ಲ! ಆದ್ದರಿಂದ ಕರ್ನಾಟಕದಲ್ಲಿ ಬಂಡವಾಳ ಶೇಖರಣೆ ತೋಟ ಕಾರ್ಮಿಕರ ವಿಶಿಷ್ಟ ಪಾತ್ರ ಮತ್ತು ಅದರ ಕಾಣಿಕೆಯಿಂದಾಗಿ ಸಂಭವಿಸಿತು ಎಂಬುದು ಸ್ಪಷ್ಟ. ಅದರ ಮಾಲಕರ ಸಂಪತ್ತು ಬೇರೆ ಉದ್ದಿಮೆಗಳಲ್ಲಿ ಹೂಡಿಕೆಯಾಯಿತು.


ಗಣಿಗಳು

ಪ್ಲಾಂಟೇಶನ್‌ಗಳ ಜತೆ-ಜತೆಗೆ ಬೆಳೆದ ಇನ್ನೊಂದು ಉದ್ದಿಮೆಯೆಂದರೆ ಗಣಿಗಾರಿಕೆ. ಹತ್ತೊಂಭತ್ತನೇ ಶತಮಾನದಲ್ಲಿ ಜಾನ್ ಟೇಲರ್ ಅಂಡ್ ಕಂಪನಿ ಸ್ಥಾಪಿಸಿದ ಕೋಲಾರ ಚಿನ್ನದ ಗಣಿಗಳು (ಕೆ.ಜಿ.ಎಫ್.) ಅದೇ ಹೆಸರಿನ ಒಂದು ಪಟ್ಟಣವನ್ನೇ ಸೃಷ್ಟಿಸಿದವು. ತಮಿಳುನಾಡಿನ ಉತ್ತರ ಭಾಗಗಳಲ್ಲಿ ಜಾತಿ ದಮನ, ಪೂಜಾ ಸ್ವಾತಂತ್ರ್ಯದ ವಂಚನೆಯಿಂದ ತಪ್ಪಿಸಿಕೊಳ್ಳಲು

ದಟ್ಟದರಿದ್ರ ಕೃಷಿಕೂಲಿಕಾರರ ಪ್ರವಾಹವೇ ಇಲ್ಲಿಗೆ ಹರಿದುಬಂತು. ಕಂಗಾಣಿಗಳು ಕರೆತಂದ, ಬ್ರಿಟಿಷ್ ಗಣಿ ಮಾಲಕರು ಸುಮಾರಾಗಿ 'ಜೀತ'ಕ್ಕೆ ಇಟ್ಟುಕೊಂಡಂತಿದ್ದ ಶ್ರಮಿಕರು ಕೋಲಾರದ ಆಧುನಿಕ ಕಾರ್ಮಿಕ ವರ್ಗವಾದುದು ಕೆಜಿಎಫ್ ಕಾರ್ಮಿಕರ ಇತಿಹಾಸ, ಆರ್ಥಿಕ ಶೋಷಣೆಯ ವಿರುದ್ಧ ಅವರ ಹೋರಾಟಗಳಿಗಾಗಿ ಮಾತ್ರವಲ್ಲ, ಅವರು ಪೋಷಿಸಿಕೊಂಡು ಬಂದ ಸ್ವಾಭಿಮಾನ ಆಂದೋಲನಕ್ಕಾಗಿಯೂ ಸುವರ್ಣಾಕ್ಷರಗಳಲ್ಲಿ ಬರೆದಿಡಬೇಕಾದಂತದ್ದು. ತಮ್ಮ ಹುಟ್ಟೂರುಗಳಲ್ಲಿ ದೇವಸ್ಥಾನಗಳನ್ನು ಪ್ರವೇಶಿಸಲು ಅವಕಾಶವಿರದ, ಭೂಮಾಲಕರ, ಇತರ ಸಂಪನ್ನರ ನಡುವೆ ಮುಕ್ತವಾಗಿ ಸಂಚರಿಸಲೂ ಅವಕಾಶವಿರದ ಕಾರ್ಮಿಕರು ಇವರು. ಕ್ರೈಸ್ತ ಧರ್ಮಕ್ಕೆ ಮತಾಂತರಗೊಂಡು ಚರ್ಚ್‌ಗಳಿಗೆ ಹೋಗಲು ಇವರಿಗೆ ಅವಕಾಶವಾಯಿತು. ಕೆಲವೊಮ್ಮೆ ಅವರಿಗೆಂದೇ ಪ್ರತ್ಯೇಕ ಚರ್ಚ್‌ಗಳು ಸೃಷ್ಟಿಯಾದವು. ಮತಾಂತರ ಹೊಂದದವರು ತಮ್ಮದೇ ದೇವಸ್ಥಾನಗಳನ್ನು ನಿರ್ಮಿಸಿದರು, ಅವುಗಳೊಳಗೆ ದೇವರುಗಳನ್ನು ಪ್ರತಿಷ್ಠಾಪಿಸಿ ಪೂಜೆ ನಡೆಸಲಾರಂಭಿಸಿದರು. ನೆಲದಡಿಯ ಗಣಿಗಳಲ್ಲಿ ಕೆಲಸದ ಪರಿಸ್ಥಿತಿಗಳು ಕಠಿಣವಾಗಿದ್ದರೂ, ಆಗಾಗ ಗಣಿಗಳಲ್ಲಿ ಸಂಭವಿಸುವ ಬಂಡೆ ಸ್ಫೋಟಗಳು, ಸಾವುಗಳು ಏನೇ ಇದ್ದರೂ ಅವರ ಹುಟ್ಟೂರುಗಳಲ್ಲಿನ ಪರಿಸ್ಥಿತಿ ಇದಕ್ಕಿಂತಲೂ ಶೋಚನೀಯವಾಗಿತ್ತು. ಅವರ ಸ್ವಾಭಿಮಾನ, ಅವರು ಪಡೆದ, ಉಳಿಸಿಕೊಂಡ ಪೂಜಾ ಸ್ವಾತಂತ್ರ್ಯ ಅವರನ್ನು ನಿಜವಾಗಿಯೂ ಧರ್ಮಕ್ಕೆ ಅಂಟಿಕೊಳ್ಳಲು ಹಾಗೂ ಹಗಲಿಡೀ ಸುರಿಸಿದ ಬೆವರಿನ ಕಾಠಿಣ್ಯವನ್ನು ಮರೆಯುವಂತೆ ಮಾಡಿದವು. ನಿಧಾನವಾಗಿ 20ನೇ ಶತಮಾನ ಆರಂಭವಾಗುವ ವೇಳೆಗೆ ಮದ್ರಾಸಿನಿಂದ ಬಂದ ಸಂಗಾತಿಗಳ ಪ್ರಯತ್ನಗಳಿಂದ ಅವರು ಸಂಘಟಿತರಾಗಲಾರಂಭಿಸಿದರು. ತಮಗೆ ದೊರೆತ ಮುಖಂಡರನ್ನು ಅವರು ಅಷ್ಟೇ ಭಕ್ತಿಭಾವದಿಂದ ಕಂಡು, ಅವರಿಗೆ ಬದ್ಧರಾದರು.

ಕೋಲಾರ ಚಿನ್ನದ ಗಣಿಯ ಕಾರ್ಮಿಕರು ಮತ್ತು ಅವರ ಮುಖಂಡರು ನಂತರ ನಾಲ್ಕು ದಶಕಗಳ ಕಾಲವೂ, ಅಂದರೆ ನಂತರದ ಸ್ವಾತಂತ್ರ್ಯ ಹೋರಾಟದಲ್ಲಿ ಹಾಗೂ ಸ್ವಾತಂತ್ರ್ಯ ದೊರೆತ ಆರಂಭ ಕಾಲಾವಧಿಯಲ್ಲಿ ಕಾರ್ಮಿಕ ವರ್ಗದ ಹೋರಾಟಗಳಲ್ಲಿ ಮುಂಚೂಣಿಯಲ್ಲಿದ್ದರು. ಅವರ ಅಧ್ಯಕ್ಷ ಕೆ.ಎಸ್.ವಾಸನ್, ಕೆ.ಪಿ.ಟಿ.ಯು.ಸಿ(ಕರ್ನಾಟಕ ಪ್ರದೇಶ ಟ್ರೇಡ್ ಯೂನಿಯನ್ ಕಾಂಗ್ರೆಸ್) ಅಧ್ಯಕ್ಷರೂ ಆದರು. ಅದೇ ರೀತಿ ಮೈಸೂರಿನಲ್ಲಿ ಜವಾಬ್ದಾರಿ ಸರ್ಕಾರಕ್ಕಾಗಿ ಹೋರಾಟ, ಅದಕ್ಕೆ ಬೆಂಬಲವಾಗಿ ಗಣಿ ಕಾರ್ಮಿಕರು ಎಷ್ಟು ದಿನ ಮುಷ್ಕರ ನಡೆಸಿದರೋ ಅಷ್ಟೇ ದಿನಗಳಷ್ಟು ನಡೆಯಿತು. ಅಲ್ಲಿನ ಇಂಟಕ್ ಸಂಘದ ಅಧ್ಯಕ್ಷ ಕೆ.ಸಿ.ರೆಡ್ಡಿ ಮೈಸೂರು ರಾಜ್ಯದ ಮೊದಲ ಮುಖ್ಯಮಂತ್ರಿ ಯಾದರು.

ರಾಯಚೂರು ಜಿಲ್ಲೆಯಲ್ಲಿ ನಿಜಾಮನ ಆಳ್ವಿಕೆಯಲ್ಲಿ ಹಟ್ಟಿ ಚಿನ್ನದ ಗಣಿ ಸ್ಥಾಪನೆಗೊಂಡಿತು. ಅಲ್ಲಿ ವಲಸೆ ಬಂದ ಶ್ರಮಿಕರು ಮುಖಂಡತ್ವ ನೀಡಿದರು. ಜಿಲ್ಲೆಯ ಸ್ಥಳೀಯರು ಈ ಗಣಿಗಳಲ್ಲಿ ಸೇರಿಕೊಂಡರು. ಅವರ ನೋವು, ದುಮ್ಮಾನಗಳು ಅವರು ತಮ್ಮ ಮುಖಂಡ ಪೈ ಎಂಬುವರಿಗಾಗಿ ಕಟ್ಟಿದ 'ದೇವಸ್ಥಾನ'ದಲ್ಲಿ ಹೆಪ್ಪುಗಟ್ಟಿದ, ಅಮರಗಾಥೆಗೆ ಸಾಕ್ಷಿಯಾಗಿ ನಿಂತಿದೆ. ಇವರನ್ನು ಮಾತುಕತೆಗಳ ಹೆಸರಿನಲ್ಲಿ ಒಯ್ಯುವಾಗ ಹತ್ಯೆ ಮಾಡಲಾಯಿತು. ಇನ್ನೊಬ್ಬ ಮುಖಂಡರು ಕಣ್ಮರೆಯಾದರು, ಅವರು ಎಲ್ಲಿದ್ದಾರೆಂಬುದು ಈಗಲೂ ಪತ್ತೆಯಾಗಿಲ್ಲ.


ಕೋಲಾರ ಚಿನ್ನದ ಗಣಿ

ಇತರ ಗಣಿಗಳು ಸಂಡೂರು, ಬಳ್ಳಾರಿಗಳಲ್ಲಿಯೂ ಕಬ್ಬಿಣದ ಅದಿರಿನ ಗಣಿಗಳೂ ಬೆಳೆದವು. ಬಳ್ಳಾರಿಯಲ್ಲಿ ಮ್ಯಾಂಗನೀಸ್ ಅದಿರಿನ ಗಣಿಗಳು ಬಂದರೆ ಪಶ್ಚಿಮ ಘಟ್ಟಗಳಲ್ಲಿ 'ಮ್ಯಾಂಗನೀಸ್ ಗಣಿಗಳು' ಸ್ಥಾಪನೆಗೊಂಡವು. ಹೊಸಪೇಟೆ ಬಳಿ ಸಂಡೂರು ಫೆರ್ರೋ ಮ್ಯಾಂಗನೀಸ್ ಸಂಕೀರ್ಣ ಮೂಡಿಬಂತು. ಲಾಲ್‌ಭಾಯಿ ಎಂಬ ಪಶ್ಚಿಮ ಘಟ್ಟಗಳಲ್ಲಿನ ಒಬ್ಬ ಗಣಿ ಮಾಲಿಕ ದಾಂಡೇಲಿ ಫೆರ್ರೋ ಅಲಾಯ್ಸ್ ಸ್ಥಾಪಿಸಿದ. ಅದಾಗಲೇ ದಾಂಡೇಲಿಯಲ್ಲಿ ಒಂದು ಸರ್ಕಾರಿ ಅರಣ್ಯ ಇಲಾಖೆ, ಕಟ್ಟಿಗೆ ಡಿಪೋ ಹಾಗೂ ಸಾಮಿಲ್ ಇತ್ತು. ನಂತರ ಇಲ್ಲಿ ಪ್ಲೈವುಡ್ ಕಾರ್ಖಾನೆಯೂ ಬಂತು. ಅದು ದಟ್ಟ ಅರಣ್ಯದ ನಡುವಿನ ಒಂದು ಕೈಗಾರಿಕಾ ಕೇಂದ್ರವಾಯಿತು. ಪ್ಲೈವುಡ್ ಕಾರ್ಖಾನೆ ಕೆಜಿಎಫ್ ಗಣಿ ಕಾರ್ಮಿಕರ ರೀತಿಯಲ್ಲೇ 'ತೆಲುಗು' ಕಾರ್ಮಿಕರನ್ನು ಪಡೆಯಿತು.

ಜವಳಿ

'ಕುಮ್ಟಾ' ಹತ್ತಿಯ ಒಂದು ವ್ಯಾಪಾರೀ ಠಾಣೆಯಾಗಿದ್ದು, ದಾವಣಗೆರೆ ಕರ್ನಾಟಕದ ಜವಳಿ ಪಟ್ಟಣವಾಗಿ ಪರಿವರ್ತನೆಗೊಂಡಿತು. ದಾವಣಗೆರೆಯಲ್ಲಿ ಎಂಟು ಗಿರಣಿಗಳಿದ್ದವು. ಪ್ರಖ್ಯಾತ ದಾವಣಗೆರೆ ಕಾಟನ್ ಮಿಲ್ ಕೂಡಾ ಅವುಗಳಲ್ಲೊಂದು. ಆದರೆ ರಾಜೀವಗಾಂಧಿಯವರ ಜವಳಿ ನೀತಿ ಅವನ್ನೆಲ್ಲಾ ಕಳಚಿ ಹಾಕಿತು. ಅದುವರೆಗೆ ಅದು ಕರ್ನಾಟಕದ ಮ್ಯಾಂಚೆಸ್ಟರ್ ಎನ್ನಿಸಿತ್ತು.

ಬೆಂಗಳೂರಿನಲ್ಲಿ ಜವಳಿ ಕಾರ್ಮಿಕರ ಪ್ರಾಬಲ್ಯ ಇತ್ತು. ಮಲ್ಲೇಶ್ವರದ 'ಮಿಲ್ ಕಾರ್ನರ್' ನಲ್ಲಿದ್ದ ರಾಜಾಮಿಲ್ಸ್ (ಮೈಸೂರು ಮಿಲ್ಸ್ ಎಂದೂ ಹೇಳುತ್ತಿದ್ದರು) ನಲ್ಲಿ ಸಾವಿರಾರು ಶ್ರಮಿಕರು ಇದ್ದರು. ಅವರೊಂದು ಮಕ್ಕಳಿಗಾಗಿ ಶಾಲೆ

ನಡೆಸುತ್ತಿದ್ದರು. ಇದರಿಂದ ಅಲ್ಲಿ ಸುಮಾರು ಒಂದು ನೂರು, ಕೆಲವೊಮ್ಮೆ ಸುಮಾರು ಒಂದು ಸಾವಿರದಷ್ಟು ಮಹಿಳಾ ಕಾರ್ಮಿಕರೂ ಇದ್ದರು. ಕಾಟನ್ ಪೇಟೆ ಪ್ರದೇಶದಲ್ಲಿರುವ ಒಂದು ಶತಮಾನದಷ್ಟು ಹಳೆಯದಾದ ಬಕಿಂಗ್‌ಹಾಂ ಕರ್ನಾಟಕ್ ಮಿಲ್ಸ್ (ಬಿನ್ನಿಮಿಲ್ಸ್) ನಲ್ಲಿ ಸಾವಿರಾರು ಕಾರ್ಮಿಕರಿದ್ದರು. ಸಾಕಷ್ಟು ಸಮಯದವರೆಗೆ 'ಬಿನ್ನಿ' ಎಂಬುದು ಉತ್ತಮ ಜವಳಿಯ ಇನ್ನೊಂದು ಹೆಸರಾಗಿತ್ತು.

ಮಾಗಡಿ ರಸ್ತೆಯಲ್ಲಿರುವ ಮಿನರ್ವಾ ಮಿಲ್ಸ್ ಉತ್ತರಹಳ್ಳಿಯ ಸೆಟ್ಟಿ ಪಾಳ್ಯ/ಸುಬ್ರಮಣ್ಯಪುರದ ರಾಂಕುಮಾರ್ ಮಿಲ್ಸ್, ಚಾಮರಾಜಪೇಟೆಯ ಟಿ.ಆರ್.ಮಿಲ್ಸ್, ಸುಂಕದಕಟ್ಟೆಯ ಬಳಿಯ ಚಂದ್ರಾ ಮಿಲ್ಸ್, ಯಶವಂತಪುರದಲ್ಲಿನ ಚಂದ್ರೋದಯ ಮಿಲ್ಸ್ ಇತ್ಯಾದಿ ಹಲವು ಗಿರಣಿಗಳು ಬೆಂಗಳೂರಿನಲ್ಲಿದ್ದವು.


ಬಿನ್ನಿ ಮಿಲ್ ಕಾರ್ಖಾನೆ ಚಿತ್ರ

ಬೆಂಗಳೂರಿನ ಹಾಗೂ ದಾವಣಗೆರೆಯ ಜವಳಿ ಕಾರ್ಮಿಕರು ಸ್ವಾತಂತ್ರ್ಯ ಹೋರಾಟದಲ್ಲೂ ಮುಂಚೂಣಿಯಲ್ಲಿದ್ದರು. ಕಮಲಾದೇವಿ ಚಟ್ಟೋಪಾಧ್ಯಾಯ, ಕೆ.ಟಿ.ಭಾಷ್ಯಂ, ಅಂಗಣ್ಣ, ಸೂರ್ಯನಾರಾಯಣ ರಾವ್, ಶ್ರೀರಾಮುಲು ಮುಂತಾದ ಹಲವು ಮುಖಂಡರು ಇದರಿಂದ ಬಂದರು. ಮೈಸೂರು ಬ್ಯಾಂಕ್ ಚೌಕ ಹಾಗೂ ಬನ್ನಪ್ಪ ಪಾರ್ಕ್‌ನಲ್ಲಿ ಸ್ವಾತಂತ್ರ್ಯ ಹೋರಾಟದಲ್ಲಿ ಹುತಾತ್ಮರಾದ ಜವಳಿ ಕಾರ್ಮಿಕರ ನೆನಪಿನ ಫಲಕಗಳಿವೆ. ಅದೇ ರೀತಿ ದಾವಣಗೆರೆಯ ಜವಳಿ ಕಾರ್ಮಿಕರ ಪಾತ್ರ, ಬಸವರಾಜ್ ಕಟ್ಟೀಮನಿಯವರ 'ಜ್ವಾಲಾಮುಖಿಯ ಮೇಲೆ' ಮತ್ತಿತರ ಕೃತಿಗಳಲ್ಲಿ ಅಮರವಾಗಿವೆ. ಮೈಸೂರಿನಲ್ಲೂ ಜವಳಿ ಗಿರಣಿಗಳ ಪ್ರಾಬಲ್ಯವಿತ್ತು – ಕೆ.ಆರ್.ಮಿಲ್ಸ್ ಮತ್ತು ನಂಜನಗೂಡಿನ ಸುಜಾತಾ ಮಿಲ್ಸ್, ಗುಲ್ಬರ್ಗಾದಲ್ಲಿ ಮಹಬೂಬ್ ಶಾಹಿ ಕಲ್ಬುರ್ಗಿ ಮಿಲ್ಸ್ ನಿಜಾಮನ ಆಳ್ವಿಕೆಯಲ್ಲಿ ಸ್ಥಾಪನೆಗೊಂಡಿತು.

ನರಗುಂದ ಜವಳಿ ಕಾರ್ಮಿಕರು ಗಿರಣಿ ಮುಚ್ಚುವ ವೇಳೆಗೆ ಗುಂಡೂರಾಯರ ಆಳ್ವಿಕೆಯಲ್ಲಿ ನಡೆದ ಮಲಪ್ರಭಾ ಹೋರಾಟಕ್ಕೆ, ನರಗುಂದ ಬಂಡಾಯಕ್ಕೆ ಮುಖಂಡತ್ವ ನೀಡಿದರು.

ಈಗಲೂ ನಡೆಯುತ್ತಿರುವ ಗೋಕಾಕ್ ಮಿಲ್ಸ್ ಗೋಕಾಕ್ ಜಲಪಾತದ ರಮಣೀಯ ವಾತಾವರಣದಲ್ಲಿ ಗಂಭೀರ ನೋಟ ನೀಡುತ್ತಿದೆ. ಇಲ್ಲಿನ ಜವಳಿ ಕಾರ್ಮಿಕರು ಸದಾ ಪರಸ್ಪರ ಗುಂಪುಕಟ್ಟಿ ಬಡಿದಾಡುವಂತೆ, ಆ ಮೂಲಕ ಸದಾ ಮಾಲಕರ ಮೇಲುಗೈ ಯಾಗುವಂತೆ ಮಾಡಲಾಗುತ್ತಿದೆ.

ಬಾಗಲಕೋಟೆಯ ಮೆರಾಮರಸ್ ಮುಂತಾದ ಇತರ ಗಿರಣಿಗಳು ಇದ್ದವು. ನಂತರ ಸಹಕಾರಿ ಗಿರಣಿಗಳೂ ಮೂಡಿಬಂದವು. ಈಗ ಗೋಕಾಕ್ ಮಿಲ್ಸ್ ಬಿಟ್ಟು ಹೆಚ್ಚಿನ ಕಂಪೋಸಿಟ್ ಗಿರಣಿಗಳು ಮಾಯವಾಗಿವೆ.

ವಿಶ್ವೇಶ್ವರಯ್ಯನವರ ಸಾಧನೆಗಳು

ಇಪ್ಪತ್ತನೆಯ ಶತಮಾನದ ಆರಂಭದಲ್ಲಿ ಇಂಜಿನಿಯರ್ ಹಾಗೂ ಮುತ್ಸದ್ದಿ ಸರ್.ಎಂ.ವಿಶ್ವೇಶ್ವರಯ್ಯ ಮೈಸೂರನ್ನು ಒಂದು ಮಹತ್ವದ ಕೈಗಾರಿಕಾ ರಾಜ್ಯವಾಗುವಂತೆ ಮಾಡಿದರು. ಅವರು ಸಾರ್ವಜನಿಕ ವಲಯವನ್ನು ಪ್ರಗತಿಯ ವಾಹಕವಾಗಿಸಿದರು. ಶ್ರೀಗಂಧದ ಎಣ್ಣೆಯ ಕಾರ್ಖಾನೆ, ಮೈಸೂರು ರಸ್ತೆಯಲ್ಲಿ ಮೈಸೂರು ಕ್ರೋಮ್‌ಟ್ಯಾನಿಂಗ್ ಕಾರ್ಖಾನೆ, ಸರಕಾರಿ ವಿದ್ಯುತ್ ಕಾರ್ಖಾನೆ, ಸರಕಾರಿ ಸಾಬೂನು ಕಾರ್ಖಾನೆ, ಮೈಸೂರು ಅರಗು ಕಾರ್ಖಾನೆ, ಮಂಡ್ಯದಲ್ಲಿ ಮೈಸೂರು ಅಸಿಟೇಟ್, ಭದ್ರಾವತಿಯಲ್ಲಿ ಮೈಸೂರು ಕಬ್ಬಿಣ ಮತ್ತು ಉಕ್ಕು ಕಾರ್ಖಾನೆ ಇತ್ಯಾದಿಗಳನ್ನು ಅವರು ಸ್ಥಾಪಿಸಿದರು. ಸಹಜವಾಗಿಯೇ ಈ ಕಾರ್ಖಾನೆಗಳು ಸಾವಿರಾರು ಕಾರ್ಮಿಕರನ್ನು ಕೆಲಸಕ್ಕೆ ನೇಮಿಸಿಕೊಂಡವು.

ಅಲ್ಲದೆ ಟ್ಯಾನರಿ ರಸ್ತೆಯಲ್ಲಿ ಚರ್ಮ ಹದ ಮಾಡುವ ಕಾರ್ಖಾನೆಗಳಿದ್ದವು. ಇವೂ ಸಾವಿರಾರು ಬಡ ಕಾರ್ಮಿಕರಿಗೆ ಉದ್ಯೋಗ ಒದಗಿಸಿದವು.

ಹುಬ್ಬಳ್ಳಿಯ ರೈಲ್ವೇ ವರ್ಕ್ ಶಾಪ್ ಆ ಪ್ರದೇಶದಲ್ಲಿ ಕೈಗಾರಿಕಾ ಬೆಳವಣಿಗೆಗೆ ಪ್ರೋತ್ಸಾಹ ನೀಡಿತು. ಎನ್.ಎಲ್. ಉಪಾಧ್ಯಾಯರನ್ನು ಹಿಂದಿನ ಮೈಸೂರು ಸಂಸ್ಥಾನದಿಂದ ಗಡಿಪಾರು ಮಾಡಿದಾಗ ಹುಬ್ಬಳ್ಳಿಯನ್ನು ತಮ್ಮ ಕಾರ್ಯಕೇಂದ್ರವಾಗಿ ಮಾಡಿಕೊಂಡರು. ಹೀಗೆ ಆ ಪ್ರದೇಶದ ಕಾರ್ಮಿಕರು ಸಂಘಟಿತರಾದರು. ಅದಕ್ಕೆ ಮೊದಲು ಹುಬ್ಬಳ್ಳಿಯ ಮಹದೇವ ಮಿಲ್ಸ್‌ನ ಕಾರ್ಮಿಕರು ಸಮರಧೀರ ಹೋರಾಟ ನಡೆಸಿದ್ದರು. ಮಾಡರ್ನ್ ಮಿಲ್ಸ್‌ನ ಕಾರವಾರ ರಸ್ತೆಯಲ್ಲಿರುವ ಆಹಾರ ಮತ್ತು ದಾರಗಳ ಘಟಕದಲ್ಲೂ ಹಲವು ಸಮರಧೀರ ಹೋರಾಟಗಳು ನಡೆದವು.


ಕೈಗಾರಿಕಾ ಬೆಳವಣಿಗೆಗೆ ಅಭೂತಪೂರ್ವ ಕಾಣಿಕೆ ನೀಡಿದ ಮುತ್ಸದ್ದಿ ಎಂ.ವಿ.

ಬೆಳಗಾವಿಯಲ್ಲಿನ ಹಲವು ಫೌಂಡ್ರಿಗಳು ಅಲ್ಲಿ ಇಂಜಿನಿಯರಿಂಗ್ ಉದ್ದಿಮೆಗಳ ಬೆಳವಣಿಗೆಗೆ ತಳಪಾಯ ಹಾಕಿದವು. ಇಂಡಾಲ್ ಕಾರ್ಮಿಕರು ಬೆಳಗಾವಿಯ ಕಾರ್ಮಿಕರ ಸಮಸ್ಯೆಗಳತ್ತ ಗಮನ ಸೆಳೆಯುವಲ್ಲಿ ವಿಶೇಷ ಪಾತ್ರ ವಹಿಸಿ ಒಂದು ವಿಶಿಷ್ಟ ಸ್ಥಾನ ಗಳಿಸಿದ್ದಾರೆ.

ಕಾರವಾರದಲ್ಲಿ ಈ ಹಿಂದೆ ಒಂದು ವಿದ್ಯುತ್ ಪೂರೈಕೆ ಕಂಪನಿಯಿತ್ತು. ಅಲ್ಲಿ ಸಂಘಟನೆಯಾಯಿತು. ಬಿನಗದಲ್ಲಿ ಕಾಸ್ಟಿಕ್ ಸೋಡಾ ಕಾರ್ಖಾನೆ ಬಂತು. ಅಲ್ಲಿಯೂ ಸಂಘಟನೆಯಾಯಿತು. ಈ ಕಾರ್ಮಿಕರು ಹಲವು ಸಮರಧೀರ ಹೋರಾಟಗಳಲ್ಲಿ ಭಾಗವಹಿಸಿದರು.

ಕಾರವಾರ ಜಿಲ್ಲೆಯ ಕಾರ್ಮಿಕರು ಸದಾ ಸ್ಫೂರ್ತಿಗಾಗಿ ದಾಂಡೇಲಿಯ ಹೋರಾಟನಿರತ ಕಾರ್ಮಿಕರತ್ತ ನೋಡುತ್ತಿದ್ದರು. ವಿಶೇಷವಾಗಿ ವೆಸ್ಟ್‌ಕೋಸ್ಟ್ ಪೇಪರ್ ಮಿಲ್ಸ್ ಕಾರ್ಮಿಕರು ಸದಾ ಕೇಂದ್ರ ಬಿಂದುವಾಗಿರುತ್ತಿದ್ದರು. ಸಿರ್ಸಿಯಲ್ಲೂ ಅಲ್ಲಲ್ಲಿ ಚದುರಿಹೋದ ಉದ್ದಿಮೆಗಳಿದ್ದವು. ಅಲ್ಲಿ ಕಾರ್ಯಾಚರಣೆಗಳೂ ನಡೆದವು. ಕಾರವಾರದ ಇತರ ಭಾಗಗಳಲ್ಲಿ ಹೆಂಚು ಕಾರ್ಮಿಕರು ಇದ್ದರು. ಅವರು ಕುಂದಾಪುರದಿಂದ ಸಂಘಟಿತರಾದರು. ಕುಂದಾಪುರ ಈ ಹಿಂದೆ ಹಾಗೂ ಈಗಲೂ ಹೆಂಚು ಕಾರ್ಮಿಕರ ಆಂದೋಲನದ ಕೋಟೆಯಾಗಿದೆ.

ದಕ್ಷಿಣ ಕನ್ನಡ (ಮತ್ತು ಉಡುಪಿ-ಅವೆರಡೂ ಒಂದೇ ಜಿಲ್ಲೆಯಾಗಿದ್ದಾಗ) ಬೀಡಿ ಕಾರ್ಮಿಕರು ಆ ಭಾಗಗಳಲ್ಲಿ ಆಂದೋಲನವನ್ನು ಮುಂದುವರೆಸುವಲ್ಲಿ ಒಂದು ಮಹತ್ವದ ಪಾತ್ರ ವಹಿಸಿದರು. ಮಂಗಳೂರಿನ ಹೆಂಚು ಕಾರ್ಮಿಕರು ಅವರನ್ನು ಸಂಘಟಿಸಿದರು. ಇದು ಕಾರ್ಮಿಕ ಸಂಘದ ಕಾರ್ಯನಿರ್ವಹಣೆಗೆ ಹಾಗೂ ಕಾರ್ಮಿಕ ವರ್ಗದ ನಡುವೆ ರಾಜಕೀಯ ಬೆಳವಣಿಗೆಯ ಒಂದು ಉತ್ಕೃಷ್ಟ ಉದಾಹರಣೆ. ಭಾರಿ ಇಂಜಿನಿಯರಿಂಗ್, ಏರೋನಾಟಿಕ್ಸ್, ಇಲೆಕ್ಟ್ರಾನಿಕ್ಸ್ ಇತ್ಯಾದಿ

ಬೆಂಗಳೂರು ವಿಮಾನಗಳ ಒಂದು ಸೇವಾ ಕೇಂದ್ರವಾಯಿತು. ವಾಲ್‌ಚಂದ್ ಹಿರಾಚಂದ್ ಹಿಂದೂಸ್ತಾನ್ ಏರ್‌ಕ್ರಾಫ್ಟ್ ಲಿಮಿಟೆಡ್ ಆರಂಭಿಸಿದರು. ಸ್ವಾತಂತ್ರ್ಯದ ನಂತರ ಅದು ಸಾರ್ವಜನಿಕ ವಲಯದ ಪ್ರಖ್ಯಾತ ಕಂಪನಿ ಹಿಂದೂಸ್ತಾನ್ ಏರೋನಾಟಿಕ್ಸ್ ಲಿಮಿಟೆಡ್ ಅಥವಾ ಹೆಚ್‌ಎಎಲ್ ಆಯಿತು.

ಸ್ವಾತಂತ್ರ್ಯ ಸಿಕ್ಕ ಆರಂಭದ ಕಾಲಾವಧಿಯಲ್ಲಿ ಮತ್ತು ನಂತರವೂ ಹೆಚ್‌ಎಎಲ್ ಕಾರ್ಮಿಕರು ತಮ್ಮ ಜೀವನ ಪರಿಸ್ಥಿತಿಗಳನ್ನು ಉತ್ತಮ ಪಡಿಸಿಕೊಳ್ಳಲು ಹಲವಾರು ಕಠಿಣ ಹೋರಾಟಗಳನ್ನು ನಡೆಸಬೇಕಾಯಿತು. ನಿರಂಜನರ ಸಣ್ಣ ಕಥೆಗಳಲ್ಲಿ ಆ ಕಾಲಾವಧಿಯ ಹೋರಾಟಗಳ ಪ್ರವೃತ್ತಿಗಳನ್ನು ನಾವು ಅರಿತುಕೊಳ್ಳಬಹುದು.

ಹೆಚ್‌ಎಎಲ್ ಅಲ್ಲದೆ, ಹಲವು ವರ್ಕ್‌ಶಾಪ್‌ಗಳು, ತರಬೇತಿ ಸಂಸ್ಥೆಗಳು ಬೆಂಗಳೂರಿನಲ್ಲಿ ಆರಂಭಗೊಂಡವು. ವಿಶ್ವವಿದ್ಯಾಲಯ ಇಂಜಿನಿಯರಿಂಗ್ ಕಾಲೇಜ್ ಹಾಗೂ ಶ್ರೀಕೃಷ್ಣ ರಾಜೇಂದ್ರ ಒಡೆಯರ್ ತಾಂತ್ರಿಕ ಸಂಸ್ಥೆ (ಎರಡೂ ಕೆ.ಆರ್.ವೃತ್ತದಲ್ಲಿ ಇವೆ) ಬೆಂಗಳೂರಿನ ಕೈಗಾರಿಕಾ ಬೆಳವಣಿಗೆಗೆ ಆಧಾರ ಕಲ್ಪಿಸಿದ ಅತ್ಯುತ್ತಮ ಶಿಕ್ಷಣ ಸಂಸ್ಥೆಗಳು.

ಬೆಂಗಳೂರಿನ ಭೌಗೋಳಿಕ ಸ್ಥಾನಮಾನ ಹಾಗೂ ಹಿತಕರ ಹವಾಮಾನದಿಂದಾಗಿ ಸ್ವಾತಂತ್ರ್ಯಾನಂತರದ ದಿನಗಳಲ್ಲಿ ಅದು ಆಯಕಟ್ಟಿನ ಮಹತ್ವ ಪಡೆಯಿತು. ಹೆಚ್‌ಎಎಲ್ ನೊಂದಿಗೆ ಇಂಡಿಯನ್ ಟೆಲಿಫೋನ್ ಇಂಡಸ್ಟ್ರೀಸ್(ಐಟಿಐ), ಹಿಂದೂಸ್ತಾನ್ ಮೆಶಿನ್ ಟೂಲ್ಸ್(ಹೆಚ್‌ಎಂಟಿ) ಹಾಗೂ ಭಾರತ್ ಇಲೆಕ್ಟ್ರಾನಿಕ್ಸ್ (ಬಿಇಎಲ್) ಸ್ಥಾಪನೆಗೊಂಡವು. ಈ ಕಾರ್ಖಾನೆಗಳಲ್ಲಿ ಪ್ರಮುಖವಾಗಿ ಪಕ್ಕದ ರಾಜ್ಯಗಳಿಂದ ಬಂದ ಶ್ರಮಿಕರೇ ಹೆಚ್ಚಾಗಿದ್ದರು. ಸಾರ್ವಜನಿಕ ವಲಯದ ಕಾರ್ಮಿಕರ ಹೋರಾಟಗಳು ಬೆಂಗಳೂರು ನಗರದಲ್ಲಿ ಹೊಸದೊಂದು ಕಾರ್ಮಿಕ ಆಂದೋಲನದ ತಳಪಾಯವನ್ನು ಹಾಕಿದವು.

ಹೆಚ್‌ಎಎಲ್‌ನಲ್ಲಿ ಒಂದು ರೈಲ್ ಬೋಗಿ ಘಟಕ ಇತ್ತು. ಅದನ್ನು ಬಿಇಎಂಎಲ್ ಆಗಿ ಪರಿವರ್ತಿಸಲಾಯಿತು. ಕೆ.ಜಿ.ಎಫ್. ನಲ್ಲಿ ಮಣ್ಣೆತ್ತುವ ವಾಹನಗಳನ್ನು ತಯಾರಿಸುವ ಇನ್ನೊಂದು ಕಾರ್ಖಾನೆಯನ್ನು ಸ್ಥಾಪಿಸಲಾಯಿತು.

ಬೆಂಗಳೂರಿನಲ್ಲಿ ಕಿರ್ಲೋಸ್ಕರ್ ಇಲೆಕ್ಟ್ರಿಕ್ ಕಂಪನಿ, ಗೆಸ್ಟ್ ಕೀನ್ ವಿಲಿಯಮ್ಸ್(ಜಿಕೆಡಬ್ಲ್ಯು) ಮುಂತಾದ ಖಾಸಗೀ ವಲಯದ ಇಂಜಿನಿಯರಿಂಗ್ ಕಾರ್ಖಾನೆಗಳೂ ಇದ್ದವು. ಕಿರ್ಲೋಸ್ಕರ್‌ಗಳು ಮೈಸೂರು ಸಂಸ್ಥಾನಕ್ಕೆ 1941 ರಲ್ಲಿ ಬಂದರು. ಹರಿಹರದಲ್ಲಿ ಅವರು ತಮ್ಮ ಮೊದಲು ಯಂತ್ರಸಾಧನ (ಮೆಷಿನ್ ಟೂಲ್ಸ್) ಗಳ ಉದ್ದಿಮೆ ಸ್ಥಾಪಿಸಿದರು. ನಂತರ ಹುಬ್ಬಳ್ಳಿಯಲ್ಲಿ, ಧಾರವಾಡದ ಬಳಿ ಸತ್ತೂರು ಇತ್ಯಾದಿಗಳಲ್ಲಿ ಶಾಖೆ ತೆರೆಯಲಾಯಿತು. ಕಾಂ. ಎನ್.ಎಲ್. ಉಪಾಧ್ಯಾಯ 1942 ರಲ್ಲೇ ಹರಿಹರದಲ್ಲಿ ಕಾರ್ಮಿಕರ ಸಂಘಟನೆ ನಡೆಸಿದರು. ಈಗ ಆ ಕಾರ್ಖಾನೆ ಇಲ್ಲ. ಅದು ಮುಚ್ಚಿ ಸಾವಿರಾರು ಕಾರ್ಮಿಕರು ಬೀದಿ ಪಾಲಾಗಿದ್ದಾರೆ.

ಸಿಮೆಂಟ್

ಸಿಮೆಂಟ್ ಉದ್ದಿಮೆ ಬಾಗಲಕೋಟೆ, ಶಹಾಬಾದ್ ಹಾಗೂ ನಂತರ ಗುಲ್ಬರ್ಗಾದ ಹಲವು ಭಾಗಗಳಲ್ಲಿ ಬೆಳೆಯಿತು. ಎಪ್ಪತ್ತರ ದಶಕದ ಆರಂಭದಲ್ಲಿ ಒಂದು ಸಿಮೆಂಟ್ ಕಾರ್ಖಾನೆ ಅಮ್ಮಸಂದ್ರದ ಬಳಿ ತಲೆಯೆತ್ತಿತು. ಡೈಮಂಡ್ ಸಿಮೆಂಟ್ ಎಂದು ಅದರ ಹೆಸರು. ಸಿಮೆಂಟ್ ಉತ್ಪಾದನೆಯ ತಂತ್ರಜ್ಞಾನದಲ್ಲಿ ಬದಲಾವಣೆ ಬಂದು ಸಮತಲ ಭಟ್ಟಿಯ ಬದಲು ಲಂಬಾತ್ಮಕ ಭಟ್ಟಿಗಳು ಬಂದಾಗ ಕಾರ್ಮಿಕರ ಸಂಖ್ಯೆ ಬಹಳಷ್ಟು ಕಡಿತಗೊಂಡಿತು. ಶಹಾಬಾದ್‌ನ ಎಸಿಸಿ ಕಾರ್ಖಾನೆ, ಅದರಿಂದ ಅಲ್ಲಿ ಬೆಳೆದ ಪಟ್ಟಣ ಪ್ರದೇಶ, ಜತೆಗೆ ಎಬಿಎಲ್ ಇಂಜಿನಿಯರಿಂಗ್ ಕಂಪನಿ ಕೈಗಾರಿಕಾ ಮತ್ತು ಕಾರ್ಮಿಕ ವರ್ಗದ ಚಟುವಟಿಕೆಗಳ ಕೇಂದ್ರವಾಯಿತು. ಶಹಾಬಾದ್‌ನ ಮುಚ್ಚುವಿಕೆಯಿಂದ ಅದೀಗ ಮಹತ್ವ ಕಳಕೊಂಡಿದೆ. ಎಬಿಎಲ್‌ನ್ನು ಎಬಿಬಿ ವಹಿಸಿಕೊಂಡು ಕಾರ್ಮಿಕರ ಸಂಖ್ಯೆಯನ್ನು ಸಾಕಷ್ಟು ಇಳಿಸಿತು. ಶಹಾಬಾದ್ ಹಲವು ಸಮರಶೀಲ ಹೋರಾಟಗಳನ್ನು ಕಂಡಿದೆ.

ನಂತರ ಗುಲ್ಬರ್ಗಾದಲ್ಲಿ ರಾಜಶ್ರೀ ಸಿಮೆಂಟ್ (ಮಳಖೇಡ) ಮತ್ತು ಸೇಡಂನಲ್ಲಿ ವಿಕ್ರಂ ಸಿಮೆಂಟ್ ತಲೆಯೆತ್ತಿತು. ಅದೇ ರೀತಿ ವಾಡಿಯಲ್ಲಿ ಎಸಿಸಿಯ ಒಂದು ಆಧುನಿಕ ಸ್ಥಾವರ ಬಂದಿದೆ. ಇದರಿಂದ ಗುಲ್ಬರ್ಗಾ ಜಿಲ್ಲೆ ಒಂದು ಮಹತ್ವದ ಸ್ಥಾನ ಗಳಿಸಿದೆ.

ವಾಹನ ಬಿಡಿಭಾಗಗಳು ಮತ್ತು ವಾಹನೋದ್ಯಮ

ಬೆಂಗಳೂರಿಗೆ ಬಾಷ್ ಕಂಪನಿ ಬಂದು ವಾಹನ ಬಿಡಿ ಭಾಗಗಳನ್ನು ತಯಾರಿಸಲಾರಂಭಿಸಿತು. ಮೈಕೊವನ್ನು ಮೊದಲು ಸ್ಪಾರ್ಕ್ ಪ್ಲಗ್‌ಗಳನ್ನು ತಯಾರಿಸಲು ಸ್ಥಾಪಿಸಲಾಯಿತು. ನಂತರ ನೋಜಲ್ಸ್ ಅಥವಾ ಮೂಲೆ ಕೊಳವೆಗಳನ್ನು ಹಾಗೂ ಆ ನಂತರ ಫ್ಯೂಲ್ ಇಂಟಂಕ್ಷನ್ ಪಂಪುಗಳ ಉತ್ಪಾದನೆ ಆರಂಭಿಸಲಾಯಿತು. ಈಗ ಆ ವಲಯದಲ್ಲಿ ಅದರದ್ದೇ ಮೇಲುಗೈ.

ಬೆಂಗಳೂರಿನ ಅಡುಗೋಡಿಯಲ್ಲಿನ ಘಟಕದ ನಂತರ ನಾಶಿಕ್‌ನಲ್ಲಿ ಒಂದು ಘಟಕ ಬಂತು. ನಂತರ ಮತ್ತೆ ಬೆಂಗಳೂರಿನ ನಾಗನಾಥ ಪುರದಲ್ಲಿ ಈಗ ಜೈಪುರದಲ್ಲಿ ಘಟಕಗಳು ಬಂದಿವೆ. ಈ ಕಾರ್ಖಾನೆ ಮತ್ತು ಅದರ ಕಾರ್ಮಿಕರು ಕಾರ್ಮಿಕ ಹಕ್ಕುಗಳಿಗಾಗಿ ಒಂದು ಅತ್ಯಂತ ಬಲಿಷ್ಟ ಹೋರಾಟ ನಡೆಸಿ, ಈಗಲೂ ಪ್ರಧಾನ ಸ್ಥಾನ ಪಡೆದಿದ್ದಾರೆ.



ಯಲಹಂಕದಲ್ಲಿನ ಎಸ್ಕಾರ್ಟ್ ಕಾರ್ಖಾನೆ ಸಿಲಿಂಡರ್‌ಗಳು, ರಿಂಗ್‌ಗಳು ಹಾಗೂ ಪಿನ್‌ಗಳನ್ನು ತಯಾರಿಸುತ್ತದೆ. ಅಲ್ಲಿಯೂ ಕಾರ್ಮಿಕರು ಹಲವು ದುಮ್ಮಾನಗಳ ಮೂಲಕ ಹಾದುಬಂದಿದ್ದಾರೆ - ಇಂದು ಈ ಉದ್ದಿಮೆ ಸಮೃದ್ಧಿಯತ್ತ ಸಾಗಿದೆ. ಗಯಟ್ಸ್ (ಇಂಡಿಯಾ) ಲಿಮಿಟೆಡ್, ಜರ್ಮನಿಯ ಫೆಡರಲ್ ಮೊಘಲ್ ಜತೆಗೂಡಿ ಸಮೃದ್ಧಿ ಹೊಂದುತ್ತಿದೆ.

ಇತರ ವಾಹನೋದ್ಯಮ ಉದ್ದಿಮೆಗಳಾದ ಧಾರವಾಡದ ಟೆಲ್ಕೋ, ಬಿಡದಿಯ ಟೊಯೊಟಾ ಹಾಗೂ ಹೊಸಕೋಟೆಯ ವೋಲ್ವೋ ಕೂಡಾ ಸಮೃದ್ಧಿ ಹೊಂದುತ್ತಿವೆ.

ಮೈಸೂರಿನ ವಿಕ್ರಾಂತ್ ಟೈರ್ ಕಾರ್ಖಾನೆಯನ್ನು ಈಗ ಜೆಕೆ ಟಯರ್ಸ್ ವಹಿಸಿಕೊಂಡಿದ್ದು, ಬೆಳವಣಿಗೆಗೆ ಸಿದ್ಧವಾಗಿದೆ.

ಸಾರ್ವಜನಿಕ ವಲಯದ ಕಾರ್ಮಿಕರ ವಿಶಿಷ್ಟ ಪಾತ್ರ

ಸ್ವಾತಂತ್ರ್ಯೋತ್ತರ ಅವಧಿಯಲ್ಲಿ ಸಾರ್ವಜನಿಕ ವಲಯದ ಘಟಕಗಳು ಕೇಂದ್ರ ಸ್ಥಾನ ಪಡೆದವು. ಆಗ ಈ ಘಟಕಗಳನ್ನು 1.25 ಲಕ್ಷ ಕಾರ್ಮಿಕರಿದ್ದರು. ತಮ್ಮ ಉನ್ನತಿಗಾಗಿ ಈ ಕಾರ್ಮಿಕರು ನಡೆಸಿದ ನಿರ್ಣಾಯಕ ಹೋರಾಟಗಳು ಶಿಖರ ತಲುಪಿದ್ದು 1980 - 81 ರಲ್ಲಿ. ಅದು ಬೆಂಗಳೂರಿನ ಮುಖವನ್ನೇ ಬದಲಿಸಿತು.

ಮೈಕೊ, ಐಟಿಸಿ, ಹೊಟೆಲ್ ಮತ್ತಿತರ ಕಾರ್ಮಿಕರು ಅವರ ಜತೆಗೂಡಿದರು. ಜತೆಗೆ ನರಗುಂದದಿಂದ ಬೆಂಗಳೂರು ವರೆಗಿನ 1981 ರ ನರಗುಂದ, ನವಲಗುಂದ ಬಂಡಾಯದ ಭಾಗವಾದ ರೈತರ ಜಾಥಾ. ಎಲ್ಲವೂ ಸೇರಿ ಕರ್ನಾಟಕದಲ್ಲಿ ಒಂದು ರೀತಿಯ ಇತಿಹಾಸವನ್ನೇ ನಿರ್ಮಿಸಿದವು. ಕಾಂಗ್ರೆಸ್ ಆಳ್ವಿಕೆ ಕೊನೆಗೊಂಡು ಜನತಾ ಪಾರ್ಟಿ ಆಳ್ವಿಕೆ ಬಂತು.

ರಾಜ್ಯದಲ್ಲಿ ಹಲವು ಉದಾರ ಪ್ರವೃತ್ತಿಗಳಿಗೆ ಹಾದಿ ಮಾಡಿಕೊಡುವಲ್ಲಿ ಯಶಸ್ವಿಯಾದ ಜನತಾ ಪಾರ್ಟಿ ಸರ್ಕಾರ ರಾಜ್ಯವನ್ನು ಆರ್ಥಿಕ ಮುನ್ನಡೆಯ ದಾರಿಯಲ್ಲಿ ಒಯ್ದಿತು. ಉದಾರೀಕರಣದ ನಂತರದ ಅವಧಿಯಲ್ಲಿ ಮಾಹಿತಿ ತಂತ್ರಜ್ಞಾನ (ಐಟಿ) ಮತ್ತು ಮಾಹಿತಿ ತಂತ್ರಜ್ಞಾನ - ಆಧಾರಿತ ಸೇವೆಗಳು (ಐಟಿಇಎಸ್) ಬೆಳೆಯುವುದರೊಂದಿಗೆ ಬೆಂಗಳೂರು ಈಗ ಆರ್ಥಿಕ ಬೆಳವಣಿಗೆಯ ಒಂದು ಶಕ್ತಿಶಾಲೀ ಇಂಜಿನ್ ಆಗಿಬಿಟ್ಟಿದೆ. ಬೆಂಗಳೂರಿನ ನಗರೀಕರಣ ಬೇರೆಲ್ಲಾ ಬೆಳವಣಿಗೆಗಳನ್ನು ಮೀರಿ ನಿಂತು ಬೆಂಗಳೂರು ನಗರ ಮತ್ತು ಗ್ರಾಮಾಂತರ ಜಿಲ್ಲೆಗಳ ಕೃಷಿ ಭೂಮಿ ಒಡೆತನದ ಹಲವಾರು ಕಾರ್ಮಿಕರು ಈಗ ಕೋಟ್ಯಾಧಿಪತಿಗಳೂ ಆಗುವಂತೆ ಮಾಡಿದೆ.

ಶಿಕ್ಷಣ, ಆರೋಗ್ಯ ಸೇವೆ ಮತ್ತು ವಾಣಿಜ್ಯ ತ್ವರಿತವಾಗಿ ಬೆಳೆಯುತ್ತಿದೆ. ಈ ಆರ್ಥಿಕ ಸಮೃದ್ಧಿಯಲ್ಲಿ ಕಾರ್ಮಿಕರ ವರ್ಗದ ಸ್ಪಷ್ಟ ಪಾತ್ರವನ್ನು ಕಾಣಬಹುದು. ಆದರೆ ಇದರ ಪ್ರಯೋಜನ ಶ್ರಮಜೀವಿಗಳಲ್ಲಿ ಬಹುಮಂದಿಗೆ ಸಿಕ್ಕಿಲ್ಲ. ಕರ್ನಾಟಕದ ನಿಜವಾದ ಮುನ್ನಡೆಗೆ ಮುಖಂಡತ್ವ ಒದಗಿಸುವುದು ಕರ್ನಾಟಕದ ಕಾರ್ಮಿಕ ವರ್ಗ, ವಿಶೇಷವಾಗಿ ಬೆಂಗಳೂರಿನ ಕಾರ್ಮಿಕ ವರ್ಗದ ಕೈಯಲ್ಲಿದೆ.

ಆಧುನಿಕ ಭಾರತ ರೂಪುಗೊಂಡ ಬಗೆ ಹಾಗೂ ಭಾಷಾವಾರು ಪ್ರಾಂತಗಳ ರಚನೆ

ಕಾಂ|| ಪ್ರಕಾಶ್ ಕಾರಟ್ ಸಂದರ್ಶನ

ಸಂದರ್ಶಕರು :
ಎಸ್.ವೈ.ಗುರುಶಾಂತ್
ಆರ್.ರಾಮಕೃಷ್ಣ



ಐಕ್ಯರಂಗದ ಸುವರ್ಣ ಕರ್ನಾಟಕದ ಈ ವಿಶೇಷ ಸಂಚಿಕೆಗೆ ಆಧುನಿಕ ಭಾರತ ರೂಪುಗೊಂಡ ಬಗೆ ಹಾಗೂ ಭಾಷಾವಾರು ಪ್ರಾಂತಗಳ ಉದಯ, ರಾಷ್ಟ್ರೀಯತೆಗಳ ಪ್ರಶ್ನೆಗಳ ಕುರಿತ ಲೇಖನವೊಂದನ್ನು ಕೊಡಬೇಕೆಂದು ಸಿಪಿಐ(ಎಂ) ಪ್ರಧಾನ ಕಾರ್ಯದರ್ಶಿ ಕಾಂ.ಪ್ರಕಾಶ್ ಕಾರಟ್‌ರವರನ್ನು ಕೇಳಲಾಗಿತ್ತು.

ಅವರ ನಿರಂತರ ಕಾರ್ಯಭಾರಗಳ ಒತ್ತಡದಲ್ಲಿ ಪತ್ರಿಕೆಯ ಬಯಕೆ ಈಡೇರಿರಲಿಲ್ಲ. ರಾಜಕೀಯ ಪ್ರಚಾರಾಂದೋಲನ ಉದ್ಘಾಟನೆಗಾಗಿ ಆಗಸ್ಟ್ 13, 2006ರಂದು ಕಾಂ.ಪ್ರಕಾಶ್ ಕಾರಟ್‌ರವರು ಬೆಂಗಳೂರಿನಲ್ಲಿದ್ದಾಗ ಪತ್ರಿಕೆಯ ಇದೇ ವಿಷಯದ ಕುರಿತು ಅವರ ಸಂದರ್ಶನ ನಡೆಸಿತು.

ಪ್ರಶ್ನೆ: ಆಧುನಿಕ ಭಾರತ ರೂಪುಗೊಂಡ ಬಗೆ ಮತ್ತು ಭಾಷಾವಾರು ಪ್ರಾಂತಗಳ ರಚನೆಯ ಕುರಿತಂತೆ ಮಾರ್ಕ್ಸ್‌ವಾದಿ ವಿಶ್ಲೇಷಣೆ ಏನು? ಇದರ ವರ್ಗ ಹಿತಾಸಕ್ತಿ ಏನು?

ಪ್ರಕಾಶ್ ಕಾರಟ್: ಆಧುನಿಕ ಭಾರತದ ಈ ರಾಷ್ಟ್ರೀಯತೆಯ ಪ್ರಜ್ಞೆ ಬ್ರಿಟೀಷ್ ಸಾಮ್ರಾಜ್ಯಶಾಹಿಯ ವಿರುದ್ಧದ ಸುದೀರ್ಘ ಹೋರಾಟದಲ್ಲಿ ರೂಪುಗೊಂಡದ್ದು. ಮಾರ್ಕ್ಸ್‌ವಾದಿ ದೃಷ್ಟಿಯಲ್ಲಿ ನೋಡುವುದಾದರೆ, ಬಂಡವಾಳಶಾಹಿ ವರ್ಗದ ಉದಯ ಈ ರಾಷ್ಟ್ರೀಯತೆಯ ಪ್ರಜ್ಞೆಯ ಜಾಗೃತಿಗೆ-ಬೆಳವಣಿಗೆಗೆ ಕಾರಣವಾಗುತ್ತದೆ. ಈ ಬೂರ್ಜ್ವಾ ವರ್ಗದ 'ಸಾಮಾನ್ಯ ಮಾರುಕಟ್ಟೆ' ಬೆಳವಣಿಗೆ ಇದರ ಹಿಂದಿರುತ್ತದೆ. ಯುರೋಪಿನಲ್ಲಿ 17ನೇ ಶತಮಾನದಲ್ಲಿ ಬೆಳೆದು ಬಂದ ರಾಷ್ಟ್ರೀಯತೆಯನ್ನಾಧರಿಸಿದ ರಾಜ್ಯದ ಪರಿಕಲ್ಪನೆಗೆ ಹೊಸದಾಗಿ ಉದಿಸಿದ ಬೂರ್ಜ್ವಾ ವರ್ಗವೇ ಆಧಾರವಾಗಿದೆ. ಪಾಳೇಗಾರಿ ರಾಜ ಪ್ರಭುತ್ವ ವ್ಯವಸ್ಥೆಗೆ ವಿರುದ್ಧವಾಗಿ ಇದು ವಿಶಾಲ ಪ್ರದೇಶಗಳನ್ನೊಳಗೊಂಡ ಹಾಗೂ ಗಡಿಗಳನ್ನು ನಿರ್ದಿಷ್ಟಗೊಳಿಸಿದ ಕೇಂದ್ರಿಕೃತವಾದ ವ್ಯವಸ್ಥೆಯಾಗಿತ್ತು. ನಿರ್ದಿಷ್ಟಗೊಳಿಸಲಾದ ಗಡಿಗಳನ್ನು ಹೊಂದಿರುವ ಮಾರುಕಟ್ಟೆಯ ಅಗತ್ಯ ಈ ಬೂರ್ಜ್ವಾ ವರ್ಗಕ್ಕಿತ್ತು.

ಈ ರಾಷ್ಟ್ರೀಯತೆಯ ಭಾವನೆಯ ಬೆಳವಣಿಗೆಗೆ ಭಾಷೆ ಒಂದು ವಾಹನವೆಂಬಂತ್ತಿತ್ತು. ಭಾರತದಲ್ಲಿ ಈ ಪ್ರಕ್ರಿಯೆ 19ನೇ ಶತಮಾನದ ಕೊನೆಯ ಭಾಗದಲ್ಲಿ ಆರಂಭಗೊಂಡು 20ನೇ ಶತಮಾನದಲ್ಲಿ ವಿಕಸನ ಗೊಂಡಿತು. ಭಾರತ ಆಧುನಿಕ ರಾಷ್ಟ್ರವಾಗಿ ರೂಪು ತಳೆಯತೊಡಗಿತು.

ಮಾರ್ಕ್ಸ್‌ವಾದಿ ದೃಷ್ಟಿಯಲ್ಲಿ ನೋಡುವುದಾದರೆ, ಬಂಡವಾಳಶಾಹಿ ವರ್ಗದ ಉದಯ ಈ ರಾಷ್ಟ್ರೀಯತೆಯ ಪ್ರಜ್ಞೆಯ ಜಾಗೃತಿಗೆ-ಬೆಳವಣಿಗೆಗೆ ಕಾರಣವಾಗುತ್ತದೆ.

ಪ್ರಶ್ನೆ: ಭಾರತದಲ್ಲಿ ಭಾಷಾ ರಾಷ್ಟ್ರೀಯತೆಗಳು ರೂಪುಗೊಂಡ ಬಗೆ ಹೇಗೆ?

ಕಾರಟ್ : ಸ್ವಾತಂತ್ರ್ಯ ಹೋರಾಟದ ಕಡೆಗೆ ಹಿಂತಿರುಗಿ ನೋಡಿದರೆ, ಹೊಸದಾಗಿ ಉದಯಿಸುತ್ತಿದ್ದ ಬೂರ್ಜ್ವಾ ವರ್ಗ ಮತ್ತು ಆಧುನಿಕ ಶಿಕ್ಷಣ ಪಡೆದ ಮಧ್ಯಮ ವರ್ಗ ಇವರ ನಡುವೆ ರಾಷ್ಟ್ರೀಯತೆಯ ಪ್ರಜ್ಞೆ ಜಾಗೃತವಾಗುತ್ತಿದ್ದುದನ್ನು ಕಾಣುತ್ತೇವೆ. ಆಧುನಿಕ ಶಿಕ್ಷಣ ಪದ್ಧತಿಯೂ ಈ ರಾಷ್ಟ್ರೀಯತೆಯ ಬೆಳವಣಿಗೆಗೆ ಕಾರಣವಾಗಿದೆ. ಕಾಂಗ್ರೆಸ್ ಪಕ್ಷವು ಸ್ಥಾಪಿಸಲ್ಪಟ್ಟಾಗ ಈ ವರ್ಗಗಳೇ ಪ್ರಮುಖ ಪಾತ್ರ ವಹಿಸಿರುವುದನ್ನು ನೋಡುತ್ತೇವೆ. ಗಾಂಧೀಜಿಯವರ ಆಗಮನದೊಂದಿಗೆ ಕಾಂಗ್ರೆಸ್ ಪಕ್ಷವು ಒಂದು ಸಾಮೂಹಿಕ ಪಕ್ಷವಾಗಿ ರೂಪುಗೊಳ್ಳುತ್ತದೆ. ಈ ನಿಟ್ಟಿನಲ್ಲಿ ಗಾಂಧೀಜಿಯವರ ಪ್ರಥಮ ಹೆಜ್ಜೆಯೇ ಕಾಂಗ್ರೆಸ್ ಪಕ್ಷವನ್ನು ಭಾಷಾವಾರು ಪ್ರಾಂತಗಳ ಆಧಾರದಲ್ಲಿ ಪುನರ್ ರಚಿಸುವುದಾಗಿದೆ.

1920ರ ನಾಗಪುರ ಮಹಾ ಅಧಿವೇಶನವು ಈ ಕುರಿತು ನಿರ್ಣಯವನ್ನು ಅಂಗೀಕರಿಸುತ್ತದೆ. ಅಖಿಲ ಭಾರತ ಕಾಂಗ್ರೆಸ್ ಸಮಿತಿ (ಎಐಸಿಸಿ)ಯ ಜೊತೆಗೆ ಪ್ರದೇಶ ಕಾಂಗ್ರೆಸ್ ಸಮಿತಿ (ಪಿಸಿಸಿ)ಗಳನ್ನು ರಚಿಸಲು ನಿರ್ಣಯಿಸಲಾಯಿತು. 'ರಾಷ್ಟ್ರೀಯ ಚಳುವಳಿಗೆ ಜನ ಸಮೂಹಗಳನ್ನು ಸೆಳೆಯಬೇಕಾದರೆ ಭಾಷಾ ರಾಷ್ಟ್ರೀಯತೆಯನ್ನು ಜಾಗೃತಗೊಳಿಸಬೇಕು' ಎಂದು ಗಾಂಧೀಜಿಯವರು ಅರ್ಥಮಾಡಿಕೊಂಡರು. ಜನ ಸಮೂಹಗಳನ್ನು ಬಡಿದೆಬ್ಬಿಸಬೇಕಾದರೆ ಪ್ರಾಂತ್ಯಗಳ ಹಂತದಲ್ಲಿ ತಳ ಹಂತದಲ್ಲಿ

ಜನ ಸಮೂಹಗಳನ್ನು ಜಾಗೃತಗೊಳಸಬೇಕೆಂಬ ಆಧಾರದಲ್ಲಿ ಹಾಗೆ ಮಾಡಲಾಯಿತು. ಸಮಗ್ರ ರಾಷ್ಟ್ರೀಯತೆ ಮತ್ತು ಭಾಷಾಧಾರಿತವಾದ ಕೆಲವರು 'ಉಪ ರಾಷ್ಟ್ರೀಯತೆ' ಎಂದು ಕರೆಯುವ ಭಾಷಾ ರಾಷ್ಟ್ರೀಯತೆಗಳೂ ಸಮಾನಾಂತರವಾಗಿಯೇ ಬೆಳೆದವು. ಈ ಭಾಷಾ ರಾಷ್ಟ್ರೀಯತೆಗಳು ಈ ಸಮಗ್ರ ರಾಷ್ಟ್ರೀಯತೆಯ ಭಾಗವಾಗಿಯೇ ಬೆಳೆದವು. ಇದನ್ನು ಒಂದಕ್ಕೊಂದು ವಿರುದ್ಧ ಎಂದು ಬಿಂಬಿಸುವುದು ತಪ್ಪಾಗುತ್ತದೆ. ಭಾಷಾ ಆಧಾರಿತವಾದ ರಾಷ್ಟ್ರೀಯತೆ ಜಾಗೃತವಾಗದೇ ಸಾಮ್ರಾಜ್ಯಶಾಹಿಯ ವಿರುದ್ಧ ವಿಶಾಲ ಪ್ರಜಾಪ್ರಭುತ್ವ ಚಳುವಳ ರೂಪಿಸುವುದು ಸಾಧ್ಯವಿರಲಿಲ್ಲ.

ಪ್ರಶ್ನೆ: ನಾವು ಯಾಕೆ 'ಭಾಷಾ ರಾಷ್ಟ್ರೀಯತೆ' ಎಂದೇ ಗುರುತಿಸುತ್ತೇವೆ. ಕೆಲವರು ಧರ್ಮದ ಆಧಾರದ ಮೇಲೆ ರಾಷ್ಟ್ರೀಯತೆಯನ್ನು ಗುರುತಿಸಲು ಯತ್ನಿಸುತ್ತಾರಲ್ಲ ಆ ಬಗ್ಗೆ..?

ನಮ್ಮ ತಿಳುವಳಿಕೆಯಲ್ಲಿ ರಾಷ್ಟ್ರೀಯತೆ ಹಾಗೂ ರಾಷ್ಟ್ರೀಯತೆಯ ಮೂಲ ಆಧಾರ ರಚನೆಯ ಆಂಶಗಳಲ್ಲಿ ಭಾಷೆ ಒಂದು ಪ್ರಮುಖವಾದ ಆಧಾರ. ಭಾರತ ಬಹು ಭಾಷಾ ದೇಶ. ಇಲ್ಲಿ ಹಲವು ಭಾಷೆಗಳು ಬೆಳೆದು ಬಂದಿವೆ. ರಾಷ್ಟ್ರೀಯತೆಯನ್ನು ನಾವು ಭಾಷೆಯಿಂದ ಪ್ರತ್ಯೇಕಿಸಲಾಗದು. ಆದರೆ ರಾಷ್ಟ್ರೀಯತೆಗೆ ಭಾಷೆಯೊಂದೇ ಆಧಾರವಲ್ಲ.

ಭಾಷಾವಾರು ಪ್ರಾಂತ ರಚನೆ ಸಮಾಜದ ಪ್ರಜಾಪ್ರಭುತ್ವೀಕರಣಕ್ಕೆ ಒಂದು ಪ್ರಮುಖ ಹೆಜ್ಜೆಯಾಗಿತ್ತು. ಕಾಂಗ್ರೆಸ್ ಪಕ್ಷವು ಸ್ವಾತಂತ್ರ್ಯ ಹೋರಾಟದ ಸಂದರ್ಭದಲ್ಲಿ ಭಾಷಾವಾರು ಪ್ರಾಂತ ರಚನೆಗೆ ವಚನಬದ್ಧವಾಗಿತ್ತು. ಆದರೆ ಸ್ವಾತಂತ್ರ್ಯಾ ನಂತರ ಕಾಂಗ್ರೆಸ್ ತನ್ನ ನಿಲುವು ಬದಲಿಸಿತು. ನೆಹರೂರವರು ಭಾಷಾವಾರು ಪ್ರಾಂತ ರಚನೆಯ ಕ್ರಮವನ್ನು 'ಭಾರತದ ವಿಘಟನೆಯ ಕ್ರಮ, ಅದನ್ನು ಮಾಡಬಾರದು' ಎಂದರು. ಜವಾಹರ್ ಲಾಲ್‌ನೆಹರು ಅವರು ಅಂದಿನ ಕೇಂದ್ರೀಕೃತವಾಗಿದ್ದ ಬಾಲ್ಕನ್ ದೇಶಗಳ ವಿಘಟನೆಯ ಹಿನ್ನೆಲೆಯಲ್ಲಿ ಭಾಷಾವಾರು ಪ್ರಾಂತ ರಚನೆಯ ಕುರಿತಾಗಿ 'ಬಾಲ್ಕನೈಷನ್' ಎಂದು ಕರೆದರು. ಕಮ್ಯೂನಿಸ್ಟರು 'ಭಾಷಾವಾರು ಪ್ರಾಂತ ರಚನೆಯು ಸ್ವಾತಂತ್ರ್ಯ ಚಳುವಳಿಯ ಪ್ರತಿಜ್ಞೆಯ ಜಾರಿ' ಎಂದು ವಾದಿಸಿದರು. ಪ್ರಜಾಪ್ರಭುತ್ವ, ಗಣತಂತ್ರದ ರಚನೆಯ ಪ್ರಕ್ರಿಯೆ ಇದು ಎಂದು ಭಾವಿಸಿದರು. ಈ ನಿಟ್ಟಿನಲ್ಲಿ ಭಾಷೆ ಒಂದು ಪ್ರಧಾನವಾದ ಅಂಶವಾಗಿತ್ತು. ಸ್ವಾತಂತ್ರ್ಯಾ ನಂತರ ಶಿಕ್ಷಣ, ಆಡಳಿತ, ಸಂವಹನ ಇತ್ಯಾದಿಗಳಲ್ಲಿ ತಮ್ಮ ಭಾಷೆಯನ್ನು ಬಳಸುವಂತಿರುವುದು ಅಗತ್ಯವಾಗಿತ್ತು.

> ಭಾಷಾವಾರು ಪ್ರಾಂತ ರಚನೆಯ ಬೇಡಿಕೆಯೇನು ಸಮಾಜವಾದಿ ಬೇಡಿಕೆಯಾಗಿರಲಿಲ್ಲ. ಮೂಲಭೂತವಾಗಿ ಅದು ಒಂದು ಪ್ರಜಾಪ್ರಭುತ್ವ ಬೇಡಿಕೆಯಾಗಿತ್ತು.


ಒಂದು ಪ್ರಜಾಪ್ರಭುತ್ವ ರಾಜಕೀಯ ವ್ಯವಸ್ಥೆಯನ್ನು ರೂಪಿಸಬೇಕಿದ್ದರೆ ಅದು ಜನರಿಗೆ ಪರಕೀಯವಾದ ಭಾಷೆಯ ಮೂಲಕ ಸಾಧ್ಯವಿರಲಿಲ್ಲ. ಬ್ರಿಟೀಷರ ಆಡಳಿತದಲ್ಲಿ ಆಡಳಿತಾತ್ಮಕ ಅನುಕೂಲಗಳಿಗಾಗಿ ಪ್ರಾಂತಗಳನ್ನು ರಚಿಸಲಾಗಿತ್ತು. ಮುಂಬೈ ಪ್ರಾಂತ, ಮದ್ರಾಸ್ ಪ್ರಾಂತ ಹೀಗೆ, ಇದೆಲ್ಲವೂ ಬಹು ಭಾಷಾ ಪ್ರಾಂತಗಳಾಗಿದ್ದವು. ಈ ಬಹುಭಾಷಾ ಪ್ರಾಂತಗಳನ್ನು ಪುನರ್ ಸಂಘಟಿಸಿ ಭಾಷಾವಾರು ಪ್ರಾಂತ ರಚಿಸಬೇಕೆಂದು ಕಮ್ಯುನಿಸ್ಟರು ಹೋರಾಡಿದರು. ಕಾಂಗ್ರೆಸ್ ಪಕ್ಷ ಇದಕ್ಕೆ ಹಿಂದೆಗೆಯಿತು. ಕನ್ನಡ, ತೆಲುಗು, ತಮಿಳು ಈ ಎಲ್ಲಾ ಭಾಷೆಗಳನ್ನೊಳಗೊಂಡ ಒಂದು ಪ್ರಾಂತ ಇತ್ತು ಎಂದಾದರೆ ಅಲ್ಲಿ ಯಾವ ಭಾಷೆಯನ್ನು ಆಯ್ಕೆ ಮಾಡಿಕೊಳ್ಳಬೇಕೆಂಬ ಬಗ್ಗೆ ಗೊಂದಲ ಮೂಡುತ್ತಿತ್ತು. ಆ ಸಂದರ್ಭದಲ್ಲಿ ಇಂಗ್ಲೀಷ್ ಭಾಷೆಯನ್ನು ಮುಂದುವರಿಸುವುದು ಆಡಳಿತಗಾರರಿಗೆ ಸುಲಭವಾಗುತ್ತಿತ್ತು. ಶಿಕ್ಷಣ, ಆಡಳಿತ ಇತ್ಯಾದಿಗಳು ಜನರ ಭಾಷೆಯಲ್ಲಿರುವ ಭಾಷಾವಾರು ಪ್ರಾಂತ ರಚನೆಯ ಬೇಡಿಕೆಯೇನು ಸಮಾಜವಾದಿ ಬೇಡಿಕೆಯಾಗಿರಲಿಲ್ಲ. ಮೂಲಭೂತವಾಗಿ ಅದು ಒಂದು ಪ್ರಜಾಪ್ರಭುತ್ವ ಬೇಡಿಕೆಯಾಗಿತ್ತು. ಸ್ವಾತಂತ್ರ್ಯವನ್ನು ಕ್ರೋಢೀಕರಿಸಿ, ಭಾರತದ ರಾಜ್ಯ ಸ್ವರೂಪವನ್ನು ಪುನರ್ ರಚಿಸಲು, ಪ್ರಜಾಪ್ರಭುತ್ವವನ್ನು ಬಲಪಡಿಸಲು ಅದು ಅಗತ್ಯವಾಗಿತ್ತು.

ಪ್ರಶ್ನೆ : ಭಾಷಾವಾರು ಪ್ರಾಂತ ರಚನೆಗಾಗಿ ಕಮ್ಯುನಿಸ್ಟರು ಬೇರೆ ಬೇರೆ ರಾಜ್ಯಗಳಲ್ಲಿ ಏನು ಪಾತ್ರ ವಹಿಸಿದರು?

ಭಾರತದ ಸಂವಿಧಾನ ರಚನೆಗೊಂಡ ಮೇಲೆ, 1951-52ರಲ್ಲಿ ಕಮ್ಯುನಿಸ್ಟ್ ಪಕ್ಷವು ಕಾನೂನುಬದ್ಧವಾದ ಮೇಲೆ, ಸ್ವತಂತ್ರ ಭಾರತದ ಪ್ರಥಮ ಸಾರ್ವತ್ರಿಕ ಚುನಾವಣೆಗಳ ಸಂದರ್ಭದಲ್ಲಿಯೇ ವಿಶಾಲಾಂಧ್ರದ ಪ್ರಶ್ನೆಯು ಎದ್ದು ಬಂದಿತು. ಈ ವಿಶಾಲಾಂಧ್ರ ಚಳುವಳಿಯಲ್ಲಿ ಕಮ್ಯುನಿಸ್ಟರು ನೇತೃತ್ವದ ಪಾತ್ರ ವಹಿಸಿದ್ದರು. ವಿಶಾಲಾಂಧ್ರದ ಈ ಚಳುವಳಿಯು ಭಾಷಾವಾರು ಪ್ರಾಂತ ರಚನೆಯ ಪ್ರಶ್ನೆಯನ್ನು ಮುಂಚೂಣಿಗೆ ತಂದಿತು. ಕೇಂದ್ರ ಸರ್ಕಾರ ಆರಂಭದಲ್ಲಿ ವಿಶಾಲಾಂಧ್ರದ ರಚನೆಗೆ ವಿರೋಧವಾಗಿತ್ತು.

ಜನ ಸಮುದಾಯದ ಸಾಮೂಹಿಕ ಹೋರಾಟ ಮೂಡಿಬಂದಿತು. ಕಾಂಗ್ರೆಸ್‌ನ ಮುಖಂಡರಾದ ಪೊಟ್ಟಿ ಶ್ರೀರಾಮುಲು ಅವರು ಈ ಉದ್ದೇಶಕ್ಕಾಗಿ ಉಪವಾಸ ಸತ್ಯಾಗ್ರಹ ನಡೆಸಿ ಈ ಹೋರಾಟದಲ್ಲೇ ಮರಣ ಹೊಂದಿದರು. ಕಾಂಗ್ರೆಸ್ ಪಕ್ಷದ ಮೇಲೆ ಒತ್ತಡ ಹೆಚ್ಚಿತು. ಕಾಂಗ್ರೆಸ್ ಕಾರ್ಯಕರ್ತರೂ, ಮುಖಂಡರೂ ಈ ಚಳುವಳಿಗೆ ಸೇರಿದರು. ಈ ಹಿನ್ನೆಲೆಯಲ್ಲಿ ರಾಜ್ಯಗಳ ಪುನರ್‌ರಚನಾ ಆಯೋಗವನ್ನು ರಚಿಸ ಲಾಯಿತು. ಈ ಸಮಿತಿಯು ಸ್ಥೂಲವಾಗಿ ಭಾಷಾವಾರು ಪ್ರಾಂತ ರಚನೆಗೆ ಶಿಫಾರಸ್ಸು ಮಾಡಿತು. ಇಡಿಯಾಗಿ ಆಂಧ್ರದ ಎಲ್ಲಾ

ಪ್ರದೇಶಗಳನ್ನು ಅದರಲ್ಲಿ ಸೇರಿಸುವ ಶಿಫಾರಸ್ಸು ಇರಲಿಲ್ಲ. ವಿಶಾಲಾಂಧ್ರದಲ್ಲಿ ಆದಂತೆ ಕೇರಳದಲ್ಲಿಯೂ ಕಾಂಗ್ರೆಸ್ ಅದೇ ನಿಲುವು ತಳೆಯಿತು. ಆಂಧ್ರದಲ್ಲಿ ಕಾಂ॥ ಪಿ. ಸುಂದರಯ್ಯ ಅವರು ತೆಲುಗು ಭಾಷಿಕ ಪ್ರದೇಶಗಳೆಲ್ಲಾ ಒಂದು ಗೂಡಿ ವಿಶಾಲಾಂಧ್ರ ಏಕಾಗಬೇಕೆಂದು ವಿವರಿಸಿ ಅತ್ಯುತ್ತಮವಾದ ಪುಸ್ತಕವನ್ನು ಬರೆದರು. ಅದೇ ರೀತಿ ಕಾಂ॥ ಇ.ಎಂ.ಎಸ್.ನಂಬೂದರಿ ಪಾದ್‌ರವರು ಐಕ್ಯ ಕೇರಳದ ಬಗೆಗೆ ಕಿರುಹೊತ್ತಿಗೆ ಬರೆದರು. ಆಗ ಕೇರಳವು, ತಿರುವಾಂಕೂರು, ಕೊಚ್ಚಿನ್‌ಗಳ ರಾಜ ಪ್ರಭುತ್ವಗಳ ಅಡಿ ಮತ್ತು ಬ್ರಿಟೀಷ್ ಆಳ್ವಿಕೆಯ ಮದ್ರಾಸ್‌ಗಳಲ್ಲಿ ಹಂಚಿಹೋಗಿತ್ತು. ಇದಾದ ನಂತರ ಕರ್ನಾಟಕದ ಏಕೀಕರಣದ ಪ್ರಶ್ನೆ, ಅದೇ ರೀತಿ ಸಂಯುಕ್ತ ಮಹಾರಾಷ್ಟ್ರ, ಮಹಾ ಗುಜರಾತ್, ಹೀಗೆ ಹಲವು ಸಾಮೂಹಿಕ ಚಳುವಳಿಗಳು ಎದ್ದು ಬಂದವು. ಈ ಎಲ್ಲಾ ಹೋರಾಟಗಳಲ್ಲಿ ಅಂದಿನ ಅವಿಭಜಿತ ಕಮ್ಯುನಿಸ್ಟ್ ಪಕ್ಷವು ಇತರ ಪ್ರಜಾಪ್ರಭುತ್ವ ಶಕ್ತಿಗಳೊಂದಿಗೆ ಇದರಲ್ಲಿ ಪಾತ್ರ ವಹಿಸಿತು.



ಎನ್.ಕೆ.ಉಫಾಧ್ಯಾಯ



ಎನ್.ಎಲ್.ಉಪಾಧ್ಯಾಯ


ಕರ್ನಾಟಕ ಏಕೀಕರಣದ ಚಳುವಳಿಯಲ್ಲಿ ಮಹತ್ವದ ಪಾತ್ರ ವಹಿಸಿದ ಕಮ್ಯೂನಿಸ್ಟ್ ಸಹೋದರರು

ರಾಜಕೀಯ ಪಕ್ಷಗಳಲ್ಲಿ ಭಾಷಾವಾರು ಪ್ರಾಂತ ರಚನೆಯ ಬಗ್ಗೆ ಸದಸ್ಯತ್ವ ದೃಷ್ಟಿಕೋನ ಹೊಂದಿ, ಅದಕ್ಕಾಗಿ ಚಳುವಳಿ ನಡೆಸಿದ್ದು ಅಂದಿನ ಭಾರತ ಕಮ್ಯುನಿಸ್ಟ್ ಪಕ್ಷ(ಸಿಪಿಐ) ಮಾತ್ರ. ಮಹಾರಾಷ್ಟ್ರದಲ್ಲಿ ಆದಂತೆ ಕೆಲವು ರಾಜ್ಯ ಮಟ್ಟದ ಪ್ರಾದೇಶಿಕ ರಾಜಕೀಯ ಪಕ್ಷಗಳು, ಶಕ್ತಿಗಳು ಇದರಲ್ಲಿ ಸೇರಿದ್ದರೂ ಸಹ ಅಖಿಲ ಭಾರತ ಮಟ್ಟದಲ್ಲಿ ಈ ಬಗ್ಗೆ ಸ್ಪಷ್ಟ ತಿಳುವಳಿಕೆ, ದೃಷ್ಟಿಕೋನ ಹೊಂದಿದ್ದದ್ದು ಕೇವಲ ಸಿಪಿಐ ಪಕ್ಷ ಮಾತ್ರ.

> ನನ್ನ ದೃಷ್ಟಿಯಲ್ಲಿ ಭಾರತ ಈಗಲೂ ರೂಪುಗೊಳ್ಳುತ್ತಿರುವ ರಾಷ್ಟ್ರೀಯತೆ. ಅಖಿಲ ಭಾರತ ಮಟ್ಟದಲ್ಲಿ ಭಾಷಾ ರಾಷ್ಟ್ರೀಯತೆಯ ಗುರುತುಗಳನ್ನು ಬಲಪಡಿಸುವುದು ಭಾರತದ ರಾಷ್ಟ್ರೀಯತೆಯನ್ನು

ಪ್ರಶ್ನೆ: ಭಾಷಾವಾರು ಪ್ರಾಂತ ರಚನೆಯ ಆಶೋತ್ತರಗಳು ಈಡೇರಿವೆಯೇ?

ಕಾರಟ್: ಇವತ್ತಿನ ಭಾರತದ ರಾಜ್ಯ ರಚನೆ, ರಾಜಕೀಯ-ಸಮಾಜ ವ್ಯವಸ್ಥೆ ಎಲ್ಲವೂ ಭಾಷಾವಾರು ರಾಜ್ಯಗಳ ವಾಸ್ತವವನ್ನೇ ಆಧರಿಸಿವೆ. ಇದೀಗ ನಾವದನ್ನು ತಿರುಗು ಮುರುಗು ಮಾಡಲಾಗದು. ಇದನ್ನು ನಾವು ಪೂರ್ಣ ಗಣರಾಜ್ಯ ಎಂದು ಹೇಳಲು ಸಾಧ್ಯವಿಲ್ಲವಾದರೂ, ಭಾರತ ಒಂದು ಅರೆ ಗಣರಾಜ್ಯವಾಗಿದ್ದರೂ (ಕ್ವಾಸಿ ಫೆಡರಲ್) ಇಲ್ಲಿ ಏನೆಲ್ಲಾ ಗಣ ತಂತ್ರದ ಅಂಶಗಳಿವೆಯೋ, ಲಕ್ಷಣ -ಸ್ವಭಾವ ಇದೆಯೋ ಅದೆಲ್ಲವೂ ಭಾಷಾವಾರು ರಾಜ್ಯ ರಚನೆಯನ್ನೇ ಪ್ರತಿಫಲಿಸುತ್ತದೆ. ಇಂದು ಭಾರತದಲ್ಲಿ ವಿವಿಧ ಭಾಷಾ ಜನಾಂಗಗಳನ್ನು ಪ್ರತಿನಿಧಿಸುವ 10 ಪ್ರಮುಖ ಭಾಷಾವಾರು ಪ್ರಾಂತಗಳಿವೆ. ಇದಲ್ಲದೆ ಈಶಾನ್ಯ ಪ್ರದೇಶದ ಸಣ್ಣ ಸಣ್ಣ ರಾಜ್ಯಗಳಿವೆ. ಈ ರೀತಿಯ ಭಾಷಾವಾರು ರಾಜ್ಯ ರಚನೆಯು -ರಾಜ್ಯಗಳು ಸಣ್ಣದಿರಲಿ ಅಥವಾ ದೊಡ್ಡದಿರಲಿ ಅವುಗಳ ಬೆಳವಣಿಗೆಗೆ ಸಮಾನ ಅವಕಾಶ ಗಳನ್ನು ಒದಗಿಸುತ್ತದೆ. ಹೆಚ್ಚು ಜನ ಮಾತ ನಾಡುವ ಭಾಷೆಯೇ ಇರಲಿ, ಕಡಿಮೆ ಜನರು ಬಳಸುವ ಭಾಷೆಯೇ ಇರಲಿ ಅವನ್ನು ಸಮಾನವಾಗಿ ಪರಿಗಣಿಸು ವಂತಾಗುತ್ತದೆ. ಭಾಷಾವಾರು ಪ್ರಾಂತ ರಚನೆಯಿಂದಾಗಿ ಕರ್ನಾಟಕದ ಕನ್ನಡ ಇರಲಿ, ಪಂಜಾಬ್‌ನಲ್ಲಿ ಪಂಜಾಬಿ ಇರಲಿ, ಅಸ್ಸಾಂನಲ್ಲಿ ಅಸ್ಸಾಮಿ, ಹೀಗೆ ಭಾರತದ ಎಲ್ಲ ಭಾಷೆಗಳು ಸಮಾನ ಎನ್ನುವ ನೀತಿಯ ಕಡೆಗೆ ಸಾಗಿದಂತಾಗುತ್ತದೆ. ಭಾಷಾವಾರು ಪ್ರಾಂತ್ಯ ಗಳಲ್ಲಿ ಸಹಜವಾಗಿ ಭಾಷಾ ಅಲ್ಪಸಂಖ್ಯಾತರು ಇದ್ದೇ ಇರುತ್ತಾರೆ. ಇಂತಹ ಭಾಷಾ ಅಲ್ಪಸಂಖ್ಯಾತರ ಹಕ್ಕುಗಳನ್ನು ಗುರುತಿಸಬೇಕು ಅವುಗಳನ್ನು ರಕ್ಷಿಸಬೇಕು.



ಕರ್ನಾಟಕ ಏಕೀಕರಣ ಚಳುವಳಿಯಲ್ಲಿ ಹುತಾತ್ಮರಾದ ರಂಜಾನ್ ಸಾಬ್

ಪ್ರಶ್ನೆ: ಭಾಷಾವಾರು ಪ್ರಾಂತಗಳ ರಚನೆಯನ್ನು ಕೇವಲ ಭಾಷೆಗಳ ಬೆಳವಣಿಗೆಯ ದೃಷ್ಟಿಯಿಂದ ರಚಿಸ ಲಾಗಿಲ್ಲ. ಇದರ ಹಿಂದೆ ಆರ್ಥಿಕಾಭಿವೃದ್ಧಿಯ ಆಶಯಗಳೂ ಇದ್ದವು. ಕರ್ನಾಟಕ ಒಂದುಗೂಡಿದರೆ ಉತ್ತಮವಾದ ಅಭಿವೃದ್ಧಿ ಸಾಧಿಸಬಹುದು ಎಂಬ ನಿರೀಕ್ಷೆ ಇತ್ತು. ಇಂತಹ ಆಶಯಗಳು ಈಡೇರಿವೆಯೇ?

ಕಾರಟ್: ಆರ್ಥಿಕಾಭಿವೃದ್ಧಿಯ ಆಶಯಗಳು ಪೂರ್ಣವಾಗಿ ಈಡೇರಿಲ್ಲ. ಆದರೆ ಈಗ ಆಗಿರುವ ಬೆಳವಣಿಗೆಗಳು ಭಾಷಾವಾರು ರಚನೆ ಆಧಾರದ ಮೇಲೆಯೇ ಆಗಿವೆ. ಇದು ರಾಷ್ಟ್ರ ನಿರ್ಮಾಣದ ಪ್ರಕ್ರಿಯೆಯ ಭಾಗ. ನನ್ನ ದೃಷ್ಟಿಯಲ್ಲಿ ಭಾರತ ಈಗಲೂ ರೂಪುಗೊಳ್ಳುತ್ತಿರುವ ರಾಷ್ಟ್ರೀಯತೆ. ಅಖಿಲ ಭಾರತ ಮಟ್ಟದಲ್ಲಿ ಭಾಷಾ ರಾಷ್ಟ್ರೀಯತೆಯ ಗುರುತುಗಳನ್ನು ಬಲಪಡಿಸುವುದು ಭಾರತದ ರಾಷ್ಟ್ರೀಯತೆಯನ್ನು ದುರ್ಬಲಗೊಳಿಸುವುದಿಲ್ಲ, ಬದಲಿಗೆ ಅದಕ್ಕೆ ಪೂರಕವಾಗಿ ಅದನ್ನು ಬಲಪಡಿಸುತ್ತದೆ. ಭಾರತದ ಸಂವಿಧಾನ ಜಾರಿಗೆ ಬಂದ ಐದು ದಶಕಗಳಿಗೂ ಹೆಚ್ಚಿನ ಕಾಲವನ್ನು

ಅವಲೋಕಿಸಿದರೆ ಈ ಅಂಶವು ಮನದಟ್ಟಾಗುತ್ತದೆ. ವಾಸ್ತವವಾಗಿ ಭಾಷಾವಾರು ರಾಜ್ಯಗಳು ಈ ಭಾರತದ ಒಗ್ಗಟ್ಟನ್ನು ಕಾಪಾಡುತ್ತಿವೆ.

ಒಂದೊಮ್ಮೆ ಈ ಭಾಷಾವಾರು ರಾಷ್ಟ್ರೀಯತೆಗಳ ಆಧಾರದ ಪ್ರಾಂತ ರಚನೆ ಆಗದೆ ಇದ್ದಿದ್ದರೆ ಆಗ ಇತರ ವಿಭಜನಾಕಾರಿ ಶಕ್ತಿಗಳು ತಾವೇ ಮೇಲುಗೈ ಸಾಧಿಸಲು ಅವಕಾಶವಾಗುತ್ತಿತ್ತು. ಸಂಕುಚಿತ ವಿಚ್ಛಿದ್ರಕಾರಿ (ಚಾವನಿಸ್ಟ್) ಭಾಷಾಂಧ ಶಕ್ತಿಗಳು ತಲೆ ಎತ್ತುತ್ತಿದ್ದವು. ಹಲವಾರು ಭಾಷಾ ರಾಷ್ಟ್ರೀಯತೆಗಳು ಅಸ್ತಿತ್ವದಲ್ಲಿರುವ ಭಾರತದಲ್ಲಿ ಭಾಷೆಗೆ ಸಂಬಂಧಿಸಿದ ಜನರ ಆಶೋತ್ತರಗಳಿಗೆ ಸೂಕ್ತವಾಗಿ ಸ್ಪಂದಿಸುವುದಿಲ್ಲ ವೆಂದಾಗಿದ್ದಿದ್ದಲ್ಲಿ ಜನರಲ್ಲಿ ಪರಕೀಯ ಭಾವನೆಗಳ ಬೆಳವಣಿಗೆಗೆ, ಆ ಮೂಲಕ ತೀವ್ರ ವಿಭಜನಕಾರಿ ಪ್ರವೃತ್ತಿಗಳಿಗೆ ಅವಕಾಶವಾಗುತ್ತಿತ್ತು. ಈಗ ಈ ಸಮಸ್ಯೆ ಇಲ್ಲವೆಂದಲ್ಲ. ಈಗಲೂ ಸಮಸ್ಯೆಗಳು ಇವೆ. ಆದರೆ ಭಾಷಾವಾರು ಪ್ರಾಂತ ರಚನೆಯ ಕಾರಣಗಳಿಂದಾಗಿ ಇಂತಹ ಸಮಸ್ಯೆಗಳನ್ನು ಎದುರಿಸುವುದು ಸುಲಭವಾಗಿದೆ.

ಪ್ರಶ್ನೆ: ಸಣ್ಣ ರಾಜ್ಯ ರಚನೆ ಮಾಡಿದಲ್ಲಿ ಆಡಳಿತಕ್ಕೆ ಅನುಕೂಲ ಎಂಬ ವಾದವಿದೆ. ಇದಲ್ಲದೆ ಇತ್ತೀಚೆಗೆ ಪ್ರತ್ಯೇಕ ರಾಜ್ಯದ ಬೇಡಿಕೆಗಳು ಎದ್ದು ಬರುತ್ತಿವೆ. ತೆಲಂಗಾಣ, ಹೈದರಾಬಾದ್-ಕರ್ನಾಟಕ, ಕೊಡಗು, ಇತ್ಯಾದಿ?

ಭಾಷಾವಾರು ಪ್ರಾಂತ ರಚನೆಯಾಗಿರುವಾಗ ಸಹಜವಾಗಿ ಮತ್ತು ಅನಿವಾರ್ಯವಾಗಿ (Obviously) ಆ ರಾಜ್ಯಗಳಲ್ಲಿ ಭಾಷಾ ಅಲ್ಪಸಂಖ್ಯಾತರು ಇದ್ದೇ ಇರುತ್ತಾರೆ. ನಮ್ಮ ದೃಷ್ಟಿ ಕೋನದಲ್ಲಿ ಪ್ರಜಾಪ್ರಭುತ್ವ ತತ್ವದ ಆಧಾರದಲ್ಲಿ ಭಾಷಾ ಅಲ್ಪ ಸಂಖ್ಯಾತರ ಹಕ್ಕುಗಳನ್ನು ರಕ್ಷಿಸಬೇಕು. ಉದಾಹರಣೆಗೆ ಭಾಷಾ ಅಲ್ಪ ಸಂಖ್ಯಾತರಿಗೆ ಬಹು ಸಂಖ್ಯಾತರಿಗಿದ್ದಂತೆ ತಮ್ಮ ಭಾಷೆಯಲ್ಲಿ ಶಿಕ್ಷಣ ಪಡೆದುಕೊಳ್ಳುವ ಅವಕಾಶವನ್ನು ಖಾತ್ರಿ ಪಡಿಸಬೇಕು.

ಎಲ್ಲಾ ಭಾಷಾ ರಾಷ್ಟ್ರೀಯತೆಗಳೂ ಒಂದೇ ಬಂಡವಾಳಶಾಹಿ ವ್ಯವಸ್ಥೆಯೊಳಗೇ ಇವೆ. ಬಂಡವಾಳಶಾಹಿ ಬೆಳವಣಿಗೆಯ ನಿಯಮವೇ ಅಸಮಾನ ಬೆಳವಣಿಗೆ. ಕೆಲವು ರಾಜ್ಯಗಳು ಬೆಳೆದಿವೆ. ಕೆಲವು ರಾಜ್ಯಗಳು ಹಿಂದುಳಿದಿವೆ. ರಾಜ್ಯ ರಾಜ್ಯಗಳ ನಡುವೆ ಅಸಮಾನತೆ ಇದೆ. ಇದು ಮಾತ್ರವೇ ಅಲ್ಲ. ರಾಜ್ಯಗಳ ಒಳಗೆ ಸಹ ಕೆಲವು ಭಾಗ ಮುಂದುವರಿದಿದ್ದರೆ, ಕೆಲವು ಭಾಗಗಳು ಹಿಂದುಳಿದಿವೆ. ಇದಕ್ಕೆ ಐತಿಹಾಸಿಕವಾದ ಹಲವು ಕಾರಣಗಳಿವೆ. ಕೆಲವೆಡೆ ವಸಾಹತುಶಾಹಿ ಆಡಳಿತದಲ್ಲಿ ಆಗಿದ್ದ ಮೂಲಭೂತ ಸೌಕರ್ಯಗಳ ಬೆಳವಣಿಗೆ ಮತ್ತು ರಾಜಕೀಯ ಕಾರಣಗಳು. ಕಾರಣ ಏನಾದರೂ ಇರಲಿ. ಈ ರೀತಿಯ ಪ್ರಾದೇಶಿಕ ಅಸಮಾನತೆಗಳು 'ತಾರತಮ್ಯವಾಗಿದೆ' ಎಂಬ ಭಾವನೆಗೆ ಮತ್ತು ಆ ಮೂಲಕ ತಮ್ಮದೇ ಆದ ಪ್ರತ್ಯೇಕ ರಾಜ್ಯವನ್ನು ರಚಿಸಿಕೊಳ್ಳಬೇಕೆಂಬ ಪ್ರತ್ಯೇಕತೆಯ ಭಾವನೆಗೆ ಕಾರಣವಾಗುತ್ತದೆ. ಆಂಧ್ರದ ತೆಲಂಗಾಣ ಇದಕ್ಕೆ ಒಂದು ಉತ್ತಮ ಉದಾಹರಣೆ. ಆಂಧ್ರ ಪ್ರದೇಶದ ಹೆಚ್ಚಿನ ಭಾಗ ನಿಜಾಮರ ಆಡಳಿತದಲ್ಲಿತ್ತು. ಬ್ರಿಟೀಷ್‌ರ ಆಳ್ವಿಕೆಯಲ್ಲಿ ಕೃಷಿ, ನೀರಾವರಿ, ಶಿಕ್ಷಣದಲ್ಲಿ ಆಂಧ್ರದ ಕರಾವಳಿ ಭಾಗಗಳು ಬೆಳವಣಿಗೆ ಹೊಂದಿದವು. ಹೀಗೆ ಹಿಂದುಳಿದ ಭಾಗಗಳಲ್ಲಿ ಬೆಳೆದು ಬರುವ ಮಧ್ಯಮ ವರ್ಗವು ತಮ್ಮ ಪ್ರಾಂತದ ಜನತೆ -ತಾವು ಶಿಕ್ಷಣ-ಉದ್ಯೋಗ ಮುಂತಾದ ಪ್ರಶ್ನೆಗಳಲ್ಲಿನ ಸ್ಪರ್ಧೆಗಳಲ್ಲಿ ಹಿಂದೆ ಬಿದ್ದಿರುವುದನ್ನು ಕಂಡು ಮೊದಲು ಪ್ರತ್ಯೇಕತೆ ಬೇಡಿಕೆಯನ್ನು ಎತ್ತುತ್ತಾರೆ. ಹಿಂದುಳಿದಿರುವಿಕೆಯ ಆಧಾರದಲ್ಲಿ ತೆಲಂಗಾಣ, ಬುಡಕಟ್ಟು ಜನರ ಹೆಸರಿನಲ್ಲಿ ಜಾರ್ಖಂಡ್ ರಾಜ್ಯಗಳ ಬೇಡಿಕೆಗಳನ್ನು ನಾವು ನೋಡಿದ್ದೇವೆ. ವಾಸ್ತವವಾಗಿ ಶೇ.30 ರಷ್ಟಿರುವ ಬುಡಕಟ್ಟು ಜನರ ಆಧಾರದಲ್ಲಿ ಶೇ. 70 ರಷ್ಟು ಬುಡಕಟ್ಟೇತರ ಜನರು ಇರುವಂತಹ ಜಾರ್ಖಂಡ್ ರಾಜ್ಯ ರಚನೆಯಾಗಿದೆ.

ವಾಸ್ತವವಾಗಿ ಇದು ಈ ರಾಜ್ಯಗಳಲ್ಲಿ ಬೆಳೆದು ಬಂದಿರುವ ಬೂರ್ಜ್ವಾ (ಬಂಡವಾಳಿಗರು) ಮತ್ತು ಪೆಟ್ಟಿ ಬೂರ್ಜ್ವಾ(ಸಣ್ಣ ಬಂಡವಾಳಿಗರು) ವರ್ಗಗಳ ಹಿತಾಸಕ್ತಿಗಳ ನಡುವಿನ ತಿಕ್ಕಾಟ ಮತ್ತು ಪರಸ್ಪರ ಸ್ಪರ್ಧೆಯ ಪರಿಣಾಮ. ಒಂದು ಅಂಶ ನಿಜ. ಕೆಲವು ಪ್ರದೇಶಗಳು ಹಿಂದುಳಿದಿವೆ. ಕೆಲವು ಮುಂದುವರಿದಿವೆ. ಉದಾಹರಣೆಗೆ ಮಹಾರಾಷ್ಟ್ರದ ವಿದರ್ಭ, ಮಹಾರಾಷ್ಟ್ರದ ಕರಾವಳಿ ಪ್ರದೇಶಗಳು ಹಿಂದುಳಿದಿವೆ. ಇಂತಹ ಕಡೆ ಪ್ರತ್ಯೇಕತೆಯ ಭಾವನೆ ಬಂದೇ ಬರುತ್ತದೆ. ಬರುವುದಿಲ್ಲ ಎಂದು ಭಾವಿಸಬಾರದು. ಪ್ರಶ್ನೆ ಎಂದರೆ ಅದನ್ನು ಹೇಗೆ ಎದುರಿಸುವುದು, ಬಗೆಹರಿಸುವುದು ಎಂಬುದು.

ಅಧಿಕಾರ ವಿಕೇಂದ್ರೀಕರಣ ಈ ಸಮಸ್ಯೆಗೆ ಒಂದು ಉತ್ತಮ ಪರಿಹಾರವನ್ನೊದಗಿಸಬಲ್ಲುದು. ನಾವು ಪ್ರತಿಪಾದಿಸುವುದೇನೆಂದರೆ ರಾಜ್ಯಗಳಿಗೆ ಹೆಚ್ಚು ಅಧಿಕಾರ ನೀಡುವ ಅಧಿಕಾರ ವಿಕೇಂದ್ರೀಕರಣ ಆಗಬೇಕು ಮತ್ತು ಆಯಾ ರಾಜ್ಯಗಳ ನಿರ್ದಿಷ್ಟ ಪರಿಸ್ಥಿತಿಗಳನ್ನಾಧರಿಸಿ ಆ ರಾಜ್ಯಗಳೊಳಗೆ ಅಧಿಕಾರ ವಿಕೇಂದ್ರಿಕರಣ ಸಾಧ್ಯವಾಗಬೇಕು.

ಈ ರಾಜ್ಯಗಳಲ್ಲಿ ಭಾಷಾ ಅಲ್ಪ ಸಂಖ್ಯಾತರಿಗೆ ತಮ್ಮ ಭಾಷೆ ಮತ್ತು ಸಾಂಸ್ಕೃತಿಕ ವಿಕಸನಕ್ಕೆ ಪೂರಕವಾದ ಸ್ವಾಯತ್ತತೆಯನ್ನು ನೀಡಬೇಕು. ಗಣನೀಯ ಸಂಖ್ಯೆಯ ಬುಡಕಟ್ಟು ಜನರಿರುವ ಪ್ರದೇಶಗಳಲ್ಲಿ ಪ್ರಾದೇಶಿಕ ಸ್ವಾಯುತ್ತ ಮಂಡಳಿಗಳನ್ನು ರಚಿಸಬೇಕೆಂಬುದನ್ನು ನಮ್ಮ ಪಕ್ಷದ ಕಾರ್ಯಕ್ರಮದಲ್ಲಿಯೂ ಹೇಳಿದ್ದೇವೆ. ಜನರು ತಮ್ಮ ಭಾಷೆ, ಸಂಸ್ಕೃತಿ, ಜನಾಂಗೀಯ ಹೆಗ್ಗುರುತು ಯಾವುದೇ ಇರಲಿ ಈ ಮೂಲಕ ಅವನ್ನು ರಕ್ಷಿಸಿಕೊಳ್ಳಲು ಸಾಧ್ಯವಾಗುವಂತಿರಬೇಕು. ಇಲ್ಲಿ ನಾವು ಸೂಚಿಸುತ್ತಿರುವ ಸ್ವಾಯತ್ತತೆಯು ಈಗ ಸಂವಿಧಾನದ 6ನೇ ಷೆಡ್ಯೂಲ್ ನೀಡಿರುವುದಕ್ಕಿಂತ ಹೆಚ್ಚಿನ ಅಧಿಕಾರವನ್ನು ನೀಡುವಂತಹದ್ದಾಗಿದೆ. ಈ ಸ್ವಾಯುತ್ತ ಮಂಡಳಿಯು ಕೆಲವು ರಾಜಕಾರಣಿಗಳಿಗೆ ಹುದ್ದೆಗಳನ್ನು ಒದಗಿಸುವುದಕ್ಕೆ ಸೀಮಿತವಾಗಬಾರದು. ಪ್ರಜಾಸತ್ತಾತ್ಮಕ ವಿಕೇಂದ್ರೀಕರಣದ

ಸಂರಚನೆಯನ್ನು ಅದಕ್ಕೆ ಒದಗಿಸಬೇಕು. ಇದಕ್ಕೆ ಶಾಸನಾತ್ಮಕ ಅಧಿಕಾರವನ್ನು ನೀಡಬೇಕು. ರಾಜ್ಯ ಸರ್ಕಾರ ಈ ಅಧಿಕಾರವನ್ನು ಕೊಡಲು ಸಾಧ್ಯವಿಲ್ಲ. ಪಂಚಾಯಿತಿಗಳಿಗೆ ಅಧಿಕಾರ ವಿಕೇಂದ್ರೀಕರಣ ಹೇಗೆ ಅಗತ್ಯವೋ ಹಾಗೇ ಈ ಪ್ರಾದೇಶಿಕ ಸ್ವಾಯುತ್ತ ಮಂಡಳಿಗಳಿಗೆ ಸಹ ಅಧಿಕಾರ ವಿಕೇಂದ್ರೀಕರಣ ಅಗತ್ಯ.

ತ್ರಿಪುರ ರಾಜ್ಯದಲ್ಲಿ ನಮಗೊಂದು ಅನುಭವವಿದೆ. ಅಲ್ಲಿ ಬುಡಕಟ್ಟು ಸ್ವಾಯುತ್ತ ಜಿಲ್ಲಾ ಮಂಡಳಿಗಳು ರಚಿತವಾಗಿವೆ. ನಾವು ಗಂಭೀರವಾಗಿ ಪ್ರಯತ್ನಿಸುತ್ತೇವೆ. ಆದರೆ ಅಲ್ಲಿ ಬಾಂಗ್ಲಾದೇಶದ ಗಡಿಭಾಗದ ಭಯೋತ್ಪಾದಕ ಸಮಸ್ಯೆಯಿಂದಾಗಿ ನಾವಂದು ಕೊಂಡದ್ದೆಲ್ಲವನ್ನು ಜಾರಿಗೆ ತರುವುದು ಸಾಧ್ಯವಾಗಿಲ್ಲ. ಆದರೆ ಈ ಸ್ವಾಯತ್ತ ಮಂಡಳಿಯ ಸಂರಚನೆಯಲ್ಲಿ ಅಗತ್ಯ ಅಧಿಕಾರವನ್ನು ಒದಗಿಸಲಾಗಿದೆ.

ಈಗ ಸಂವಿಧಾನದಲ್ಲಿ 371ನೇ ವಿಧಿ ಮುಂತಾದ ಅವಕಾಶಗಳಿವೆ. ಅವುಗಳನ್ನು ಇನ್ನೂ ಬಲಪಡಿಸಬೇಕು. ಹಿಂದುಳಿದಿರುವಿಕೆ ಮುಂತಾದ ಕಾರಣಗಳಿಂದಾಗಿ ಎದ್ದು ಬರುವ ಪ್ರಶ್ನೆಗಳಿಗೆ ಸೂಕ್ತವಾಗಿ ಸ್ಪಂದಿಸಬೇಕು. ಪ್ರತ್ಯೇಕತೆಯ ಕೂಗು ಹಿಂದುಳಿದಿರುವ ಕಾರಣಕ್ಕಾಗಿ ಅಲ್ಲದೇ ಸಾಂಸ್ಕೃತಿಕ ಭಿನ್ನತೆಯ ಕಾರಣಕ್ಕಾಗಿ ಸಹ ಕೇಳ ಬರಬಹುದು.

ಪ್ರಶ್ನೆ: ಉತ್ತರ ಕರ್ನಾಟಕವನ್ನು ಸಂವಿಧಾನದ 371 ನೇ ವಿಧಿಗೆ ಸೇರಿಸಬೇಕೆಂಬ ಬೇಡಿಕೆ ಇದೆ...

ಕಾರಟ್ : ಹೌದು... ಹೌದು...

ಪ್ರಶ್ನೆ : ಸಣ್ಣ ರಾಜ್ಯಗಳ ರಚನೆಯ ಪರಿಣಾಮಗಳೇನು?

ಈಗಾಗಲೇ ಹೇಳಿದಂತೆ ಕರ್ನಾಟಕ, ಕೇರಳ, ಆಂಧ್ರಪ್ರದೇಶ, ತಮಿಳುನಾಡು, ಮಹಾರಾಷ್ಟ್ರ ಈ ಎಲ್ಲ ರಾಜ್ಯಗಳಲ್ಲಿ ಭಾಷಾ ರಾಷ್ಟ್ರೀಯ ಪ್ರಜ್ಞೆಯು ಸ್ವಾತಂತ್ರ್ಯ ಚಳುವಳಿಯ ಭಾಗವಾಗಿಯೇ ರೂಪುಗೊಂಡಿತು. ಈ ರಾಜ್ಯಗಳನ್ನು ಒಡೆದು ಸಣ್ಣ ರಾಜ್ಯಗಳನ್ನು ರಚಿಸುವುದು, ಭಾರತದ ಗಣ ತಂತ್ರ ಸ್ವರೂಪಕ್ಕೂ, ಪ್ರಜಾ ತಂತ್ರ ಸ್ವರೂಪಕ್ಕೂ ಹಾನಿಕಾರಕವಾದದ್ದು. ಭಾಷಾವಾರು ಪ್ರಾಂತ ರಚನೆಯ ಆಶಯಗಳು ಪೂರ್ಣವಾಗಿ ಈಡೇರಲಿಲ್ಲ. ಹೀಗಾಗಿ ಪ್ರತ್ಯೇಕತೆಯ ಭಾವನೆಯು ಬೆಳೆದಿದೆ. ಇಷ್ಟಾದರೂ ಭಾಷಾವಾರು ಪ್ರಾಂತಗಳನ್ನು ಹೊಂದಿರುವುದರಲ್ಲಿ ಬಹಳಷ್ಟು ಅನುಕೂಲಗಳಿವೆ. ಭಾಷಾವಾರು ಪ್ರಾಂತ್ಯಗಳನ್ನು ಒಡೆಯುವುದು ಒಟ್ಟಾರೆಯಾಗಿ ಭಾರತ ದೇಶವನ್ನು ದುರ್ಬಲಗೊಳಿಸುತ್ತದೆ.

ಪ್ರಸ್ತುತ ಭಾರತದಲ್ಲಿ ರಾಜ್ಯಗಳಿಗೆ ಹೆಚ್ಚು ಅಧಿಕಾರವಿಲ್ಲ. ಈಗಲೂ ಅಧಿಕಾರ ಕೇಂದ್ರೀಕರಣವಿದೆ. ಅಂತಹ ಪರಿಸ್ಥಿತಿಯಲ್ಲಿ ಸಣ್ಣ ರಾಜ್ಯಗಳ ಪರಿಸ್ಥಿತಿ ಏನಾಗುತ್ತದೆ. ಈಗ ಉತ್ತರಾಂಚಲ ರಾಜ್ಯದ ಉದಾಹರಣೆಯನ್ನೇ ನೋಡೋಣ–ಕೇಂದ್ರ ಸರ್ಕಾರದ ಸಹಾಯವಿಲ್ಲದೇ ಈ ರಾಜ್ಯವು ಉಳಿಯಲಾರದು. ತನ್ನ ನೌಕರರಿಗೆ ಸಂಬಳ ನೀಡಲೂ ಅದು ಕೇಂದ್ರವನ್ನು ಅವಲಂಬಿಸಿದೆ. ಇಂತಹ ರಾಜ್ಯಗಳು ಕೇಂದ್ರದ ನೆರವಿನಲ್ಲೇ ಬದುಕಬೇಕಾಗುತ್ತದೆ. ಮಿಜೋರಾಂ, ಮಣಿಪುರ, ಅರುಣಾಂಚಲ ಪ್ರದೇಶ ಈ ಯಾವುದೇ ಇರಲಿ ಈ ರಾಜ್ಯಗಳು ರಚನೆಯಾಗಬೇಕೆಂದು ನಾವು ಸಹ ನಿಲುವು ತೆಗೆದುಕೊಂಡೆವು. ಇವು ಸಣ್ಣ ರಾಜ್ಯಗಳಾದರೂ ಇವು ರಚನೆಯಾಗಬಾರದಿತ್ತು ಎಂದೆನಲ್ಲ. ವಾಸ್ತವವೇನೆಂದರೆ, ಈ ಸಣ್ಣ ರಾಜ್ಯಗಳು ಪಂಜಾಬ್, ಕರ್ನಾಟಕ ರಾಜ್ಯಗಳಂತೆ ವರ್ತಿಸಲಾರವು.

ಬಿಜೆಪಿಯು ದೇಶದಲ್ಲಿ ಒಟ್ಟಾರೆ 60 ರಾಜ್ಯಗಳನ್ನು ರಚಿಸಬೇಕೆಂದು ವಾದಿಸುತ್ತದೆ. ಇದು ಆಡಳಿತಾತ್ಮಕವಾಗಿ ಬಾರಿ ಅನುಕೂಲ ಎಂದು ಬಿಜೆಪಿ ಹೇಳುತ್ತದೆ. ಭಾಷಾವಾರು ರಾಜ್ಯಗಳನ್ನು ಒಡೆದು ಸಣ್ಣಸಣ್ಣ ರಾಜ್ಯಗಳನ್ನು ಮಾಡಿದರೆ ಏನಾಗುತ್ತದೆ. ರಾಜ್ಯಗಳು ದುರ್ಬಲವಾಗುತ್ತವೆ. ಕೇಂದ್ರವು ಮತ್ತಷ್ಟು ಬಲಶಾಲಿಯಾಗುತ್ತದೆ.

ಸಣ್ಣ ರಾಜ್ಯಗಳು ಚೆನ್ನಾಗಿ ನಡೆಯುವುದೇ ಇಲ್ಲ ಎಂದೇನೂ ಅಲ್ಲ. ಕೆಲವು ರಾಜ್ಯಗಳು ಚೆನ್ನಾಗಿ ನಡೆಯುತ್ತಿವೆ. ಆದರೆ ಸಣ್ಣ ರಾಜ್ಯಗಳಾಗಿರುವುದರಿಂದಲೇ ಇವು ಚೆನ್ನಾಗಿ ನಡೆಯುತ್ತವೆ ಎಂಬುದಕ್ಕೆ ಆಧಾರಗಳೇನೂ ಇಲ್ಲ. ಕೆಲವು ಸಣ್ಣ ರಾಜ್ಯಗಳು ಚೆನ್ನಾಗಿ ಅಭಿವೃದ್ಧಿ ಹೊಂದುತ್ತಿರಬಹುದು. ಕೆಲವು ದೊಡ್ಡ ರಾಜ್ಯಗಳು ಅಭಿವೃದ್ಧಿ ಹೊಂದದೇ ಇರುವುದೂ ಇರಬಹುದು.

ಪ್ರಶ್ನೆ: ಯುಪಿಎ ಸರ್ಕಾರದ ಸಮಾನ ಕನಿಷ್ಟ ಕಾರ್ಯಕ್ರಮವು ತೆಲಂಗಾಣ ರಚನೆಯ ಬಗೆಗೆ ಭರವಸೆ ನೀಡಿದೆಯಲ್ಲ.....

ಕಾರಟ್: ಬಿಜೆಪಿ ಪಕ್ಷವು ಮೊದಲಿನಿಂದ 'ಅಖಂಡ ಭಾರತ'ದ ಸಿದ್ಧಾಂತವನ್ನು, ಸಣ್ಣ ರಾಜ್ಯಗಳ ರಚನೆಯನ್ನು ಪ್ರತಿಪಾದಿಸುತ್ತಾ ಬಂದಿದೆ ಮತ್ತು ಅದು ಭಾಷಾವಾರು ಪ್ರಾಂತ ರಚನೆಯನ್ನು ವಿರೋಧಿಸುತ್ತಲೂ ಬಂದಿದೆ. ಅಖಂಡ ಭಾರತ ತುಂಬಾ ಕೇಂದ್ರೀಕೃತವಾದ ವ್ಯವಸ್ಥೆ. ವಿದರ್ಭ, ತೆಲಂಗಾಣದ ವಿಚಾರದಲ್ಲಿ ನಾವು ಕಾಂಗ್ರೆಸ್‌ನ್ನು ನೋಡುತ್ತಿದ್ದೇವೆ. ಇಂತಹ ವಿಚಾರದಲ್ಲಿ ಜನ ಎತ್ತ ಎಳೆದರೂ ಅತ್ತ ವಾಲುವುದು ಕಾಂಗ್ರೆಸ್ ಪರಂಪರೆಯಾಗಿದೆ. ಆದರೆ ತೆಲಂಗಾಣದ ಪ್ರಶ್ನೆಯಲ್ಲಿ ಆಂಧ್ರದ ಕಾಂಗ್ರೆಸ್ ಸಮಿತಿ ಇನ್ನೂ ನಿಲುವು ತೆಗೆದುಕೊಂಡಿಲ್ಲ. ಯುಪಿಎ ಸರ್ಕಾರದ ಸಮಾನ ಕನಿಷ್ಟ ಕಾರ್ಯಕ್ರಮದಲ್ಲಿ ತೆಲಂಗಾಣ ರಾಜ್ಯ ರಚನೆಯ ಕುರಿತು ಚರ್ಚಿಸಿ ಒಂದು ಸಮಾನ ನಿಲುವಿಗೆ ಬರಲಾಗುವುದು ಎಂಬ ಭರವಸೆ ನೀಡಲಾಗಿದೆ. ಈ ಉದ್ದೇಶಕ್ಕೆ ಒಂದು ಉಪಸಮಿತಿಯನ್ನು ರಚಿಸಲಾಗಿದೆ. ಕಮ್ಯುನಿಸ್ಟ್ ಪಕ್ಷಗಳು ತೆಲಂಗಾಣ ರಚನೆಯ ವಿಚಾರವನ್ನು ಒಪ್ಪಿಲ್ಲ. ಅವು ಈಗಾಗಲೇ ಅದನ್ನು ಸ್ಪಷ್ಟಪಡಿಸಿವೆ.

ಪ್ರಶ್ನೆ: ನಕ್ಸಲ್‌ವಾದಿಗಳು'ಸಂಯುಕ್ತ ಭಾರತದಲ್ಲಿ ಸ್ವತಂತ್ರ ಕರ್ನಾಟಕ ಎಂದೂ, ಭಾರತದ 'ವರ್ಗ ಆಡಳಿತ' ದಲ್ಲಿ ಕನ್ನಡ

ರಾಷ್ಟ್ರೀಯತೆಯ ದಮನ ನಡೆಯುತ್ತಿದೆ ಎಂದು ವಾದಿಸುತ್ತಿದ್ದಾರೆ. ಈ ಬಗ್ಗೆ ಏನು ಹೇಳುವಿರಿ?

ಕಾರಟ್ : ಕರ್ನಾಟಕದ ಆಳುವ ವರ್ಗದ ದೊಡ್ಡ ವಿಭಾಗವು ಒಟ್ಟು ದೇಶದ ಆಳುವ ವರ್ಗದ ಭಾಗವಾಗಿರುವಾಗ ಅಖಿಲ ಭಾರತ ಆಳುವ ವರ್ಗದ ಶೋಷಣೆಯ ವಿರುದ್ಧ ಕರ್ನಾಟಕದ ಎಲ್ಲ ವರ್ಗಗಳನ್ನೊಳಗೊಂಡ ರಂಗವನ್ನು ರಚಿಸುವುದು ಸಾಧ್ಯವಿಲ್ಲ. ಆಳುವ ವರ್ಗದ ಸಮಗ್ರತೆಯನ್ನು, ಅದರಲ್ಲಿ ದೊಡ್ಡ ಬಂಡವಾಳಿಗ (ಬಿಗ್ ಬೂರ್ಜ್ವಾ) ವರ್ಗವನ್ನು ಪ್ರತ್ಯೇಕಿಸುವುದು ಹೇಗೆ? ನಕ್ಸಲೀಯರು ಅವಾಸ್ತವಿಕವಾದ ಘೋಷಣೆಗಳನ್ನು ಕೊಡುತ್ತಾರೆ. ಈ ಘೋಷಣೆ ಈಗ ಅಪ್ರಸ್ತುತ. ಸ್ವಾತಂತ್ರಕ್ಕೆ ಮುಂಚೆ ಇದು ಪ್ರಸ್ತುತವಾಗಿತ್ತು. ಆಗ ಕಾಂಗ್ರೆಸ್ ಪಕ್ಷವು ಸಹ ಭಾಷಾ ರಾಷ್ಟ್ರೀಯತೆಗಳ ಸ್ವಯಂ ನಿರ್ಣಾಯಾಧಿಕಾರದ ಹಕ್ಕನ್ನು ಒಪ್ಪಿತ್ತು. ಅದು ಬ್ರಿಟೀಷ್ ಸಾಮ್ರಾಜ್ಯಶಾಹಿಯ ವಿರುದ್ಧದ ಹೋರಾಟದ ಸಂದರ್ಭ. ಇಡೀ ಬ್ರಿಟೀಷ್ ಸಾಮ್ರಾಜ್ಯಶಾಹಿಯಿಂದ ಒಟ್ಟಾರೆ ವಿಮೋಚನೆಗೆ ಕಾಯದೇ, ಅದಕ್ಕೆ ಮುಂಚೆಯೇ ಯಾವುದೇ, ಭಾಷಾ ರಾಷ್ಟ್ರೀಯತೆಯು ವಿಮೋಚನೆ ಪಡೆಯುವುದು ಸಾಧ್ಯವಿದ್ದಿದ್ದಲ್ಲಿ ಅದನ್ನು ಬೆಂಬಲಿಸಬಹುದಿತ್ತು.

1947ರ ನಂತರ ಭಾರತದ ವಿವಿಧ ಭಾಷಾ, ರಾಷ್ಟ್ರೀಯತೆಗಳ, ಸಾಂಸ್ಕೃತಿಕ ಗುಂಪುಗಳ ಹೋರಾಟ ತಮ್ಮ ಸಮಾನ ಶತ್ರುವಾದ ಭಾರತದ ಆಳುವ ವರ್ಗಗಳ ವಿರುದ್ಧ ಇರಬೇಕಾಗುತ್ತದೆ. ಈ ಅಂಶವನ್ನು ಮರೆತರೆ ನಾವು ಅತ್ಯಂತ ವಿಚ್ಛಿದ್ರಕಾರಿ ಶಕ್ತಿಗಳ ಜೊತೆ ಕೈಜೋಡಿಸುವಂತಾಗುತ್ತದೆ. ಹೀಗಾಗಿಯೇ ನಕ್ಸಲೀಯರ ಒಂದು ಗುಂಪು ಪಂಜಾಬ್‌ನಲ್ಲಿ ಖಾಲಿಸ್ತಾನ್ ಪ್ರತ್ಯೇಕತಾ ಚಳುವಳಿಯನ್ನು ಬಹಿರಂಗವಾಗಿ ಬೆಂಬಲಿಸಿತು.

ಪ್ರಶ್ನೆ: ಕೆಲವು ನಕ್ಸಲೀಯ ಗುಂಪುಗಳು ಎಲ್.ಟಿ.ಟಿ.ಇ. ಯನ್ನು ಬೆಂಬಲಿಸುವುದು ಇತ್ಯಾದಿಗಳಿವೆಯಲ್ಲಾ?

ಕಾರಟ್ : ಈ ಎಲ್ಲವೂ ಕೂಡ ರಾಷ್ಟ್ರೀಯತೆಯ ಕುರಿತು ಮಾರ್ಕ್ಸ್‌ವಾದಿ ದೃಷ್ಟಿಕೋನದ ವಿಚಾರದಲ್ಲಿನ ಗೊಂದಲಗಳಿಂದಾಗಿ ಆಗಿರುವಂತಹದ್ದು.

ಪ್ರಶ್ನೆ : ಈಗ ಗಡಿ ವಿವಾದ ಮತ್ತೆ ಮತ್ತೆ ಎದ್ದು ಬರುತ್ತಿದೆ?

ಕಾರಟ್ : ಭಾಷಾವಾರು ಪ್ರಾಂತ ರಚನೆಯ ಆಧಾರದಲ್ಲಿ ಗಡಿಗಳ ಪುನರ್ ರಚನೆಯಾಗುವಾಗ ಕಮ್ಯುನಿಸ್ಟ್ ಪಕ್ಷ ಸ್ಪಷ್ಟವಾಗಿ ಗ್ರಾಮಗಳನ್ನು ಘಟಕಗಳಾಗಿ ಪರಿಗಣಿಸಿ ಭಾಷಾವಾರು ಪ್ರಾಂತ್ಯ ರಚನೆ ಆಗಬೇಕು ಎಂದು ಪ್ರತಿಪಾದಿಸಿತ್ತು. ಈಗ ಆ ಹಂತ ಮುಗಿದಿದೆ. ಈಗ ಗಡಿ ಭಾಗಗಳಲ್ಲಿ ಸಹಜವಾಗಿ ಭಾಷಾವಾರು ಜನ ಸಂಖ್ಯೆಯಲ್ಲಿ ಏರಿಳಿತಗಳು ಆಗುತ್ತಿರಬಹುದು. ಆದರೆ ಈ ಗಡಿ ವಿಭಜನೆಯನ್ನು ಮತ್ತೊಮ್ಮೆ ಆರಂಭಿಸುವುದು ಸಾಧ್ಯವಿಲ್ಲ. ದೇಶದ ಹಾಗೂ ಜನಗಳ ಐಕ್ಯತೆಯ ದೃಷ್ಟಿಯಲ್ಲಿ ಇದರಿಂದ ಸಹಾಯವೇನೂ ಆಗುವುದಿಲ್ಲ. ಪರಿಪೂರ್ಣವಾದ ಪುನರ್ ವಿಂಗಡಣೆಯನ್ನು ಮಾಡುವುದು ಯಾರಿಗೂ ಸಾಧ್ಯವಿಲ್ಲ. ಹಾಗೆ ಮಾಡಲು ಯತ್ನಿಸಿದರೆ ಕೆಲವೊಮ್ಮೆ ಗ್ರಾಮಗಳನ್ನು ವಿಭಜಿಸಬೇಕಾಗಬಹುದು. ಕೆಲವೊಮ್ಮೆ ಬೀದಿಗಳನ್ನು ವಿಭಜಿಸಬೇಕಾಗಬಹುದು. ಹೀಗಾಗಿ ಒಟ್ಟಾರೆಯಾಗಿ ನಾವು ಸಮತೋಲನ ಸಾಧಿಸಬೇಕಷ್ಟೇ. ಈಗ ತಾಲ್ಲೂಕು ಅಲ್ಲಿ ಸೇರಬೇಕು, ಇಲ್ಲಿ ಸೇರಬೇಕು ಎನ್ನುವುದು ಸಮಂಜಸವಲ್ಲ.

ಇಲ್ಲಿ ಮುಖ್ಯವಾದ ಪ್ರಶ್ನೆ ಎಂದರೆ ಈ ಭಾಷಾವಾರು ರಾಜ್ಯಗಳಲ್ಲಿ ಭಾಷಾ ಅಲ್ಪ ಸಂಖ್ಯಾತರಿಗೆ ಸಮಾನ ಅವಕಾಶಗಳಿರುವಂತೆ ನೋಡಿಕೊಳ್ಳಬೇಕು. ಇಲ್ಲದಿದ್ದರೆ ಪ್ರತ್ಯೇಕತೆಯ ಭಾವನೆ ಬೆಳೆಯುತ್ತದೆ.

ಪ್ರಶ್ನೆ: ಗಡಿ ಪ್ರದೇಶಗಳಲ್ಲಿ ಭಾಷೆ, ಶಿಕ್ಷಣಕ್ಕೆ ಸಂಬಂಧಿಸಿದ ನೈಜವಾದ ಸಮಸ್ಯೆಗಳಿವೆಯಲ್ಲಾ?

ಕಾರಟ್: ರಾಜ್ಯ ಸರ್ಕಾರ ಭಾಷಾ ಅಲ್ಪ ಸಂಖ್ಯಾತರಿಗೆ ಶಿಕ್ಷಣ ಮತ್ತು ಉದ್ಯೋಗಾವಕಾಶಗಳ ದೊರೆಯುವಿಕೆಯಲ್ಲಿ ಸಮಾನವಾದ ಅವಕಾಶಗಳನ್ನು ಸೃಷ್ಟಿಸಿಕೊಡಬೇಕು. ಶಿಕ್ಷಣ ಮಾತೃಭಾಷೆಯಲ್ಲಿರಬೇಕೆಂಬುದೇ ನಮ್ಮ ನಿಲುವು. ಅದೇ ಸಮಯದಲ್ಲಿ ಭಾಷಾ ಅಲ್ಪಸಂಖ್ಯಾತರೂ ಸಹ ತಮ್ಮದೇ ಒಳಿತಿಗಾಗಿ ಎರಡನೇ ಭಾಷೆಯಾಗಿ ರಾಜ್ಯದ ಭಾಷೆಯನ್ನು ಕಲಿಯುವುದು ಮತ್ತು ಸ್ಥಳೀಯವಾಗಿ ಬೆರೆಯುವುದು ಅವರಿಗೂ ಸಹ ಒಳ್ಳೆಯದು.

ಪ್ರಶ್ನೆ: ಎಲ್ಲಾ ರಾಜ್ಯಗಳಿಗೂ ಸಾಮಾನ್ಯವಾದ ಭಾಷೆಯೊಂದನ್ನು ಬೆಳೆಸುವುದು ಸಾಧ್ಯವೇ?

ನಾವು ಒಂದು ಭಾಷೆಯನ್ನು ಹೇರುವುದಕ್ಕೆ ಸ್ಪಷ್ಟವಾಗಿ ವಿರೋಧವಾಗಿದ್ದೇವೆ ಅಥವಾ ಒಂದು ಭಾಷೆಯನ್ನು ಅಧಿಕೃತ ಭಾಷೆ ಎಂದು ಘೋಷಿಸುವುದಕ್ಕೂ ನಮ್ಮ ವಿರೋಧವಿದೆ. ನಮಗೆ ಒಂದು ಅಧಿಕೃತ ಭಾಷೆ ಹಿಂದಿ ಇದೆ. ನಾವು ಹಿಂದಿಗೆ ವಿರುದ್ಧವೇನಿಲ್ಲ. ಅಖಿಲ ಭಾರತ ಸಾಮಾನ್ಯ ಭಾಷೆ-ಸಂಪರ್ಕ ಭಾಷೆಯು ಸ್ವಾಭಾವಿಕವಾಗಿ ವಿವಿಧ ಭಾಷೆಯ ಜನಗಳ ನಡುವಿನ ಸಂವಹನದ ಮೂಲಕವೇ ವಿಕಸನಗೊಳ್ಳಬೇಕು.

ಭಾರತದಲ್ಲಿ ಹಿಂದಿಯು ವಿಶಾಲ ಪ್ರಮಾಣದ ಜನರು ಮಾತನಾಡುವ ಭಾಷೆಯಾಗಿದೆ. ಭಾರತದ ಭಾಷೆಗಳಲ್ಲಿ ಹಿಂದಿ ಅತಿದೊಡ್ಡ ಭಾಷಾ ಗುಂಪಾಗಿದೆ. ಇದರಲ್ಲಿ ಹಲವು ಅನುಕೂಲಗಳಿವೆ. ಈ ಅನುಕೂಲಗಳ ಬಳಕೆ (ಅನಾವರಣ) ಆಗಬೇಕು. ಯಾರೇ ಆಗಲಿ. ಅಧಿಕೃತ ಭಾಷೆಯನ್ನು ಹೇರಲು ಪ್ರಯತ್ನಿಸಬಾರದು. ಈ ಹಿಂದೆ ಆಗಿರುವುದು ಅದೇ. 1960 ರ ದಶಕದ ತಮಿಳುನಾಡಿನ ಹಿಂದಿ ವಿರೋಧಿ ಚಳುವಳಿಯು ಈ ರೀತಿ ಹಿಂದಿಯನ್ನು ಯಾಂತ್ರಿಕವಾಗಿ ಅಧಿಕೃತ ಭಾಷೆಯನ್ನಾಗಿ ಹೇರಿದ್ದರ ವಿರುದ್ಧವೇ ಆಗಿತ್ತು. ನಾವು ಇಂಗ್ಲೀಷ್

ಭಾಷೆಯನ್ನು ಅಧಿಕೃತ ಭಾಷೆಯನ್ನಾಗಿ ಮುಂದುವರಿಸುವುದರ ಪರವಾಗಿಲ್ಲ. ಪ್ರಜಾಸತ್ತಾತ್ಮಕ ಪ್ರಕ್ರಿಯೆಯಲ್ಲಿ ಹಿಂದಿಯು ಅಂಗೀಕಾರಾರ್ಹವಾದರೆ ನಮ್ಮ ವಿರೋಧವೇನಿಲ್ಲ.

ಹಿಂದಿ ಒಮ್ಮೆ ಅಂಗೀಕಾರಾರ್ಹವಾದರೆ ಆಗ ಇಂಗ್ಲೀಷ್ ಈಗ ವಹಿಸುತ್ತಿರುವ ಪಾತ್ರವನ್ನು ವಹಿಸುವುದಿಲ್ಲ. ಇದನ್ನು ಸಾಧಿಸುವುದು ಹೇಗೆಂಬ ಪ್ರಶ್ನೆ ಬರುತ್ತದೆ. ರಾಜ್ಯಗಳಲ್ಲಿ ರಾಜ್ಯ ಭಾಷೆಯು ಸಂಸ್ಕೃತಿ, ಶಿಕ್ಷಣ, ಆಡಳಿತ, ಸಂವಹನ ಹೀಗೆ ಎಲ್ಲವುಗಳಲ್ಲಿ ಬೆಳವಣಿಗೆ ಹೊಂದಲು ಬೇಕಾದ ಪೂರ್ಣ ಅವಕಾಶ ದೊರೆಯಬೇಕು. ಭಾರತದ ಎಲ್ಲಾ ಭಾಷೆಗಳನ್ನು ಸಮಾನವಾಗಿ ಪರಿಗಣಿಸಬೇಕು. ಪಾರ್ಲಿಮೆಂಟಿನಲ್ಲಿ ವಿವಿಧ ಭಾಷೆಗಳ ಸಮಾನಾಂತರ ಭಾಷಾಂತರಕ್ಕೆ ಯಾಕೆ ಸಮರ್ಪಕ ವ್ಯವಸ್ಥೆ ಇಲ್ಲವೆನ್ನುವುದೇ ಅರ್ಥವಾಗದ ವಿಚಾರವಾಗಿದೆ. ಎಷ್ಟೋ ಜನಪ್ರತಿನಿಧಿಗಳಿಗೆ ತಮ್ಮ ಭಾಷೆ ಬಿಟ್ಟು ಬೇರೆ ಭಾಷೆಗಳು ತಿಳಿದಿರುವುದಿಲ್ಲ. ಇಂತಹ ಭಾಷಾಂತರ ಒಂದು ಸಹಜ ಪ್ರಕ್ರಿಯೆ ಎಂಬಂತಾಗಬೇಕು. ಭಾರತದ ಎಲ್ಲ ಭಾಷೆಗಳನ್ನು ಸಮಾನವಾಗಿ ಪ್ರೋತ್ಸಾಹಿಸುತ್ತಾ ಬಂದರೆ ಆಗ ಇಂಗ್ಲೀಷ್ ಭಾಷೆಯು ಅನಿವಾರ್ಯವಾದ ಭಾಷೆ ಆಗುವುದಿಲ್ಲ.

ನಾವು ಇಂಗ್ಲೀಷ್‌ನ್ನು ಹೊಂದಿರುತ್ತೇವೆ. ಇಂಗ್ಲೀಷ್ ಭಾಷೆಯಿಂದ ಹಲವಾರು ಅನುಕೂಲಗಳಿವೆ. ಅಂತರರಾಷ್ಟ್ರೀಯ ವ್ಯಾಪ್ತಿ ಹೊಂದಿರುವ ಭಾಷೆ. ವಿಜ್ಞಾನ-ತಂತ್ರಜ್ಞಾನ, ಸಂವಹನದ ದೃಷ್ಟಿಯಿಂದ ಅದು ಪ್ರಯೋಜನಕಾರಿಯಾಗಿದೆ. ಭಾರತದ ಎಲ್ಲ ಭಾಷೆಗಳು ಸಮಾನವಾಗಿ ಬೆಳವಣಿಗೆ ಹೊಂದಿದ ಮೇಲೆ ಇಂಗ್ಲೀಷ್ ತನ್ನ ಈಗಿನ ಸ್ಥಾನವನ್ನು ಕಳೆದುಕೊಳ್ಳುತ್ತದೆ ಮತ್ತು ಹಿಂದಿಯು ಆ ಸ್ಥಾನವನ್ನು ತುಂಬುವುದು ಸಾಧ್ಯವಾಗುತ್ತದೆ. ಇದಾಗಬೇಕಾದರೆ ಭಾರತೀಯ ಭಾಷೆಗಳಲ್ಲಿ ಮುಂದುವರಿದ ಭಾಷೆ, ಹಿಂದುಳಿದ ಭಾಷೆ ಎಂಬುದು ಇರಬಾರದು. ಪ್ರತಿಯೊಂದು ಭಾಷೆಗೂ ತನ್ನದೇ ಸಾಮರ್ಥ್ಯ ಇರುತ್ತದೆ ಮತ್ತು ಅದು ಜನ ಸಮುದಾಯದ ಬಳಕೆಯಿಂದ ಬೆಳೆಯುತ್ತಾ ಹೋಗುತ್ತದೆ. ನಾವು ಹೇಗೆ ಇದನ್ನು ಬೆಳೆಸುತ್ತೇವೆ ಎಂಬುದು ಮುಖ್ಯ. ಭಾರತದ ಎಲ್ಲ ಪ್ರಮುಖ ಭಾಷೆಗಳನ್ನು ಅಂದರೆ ಸಂವಿಧಾನದ ಪರಿಚ್ಛೇದ 8 ರಲ್ಲಿ ಹೆಸರಿಸಿರುವ ಎಲ್ಲಾ ಭಾಷೆಗಳನ್ನು ರಾಷ್ಟ್ರ ಭಾಷೆ ಎಂದು ಗುರುತಿಸಬೇಕು. ಅವುಗಳ ಬೆಳವಣಿಗೆಗೆ ಅವಕಾಶವಾಗಬೇಕು.

ಪ್ರಶ್ನೆ: ಉದಾರೀಕರಣ-ಜಾಗತೀಕರಣ ಯುಗದಲ್ಲಿ ಭಾರತೀಯ ಭಾಷೆಗಳ ಮತ್ತು ಸಂಸ್ಕೃತಿಗಳ ಭವಿಷ್ಯವೇನು?

ಕಾರಟ್: ನಾನು ಆಶಾವಾದಿ. ನಿಜ ಈ ಉದಾರೀಕರಣದ ಯುಗದಲ್ಲಿ ಇಂಗ್ಲೀಷ್‌ಗೆ ಮತ್ತಷ್ಟು ಆದ್ಯತೆ ಸಿಕ್ಕಿದೆ. ಜಾಗತೀಕರಣದಲ್ಲಿ ನಾವು ಒಳಗೊಳ್ಳುತ್ತಿರುವ ರೀತಿ, ಸ್ಪರ್ಧೆಗಳಿಂದಾಗಿ ಹೀಗಾಗಿದೆ. ಈ ಅಂಶವನ್ನು ಗಮನದಲ್ಲಿಟ್ಟುಕೊಂಡು ನಮ್ಮ ಭಾಷೆಯ ಬೆಳವಣಿಗೆಗೆ ಅಡ್ಡಿಯಾಗಿರುವ ಜಾಗತೀಕರಣದ ಎಲ್ಲ ಮುನ್ನಡೆ - ಪ್ರಗತಿಗಳನ್ನು ನಾವೂ ಸಾಧಿಸಬೇಕು. ಮಾಹಿತಿ ತಂತ್ರಜ್ಞಾನ ಸಂವಹನದ ಹೊಸ ರೂಪಗಳು-ಮಾಧ್ಯಮ ಎಲ್ಲದರಲ್ಲೂ ನಾವು ಇದನ್ನು ಸಾಧಿಸಬೇಕು. ಈ ಅಂಶಗಳಲ್ಲಿ ನಮ್ಮ ಭಾಷೆಯನ್ನು ಸಂಪೂರ್ಣವಾಗಿ ಬಳಸಿಕೊಳ್ಳಬೇಕು ಮತ್ತು ಈಗಲೂ ಭಾರತದ ಶೇ 40 ರಷ್ಟು ಜನರು ಅನಕ್ಷರಸ್ಥರು ಎಂಬುದನ್ನು ನಾವು ಮರೆಯಬಾರದು. ದೊಡ್ಡ ಸಂಖ್ಯೆಯ ಜನರು ಇನ್ನೂ ತಮ್ಮ ಮಾತೃಭಾಷೆಯಲ್ಲಿ ಸಹ ಬರೆಯಲು -ಓದಲು ಕಲಿತಿಲ್ಲ ಎಂಬುದನ್ನು ನೆನಪಿನಲ್ಲಿಡಬೇಕು. ಸ್ಥಳೀಕರಣದ ಮೂಲಕ ತಳಮಟ್ಟದಲ್ಲಿ ಜನರನ್ನು ತಲುಪಬೇಕು. ಹೆಚ್ಚುತ್ತಿರುವ ಸಾಕ್ಷರತೆ, ಮುದ್ರಣ ಮತ್ತು ಇತರ ಮಾಧ್ಯಮಗಳ ವಿಸ್ತರಣೆ ಎಲ್ಲವನ್ನು ಬಳಸಿಕೊಳ್ಳುವುದು ಸಾಧ್ಯವಾಗಬೇಕು.

ಭಾರತೀಯ ಭಾಷೆಗಳ ಭವಿಷ್ಯದ ಕುರಿತು ಯೋಚಿಸುವಾಗ ಯುರೋಪಿಯನ್ ಒಕ್ಕೂಟವನ್ನು ಗಮನಿಸಬಹುದು. ಜಾಗತೀಕರಣ ಪ್ರಕ್ರಿಯೆಯಲ್ಲಿ ಯುರೋಪ್ ಅಂತರ್ಗತವಾಗಿದ್ದರೂ ಸಹ ಅಲ್ಲಿನ ಅಭಿವೃದ್ಧಿ ಹೊಂದಿದ ಭಾಷೆಗಳಾದ ಜರ್ಮನ್, ಇಟಾಲಿಯನ್, ಫ್ರೆಂಚ್, ಡಚ್, ಇವುಗಳನ್ನು ಉಳಿಸಿಕೊಳ್ಳಲಾಗಿದೆ. ಭಾರತವು ಬಂಡವಾಳಶಾಹಿ ಬೆಳವಣಿಗೆಯ ದಾರಿಯಲ್ಲಿ ಬೆಳೆಯುತ್ತಿರುವಾಗಲೂ ಭಾರತೀಯ ಭಾಷೆಗಳ ರಕ್ಷಣೆ, ಬೆಳವಣಿಗೆ ಸಾಧ್ಯವಿದೆ.

ಜಾಗತೀಕರಣವು ದುಡಿಯುವ ವರ್ಗದ ಹಿತಾಸಕ್ತಿಗಳಿಗೆ ಮಾರಕ ಎಂಬುದು ಪ್ರತ್ಯೇಕವಾದ ವಿಷಯ. ಆದರೆ ಜಾಗತೀಕರಣ ಒಡ್ಡಿರುವ ಸವಾಲುಗಳಿಗೆ ಸರಿಯಾಗಿ ಸ್ಪಂದಿಸಿದಲ್ಲಿ ಭಾರತೀಯ ಭಾಷೆಗಳ ರಕ್ಷಣೆ ಬೆಳವಣಿಗೆ ಸಾಧ್ಯವಿದೆ. ನಾನು ನಿರಾಶಾವಾದಿಯಲ್ಲ.

ಪ್ರಶ್ನೆ: ಕರ್ನಾಟಕದಲ್ಲಿ ಒಂದನೇ ತರಗತಿಯಿಂದಲೇ ಇಂಗ್ಲೀಷ್‌ನ್ನು ಅಳವಡಿಸಬೇಕು ಎಂಬ ವಾದ ಬಂದಿದೆ. ನಿರ್ದಿಷ್ಟವಾಗಿ ದಲಿತ ಸಮುದಾಯದಿಂದ ಇಂತಹ ಅಭಿಪ್ರಾಯ ಬರುತ್ತಿದೆ. ಈ ಬಗ್ಗೆ?

ಕಾರಟ್: ಇದು ಕರ್ನಾಟಕದ ಸಮಸ್ಯೆ ಮಾತ್ರ ಅಲ್ಲ. ಪಶ್ಚಿಮ ಬಂಗಾಳದಲ್ಲಿಯೂ ಈ ಸಮಸ್ಯೆ ಇದೆ. ಪ್ರಾಥಮಿಕ ಹಂತದಲ್ಲಿ ಶಿಕ್ಷಣ ಮಾತೃಭಾಷೆಯಲ್ಲಿರಬೇಕು ಎಂಬುದು ನಮ್ಮ ನಿಲುವು. ಇದು ಸಾಮಾಜಿಕ ಅಗತ್ಯ ಮಾತ್ರವಲ್ಲ, ಮಗುವಿನ ಕಲಿಕೆಯ ಸಾಮರ್ಥ್ಯವನ್ನು ಅವಲಂಬಿಸಿರುವ ವೈಜ್ಞಾನಿಕ ನೀತಿ ಇದು. ಆದರೆ ಅತ್ಯಂತ ದಮನಿತ ವಿಭಾಗಗಳು ತಮ್ಮ ಮುನ್ನಡೆಗೆ ಇಂಗ್ಲೀಷ್ ಶಿಕ್ಷಣ ಒಂದು ಅವಕಾಶ ಎಂದು ಭಾವಿಸುತ್ತವೆ. ನಾವು ಶಿಕ್ಷಣ ಕ್ಷೇತ್ರದಲ್ಲಿ ರೂಪುಗೊಂಡಿರುವ ಶ್ರೀಮಂತ ಪರ (Elitism) ವ್ಯವಸ್ಥೆಯನ್ನು ಒಡೆದು ಸಾರ್ವತ್ರಿಕ ಶಿಕ್ಷಣ ವ್ಯವಸ್ಥೆಯನ್ನು ವಿಸ್ತರಿಸುವುದಕ್ಕೆ ಹಾಗೂ ಒಟ್ಟಾರೆ ಸಾಮಾಜಿಕ ವ್ಯವಸ್ಥೆ ಬದಲಿಸುವುದಕ್ಕೆ ಆಗಿಲ್ಲದಿರುವುದರಿಂದ ಈ ಅಂಶಗಳನ್ನು ನಾವು ಪರಿಗಣಿಸಬೇಕಾಗುತ್ತದೆ.

ಇಲ್ಲವಾದಲ್ಲಿ ಬಡವರಲ್ಲೇ ಅತಿ ಬಡವರಾದವರು ಇಂತಹ ಶಿಕ್ಷಣಕ್ಕೆ ತಮ್ಮ ಮಕ್ಕಳನ್ನು ಕಳಿಸುವುದು ಸಾಧ್ಯವೇ ಆಗುವುದಿಲ್ಲ. ಹಾಗೇ ಕಳಿಸುವುದು ತುಂಬಾ ದುಬಾರಿಯಾಗುತ್ತದೆ. ಪಶ್ಚಿಮ ಬಂಗಾಳದಲ್ಲಿ ಮೊದಲು ಇಂಗ್ಲೀಷ್ ಭಾಷೆಯ ಕಲಿಕೆಯನ್ನು 3ನೇ ತರಗತಿಯಿಂದ ಜಾರಿಗೆ ತರಲಾಯಿತು. ಮೊದಲಿಗೆ ಇಂಗ್ಲೀಷ್‌ನ್ನು ಕಲಿಸಲು ಇಂಗ್ಲೀಷ್ ಶಿಕ್ಷಕರ ಕೊರತೆ ಇತ್ತು.

ಈಗ ಅಲ್ಲಿ 2ನೇ ತರಗತಿಯಿಂದ ಇಂಗ್ಲೀಷ್ ಭಾಷೆಯನ್ನು ಕಲಿಸಲಾಗುತ್ತಿದೆ. ಈ ಬಗ್ಗೆ ಬೇಡಿಕೆ ಮಧ್ಯಮ ವರ್ಗ ಮೇಲ್ಮಧ್ಯಮ ವರ್ಗಗಳಿಂದಲ್ಲ, ಶೋಷಿತ ವರ್ಗಗಳಿಂದಲೇ ಇಂತಹ ಬೇಡಿಕೆ ಬರುತ್ತಿದೆ. ತಮ್ಮ ಹಿಂದುಳಿದಿರುವಿಕೆಯನ್ನು ನಿವಾರಿಸಿಕೊಳ್ಳಲು ಇರುವ ಅವಕಾಶಗಳಲ್ಲಿ ಇಂಗ್ಲೀಷ್ ಕಲಿಕೆ ಒಂದು ಮುಖ್ಯ ಸಾಧನ ಎಂದು ಅವರು ಭಾವಿಸುತ್ತಿದ್ದಾರೆ. ●

ರಾಷ್ಟ್ರೀಯತೆಯ ಪ್ರಶ್ನೆ, ಭಾಷಾವಾರು ಪ್ರಾಂತ್ಯಗಳು, ಒಕ್ಕೂಟದ ಸಂರಚನೆ-ಭಾಷೆ-ಸಂಸ್ಕೃತಿಯಂತಹ ಪ್ರಮುಖ ವಿಷಯಗಳಲ್ಲಿ ಕಾಂ.ಪ್ರಕಾಶ್ ಕಾರಟ್‌ರಿಗೆ ವಿಶೇಷ ಆಸಕ್ತಿ, ಆ ಬಗ್ಗೆ ಆಳವಾದ ಅಧ್ಯಯನ ನಡೆಸಿದವರು. ಇನ್ನೂ ಹಲವು ಪ್ರಶ್ನೆಗಳ ಬಗ್ಗೆ ಅವರನ್ನು ಮಾತನಾಡಿಸಬೇಕೆಂದಿತ್ತು. ಆದರೆ ಅವರೊಂದಿಗೆ ನಿಗದಿಯಾದ ಸಮಯವೂ ಮೀರಿತ್ತು. ಆದಾಗ್ಯೂ ಮಾತನಾಡಬೇಕೆಂಬ ಉತ್ಸುಕತೆ ಕಡಿಮೆಯಾಗಿರಲಿಲ್ಲ, ಆದರೆ ಆ ಕೂಡಲೇ ಸಿಪಿಐ(ಎಂ) ಪಕ್ಷದ ಆಗಸ್ಟ್ ತಿಂಗಳ ಪ್ರಚಾರಾಂದೋಲನದ ಉದ್ಘಾಟನಾ ಸಮಾರಂಭಕ್ಕೆ ಹೊರಡಬೇಕಾದ್ದರಿಂದ ಅವರನ್ನು ಬೀಳ್ಕೊಟ್ಟೆವು, ಮುಂದೆ ಒಂದು ವಿಶೇಷ ಲೇಖನ ನಮ್ಮ ಓದುಗರಿಗೆ ನೀಡಲೇಬೇಕೆಂಬ ಒತ್ತಾಸೆಯಿಂದ...


ಗಡಿಗಳು ಗೋಡೆಗಳೇ?

ಡಾ|| ವಸು

ಭಾಷೆ ನಮ್ಮ ಸಮಾಜದ ಸಂವಹನದ ಸಾಧನ. ಭಾವನೆ-ವಿಚಾರಗಳ ವಿನಿಮಯ ಮಾಧ್ಯಮ. ಭಾಷೆಯಿಲ್ಲದ ಸಮಾಜವೊಂದನ್ನು ಕಲ್ಪಿಸಿಕೊಳ್ಳುವುದು ಕಷ್ಟಕರ. ಭಾಷೆ ನಮ್ಮ ಬದುಕಿನಲ್ಲಿ ಹಾಸುಹೊಕ್ಕಾಗಿ ಬೆರೆತಿದೆ. ಹೀಗಾಗಿ ತಮ್ಮ ಭಾಷೆಯ ಕುರಿತ ಪ್ರೀತಿ ಸಹಜ. ಭಾಷೆ ಸಂವಹನ, ಶಿಕ್ಷಣ, ಆಡಳಿತಗಳ ಮಾಧ್ಯಮವಾಗುವುದರಿಂದ ಒಂದು ಭಾಷೆಯ ಜನರು ತಾವೆಲ್ಲ ಒಂದು ಎಂದು ಭಾವಿಸುವುದು ತುಂಬಾ ಸಹಜ. ಇದು ಒಂದು ಪ್ರಜಾಸತ್ತಾತ್ಮಕ ಆಶಯವೂ ಹೌದು.

ಆದರೆ ಭಾಷೆಯನ್ನು ಆಧರಿಸಿ ರೂಪಿಸಿಕೊಳ್ಳಲಾಗಿರುವ ಭಾಷಾವಾರು ರಾಜ್ಯಗಳ ಗಡಿಗಳು ಎರಡು ಸಮುದಾಯಗಳ ನಡುವೆ ಎತ್ತಿದ ಗೋಡೆಗಳಾಗಬೇಕೇ? ಗಡಿಭಾಗಗಳಲ್ಲಿ ಬದುಕುವ ಎರಡೂ ಭಾಷೆಗಳ ಜನಗಳನ್ನು ಪರಸ್ಪರ ಅತ್ತ ಇತ್ತ ಎಳೆದಾಡುವುದು ಸರಿಯೇ? ಸಾಮಾಜಿಕ-ಸಾಂಸ್ಕೃತಿಕ ಹರಹುಗಳನ್ನು ಗಡಿರೇಖೆಗಳ ಮೂಲಕ ಬಂಧಿಸಲು ಸಾಧ್ಯವೇ? ಅಸಲಿಗೆ ನಾವು ಈಗ ನೋಡುವ ಗಡಿಗಳು ಚಾರಿತ್ರಿಕವಾಗಿ ಇದ್ದವೆ? ಅಷ್ಟಕ್ಕೂ ಜನ ಸಮುದಾಯಗಳು ಏಕೆ ವಲಸೆ ಹೋಗುತ್ತವೆ (ಬರುತ್ತವೆ) ಇಂತಹ ಮೂಲಭೂತ ಪ್ರಶ್ನೆಗಳನ್ನು ಎತ್ತಿದ್ದಾರೆ ಖ್ಯಾತ ಇತಿಹಾಸಕಾರರು ಹಾಗೂ ಬೆಂಗಳೂರು ವಿಶ್ವವಿದ್ಯಾಲಯದ ಪ್ರಾಧ್ಯಾಪಕರೂ ಆದ ಡಾ||ವಸುರವರು.

ಭಾಷಾಭಿಮಾನವೆಂಬ ಮುಖವಾಡದ ಮರೆಯಲ್ಲಿ ಭಾಷಾಂಧತೆ, ಭಾಷಾ ದುರಭಿಮಾನ, ದ್ವೇಷ ಭಾವನೆಗಳನ್ನು ಬೆಲೆಸಲಾಗುತ್ತಿರುವ ಈ ಸಂದರ್ಭದಲ್ಲಿ ಒಂದು ಐತಿಹಾಸಿಕ ದೃಷ್ಟಿಯ ಚಿಂತನಾರ್ಹ ಲೇಖನ.



ಕರ್ನಾಟಕವೆಂದಾಗ 27 ಜಿಲ್ಲೆಗಳನ್ನೊಳಗೊಂಡ ಕರ್ನಾಟಕ ರಾಜ್ಯದ ಭೂಪಟ ನಮ್ಮ ಕಣ್ಣಮುಂದೆ ಬಂದುನಿಲ್ಲುತ್ತದೆ. ಗೋವಾ, ಮಹಾರಾಷ್ಟ್ರ, ಆಂಧ್ರ, ತಮಿಳುನಾಡು, ಕೇರಳ ಹಾಗೂ ಅರಬ್ಬೀ ಸಮುದ್ರಗಳಿಂದ ಆವರಿಸಿದ ಈ ರಾಜ್ಯದ ಕಲ್ಪನೆಯನ್ನು ಐವತ್ತು ವರ್ಷಗಳ ನಂತರವಾದರೂ ಸರಿಯಾಗಿ ಅರ್ಥ ಮಾಡಿಕೊಳ್ಳಬೇಕಾಗಿದೆ. ಭಾಷಾವಾರು ಪ್ರಾಂತ್ಯದ ಆಧಾರದ ಮೇಲೆ, ಕರ್ನಾಟಕ ಏಕೀಕರಣ ಹೋರಾಟದ ಫಲವಾಗಿ, 1956ರ ರಾಜ್ಯ ಪುನರ್ ವಿಂಗಡಣಾ ಸಮಿತಿಯ ವರದಿಯ ಮೇರೆಗೆ ನಮ್ಮ ಗಡಿರೇಖೆಯನ್ನು ಗುರುತಿಸಲಾಯಿತು. ಭಾಷೆಯ ಹಿನ್ನೆಲೆಯಲ್ಲಿ ಜನರನ್ನು ಒಂದುಗೂಡಿಸಿ ಗೆರೆ ಎಳೆಯಲಾಯಿತು. ಅದು ಗೆರೆ ಮಾತ್ರವಾಗಿ ಉಳಿದಿದೆಯೇ?

ಗಡಿಯ ಕಲ್ಪನೆಯನ್ನು ಅರಿಯಬೇಕಾದರೆ ಅದರ ವಿಭಿನ್ನ ಆಯಾಮಗಳನ್ನು ಪರಿಶೀಲಿಸಬೇಕಾಗುತ್ತದೆ. ಕರ್ನಾಟಕವನ್ನು ಚಾರಿತ್ರಿಕ ಕರ್ನಾಟಕ, ಭೌಗೋಳಿಕ ಕರ್ನಾಟಕ, ಸಾಂಸ್ಕೃತಿಕ ಕರ್ನಾಟಕ ಹಾಗೂ ಆರ್ಥಿಕ ಕರ್ನಾಟಕವೆಂದು ವಿಭಿನ್ನ ಸ್ತರಗಳಲ್ಲಿ ಅರ್ಥೈಸಬಹುದಾಗಿದೆ.

ಚರಿತ್ರೆಯಲ್ಲಿ ಕರ್ನಾಟಕಕ್ಕೊಂದು ಗಡಿ ಇತ್ತೆ

ಕನ್ನಡನಾಡಿನ ಮೇರೆಯನ್ನು ಉಲ್ಲೇಖಿಸುವಾಗ ಕವಿರಾಜ ಮಾರ್ಗ ಕೃತಿಯ ಸಾಲುಗಳನ್ನು ನೆನೆಯುತ್ತೇವೆ.

"ಕಾವೇರಿಯಿಂದ ಗೋದಾವರಿವರಮಿರ್ದ ನಾಡದಾ ಕನ್ನಡದೊಳ್ ಭಾವಿಸಿದ ಜನಪದಂ", ಎಂಬ ಸಾಲು ಕ್ರಿ.ಶ 9ನೆಯ ಶತಮಾನದ ಹಾಗೂ ಅದರ ಹಿಂದಿನ ಭೌಗೋಳಿಕ ಪ್ರದೇಶವೊಂದನ್ನು ಸೂಚಿಸುತ್ತದೆ. ಕಾವೇರಿಯಿಂದ ಗೋದಾವರಿವರೆಗಿನದು ಒಂದು ರಾಜ್ಯವೆಂದಾಗಲೀ, ರಾಜಕೀಯ ಗಡಿಯೆಂದಾಗಲೀ ಅದು ಸೂಚಿಸುವುದಿಲ್ಲ. ಅದು ಒಂದು ಭೌಗೋಳಿಕ ಪ್ರದೇಶ ಮಾತ್ರವಾಗಿತ್ತು. ಈ ಕರ್ನಾಟಕ ಭೂಭಾಗದಲ್ಲಿ ಕನ್ನಡ ಮಾತನಾಡುವ ಜನ ವಾಸಿಸುತ್ತಿದ್ದರು. ಆ ಕನ್ನಡದಲ್ಲೂ ಹಲವು ಬಗೆಗಳಿದ್ದವೆಂದು ಕವಿರಾಜಮಾರ್ಗದಿಂದಲೇ ತಿಳಿದುಬರುತ್ತದೆ.

ಚಾರಿತ್ರಿಕವಾಗಿ ಕರ್ನಾಟಕವನ್ನು ಗುರುತಿಸುವಾಗ ಕರ್ನಾಟಕದ ರಾಜವಂಶಗಳ ಹಿನ್ನೆಲೆಯಲ್ಲಿ ಅಧ್ಯಯನ ಮಾಡುತ್ತಾ ಬಂದಿದ್ದೇವೆ. ಕನ್ನಡ ಮೂಲದ ರಾಜರ ಆಳ್ವಿಕೆಗೆ ಒಳಪಟ್ಟ ಪ್ರದೇಶವನ್ನು ಗುರುತಿಸುತ್ತಾ ಕರ್ನಾಟಕದ ವಿಸ್ತಾರವನ್ನು ವೈಭವದಿಂದ ನೆನೆಸಿಕೊಳ್ಳುತ್ತೇವೆ. ಪುಲಕೇಶಿ ಕ್ರಿ.ಶ ಏಳನೆಯ ಶತಮಾನದಲ್ಲಿ ನರ್ಮದಾ ತೀರದಲ್ಲಿ ಹರ್ಷವರ್ಧನನನ್ನು ಸೋಲಿಸಿ 'ದಕ್ಷಿಣಾ ಪಥೇಶ್ವರ' ಎನಿಸಿಕೊಂಡ. ಆದ್ದರಿಂದ ಕರ್ನಾಟಕದ ಸೀಮೆ ನರ್ಮದಾ ನದಿಯವರೆಗೆ ಹರಡಿತ್ತೆಂದು ಹೇಳುತ್ತೇವೆ. ಹಾಗೆಯೇ ಕನ್ನಡ ಸಾಹಿತ್ಯಕ್ಕೆ ಅಪಾರ ಪ್ರೋತ್ಸಾಹವನ್ನು ನೀಡಿದ ರಾಷ್ಟ್ರಕೂಟರು ವಿಶಾಲವಾದ ಪ್ರದೇಶವನ್ನು ಆಳಿದವರೆಂದೂ ಹೆಮ್ಮೆಪಡುತ್ತೇವೆ. ಕನ್ನಡಿಗರಂತೆ ಮರಾಠಿಗರೂ ಅಭಿಮಾನದಿಂದ ರಾಷ್ಟ್ರಕೂಟರನ್ನು ಸ್ಮರಿಸುತ್ತಾರೆ. ಅಷ್ಟೇ ಅಲ್ಲದೆ ಮಹಾರಾಷ್ಟ್ರದ ಹೆಸರಿನ ಮೂಲದಲ್ಲೂ

ರಾಷ್ಟ್ರಕೂಟರನ್ನೇ ಗುರುತಿಸುತ್ತಾರೆ. ಗಂಗರು, ಕಲ್ಯಾಣಿ ಚಾಲುಕ್ಯರು ಮತ್ತು ಹೊಯ್ಸಳರು ಆಳಿದ ಪ್ರದೇಶವನ್ನು ಕನ್ನಡನಾಡಿನ ಚರಿತ್ರೆಯೆಂದು ಅಧ್ಯಯನ ಮಾಡುತ್ತಾ ಪ್ರಾಚೀನ ಕರ್ನಾಟಕದ ಸೀಮೆಯ ಚಿತ್ರಣವನ್ನು ಕಟ್ಟಿಕೊಳ್ಳುತ್ತೇವೆ. ಕನ್ನಡ ಮೂಲದ ರಾಜರು ಕನ್ನಡ ಪ್ರದೇಶವನ್ನು ಆಳಿದಂತೆ ಕರ್ನಾಟಕದ ಹೊರಗೂ ತಮ್ಮ ರಾಜ್ಯಭಾರವನ್ನು ವಿಸ್ತರಿಸಿದ್ದರು. ಚರಿತ್ರೆಯನ್ನು ಆಧರಿಸಿ ಇಂದಿನ ಕರ್ನಾಟಕದ ಮೇರೆಯನ್ನು ಗುರುತಿಸಬಹುದೇ ಎನ್ನುವ ಪ್ರಶ್ನೆ ಹಲವು ಬಾರಿ ನನ್ನನ್ನು ಕಾಡಿಸಿದ್ದು ಅದಕ್ಕಾಗಿ ಉತ್ತರವನ್ನು ಹುಡುಕುವ ಪ್ರಯತ್ನ ಇದಾಗಿದೆ. ಏಕೆಂದರೆ ಕನ್ನಡ ನಾಡು ನುಡಿಯ ಬಗ್ಗೆ ಆವೇಶದಿಂದ ಮಾತನಾಡುವ ಸಂದರ್ಭಗಳಲ್ಲಿ ಕನ್ನಡದ ಮೇರೆಯ ಆಚೆ ಸಿಗುವ ಶಾಸನಗಳನ್ನು ಉಲ್ಲೇಖಿಸಿ ಕರ್ನಾಟಕ ಒಂದು ಕಾಲಕ್ಕೆ ನರ್ಮದಾ ನದಿಯವರೆಗಿತ್ತು ಅಥವಾ ಆಂಧ್ರ ಪ್ರದೇಶದ ಭಾಗಗಳು ತಿರುಳ್ಗನ್ನಡ ನಾಡಾಗಿತ್ತೆಂದು ಹೇಳಿಕೊಳ್ಳುತ್ತಾ ಆ ನಾಡಿನ ಜನ ನಮ್ಮ ಭೂಭಾಗವನ್ನು ಕಸಿದುಕೊಂಡಿದ್ದಾರೆಂಬ ಭಾವನೆಯನ್ನು ಬಿತ್ತುವುದು ಕಾಣಬರುತ್ತದೆ. ಕನ್ನಡಿಗರ ಆಡಳಿತ ಭಾಗ ವಿಶಾಲವಾಗಿತ್ತೆಂಬ ಗತ ವೈಭವ ದುರಭಿಮಾನಕ್ಕೆ ತಿರುಗದಿರಲೆಂಬ ಕಾರಣಕ್ಕಾಗಿ ಮತ್ತಷ್ಟು ಉದಾಹರಣೆಗಳನ್ನು ನೋಡಬೇಕಾಗಿದೆ. ಕನ್ನಡಿಗರು ಕರ್ನಾಟಕದ ಎಲ್ಲೆಯನ್ನು ಅರಿಯಲು ಬಯಸುವಂತೆ ನೆರೆನಾಡಿನ ಜನರೂ ತಮ್ಮ ನಾಡಿದ ಎಲ್ಲೆಗಳನ್ನು ಚರಿತ್ರೆಗಳಲ್ಲಿ ಹುಡುಕುವುದು ಸೋಜಿಗದ ವಿಷಯವೇನಲ್ಲ. ಬಾದಾಮಿ ಚಾಲುಕ್ಯರು ಕಂಚಿಯವರೆಗೆ ತಮ್ಮ ರಾಜ್ಯವನ್ನು ವಿಸ್ತರಿಸಿದಂತೆ, ಪಲ್ಲವರು ಹಿಂತಿರುಗಿ ಬಾದಾಮಿಯನ್ನು ವಶಪಡಿಸಿ ಕೊಂಡು ಕೆಲವು ಕಾಲ ಆಳಿದ್ದರು. ಅಷ್ಟೇ ಏಕೆ ಕದಂಬರು ಅಧಿಕಾರಕ್ಕೆ ಬಂದಾಗ ಕನ್ನಡನಾಡಿನ ಬಹುತೇಕ ಪ್ರದೇಶಗಳು ತಮಿಳು ಪಲ್ಲವರ ಆಳ್ವಿಕೆಗೆ ಒಳಪಟ್ಟಿತ್ತು. ಚರಿತ್ರೆಯ ಪುಟಗಳನ್ನು ಇನ್ನೂ ಹಿಂದಕ್ಕೆ ತಿರುಗಿಸಿದರೆ ಆಂಧ್ರರು ಎನಿಸಿಕೊಂಡ ಶಾತವಾಹನರು ಕ್ರಿ.ಶ.ದ. ಆರಂಭದಲ್ಲಿ ಕರ್ನಾಟಕದ ಪ್ರದೇಶಗಳನ್ನು ಆಳಿದ್ದರು. ಕರ್ನಾಟಕದ ರಾಜಕೀಯ ಚರಿತ್ರೆಯನ್ನು ಆರಂಭಿಸುವುದೇ ಮೌರ್ಯರ ಕಾಲದಿಂದ. ಅಶೋಕನ ಶಾಸನಗಳನ್ನು ಕರ್ನಾಟಕದಲ್ಲಿ ಕಂಡಾಗ ನಮ್ಮ ಅರಿವಿಗೆ ಬಂದದ್ದು ಕ್ರಿ.ಪೂ. 3ನೆಯ ಶತಮಾನದಲ್ಲಿ ಇಂದಿನ ಕರ್ನಾಟಕ ಪ್ರದೇಶ ಅಶೋಕನ ಆಳ್ವಿಕೆಗೆ ಒಳಪಟ್ಟಿತ್ತು. ಒಂದು ರೀತಿಯಲ್ಲಿ ಕರ್ನಾಟಕದ ರಾಜಕೀಯ ಸಂಸ್ಥೆಯ ಬೆಳವಣಿಗೆ ಕನ್ನಡೇತರ ಪ್ರದೇಶದ ಆಡಳಿತಗಾರರಿಂದ ಆರಂಭಗೊಂಡಿತಲ್ಲವೇ? ಹಾಗಾದರೆ ಅದು ನಮ್ಮ ಅಭಿಮಾನಕ್ಕೆ ಚ್ಯುತಿ ತರುವ ವಿಚಾರವೇ?

ಕನ್ನಡ ನಾಡು ನುಡಿಯ ಬಗ್ಗೆ ಆವೇಶದಿಂದ ಮಾತನಾಡುವ ಸಂದರ್ಭಗಳಲ್ಲಿ ಕನ್ನಡದ ಮೇರೆಯ ಆಚೆ ಸಿಗುವ ಶಾಸನಗಳನ್ನು ಉಲ್ಲೇಖಿಸಿ ಕರ್ನಾಟಕ ಒಂದು ಕಾಲಕ್ಕೆ ನರ್ಮದಾ ನದಿಯವರೆಗಿತ್ತು ಅಥವಾ ಆಂಧ್ರ ಪ್ರದೇಶದ ಭಾಗಗಳು ತಿರುಳ್ಗನ್ನಡ ನಾಡಾಗಿತ್ತೆಂದು ಹೇಳಿಕೊಳ್ಳುತ್ತಾ ಆ ನಾಡಿನ ಜನ ನಮ್ಮ ಭೂಭಾಗವನ್ನು ಕಸಿದುಕೊಂಡಿದ್ದಾರೆಂಬ ಭಾವನೆಯನ್ನು ಬಿತ್ತುವುದು ಕಾಣಬರುತ್ತದೆ.

ಚೋಳರು ತಮಿಳರಾಗಿದ್ದು ಬಹು ದೀರ್ಘದಾಲ ದಕ್ಷಿಣ ಕರ್ನಾಟಕ ಪ್ರಾಂತ್ಯಗಳನ್ನು ಆಳುತ್ತಿದ್ದರು. ತಮಿಳರಲ್ಲದೇ ತೆಲುಗು, ಗುಜರಾತಿ, ಉರ್ದು, ಮರಾಠಿ ಮೂಲದ ದೊರೆಗಳು ಕರ್ನಾಟಕ ಪ್ರದೇಶವನ್ನು ಆಳಿದ್ದಾರೆ. ವಿಜಯನಗರ ಸಾಮ್ರಾಜ್ಯದ ಆರಂಭದಲ್ಲಿ ಕನ್ನಡ ಮೂಲದ ದೊರೆಗಳೂ ಆನಂತರ ತುಳು ಹಾಗೂ ತೆಲುಗು ಮೂಲದ ದೊರೆಗಳು ಅಧಿಕಾರವನ್ನು ವಹಿಸಿಕೊಂಡಿದ್ದರು. ಅವರ ರಾಜ್ಯ ಕೇವಲ ಕನ್ನಡನಾಡಿಗೆ ಮೀಸಲಾಗದೆ ಆಂಧ್ರ, ತಮಿಳುನಾಡುಗಳನ್ನು ಒಳಗೊಂಡಿತ್ತು. ಕನ್ನಡ-ಆಂಧ್ರ ರಮಾರಮಣನೆನಿಸಿಕೊಂಡಿದ್ದ ಕೃಷ್ಣದೇವರಾಯನ ಆಸ್ಥಾನದಲ್ಲಿ ತೆಲುಗರು ಹೆಚ್ಚಿನ ಆದ್ಯತೆಯನ್ನು ಪಡೆದುಕೊಂಡಿದ್ದರು. ಬಹುಮನಿ ಸುಲ್ತಾನರು ಕನ್ನಡ ಮತ್ತು ತೆಲುಗು ಭಾಷೆಗಳ ಜೊತೆಗೆ ಮೂರನೆಯ ಭಾಷೆ 'ಪರ್ಷಿಯನ್'ನನ್ನು ಪರಿಚಯಿಸಿದರು. ಇಸ್ಲಾಂ ಸಂಸ್ಕೃತಿಯನ್ನು ನಾಡಿಗೆ ಪರಿಚಯಿಸಿದರು. ವಿಜಯನಗರ ಸಾಮ್ರಾಜ್ಯದ ನಂತರ ವಿಸ್ತಾರವಾದ ರಾಜ್ಯವನ್ನು ಕಟ್ಟಿದವರೆಂದರೆ ಹೈದರ್ ಮತ್ತು ಟಿಪು ಕನ್ನಡದ ಭಾಗಗಳಲ್ಲದೆ ಕೇರಳ-ತಮಿಳುನಾಡಿನ ಬಹು ಭಾಗ ಆತನ ರಾಜ್ಯಕ್ಕೆ ಒಳಪಟ್ಟಿತ್ತು. ಅಂದರೆ ಸ್ವಾತಂತ್ರ್ಯಪೂರ್ವದ ರಾಜ್ಯದ ಕಲ್ಪನೆಗೂ ಇಂದಿನ ಆಧುನಿಕ ರಾಜ್ಯದ ಕಲ್ಪನೆಗೂ ಅಜಗಜಾಂತರ. ಅಂದಿನ ರಾಜ್ಯ ಅದರ ಗಡಿಗಳು ರಾಜ್ಯದ ಆರ್ಥಿಕ-ಸೈನಿಕ ಶಕ್ತಿ ಸಾಮರ್ಥ್ಯವನ್ನು ಒಳಗೊಂಡಿತ್ತು. ರಾಜಕೀಯ ಬಲಾಬಲಕ್ಕೆ ಅನುಗುಣವಾಗಿ ಮೇರೆಗಳು ಬದಲಾಗುತ್ತಿದ್ದವು. ಅಂದಿನ ರಾಜಕೀಯ ಆಕ್ರಮಣಗಳಿಗೆ ರಾಜ್ಯ ವಿಸ್ತರಣೆಗೆ ಭಾಷೆ ಕಾರಣವಾಗಿರಲಿಲ್ಲ.

ಭೌಗೋಳಿಕ ನೆಲೆ :

ಇನ್ನು ಕನ್ನಡಿಗರ ವಾಸದ ನೆಲೆಗಳನ್ನು ಗಮನಿಸಿದರೆ ಅದೂ ಸಹ ನಿರಂತರ ಬದಲಾವಣೆಗೆ ಒಳಗಾಗಿದೆ. ಇಂತಹ ಪ್ರಶ್ನೆಗಳಿಗೆ ಉತ್ತರ ಕಂಡುಕೊಳ್ಳ ಬೇಕಾಗುತ್ತದೆ. ಆನಂತರ ಕ್ರಿ.ಶ 15ನೆಯ ಶತಮಾನದಲ್ಲಿ ವಿಜಯನಗರ ಕಾಲದಲ್ಲಿ ಆಂಧ್ರರು ಕನ್ನಡ ನಾಡಿನ ಕಡೆಗೆ ಹರಿದುಬಂದರು. ವಿಜಯನಗರ ಕಾಲದಲ್ಲಿ ಆಂಧ್ರರು ಸಾಮ್ರಾಜ್ಯದ ಆಸರೆಗಾಗಿ ಅವಕಾಶವನ್ನು ಅರಸಿ ಬಂದಿದ್ದರೆ, ವಿಜಯನಗರ ಪತನಾ ನಂತರ ಬುಡಕಟ್ಟು ಜನರ ವಲಸೆ ನಿರಂತರವಾಗಿ ಕಾಣಬರುತ್ತದೆ. ಕರ್ನಾಟಕದ ಹಳ್ಳಿಗಳಲ್ಲಿ ಹರಡಿ ಹೋಗಿರುವ ಹಲವಾರು ಬುಡಕಟ್ಟು ಜನರು ಆಂಧ್ರ ಮೂಲದವರಾಗಿದ್ದಾರೆ.

ತಮಿಳರ ಕರ್ನಾಟಕ ವಲಸೆಗೆ ಅವರದೇ ಆದ ಜಾಡುಗಳಿವೆ. ಹಲವು ಪಾಳೆಯಗಾರರ ಕಥೆಗಳಲ್ಲಿ ತಮ್ಮ ಮೂಲವನ್ನು ಉತ್ತರದಲ್ಲಿ ಹುಡುಕಿದರೆ, ಕೆಲವರು ದಕ್ಷಿಣ ದೇಶದಿಂದ ಬಂದುದಾಗಿ ಹೇಳಿಕೊಳ್ಳುತ್ತಾರೆ. ಹೆಚ್ಚಿನ ಸಂಖ್ಯೆಯಲ್ಲಿ ವಲಸೆ ಬಂದ ಉಲ್ಲೇಖ ಹೊಯ್ಸಳ ವಿಷ್ಣುವರ್ಧನನ ಕಾಲದಲ್ಲಿ. ರಾಜ ಸ್ವತ: ಜೈನ ಧರ್ಮದಿಂದ ವೈಷ್ಣವ ಧರ್ಮವನ್ನು ಸ್ವೀಕರಿಸಿದಾಗ ವೈಷ್ಣವರು ಸಾಕಷ್ಟು ಸಂಖ್ಯೆಯಲ್ಲಿ ಕರ್ನಾಟಕಕ್ಕೆ ಬಂದು ಆಶ್ರಯ ಪಡೆದುಕೊಂಡರು. ಬ್ರಿಟಿಷರು ಮೈಸೂರು ಸಂಸ್ಥಾನವನ್ನು ವಶಪಡಿಸಿಕೊಂಡಾಗ, ಬ್ರಿಟೀಷ್ ಪ್ರಾಂತ್ಯವಾಗಿದ್ದ ಮದರಾಸಿನಿಂದ ಅಧಿಕಾರಿಗಳಾಗಿ ತಮಿಳರು ಮೈಸೂರು ಪ್ರಾಂತ್ಯಕ್ಕೆ ಬರತೊಡಗಿದರು. ಈ ಎರಡೂ ಸಂದರ್ಭದಲ್ಲಿ ಮೇಲ್ವರ್ಗದ ತಮಿಳರು ಕರ್ನಾಟಕದೆಡೆಗೆ ವಲಸೆ ಬಂದರೆ ಆಧುನಿಕ ಕಾಲದ ಚಿತ್ರಣವೇ ಬೇರೆ. ಬೆಂಗಳೂರು ಕೈಗಾರಿಕಾ ನಗರವಾಗಿ ಬೆಳೆದಂತೆ ತಾಂತ್ರಿಕ ಹಿನ್ನೆಲೆಯ ವರ್ಗ ಹಾಗೂ ಕೂಲಿ ಕಾರ್ಮಿಕರಿಬ್ಬರೂ ವಲಸೆ ಬರ ತೊಡಗಿದ್ದರು. ಹಾಗೆಯೇ ಇತರ ಕೈಗಾರಿಕಾ ಪ್ರದೇಶಗಳಾದ ಕೆ.ಜಿ.ಎಫ್, ಹರಿಹರ ಹಾಗೂ ಕಾಫಿ ತೋಟಗಳಿಗೆ ಕೂಡ.

ಸ್ವಾತಂತ್ರ್ಯಾ ನಂತರದಲ್ಲಿ ಕನ್ನಡಿಗರು ಮುಂಬೈ, ಮದರಾಸಿಗೆ ವಲಸೆ ಹೋದರೆ, ೮೦ರ ದಶಕದಿಂದ ವಿದೇಶಗಳಿಗೆ ವಲಸೆ ಹೋಗುತ್ತಿದ್ದಾರೆ. ನೆರೆನಾಡಿನಿಂದ ವಲಸೆ ಬರುತ್ತಿರುವವರಲ್ಲಿ ಕೇರಳದ ಜನರೂ ಮುಖ್ಯರೆ. ಕರ್ನಾಟಕ ಕೇರಳದ ಗಡಿಯಲ್ಲಿ ಕಾಫಿ ತೋಟಗಳನ್ನು ಕೊಳ್ಳುವ ಮೂಲಕ ಕರ್ನಾಟಕದ ಕಡೆ ವಿಸ್ತರಿಸಿದರೆ, ಶಿಕ್ಷಣ ಹಾಗೂ ಉದ್ಯೋಗಕ್ಕಾಗಿ ಬೆಂಗಳೂರಿನ ಕಡೆ ಬರುವ ಪ್ರಕ್ರಿಯೆ ನಿರಂತರವಾಗಿ ಸಾಗಿದೆ. ಆದರೆ ಕರ್ನಾಟಕದಿಂದ ಕೇರಳದ ಕಡೆ ಸಾಗುವ ಜನರ ಪ್ರಮಾಣ ಬಹು ಕಡಿಮೆ. ಆಂಧ್ರದ ಕಡೆ ವಲಸೆ ಹೋಗುತ್ತಿರುವ ಉತ್ತರ ಕರ್ನಾಟಕದ ಜನರ ಸಂಖ್ಯೆ ಹೆಚ್ಚಿದೆ.

ಇಷ್ಟೆಲ್ಲಾ ವಿವರಣೆಯನ್ನು ನೀಡುವ ಮೂಲಕ ಜನ ನಿರಂತರವಾಗಿ ಒಂದು ಪ್ರದೇಶದಿಂದ ಮತ್ತೊಂದಕ್ಕೆ ವಲಸೆ ಹೋಗುತ್ತಿದ್ದಾರೆ. ಅವರ ವಲಸೆ ಹೋಗುವ ಕಾರಣಗಳು ಬಹುಮುಖ್ಯವಾಗಿ ಉದ್ಯೋಗಾವಕಾಶವೇ ಆಗಿದ್ದರೂ, ಅದೊಂದೇ ಕಾರಣವೂ ಅಲ್ಲ ಎಂಬುದನ್ನು ಸಮರ್ಥಿಸಬೇಕಾಗಿದೆ. ಸ್ವಾತಂತ್ರ್ಯಾ ನಂತರವೂ ವಲಸೆ ಮುಂದುವರಿದಿದ್ದರೂ ಮಿತವಾಗಿದೆ. ಭಾಷಾವಾರು ರಾಜ್ಯಗಳ ರಚನೆ ನೆಲದೊಡನೆ ಗುರುತಿಸಿಕೊಳ್ಳುವ ಹೊಸ ಐಡೆಂಟಟಿಗಳನ್ನು ಕೊಡುತ್ತಾ ಬಂದಿದೆ. ಕನ್ನಡಿಗರು ವಾಸಿಸಿದ ನೆಲೆಯನ್ನು ಆಧರಿಸಿ ಭೂಪಟಗಳನ್ನು ರಚಿಸಿದರೆ ಕಾಲಕಾಲಕ್ಕೆ ಹೇಗೆ ಭಿನ್ನವಾಗಿತ್ತೆಂದು ಅರಿಯಬಹುದು.

ಸಂಸ್ಕೃತಿ ಪರಿಮಳದಂತೆ ಪಸರಿಸುತ್ತದೆ. ಅದನ್ನು ಬಂಧಿಸಿಡಲಾಗುವುದಿಲ್ಲ. ನಮ್ಮೆಡೆಗೆ ಹರಿದುಬರುವ ಅಥವಾ ನಮ್ಮಿಂದ ಹೊರಹೋಗುವ ಪರಿಮಳಕ್ಕೆ ಅಡ್ಡಗೋಡೆಗಳನ್ನು ಹೇಗೆ ಹಾಕಲಾರೆವೋ, ಹಾಗೆಯೇ ಸಂಸ್ಕೃತಿಯು ನಿರಂತರ ಕೊಡುಕೊಳುಗೆಯೊಂದಿಗೆ ಮುಂದೆ ಸಾಗುತ್ತದೆ.

ಕಾಲಕಾಲಕ್ಕೆ ಜನ ವಲಸೆ ಹೋಗುವ ಕಾರಣಗಳು ಬದಲಾಗುತ್ತವೆ. ಜಾಗತೀಕರಣ ಜನರ ಚಲನೆಯನ್ನು ಹೆಚ್ಚಿಸಿದೆ. ವಲಸೆಯ ಪ್ರಕ್ರಿಯೆ 'ಗಡಿ'ಯ ಕಲ್ಪನೆಗಿರುವ ದೊಡ್ಡ ಸವಾಲೇ ಸರಿ.

ಸಾಂಸ್ಕೃತಿಕ ಹರವು : ರಾಜಕೀಯ ಗಡಿಯ ಕಲ್ಪನೆಯನ್ನು ಸದಾ ಪ್ರಶ್ನಿಸುವ ಶಕ್ತಿ ಸಂಸ್ಕೃತಿಗಿದೆ. ಸಂಸ್ಕೃತಿ ಪರಿಮಳದಂತೆ ಪಸರಿಸುತ್ತದೆ. ಅದನ್ನು ಬಂಧಿಸಿಡಲಾಗುವುದಿಲ್ಲ. ನಮ್ಮೆಡೆಗೆ ಹರಿದುಬರುವ ಅಥವಾ ನಮ್ಮಿಂದ ಹೊರಹೋಗುವ ಪರಿಮಳಕ್ಕೆ ಅಡ್ಡಗೋಡೆಗಳನ್ನು ಹೇಗೆ ಹಾಕಲಾರೆವೋ, ಹಾಗೆಯೇ ಸಂಸ್ಕೃತಿಯು ನಿರಂತರ ಕೊಡುಕೊಳುಗೆಯೊಂದಿಗೆ ಮುಂದೆ ಸಾಗುತ್ತದೆ. ಅದು ತನ್ನ ಸುತ್ತ ಒಂದು ಪ್ರಭಾವಳಿಯನ್ನು ಸೃಷ್ಟಿಸಿಕೊಳ್ಳುತ್ತದೆಯೇ ಹೊರತು, ಚೌಕಟ್ಟುಗಳನ್ನು ಹಾಕಿಕೊಳ್ಳುವುದಿಲ್ಲ.

ಸಂಸ್ಕೃತಿಯನ್ನು ಹೊತ್ತು ಸಾಗುವ ಬಹುಮುಖ್ಯ ಸಾಧನ ಭಾಷೆ. ಸಾಹಿತ್ಯ, ಸಂಗೀತ, ನೃತ್ಯ, ಉಡುಗೆ-ತೊಡುಗೆ ಗಳು, ಮತಾಚರಣೆಗಳು, ಬದುಕಿನ ರೀತಿನೀತಿಗಳ ಮೂಲಕ ಜನ ತಮ್ಮ ಸಂಸ್ಕೃತಿಯನ್ನು ಕಟ್ಟಿಕೊಳ್ಳುತ್ತಾರೆ. ಕನ್ನಡದ ಜನ ಜಗತ್ತಿನಲ್ಲಿ ಎಲ್ಲೆಲ್ಲಿ ನೆಲೆಸಿರುತ್ತಾರೆ ಅಲ್ಲೆಲ್ಲ ಕನ್ನಡದ ಕಂಪು ಹರಿದೇ ಇರುತ್ತದೆ. ಅವರ ಅರಿವಿಗೆ ಬಾರದೆಯೂ ಇರಬಹುದು. ಕನ್ನಡಿಗರು ಒಂದು ಕಾಲಕ್ಕೆ ನೆಲೆಸಿದ್ದ ಪ್ರದೇಶಗಳಲ್ಲಿ ಕನ್ನಡದ ಶಾಸನಗಳು ಕಾಣಬರುತ್ತವೆ. ಅಮೇರಿಕಾದಲ್ಲಿ 'ಅಕ್ಕಾ' ಸಾಹಿತ್ಯ ಸಮ್ಮೇಳನಗಳನ್ನು ಮಾಡಿ ಅದಕ್ಕೊಂದು ಅಧಿಕೃತ ಮೆರುಗನ್ನು ನೀಡುತ್ತಾ ಬಂದಿದ್ದಾರೆ. ಕನ್ನಡದ ಚಲನಚಿತ್ರಗಳು ಕನ್ನಡದ ಪ್ರಭಾವವನ್ನು ಬೀರುತ್ತಿದ್ದರೆ, ಹಿಂದಿ, ತಮಿಳು, ತೆಲುಗು ಚಿತ್ರಗಳು ಕನ್ನಡದ ಜನರ ಮೇಲೆ ಪ್ರಭಾವ ಬೀರುತ್ತಿವೆ. ಭಾಷೆ-ಭಾಷೆಯ ಮೂಲಕ ವ್ಯಕ್ತವಾಗುವ ಸಾಹಿತ್ಯ ಸಂಗೀತ ಸಂಸ್ಕೃತಿಯ ನಿರಂತರ ವಾಹನಗಳಾಗಿವೆ. ಭಾರತದಾದ್ಯಂತ ಜನ ಕನ್ನಡಿಗರಂತೆ ಸೀರೆಯನ್ನು ಉಡಲು ಬಯಸಿದರೆ, ಕರ್ನಾಟಕದ ಸಂಗೀತವನ್ನು ಕಲಿಯಲು ಜಗತ್ತಿನಾದ್ಯಂತ ಜನ ಉತ್ಸುಕರಾಗಿದ್ದಾರೆ. ಅಷ್ಟೇ ಮುಕ್ತವಾಗಿ ಕನ್ನಡಿಗರೂ ನೂರಾರು ವಿಚಾರಗಳನ್ನು ಹೊರಗಿನಿಂದ ಪಡೆಯುತ್ತಾ ಬಂದಿದ್ದಾರೆ. ಇಂಗ್ಲೀಷ್‌ನ ವರ್ಡ್ಸ್‌ವರ್ತ್ ಕನ್ನಡಿಗರ ಭಾವಗೀತೆಗಳಲ್ಲಿ ಸೇರಿದ್ದರೆ, ಠಾಗೂರರು ಕನ್ನಡಸಾಹಿತ್ಯಕ್ಕೆ ಒಂದಷ್ಟು ದಾರಿ ತೋರಿದ್ದಾರೆ. ಉರ್ದುವಿಲ್ಲದ ಉತ್ತರ ಕರ್ನಾಟಕದ ಭಾಷೆಯನ್ನಾಗಲೀ ಸಾಹಿತ್ಯವನ್ನಾಗಲಿ ನೆನೆಯಲಾದೀತೆ. ಹಿಂದೂ ಮುಸ್ಲಿಂ ಬೆರೆತ ಶಿಲ್ಪ ಶೈಲಿ ಕರ್ನಾಟಕದ ವಿಶಿಷ್ಟ ಶೈಲಿಯಾಗಿ ವಿಜಯನಗರ-ಬಹುಮನಿ ಸುಲ್ತಾನರ ಕಾಲದಿಂದ ಬೆಳೆದು ಬಂದಿದೆ. ಕರ್ನಾಟಕ ಸಂಸ್ಕೃತಿಯನ್ನು ರೂಪಿಸುವಾಗ ಇತರ ಸಂಸ್ಕೃತಿಗಳು

ನೆರವಾದಂತೆ, ಪರರ ಸಂಸ್ಕೃತಿಯಲ್ಲೂ ಕನ್ನಡ ರಮಿಸಿದೆ. ಕನ್ನಡ ಸಾಹಿತ್ಯ ಜಗತ್ತಿನ ಹಲವು ಭಾಷೆಗಳಿಗೆ ತರ್ಜುಮೆಯಾಗಿದೆ. ಸಂಸ್ಕೃತಿ ವಿನಿಮಯ ಕಾರ್ಯಕ್ರಮಗಳು ಈ ನಿಟ್ಟಿನಲ್ಲಿ ಉತ್ತಮ ಕಾರ್ಯನಿರ್ವಹಿಸುತ್ತಿವೆ. ಸರ್ಕಾರ ತನ್ನ ನೀತಿ ನಿರೂಪಣೆಯಲ್ಲಿ ಪ್ರಸಕ್ತ ಪರಿಸ್ಥಿತಿಯಲ್ಲಿ ಗಡಿಯ ಬಗೆಗೆ ಹೋರಾಡುವುದಕ್ಕಿಂತ ಸಾಂಸ್ಕೃತಿಕ ವಿಸ್ತರಣೆಯ ಕಾರ್ಯ ಸೃಜನಶೀಲವಾಗುತ್ತದೆ.

ಸಂಸ್ಕೃತಿಯ ವಿನಿಮಯ ನಮ್ಮ ಅಹಂಮಿಕೆಯನ್ನು ನೀಗಿಸುತ್ತದೆ. ಉಳಿವಿಗಾಗಿ ನಡೆಯುವ ಹೋರಾಟ ಒಂದು ಕಡೆಯದಾದರೆ, ಅಹಂಮಿಕೆಯಿಂದ ಮತ್ತೊಬ್ಬರ ಮೇಲಿನ ದೌರ್ಜನ್ಯ ಮತ್ತೊಂದು ಕಡೆ ನಡೆದೇ ಇದೆ. ಇದನ್ನು ಸಾಂಸ್ಕೃತಿಕ ರಾಜಕೀಯವೆಂದೇ ಕರೆಯಬೇಕಾಗುತ್ತದೆ. ಕರ್ನಾಟಕದಲ್ಲೇ ಕನ್ನಡ ಭಾಷಾ ಕಲಿಕೆಗಾಗಿ ಹೋರಾಟ ನಡೆದರೆ, ಯಾವ ಹೋರಾಟವೂ ಇಲ್ಲದೆ ಸಂಸ್ಕೃತ ಭಾಷೆಯ ಬೋಧನೆ ಶಾಲಾ ಹಂತದಲ್ಲಿ ಮುಂದುವರೆದಿದೆ. ಇದು ಭಾಷಾ ರಾಜಕೀಯವಲ್ಲವೇ? ಸಂಸ್ಕೃತಿಯ ಅಂಶಗಳು ಆರ್ಥಿಕ ವಿಚಾರಗಳ ಜೊತೆ ಸೇರಿದಂತೆ ಪೈಪೋಟಿ ಹೆಚ್ಚುತ್ತದೆ. ಕರ್ನಾಟಕದಲ್ಲಿ ಇತರ ಭಾಷಾ ಚಲನಚಿತ್ರಗಳನ್ನು ವಿರೋಧಿಸಿದಾಗ ಅದು ತನ್ನ ಭಾಷೆಯ, ಸಂಸ್ಕೃತಿಯ ಉಳಿವಿಗಾಗಿ ಮಾತ್ರವಾಗಿರಲಿಲ್ಲ, ಅದಕ್ಕೂ ಮಿಗಿಲಾಗಿ ಆರ್ಥಿಕ ಪೈಪೋಟಿಯಾಗಿತ್ತು. ತಾರ್ಕಿಕವಾಗಿ 'ಕನ್ನಡ ಚಲನಚಿತ್ರ' ಎಂದರೆ ಚಲನ ಚಿತ್ರದ ಭಾಷೆ ಮಾತ್ರ ಕನ್ನಡವಾಗಿರಬೇಕೆಂದು ಅರ್ಥವೇ, ಅದರ ನಟರೆಲ್ಲರೂ ಕನ್ನಡಿಗರಾಗಿರಬೇಕೆಂದು ಗ್ರಹಿಸಬೇಕೆ, ಬಂಡವಾಳ ಕನ್ನಡಿಗರದೆಂದು ಭಾವಿಸಬೇಕೆ?

ಪರರ ಸಂಸ್ಕೃತಿಯನ್ನು ಜನ ಸುಲಭವಾಗಿಯೇನು ಸ್ವೀಕರಿಸುವುದಿಲ್ಲ. ಅದರಲ್ಲೂ ಒತ್ತಾಯಪೂರ್ವಕವಾಗಿ ಕಲಿಸುವುದು ಮತ್ತೂ ಕಷ್ಟಸಾಧ್ಯವಾದುದು. ಬ್ರಿಟೀಷರು ಭಾರತವನ್ನು 200 ವರ್ಷಗಳ ಕಾಲ ಆಳಿದರೂ ಅವರ ಭಾಷೆ ಎಷ್ಟೇ ಹೇರಿದರೂ ಅದು ನಮಗೆ ವಿದೇಶೀಯವಾಗಿಯೇ ಉಳಿದಿದೆ. ಇಂಗ್ಲೀಷ್ ಸಂಸ್ಕೃತಿ ಎಲ್ಲವೂ ನಮ್ಮದಾಗಲಿಲ್ಲ. ಬೇಕಷ್ಟನ್ನು ಮಾತ್ರವೇ ಜನ ಸ್ವೀಕರಿಸಿದರು.

ಆರ್ಥಿಕ ಸವಾಲು

ಸಾಂಸ್ಕೃತಿಕ ಕರ್ನಾಟಕವನ್ನು ಬೆಳೆಸುವಂತೆ ಆರ್ಥಿಕ ಕರ್ನಾಟಕವೊಂದನ್ನು ಗುರುತಿಸಿಕೊಳ್ಳುವುದು ಅಭಿವೃದ್ಧಿ ದೃಷ್ಟಿಯಿಂದ ಅಗತ್ಯವಾದುದು. ಅಭಿವೃದ್ಧಿ ಕಾರ್ಯ ಎಲ್ಲ ಪ್ರದೇಶಗಳಲ್ಲೂ ಸಮಾನವಾಗಿ ನಡೆಯದೆ ಬೆಂಗಳೂರಿನಲ್ಲಿ ಕೇಂದ್ರೀಕೃತವಾಗುತ್ತಿದೆ. ಇದು ಮತ್ತಷ್ಟು ಪ್ರಾದೇಶಿಕ ಆರ್ಥಿಕ ಅಸಮಾನತೆಯನ್ನು ಸೃಷ್ಟಿಸುತ್ತಿದೆ. ಏಕೀಕರಣದ ಸಮಯದಲ್ಲಿ ಪ್ರಾದೇಶಿಕ ಆರ್ಥಿಕ ಅಸಮಾನತೆ ಮಾರಕವಾಗಿತ್ತೆಂಬುದನ್ನು ಈ ಹೊತ್ತಿನಲ್ಲಿ ನೆನೆಯುಬಹುದು. ಉತ್ತರಕರ್ನಾಟಕದ ಪ್ರಾಂತ್ಯಗಳು ಆರ್ಥಿಕವಾಗಿ ಹಿಂದೆ ಬಿದ್ದಿದ್ದು ಏಕೀಕರಣದಿಂದ ಮೈಸೂರು ಸಂಸ್ಥಾನದ ಪ್ರಗತಿ ಕುಂಟಿತವಾಗಬಹುದೆಂಬುದು ಅವರ ವಾದವಾಗಿತ್ತು. ಕೊಡಗು ಹಾಗೂ ತುಳುನಾಡಿನಲ್ಲಿ ಕೇಳಿಬಂದ ಪ್ರತ್ಯೇಕ ರಾಜ್ಯದ ಕೂಗಿಗೂ ಆರ್ಥಿಕ ಅಸಮಾನತೆ ಒಂದು ಪ್ರಮುಖ ಕಾರಣವಾಗಿದೆ. ಬೆಳೆಯುತ್ತಿರುವ ನಕ್ಸಲೀಯ ಸಮಸ್ಯೆಯಲ್ಲೂ ಆರ್ಥಿಕ ಅಸಮಾನತೆ ಪ್ರಮುಖ ಕಾರಣವೆಂಬುದನ್ನು ಮರೆಯಲಾಗದು. ಮೂಲಭೂತ ಸೌಕರ್ಯಗಳನ್ನು ಎಲ್ಲರಿಗೂ ಒದಗಿಸುವುದು ಇದಕ್ಕಿರುವ ಉತ್ತರ.

ಕನ್ನಡಿಗರ ಅಭಿವೃದ್ಧಿಯೇ ಕನ್ನಡದ ಅಭಿವೃದ್ಧಿ ಎಂಬುದು ಗಮನಕ್ಕೆ ಬಂದಿರುವ ವಿಚಾರ. ಕನ್ನಡಿಗರಿಗೆ ಆದ್ಯತೆ ಎಂಬ ಪ್ರಶ್ನೆ ತಲೆದೋರಿರುವುದು ಆರ್ಥಿಕ ಅವಕಾಶಗಳ ಸಂದರ್ಭದಲ್ಲೇ.

ಸರಳ ಕಲ್ಪನೆಯಲ್ಲಿ ಕನ್ನಡ ಮಾತೃಭಾಷೆಯಾಗಿ ಹೊಂದಿರುವವರೆಂದು ಗ್ರಹಿಸುತ್ತೇವೆ. ಮಾತೃಭಾಷೆ ಯಾವುದೇ ಇರಲಿ ಕನ್ನಡ ರಾಜ್ಯಭಾಷೆಯಾಗಿ ಈ ನಾಡಿನ ಸಂವಹನ ಭಾಷೆಯಾಗಿ ಜನ ರೂಢಿಸಿಕೊಂಡಿದ್ದಾರೆ. ಉರ್ದು, ಮರಾಠಿ, ಕೊಡವ, ತುಳು ಇತ್ಯಾದಿ ಭಾಷೆಗಳನ್ನು ಮಾತೃ ಭಾಷೆಯಾಗಿ ಹೊಂದಿರುವವರು ಸಹಜವಾಗಿ ದ್ವಿಭಾಷಿಗಳಾಗಿದ್ದಾರೆ. ಯಾವುದೇ ಹೇರಿಕೆಯಿಲ್ಲದೆಯೂ ಕನ್ನಡವನ್ನು ರೂಢಿಸಿಕೊಂಡಿದ್ದಾರೆ. ಭಾರತದ ನಾಗರಿಕರಾಗಿ ಸಂವಿಧಾನ ಬದ್ಧವಾಗಿ ಯಾರು ಯಾವ ರಾಜ್ಯದಲ್ಲಾದರೂ ಬದುಕುವ ಮತ್ತು ವಲಸೆಹೋಗುವ ಅವಕಾಶ ವಿರುವುದರಿಂದ ಸಮಕಾಲೀನ ಅರ್ಥದಲ್ಲಿ ಕನ್ನಡಿಗರೆಂದರೆ ಕನ್ನಡ ಬಲ್ಲವರೆಂದು ಒಪ್ಪಿಕೊಳ್ಳ ಬೇಕಾಗುತ್ತದೆ.

ಉರ್ದು, ಮರಾಠಿ, ಕೊಡವ, ತುಳು ಇತ್ಯಾದಿ ಭಾಷೆಗಳನ್ನು ಮಾತೃಭಾಷೆಯಾಗಿ ಹೊಂದಿರುವವರು ಸಹಜವಾಗಿ ದ್ವಿಭಾಷಿಗಳಾಗಿದ್ದಾರೆ. ಯಾವುದೇ ಹೇರಿಕೆಯಿಲ್ಲದೆಯೂ ಕನ್ನಡವನ್ನು ರೂಢಿಸಿ ಕೊಂಡಿದ್ದಾರೆ. ಭಾರತದ ನಾಗರಿಕರಾಗಿ ಸಂವಿಧಾನ ಬದ್ಧವಾಗಿ ಯಾರು ಯಾವ ರಾಜ್ಯದಲ್ಲಾದರೂ ಬದುಕುವ ಮತ್ತು ವಲಸೆಹೋಗುವ ಅವಕಾಶವಿರುವುದರಿಂದ ಸಮಕಾಲೀನ ಅರ್ಥದಲ್ಲಿ ಕನ್ನಡಿಗರೆಂದರೆ ಕನ್ನಡ ಬಲ್ಲವರೆಂದು ಒಪ್ಪಿಕೊಳ್ಳಬೇಕಾಗುತ್ತದೆ.

ಆರ್ಥಿಕ ಕರ್ನಾಟಕವೂ ಸಹ ರಾಜಕೀಯ ಗಡಿಯನ್ನು ಮುರಿದು ನಿಲ್ಲುತ್ತದೆ. ಯಾವುದೇ ಪ್ರದೇಶದ ಆರ್ಥಿಕ ಬೆಳವಣಿಗೆ ಇಂದು ಸ್ವಾವಲಂಬಿಯಲ್ಲ.; ನದಿ ನೀರಿನ ವಿವಾದಗಳಲ್ಲಿ ಇದು ಸ್ಪಷ್ಟವಾಗುತ್ತದೆ. ನದಿ ನೀರನ್ನು ಭಾಷಾ ನೆಲೆಯಲ್ಲಿ, ಭಾವುಕ ನೆಲೆಯಲ್ಲಿ ಚರ್ಚಿಸಿ ಸಮಸ್ಯೆಯನ್ನು ಕಗ್ಗಂಟಾಗಿಸಿಕೊಂಡಿದ್ದೇವೆ. ಹರಿಯುವ ನದಿಗೆ ಕನ್ನಡಿಗರು, ತೆಲುಗರು, ತಮಿಳರೆಂಬ ಭೇದ ಭಾವವಿಲ್ಲದಿರುವುದರಿಂದ, ಸಾಮಾಜಿಕ ನ್ಯಾಯದ

ಹಿನ್ನೆಲೆಯಲ್ಲಿ ನದಿ ನೀರನ್ನು ಹಂಚಿಕೊಳ್ಳುವ ಸಂಸ್ಕೃತಿಯನ್ನು ಮೆರೆಯಬೇಕಾಗಿದೆ.

ಆರ್ಥಿಕ ಬಲ ಭಾಷೆಗೆ ಬಲ ತಂದುಕೊಡುತ್ತದೆಂಬುದು ಸರ್ವವಿಧಿತವಾದ ವಿಚಾರ. ಬ್ರಿಟಿಷರ ಆರ್ಥಿಕ ಸಾಮರ್ಥ್ಯ ಇಂಗ್ಲೀಷ್‌ಗೆ ಮಾನ್ಯತೆಯನ್ನು ತಂದುಕೊಟ್ಟಿತು. ಹಾಗೆಯೇ ಇಂದು ಚೀನಾ ಮತ್ತು ಜಪಾನ್ ತಮ್ಮ ಆರ್ಥಿಕ ಬಲವನ್ನು ಹೆಚ್ಚಿಸಿಕೊಳ್ಳುವ ಮೂಲಕ ಯುರೋಪ್, ಅಮೇರಿಕಾ ರಾಷ್ಟ್ರಗಳು ಚೀನಿ ಹಾಗೂ ಜಪಾನಿ ಭಾಷೆಗಳ ಕಲಿಕೆ ಆದ್ಯತೆಯನ್ನು ಪಡೆದುಕೊಳ್ಳುತ್ತಿದೆ.

ಭಾಷಾವಾರು ರಾಜ್ಯಗಳು : ಭಾಷಾವಾರು ಕಲ್ಪನೆಗೆ ಮೊದಲು ಚಾಲನೆ ಕೊಟ್ಟವರು ಗಾಂಧೀಜಿ. 1920ರಲ್ಲಿ ಗಾಂಧೀಜಿ ಕಾಂಗ್ರೆಸ್‌ನ್ನು ಪ್ರವೇಶಿಸಿದಾಗ ಅದಕ್ಕೊಂದು ಸ್ವರೂಪವನ್ನು ಕೊಟ್ಟರು. ಭಾಷಾವಾರು ಆಧಾರದ ಮೇಲೆ ಪ್ರದೇಶ ಕಾಂಗ್ರೆಸ್ ಎಂದು ಕಾಂಗ್ರೆಸ್‌ನ್ನು ವಿಕೇಂದ್ರೀಕರಿಸಿದರು. ಇದೇ ಮುಂದುವರಿದು ಸ್ವಾತಂತ್ರ್ಯ ಚಳುವಳಿಯ ಜೊತೆ ಜೊತೆಯಲ್ಲಿ ಭಾಷಾವಾರು ಪ್ರಾಂತ್ಯಗಳು ತಮ್ಮ ಐಡೆಂಟಿಟಿಗಾಗಿ ಹೋರಾಡ ತೊಡಗಿದವು. ಕರ್ನಾಟಕದ ಏಕೀಕರಣ ಹೋರಾಟ ಆರಂಭವಾಯಿತು. ಆಲೂರು ವೆಂಕಟರಾಯರು ಕರ್ನಾಟಕ ಗತ ವೈಭವವನ್ನು ಬರೆದರು. ಬಿ.ಎಂ.ಶ್ರೀ ಅವರು ಹಳ್ಳಿ ಹಳ್ಳಿಗಳಲ್ಲಿ ಕನ್ನಡದ ಪ್ರಜ್ಞೆಯನ್ನು ಬೆಳೆಸಿದರು. ಮುದವೀಡು ಕೃಷ್ಣರಾವ್ ಅವರಿಂದ ಕುವೆಂಪುವರೆಗೆ ಕವಿಗಳು, ಸಾಹಿತಿಗಳು, ರಾಜಕಾರಣಿಗಳು, ಪತ್ರಿಕೆಗಳು, ಸಂಘ ಸಂಸ್ಥೆಗಳು ಇದಕ್ಕಾಗಿ ಹೋರಾಟ ನಡೆಸಿದರು. ನೆರೆಹೊರೆಯ ರಾಜ್ಯಗಳೂ ತಮ್ಮ ತಮ್ಮ ರಾಜ್ಯಗಳಲ್ಲಿ ಕನ್ನಡಿಗರಂತೆಯೇ ಹೋರಾಟ ಮಾಡಿದ್ದಾರೆ. ಅದರಲ್ಲೂ ಆಂಧ್ರಪ್ರದೇಶ ಮುಂಚೂಣಿ ಯಲ್ಲಿತ್ತು. ರಾಜ್ಯ ಪುನರ್ ವಿಂಗಡಣಾ ಸಮಿತಿ 1956ರಲ್ಲಿ ಕರ್ನಾಟಕದ ಗಡಿಯನ್ನು ಗುರುತಿಸಿತು. ಕನ್ನಡ ಭಾಷಾ ಬಹುಸಂಖ್ಯಾತರಿರುವ ಕಾಸರಗೂಡು, ಊಟಿ, ಶ್ರೀಶೈಲ, ಮಡಕಶಿರಾ ಮುಂತಾದ ಪ್ರದೇಶಗಳು ಕರ್ನಾಟಕದಿಂದ ಹೊರಗುಳಿದವು. ಹಾಗೆಯೇ ಪರಭಾಷಾ ನೆಲೆಗಳು ಕರ್ನಾಟಕದ ಒಳಸೇರಿದವು. ಗಡಿಯನ್ನು ಗುರುತಿಸುವಾಗ ಹಳ್ಳಿ, ಅಥವಾ ಊರುಗಳು ಘಟಕಗಳಾಗದೆ ಜಿಲ್ಲೆಗಳನ್ನು ಘಟಕಗಳಾಗಿ ನೋಡಲಾಯಿತು. ಇಂತಹ ರಾಜಕೀಯ ಗಡಿಯನ್ನು ಗುರುತಿಸುವಾಗ ಮೇಲೆ ಚರ್ಚಿಸಿದ ರಾಜಕೀಯ ಅಂಶಗಳು, ನಿರಂತರ ವಲಸೆಯಿಂದ ಬದಲಾಗುವ ಭೌಗೋಳಿಕ ನೆಲೆಗಳು, ಭಾಷಾ ನೆಲೆಯ ಹೋರಾಟಗಳು, ರಾಜಕೀಯ ಒತ್ತಡಗಳು ಕಾರಣವಾಗಿವೆ.

ದ್ವಿಭಾಷಾ ನೆಲೆಗಳು: ಎರಡು ಭಾಷಾ ಪ್ರದೇಶದ ಎಲ್ಲೆಯಲ್ಲಿ ಬದುಕುವ ಜನರನ್ನು ವಿಭಿನ್ನವಾಗಿ ನೋಡಬೇಕಾದ ಅಗತ್ಯವಿದೆ. ಸಹಜವಾಗಿ ಅವರು ಎರಡು ಭಾಷೆಗಳನ್ನು ಬಲ್ಲವರಾಗಿರುತ್ತಾರೆ. ಕರ್ನಾಟಕ –ಆಂಧ್ರ ಗಡಿಯಲ್ಲಿ ಬದುಕುವ ಜನರು ಕನ್ನಡ – ತೆಲುಗು ಭಾಷೆಗಳೆರಡನ್ನು ಬಲ್ಲವರಾಗಿರುತ್ತಾರೆ. ಮತ್ತೆ ಕೆಲವರು ಕನ್ನಡ- ತೆಲುಗು ಉರ್ದು ಭಾಷೆಗಳನ್ನು ತಮ್ಮದಾಗಿಸಿಕೊಂಡಿದ್ದಾರೆ. ಕರ್ನಾಟಕದ ಭಾಗದಲ್ಲಿರುವವರು ಕನ್ನಡ ಶಾಲೆಗಳಲ್ಲಿ ಕಲಿತು ಕನ್ನಡದಲ್ಲಿ ಓದು ಬರಹವನ್ನು ಮುಂದುವರೆಸಿದರೂ, ಸಂಪರ್ಕ ಮಾಧ್ಯಮವಾಗಿ ತೆಲುಗು ಭಾಷೆಯನ್ನು ಬಳಸುತ್ತಿದ್ದಾರೆ. ಕೋಲಾರದ ಕೆಲವು ಶಾಲೆಗಳಲ್ಲಿ ಉರ್ದು ಹೆಚ್ಚಾಗಿ ಬಲ್ಲ ಮಕ್ಕಳಿಗೆ ಕನ್ನಡದ ಓದು ಬರಹ ತೊಡಕಾಗುತ್ತಿದೆ. ಬೆಳಗಾಂನ ಭಾಗದಲ್ಲಿ ಕನ್ನಡ ಬಲ್ಲವರಾದರೂ ಮರಾಠಿಯನ್ನು ಹೆಚ್ಚಾಗಿ ಬಳಸುವ ಜನ ವಾಸಿಸುತ್ತಿದ್ದಾರೆ. ಹಾಗೆಯೇ ಶ್ರೀ ಶೈಲಂನ ಕನ್ನಡಿಗರು ತಮ್ಮ ರಾಜ್ಯದ ಕಾರಣಕ್ಕಾಗಿ ತೆಲುಗನ್ನು ಕಲಿತರೂ ಕನ್ನಡ ಅವರ ಮಾತೃಭಾಷೆ ಅಥವಾ ಸಂಪರ್ಕ ಭಾಷೆಯಾಗಿದೆ. ಈ ಎಲ್ಲ ಅಂಶಗಳನ್ನು ಗಮನದಲ್ಲಿಟ್ಟುಕೊಂಡು ಇಂದು ಹೊಸ ಸೂತ್ರವನ್ನು ಕಂಡುಕೊಳ್ಳಬೇಕಾಗಿದೆ.

ದ್ವಿಭಾಷಿಗರಿಗಾಗಿ ಸರಿಯಾದ ಚಿಂತನೆಯಿಲ್ಲದೆ ಗಡಿ ಪ್ರದೇಶದ ಜನ ನರಳುವಂತಾಗಿದೆ. ಇಂದಿನ ಗಡಿ ಸಮಸ್ಯೆಗಳನ್ನು ಪರಿಗಣಿಸುವಾಗ ಒಂದು ಭಾಷೆಯನ್ನಾಡುವ ಜನರು ಮತ್ತೊಂದು ರಾಜ್ಯದಲ್ಲಿರಬೇಕೆ ಬೇಡವೇ ಎಂದು ಹೋರಾಡುವುದಕ್ಕಿಂತ ಆಧುನಿಕತೆಯ ಅನಿವಾರ್ಯತೆ ಗಳಿಗೆ ಅನುಗುಣವಾಗಿ ಹೆಚ್ಚು ವಿಸ್ತಾರವಾದ ತಳಹದಿಯ ಮೇಲೆ ಯೋಜನೆಗಳು ರೂಪಿತ ವಾಗಬೇಕು. ಗಡಿಗಳು, ರಾಜ್ಯಗಳು ಆಡಳಿತದ ಅನುಕೂಲಕ್ಕಾಗಿ ಮತ್ತು ಸಂಸ್ಕೃತಿಯ ರಕ್ಷಣೆಗಾಗಿ ಇವೆಯೇ ಹೊರತು, ಜನರ ಪ್ರಗತಿಯ ದೃಷ್ಟಿಯಿಂದ ಗಡಿಗೆರೆಗಳನ್ನು ಮೀರಿದ ಬಾಂಧವ್ಯ ಬೆಳೆಯಬೇಕು. ಬೆಳಗಾಂನ ಸಮಸ್ಯೆಗೆ ಈ ನಿಟ್ಟಿನಲ್ಲಿ ಪರಿಹಾರವನ್ನು ಕಂಡುಕೊಳ್ಳಲು ಸಾಧ್ಯ. ಬೆಳಗಾಂನ ಮರಾಠಿಗರು ತಮ್ಮ ಮಕ್ಕಳನ್ನು ಬಯಸಿದಲ್ಲಿ, ಮಹಾರಾಷ್ಟ್ರದಲ್ಲಿ ಓದಿಸಲು ಅವಕಾಶ ಕಲ್ಪಿಸಬೇಕು. ಬೆಳಗಾಂ ಪ್ರದೇಶದ ಶಾಲೆಗಳಲ್ಲಿ ಕನ್ನಡ ಮತ್ತು ಮರಾಠಿ ಎರಡೂ ಭಾಷೆಯ ಅಧ್ಯಯನಕ್ಕೆ ಅವಕಾಶ ಕಲ್ಪಿಸಬೇಕು. ಗಡಿ ಪ್ರದೇಶಗಳ ಅಭಿವೃದ್ಧಿಗೆ ಸರ್ಕಾರ ಹೆಚ್ಚಿನ ಕಾಳಜಿ ವಹಿಸಬೇಕು. 'ಗಡಿ' ಎಂದರೆ ಅಭಿವೃದ್ಧಿಯ ದೃಷ್ಟಿಯಿಂದಲೂ ಅಂಚಿನ ಜನರೆಂದು ಭಾವಿಸುವಂತಾಗಬೇಕಿಲ್ಲ. ಅಭಿವೃದ್ಧಿಯಲ್ಲಿ ಪ್ರಾದೇಶಿಕ ಅಸಮತೋಲನವನ್ನು ತಪ್ಪಿಸಿದರೆ ಸಹಜವಾಗಿ ಗಡಿಯ ಹೋರಾಟಗಳೂ ಕಡಿಮೆಯಾಗುತ್ತದೆ.

ಗಡಿಗಳು, ರಾಜ್ಯಗಳು ಆಡಳಿತದ ಅನುಕೂಲಕ್ಕಾಗಿ ಮತ್ತು ಸಂಸ್ಕೃತಿಯ ರಕ್ಷಣೆಗಾಗಿ ಇವೆಯೇ ಹೊರತು, ಜನರ ಪ್ರಗತಿಯ ದೃಷ್ಟಿಯಿಂದ ಗಡಿಗೆರೆಗಳನ್ನು ಮೀರಿದ ಬಾಂಧವ್ಯ ಬೆಳೆಯಬೇಕು.


ಕನ್ನಡ ನಾಡಿನಲ್ಲಿ ಕನ್ನಡದ ಉಳಿವಿಗಾಗಿ ಹೋರಾಡುವುದು ಎಷ್ಟು ಮುಖ್ಯವೋ ಅದರೊಳಗೆ ಬದುಕುತ್ತಿರುವ ಅಲ್ಪ ಸಂಖ್ಯಾತರ ಭಾಷೆಗಳನ್ನು ಉಳಿಸಿಕೊಳ್ಳುವುದೂ ಅಷ್ಟೇ ಮುಖ್ಯ. ಲಿಪಿ ಇರುವ ಇಲ್ಲದಿರುವ, ಭಾಷೆಗಳ ಉಳಿವು ಈ ನೆಲದ ಜವಾಬ್ದಾರಿ. ಯಾವ ಭಾಷೆ ಸತ್ತರೂ ಅದರ ಜೊತೆ ಜ್ಞಾನ ಭಂಡಾರ ನಾಶವಾದಂತೆ. ●




ಬಾದಾಮಿ ಚಾಲುಕ್ಯರ ಸಾಮ್ರಾಜ್ಯ



ರಾಷ್ಟ್ರಕೂಟರ ಸಾಮ್ರಾಜ್ಯ



ಹೊಯ್ಸಳರ ಸಾಮ್ರಾಜ್ಯ



ಬ್ರಿಟಿಷ್ ಕರ್ನಾಟಕ ಮತ್ತು ಸಂಸ್ಥಾನಗಳು

ಚಾಲುಕ್ಯರು, ರಾಷ್ಟ್ರಕೂಟರು, ಹೊಯ್ಸಳರು, ಮುಂತಾದ ವಿವಿಧ ಕನ್ನಡ ಮೂಲದ ರಾಜರ ಆಳ್ವಿಕೆಯ ವ್ಯಾಪ್ತಿಗೆ ಒಳಪಟ್ಟ ಪ್ರದೇಶಗಳನ್ನು ಗಮನಿಸಿದರೆ ಅವರು ಕನ್ನಡ ಪ್ರದೇಶಗಳಲ್ಲದೇ ಅದರ ಹೊರಗೂ ತಮ್ಮ ರಾಜ್ಯಗಳನ್ನು ವಿಸ್ತರಿಸಿದ್ದರು ಎಂಬುದು ತಿಳಿದುಬರುತ್ತದೆ.

ಅದೇ ರೀತಿಯಾಗಿ ತಮಿಳು ಮೂಲದ ರಾಜರುಗಳಾದ ಪಲ್ಲವರು, ಚೋಳರು ಮತ್ತು ತೆಲುಗು ಮತ್ತಿತರ ಮೂಲದ ರಾಜರುಗಳ ಆಳ್ವಿಕೆಯ ವ್ಯಾಪ್ತಿಗೆ ಒಳಪಟ್ಟ ಪ್ರದೇಶಗಳನ್ನು ಗಮನಿಸಿದರೆ ತಮ್ಮ ಭಾಷೆಯ ಪ್ರದೇಶಗಳ ವ್ಯಾಪ್ತಿ ಮೀರಿ ಕನ್ನಡ ಪ್ರದೇಶ, ಮತ್ತಿತರ ಭಾಷಿಕ ಪ್ರದೇಶಗಳಲ್ಲೂ ತಮ್ಮ ರಾಜ್ಯ ವಿಸ್ತರಿಸಿದ್ದು ಕಂಡುಬರುತ್ತದೆ.

ಹೀಗಾಗಿ ಹಿಂದಿನ ಚರಿತ್ರೆಯನ್ನಷ್ಟೇ ಆಧರಿಸಿ ಇಂದಿನ ಕರ್ನಾಟಕದ ಮೇರೆಯನ್ನು ಗುರುತಿಸುವುದು ಎಷ್ಟು ಸಮಂಜಸ ಎನ್ನುವ ಪ್ರಶ್ನೆ ಏಳುತ್ತದೆ. ಅನ್ಯ ಭಾಷಿಕರು ತಮ್ಮ ಪ್ರದೇಶಗಳನ್ನು ಕಸಿದುಕೊಂಡುಬಿಟ್ಟಿದ್ದಾರೆಂಬ ಗ್ರಹಿಕೆ ಅವಾಸ್ತವಿಕ ಎಂದೂ ಅರಿವಾಗುತ್ತದೆ.

"ಸೌಹಾರ್ದ ಪರಂಪರೆಯ ವೈವಿಧ್ಯತೆಗಳು"

–ಡಾ॥ ಮೀನಾಕ್ಷಿ ಬಾಳಿ

ಸಾಂಸ್ಥಿಕ ಧರ್ಮಗಳು ತಮ್ಮ ಘೋಷಿತ ಉದ್ದೇಶಕ್ಕೆ ವಿರುದ್ಧವಾಗಿ ಪಟ್ಟಭದ್ರ ಹಿತಾಸಕ್ತಿಗಳ ಕೈಯಲ್ಲಿ ಸಿಲುಕಿ ಸಮಾಜದ ಪ್ರಗತಿಯನ್ನು ನಿರ್ಬಂಧಿಸುವ ಸಂಕೋಲೆಗಳಾಗಿ, ಮನುಷ್ಯ–ಮನುಷ್ಯರ ನಡುವೆ ತಡೆಗೋಡೆಯಂತೆ ಅಡ್ಡನಿಂತಿರುವುದು ಇತಿಹಾಸದುದ್ದಕ್ಕೂ ಕಂಡುಬರುತ್ತದೆ. ಕೋಮುವಾದಿ ಶಕ್ತಿಗಳು ಇದೇ ಧರ್ಮವನ್ನು ತಮ್ಮ ದ್ವೇಷ–ಹಿಂಸೆಗಳನ್ನು ಹರಡುವ ಜೀವವಿರೋಧಿ ದುರುದ್ದೇಶಗಳಿಗೆ ಬಳಕೆ ಮಾಡಿಕೊಂಡಿರುವುದನ್ನು ಕಾಣುತ್ತೇವೆ.



ಆದರೆ ಇಂತಹ ಜಡ್ಡುಗಟ್ಟಿದ ಕರ್ಮಠ ಧರ್ಮಗಳನ್ನು ತಿರಸ್ಕರಿಸಿ ಜನರ ನಡುವೆ ಧಾರ್ಮಿಕ ಸೌಹಾರ್ದತೆ, ಪ್ರೀತಿ ಜೀವನ ಪ್ರೀತಿ, ಜೀವಪರ ನಿಲುವನ್ನು ಪ್ರತಿಪಾದಿಸಿದ ಹಲವು ಪರಂಪರೆಗಳು ನಮ್ಮ ನಾಡಿನಲ್ಲಿವೆ.

ಕೋಮುವಾದಿ ಶಕ್ತಿಗಳು ಮರೆಮಾಚಲು, ನಾಶಮಾಡಲು ಯತ್ನಿಸುವ ಇಂತಹ ಮಹತ್ವದ ಸಾಮಾಜಿಕ, ಧಾರ್ಮಿಕ, ಸಾಂಸ್ಕೃತಿಕ ಪರಂಪರೆಗಳ ಕುರಿತು ಒಂದು ಲೇಖನ ಲೇಖಕಿ, ಗುಲ್ಬರ್ಗಾ ಜಿಲ್ಲೆಯ ಉಪನ್ಯಾಸಕರೂ ಆದ ಡಾ॥ಮೀನಾಕ್ಷಿ ಬಾಳಿ ಅವರಿಂದ.

ಪ್ರಭುತ್ವಕ್ಕೆ ಧರ್ಮಗಳು ಅಪರಿಹಾರ್ಯ ಮುಖವಾಡಗಳು. ಹೀಗೆಂದೆ ಒಂದೊಂದು ರಾಜಮನೆತನಗಳ ಆಳ್ವಿಕೆಯಲ್ಲಿ ನಿರ್ದಿಷ್ಟ ಧರ್ಮಗಳು ಮುಂಚೂಣಿಗೆ ಬಂದು ನಿಂತಿದ್ದು ಇದೆ. ಪ್ರಭುತ್ವಗಳು ಏನೇನೋ ಕಾರಣಗಳಿಂದಾಗಿ ನಿರ್ದಿಷ್ಟ ಧರ್ಮವೊಂದಕ್ಕೆ ಜೋತುಕೊಂಡಿರುವಾಗಲೂ ಸಿಂಹಾಸನದ ಉಳಿವಿಗಾಗಿಯಾದರೂ ಧರ್ಮ ಸಮನ್ವಯವನ್ನು ಸಾಧಿಸಿಕೊಂಡುಬಂದಿವೆ. ಕರ್ನಾಟಕವು ಧರ್ಮ ಸಮನ್ವಯಕ್ಕೆ ಅಪೂರ್ವ ಮಾದರಿಯಾಗಿ ನಿಂತಿದೆ.

ಕನ್ನಡನಾಡನ್ನು ಬಹುಧರ್ಮ, ಭಾಷೆ, ಸಂಸ್ಕೃತಿಗಳ ಆಡುಂಬೋಲವೆಂದು ಗುರುತಿಸಲಾಗಿದೆ. ಕನ್ನಡದ ಮೊಟ್ಟಮೊದಲ ಉಪಲಬ್ದ ಕೃತಿಯಾದ ಕವಿರಾಜಮಾರ್ಗದಲ್ಲಿಯೇ ಕವಿ ಕನ್ನಡಿಗರ ಸೌಹಾರ್ದ ಪರಂಪರೆಯನ್ನು ಎತ್ತಿತೋರಿಸಿದ್ದಾನೆ.

ಕಸವರಮೆಂಬುದು ನೆರೆ ಸೈ
ರಿಸಲಾರ್ಪೊಡೆ ಪರ ವಿಚಾರಮಂ ಪರಧರ್ಮಮುಮಂ
ಕಸವೇಂ ಕಸವರಮೇನು
ಬ್ಬಸಮಂ ಬಸಮಲ್ಲದಿರ್ದು ಮಾಡುವೊಡೆಲ್ಲಂ॥

ಎಂದು ವಿವರಿಸುತ್ತ ಪರಧರ್ಮ ಮತ್ತು ಪರವಿಚಾರವನ್ನು ಸೈರಿಸುವುದೇ ನಿಜವಾದ ಬಂಗಾರವೆಂದು ಘೋಷಿಸುತ್ತಾನೆ. ಪರಮತ ಸಹಿಷ್ಣುತೆ ಇಲ್ಲದ ಬದುಕು ಬದುಕೇ ಅಲ್ಲ. ಅಂಥ ಉಗ್ರಮತಾವಲಂಬಿ ಬದುಕಿನಲ್ಲಿ ಬಂಗಾರವಿದ್ದರೂ ಅದು ಕಸದ ಸಮಾನ ವ್ಯರ್ಥ ಅನ್ನುತ್ತಾನೆ. ಈ ಕಂದಪದ್ಯ ಒಂದೆಡೆ ಧರ್ಮ ಸಮನ್ವಯವನ್ನು ಒತ್ತಿ ಹೇಳುತ್ತಿರುವಾಗಲೇ ಇನ್ನೊಂದೆಡೆ ಧರ್ಮಾಂಧರ ಮಧ್ಯೆ ವೈಷಮ್ಯಗಳು ಇದ್ದಿರಬಹುದಾದ ಇತಿಹಾಸದತ್ತ ಬೆರಳು ಮಾಡುತ್ತದೆ.

ನಮ್ಮ ನಾಡಿನ ಬೇಲೂರಿನ ಶಾಸನವೊಂದರಲ್ಲಿ ಕೆತ್ತಲಾದ ಸುಪ್ರಸಿದ್ಧ ಶ್ಲೋಕವೊಂದು ಹೀಗಿದೆ.

ಯಂ ಶೈವಾಸ್ಸ ಮುಪಾಸತೇ ಶಿವ ಇತಿ ಬ್ರಹ್ಮೇತಿ ವೇದಾಂತಿನೋ।

ಬೌದ್ಧಾ ಬುದ್ಧ ಇತಿ ಪ್ರಮಾಣ ಪಟವ: ಕರ್ತೇತಿ ನೈಯಾಯಿಕಾ:॥

ಅರ್ಹನ್ನಿತ್ಯಥ ಜೈನ ಶಾಸನ ರತಾ: ಕರ್ಮೇತಿ ಮೀಮಾಂಸಕಾ:॥

ಸೋऽಯಂ ವೋ ವಿಧಧಾತು ವಾಂಛಿತ ಫಲಂ ಶ್ರೀ ಕೇಶವೇಸ್ಸದಾ॥

ಇದರ ತಾತ್ಪರ್ಯ: ಶೈವರು ಶಿವನೆಂದು, ವೇದಾಂತಿಗಳು ಬ್ರಹ್ಮನೆಂದು, ಬೌದ್ಧರು ಬುದ್ಧನೆಂದು, ಪ್ರಮಾಣದಲ್ಲಿ ಸಮರ್ಥರಾದ ನೈಯಾಯಿಕರು ಕರ್ತೃವೆಂದು, ಜೈನರು ಅರ್ಹಂತನೆಂದು, ಮೀಮಾಂಸಕರು ಕರ್ಮವೆಂದು ಯಾವನನ್ನು ಉಪಾಸನೆ ಮಾಡುವರೋ ಅವನೇ ಆದ ಈ ಕೇಶವನೆಂಬ ಈಶನು ನಿಮಗೆ ಇಷ್ಟಾರ್ಥವನ್ನು ನೀಡಲಿ ಎಂದಾಗುತ್ತದೆ. ಈ ಶ್ಲೋಕವು ಕನ್ನಡಿಗರ ವಿಶಾಲ



ಸೂಫೀ ಪರಂಪರೆಯ ಶ್ರದ್ಧಾ ಕೇಂದ್ರ ಹಿಂದೂ-ಮುಸ್ಲಿಂ ಸೌಹಾರ್ದ ಪರಂಪರೆಯ ಕೇಂದ್ರ ಬಾಬಾಬುಡನ್ ಗಿರಿ

ಮನೋಭಾವನೆಂತು ಧರ್ಮ ಸಮನ್ವಯವನ್ನು ಬಿಂಬಿಸುತ್ತಿರುವಾಗಲೂ ಇಷ್ಟು ಭಿನ್ನ ಸಮಯಾಚಾರಿಗಳು ಈ ನೆಲದಲ್ಲಿ ಬಾಳು ಹೂಡಿರುವ ಅನಿವಾರ್ಯತೆಯನ್ನು ಬಿಂಬಿಸುತ್ತದೆ.

ಶೈವ, ಜೈನ, ಬೌದ್ಧ, ಮೀಮಾಂಸಕರ, ನೈಯಾಯಿಕ, ಶಾಕ್ತ, ಇವುಗಳೊಂದಿಗೆ ಮತ್ತೆ ಮುಂದುವರೆದಂತೆ, ವೀರಶೈವ, ನಾಥ, ಸಿದ್ಧ, ಅವಧೂತ, ಸೂಫಿ, ಶರಣ ಹೀಗೆ ಅಸಂಖ್ಯ ಪರಂಪರೆಗಳು ಕೈಜೋಡಿಸಿವೆ. ಹೀಗಾಗಿಯೇ ಧರ್ಮಗಳ ನಡುವೆ ಪರಸ್ಪರ ಕಾದಾಟ, ಹೋರಾಟ, ದಾಳಿ, ಆಕ್ರಮಣ ಇವೆಲ್ಲವೂ ನಡೆಯುತ್ತಲೇ ಇರುತ್ತವೆ. ಒಂದರ್ಥದಲ್ಲಿ ಪ್ರಾಚೀನ ಇತಿಹಾಸವೆಂದರೆ, ಅದು ರಾಜಮನೆತನಗಳ ಸಿಂಹಾಸನ ಕಚ್ಚಾಟದ, ಧರ್ಮಗಳ ಸಂಘರ್ಷದ, ಜನಾಂಗೀಯ ವೈಷಮ್ಯಗಳ, ಅಸಂಖ್ಯ ಸಾಮೂಹಿಕ ಕೊಲೆ, ಸುಲಿಗೆ, ದರೋಡೆಗಳ ಇತಿಹಾಸವೆಂದೇ ಅರ್ಥ.

ಧರ್ಮಗಳ ನಡುವಿನ ಕಿತ್ತಾಟಕ್ಕೆ ಕರ್ನಾಟಕ ಸೇರಿದಂತೆ ಭಾರತದಾದ್ಯಂತ ಬಹುದೊಡ್ಡ ಇತಿಹಾಸವೇ ಇದೆ. ರಕ್ತಸಿಕ್ತವಾದ ಇತಿಹಾಸದ ಪುಟಗಳಿಗೆ ಧರ್ಮದ ಬಂಗಾರದ ಚೌಕಟ್ಟುಗಳು ಆದರ್ಶದ ಮುಖವಾಡ ಹೊದಿಸಿವೆ. ಧರ್ಮ ವ್ಯಾಜ್ಯಗಳು ಸಂಭವಿಸುತ್ತಲೇ ಇರುತ್ತಿರುವುದಕ್ಕೆ ಹಲವು ಸಾಕ್ಷಿಗಳು ದೊರೆಯುತ್ತವೆ. ಉದಾಹರಣೆಗಾಗಿ ವಿಜಯನಗರ ಸಾಮ್ರಾಜ್ಯದ ಬುಕ್ಕದೇವರಾಯದ ಕಾಲಕ್ಕೆ ಜೈನ ಮತ್ತು ವೈಷ್ಣವರ ನಡುವೆ ವ್ಯಾಜ್ಯ ತಲೆದೋರಿರುತ್ತದೆ. ಅಲ್ಪಸಂಖ್ಯಾತರಾದ ಜೈನರು ತಮ್ಮ ಮೇಲೆ ಬಹುಸಂಖ್ಯಾತರಾದ ವೈಷ್ಣವರು ದಬ್ಬಾಳಿಕೆ ನಡೆಸುತ್ತಿದ್ದಾರೆ ಎಂದು ಬುಕ್ಕರಾಯನ ಬಳಿ ದೂರು ಕೊಂಡೊಯ್ಯುತ್ತಾರೆ. ಆಗ ನ್ಯಾಯನಿಷ್ಠುರಿಯಾದ ಬುಕ್ಕರಾಯನು ಎರಡೂ ಕೋಮಿನ ನಡುವೆ ಸೌಹಾರ್ದ ಮೂಡುವಂತೆ ನ್ಯಾಯ ಬಗೆಹರಿಸಿದನೆಂದು ಶಾಸನವೊಂದು ತಿಳಿಸುತ್ತದೆ. "ಚಂದ್ರಾರ್ಕಸ್ಥಾಯಿಯಾಗಿ ವೈಷ್ಣವ ಸಮಯವು ಜೈನದರ್ಶನವು ರಕ್ಷಿಸಿಕೊಂಡು ಬಹೆವು. ವೈಷ್ಣವರು ಜೈನರುವೊಂದು: ಬೇಧವಾಗಿ ಕಾಣಲಾಗದು" ಎಂಬ ಉಲ್ಲೇಖವು ಶಾಸನದ ಸಾಲುಗಳಲ್ಲಿದ್ದು ವಿಜಯನಗರ ಸಾಮ್ರಾಟರ ಧರ್ಮ ಸಹಿಷ್ಣುತೆಯನ್ನು ಎತ್ತಿ ತೋರಿಸುತ್ತದೆ. ಆದರೂ ಹಲವು ವಿಭಿನ್ನ ಧಾರ್ಮಿಕಾಚರಣೆಗಳ ನಡುವೆ ಸಂಘರ್ಷ ತಪ್ಪಿದ್ದಲ್ಲ. ಈ ಸಂಘರ್ಷಗಳನ್ನು ನಿಯಂತ್ರಿಸುವುದೇ ಯಾವತ್ತೂ ದೊಡ್ಡ ಸವಾಲಾಗಿ ಪರಿಣಮಿಸುತ್ತದೆ. ಕನ್ನಡ ನಾಡಿನಲ್ಲಿ ಇಂಥ ಧಾರ್ಮಿಕ ಪುಂಡಾಟಿಕೆಯನ್ನು ನಿಯಂತ್ರಿಸುವ ಸೌಹಾರ್ದ ಪರಂಪರೆಯೊಂದು ಸದಾ ಜಾಗ್ರತವಾಗಿದೆ.

ಧರ್ಮಗಳ ನಡುವಿನ ಕಿತ್ತಾಟಕ್ಕೆ ಕರ್ನಾಟಕ ಸೇರಿದಂತೆ ಭಾರತದಾದ್ಯಂತ ಬಹುದೊಡ್ಡ ಇತಿಹಾಸವೇ ಇದೆ. ರಕ್ತಸಿಕ್ತವಾದ ಇತಿಹಾಸದ ಪುಟಗಳಿಗೆ ಧರ್ಮದ ಬಂಗಾರದ ಚೌಕಟ್ಟುಗಳು ಆದರ್ಶದ ಮುಖವಾಡ ಹೊದಿಸಿವೆ. ಧರ್ಮ ವ್ಯಾಜ್ಯಗಳು ಸಂಭವಿಸುತ್ತಲೇ ಇರುತ್ತಿರುವುದಕ್ಕೆ ಹಲವು ಸಾಕ್ಷಿಗಳು ದೊರೆಯುತ್ತವೆ.

ಹಾಗೆ ನೋಡಿದರೆ ಧರ್ಮ ಮತ್ತು ದೇವರ ಬಗೆಗೆ ಜನಸಾಮಾನ್ಯರಿಗೆ ಯಾವತ್ತೂ ಅಂಥ ದೊಡ್ಡ ಭ್ರಮೆಗಳು ಇರುವುದಿಲ್ಲ. ದುಡಿದುಂಡು ಹೊಟ್ಟೆ ಹೊರೆಯುವ ಅವರಿಗೆ "ದೇವರು" ಗತಾನುಗತಿಕ ನಂಬಿಕೆಯ ಭಾಗ ಮಾತ್ರ. ಆದ್ದರಿಂದಲೇ ಅವರು ಎಲ್ಲರ ದೇವರನ್ನು, ಎಲ್ಲರ ನಂಬಿಕೆ, ಆಚರಣೆಗಳನ್ನು ಸಹಿಸಿಕೊಳ್ಳುತ್ತಾರೆ. ಅಷ್ಟೇ ಅಲ್ಲ. ಶಿವ, ವಿಷ್ಣು, ಬ್ರಹ್ಮ, ಏಸು, ಬುದ್ಧ, ಅರ್ಹಂತ, ಅಲ್ಲಾ, ದೇವಿ ಹೀಗೆ ಅಸಂಖ್ಯ ದೇವರನ್ನು ಪೂಜಿಸುತ್ತಾರೆ. ಸೃಷ್ಟಿಯ ಪ್ರತಿ ಕಣಕಣದಲ್ಲೂ, ಮಣ್ಣಿನ ಹುಡಿಹುಡಿಯಲ್ಲೂ, ಬೆವರ ಹನಿಹನಿಯಲ್ಲಿಯೂ ದೇವರನ್ನು ಆವಾಹಿಸಿಕೊಂಡು ಆನಂದಪಡುತ್ತಾರೆ. ಆದರೆ ದುಡಿಯುವ ಅಸಂಖ್ಯಾತ ಕೈಗಳ ಮೇಲೆ ತನ್ನ ಮಾಲಕತ್ವವನ್ನು ಸ್ಥಾಪಿಸಬೇಕೆಂಬ ಜಮೀನ್ದಾರಿ ವ್ಯವಸ್ಥೆಯ ವಕ್ತಾರರು ಜನತೆಯ ಈ ಮುಗ್ಧ ಮಧುರ ಭಕ್ತಿಯನ್ನು ಶೋಷಿಸುತ್ತಾರೆ. ಜಗತ್ತಿನೆಲ್ಲ ಸಂಪತ್ತು ಮತ್ತು ಅವಕಾಶ ವನ್ನು ತಾನು ಮಾತ್ರ ಅನುಭವಿಸಬೇಕೆಂಬ ಗುಂಪೊಂದು ಪ್ರಭುತ್ವದ ರೂಪುತೊಟ್ಟುಕೊಂಡು ಬರುತ್ತದೆ. ಇನ್ನೊಂದು ಗುಂಪು ದೇವರುಗಳನ್ನು ಗುತ್ತಿಗೆ ಹಿಡಿದುಕೊಂಡುಬರುತ್ತದೆ. ಹೀಗೆ ಬಂದ ರಾಜ್ಯಶಾಹಿ ಮತ್ತು ಪುರೋಹಿತಶಾಹಿಗಳ ಧರ್ಮವೇ ಬಂಡವಾಳವಾಗುತ್ತದೆ. ತಮ್ಮ ಅಸ್ತಿತ್ವದ ಉಳಿವಿಗಾಗಿ ಇವು ಜನಸಾಮಾನ್ಯರ ಮುಗ್ಧ ಭಕ್ತಿಯನ್ನು ಹದಗೆಡಿಸಿ ಧರ್ಮಾಂಧತೆಯ ರೂಪಕ್ಕೆ ತಿರುಗಿಸುತ್ತದೆ. ಆಗ ಧರ್ಮಗಳ ಹುಸಿ ಆವೇಶ ತಳೆದ ಕ್ರೌರ್ಯದಲ್ಲಿ ಹಿಂಸೆ ತಾನೇ ತಾನಾಗಿ ವಿಜೃಂಭಿಸಿ ಮಾರಣಹೋಮಗಳು ಎಗ್ಗಿಲ್ಲದೇ ಸಾಗುತ್ತವೆ. ಇಂಥ ಧಾರ್ಮಿಕ ಬಿಕ್ಕಟ್ಟುಗಳಿಗೆ ರೋಗ ನಿರೋಧಕ ಶಕ್ತಿಯಾಗಿ ಕರ್ನಾಟಕದಲ್ಲಿ ಶರಣ, ಸಂತ, ಸೂಫಿ, ಅವಧೂತ, ನಾಥ, ಸಿದ್ಧ, ಶಾಕ್ತ ಪರಂಪರೆಗಳು ಅನವರತ ದುಡಿದಿವೆ.

ಕರ್ನಾಟಕದಲ್ಲಿ ಉದ್ದಕ್ಕೂ ಹರಡಿಕೊಂಡಿರುವ ಹರಿಹರ ದೇವಾಲಯಗಳು, ತ್ರಿಮೂರ್ತಿ ಕಲ್ಪನೆ, ಅರ್ಧನಾರೀಶ್ವರ ಪರಿಕಲ್ಪನೆ, ಭಾಗವತ ಪರಂಪರೆಗಳು ಇಂಥ ಧರ್ಮ ಸಮನ್ವಯ ದ್ಯೋತಕವಾಗಿಯೇ ಜನ್ಮ ತಾಳಿವೆ. ಎಲ್ಲ ಮತೀಯ ಮಿತಿಗಳನ್ನು ಮೀರಿ ನಿಂತ ಶುದ್ಧ ಆಧ್ಯಾತ್ಮವಾದಿ ಚಿಂತನಧಾರೆಗಳು ಅಪ್ಪಟ ಮಾನವೀಯ ಬದುಕನ್ನು ಕಟ್ಟಿಬೆಳೆಸಿವೆ. ಜೀವಪರ ಸಿದ್ಧಾಂತಗಳನ್ನು ವಾಸ್ತವವಾದಿ ನೆಲೆಯಲ್ಲಿ ತೆರೆದಿಡುವ ಅಲ್ಲಮ, ಬಸವಣ್ಣ, ಮಾದಾರ ಚನ್ನಯ್ಯ, ಜೇಡರ ದಾಸಿಮಯ್ಯ, ಅಕ್ಕಮಹಾದೇವಿ ಮುಂತಾದವರು ನಿಗೂಢೀಕರಣ ಆಧ್ಯಾತ್ಮದ ಮೈಲಿಗೆಯನ್ನು ಕಳೆದರು. ದುಡಿಮೆಯೇ ದೇವರು. ಉತ್ಪಾದಿಸಿದ್ದೆಲ್ಲವನ್ನೂ ಸರ್ವರೂ ಸಮವಾಗಿ ಹಂಚಿಕೊಂಡು ತಿನ್ನುವ ದಾಸೋಹಭಾವ ಇವೆರಡನ್ನು ತತ್ವಬದ್ಧಗೊಳಿಸಿದರು.

ಬಸವಾದಿ ಶರಣರ ಕಾಯಕಪ್ರೇಮ ಮತ್ತು ನ್ಯಾಯನಿಷ್ಠುರಿ ನಿಲುವುಗಳನ್ನು ಮೈಗೂಡಿಸಿಕೊಂಡು ಬಂದ ತತ್ವ ಪದಕಾರರಂತೂ ಸೌಹಾರ್ದ ಪರಂಪರೆಯ ಮುಖವಾಣಿಯಾದರು. 15ನೇ ಶತಮಾನದಿಂದ 20ನೇ ಶತಮಾನದವರೆಗೆ ಒಟ್ಟು ಐದು ಶತಮಾನಗಳ ಅವಧಿಯಲ್ಲಿ ಕರ್ನಾಟಕವು ತೀವ್ರತರವಾದ ರಾಜಕೀಯ ಪಲ್ಲಟಗಳ ಸಾಮಾಜಿಕ ವೈಪರೀತ್ಯಗಳು, ಧಾರ್ಮಿಕ ಘರ್ಷಣೆಗಳನ್ನು ಕಂಡಿದೆ. ಮೇಲಾಗಿ ಅಸಂಖ್ಯ ಪ್ರಾಕೃತಿಕ ವಿಕೋಪಗಳನ್ನು, ಆರ್ಥಿಕ ದಿವಾಳಿಖೋರತನವನ್ನು, ಸಾಂಸ್ಕೃತಿಕ ಸಂಕೀರ್ಣತೆಗಳನ್ನು ಅನುಭವಿಸಿದೆ. ಇಂಥ ಸಂಕಷ್ಟದ ಕ್ಷಣಗಳಲ್ಲಿ ಜನಸಾಮಾನ್ಯರನ್ನು ಶರಣ, ಸಂತ, ಸೂಫಿ ಪರಂಪರೆಗಳು ಕೈಹಿಡಿದು ನಡೆಸಿವೆ.

ಅವಧೂತ ಪ್ರಜ್ಞೆಯ ಈ ಪರಂಪರೆಗಳು ಕರ್ನಾಟಕದ ಬಹುಮುಖಿ ಸಂಸ್ಕೃತಿಯ ಅನಂತ ವೈವಿಧ್ಯತೆಗಳನ್ನು ಮುಕ್ಕಾಗದಂತೆ ಕಾಪಿಟ್ಟುಕೊಳ್ಳುವಲ್ಲಿ ಸಫಲತೆ ಸಾಧಿಸಿವೆ. ತತ್ಫಲವಾಗಿಯೇ ಅಸ್ತಿತ್ವದಲ್ಲಿದ್ದ ಹಲವು ಹತ್ತು ಜಾತಿ ಮತ ಪಂಥಗಳ ಜನರು ಪರಸ್ಪರ ಸಹ್ಯವಾಗುವಂತೆ ಬಾಳನ್ನು ಹೂಡಿಕೊಂಡು ಬಂದಿದ್ದಾರೆ.

ನಿಜಗುಣಾದಿಯಾಗಿ ಕೂಡಲೂರು ಬಸಲಿಂಗಪ್ಪ, ಕಡಕೋಳದ ಮಡಿವಾಳಪ್ಪ, ಶಿಶುನಾಳ ಶರೀಫ ಸಾಹೇಬ, ಚನ್ನೂರ ಜಲಾಲಸಾಹೇಬ, ಮೋಟ್ನಳ್ಳಿ ಹಸನಸಾಹೇಬ, ಖೈನೂರು ಕೃಷ್ಣಪ್ಪ ಇವರ ಪಟ್ಟಿಯನ್ನು ಎಷ್ಟು ಬೇಕು ಅಷ್ಟು ದೀರ್ಘವಾಗಿ ಬೆಳೆಸಬಹುದು.

ಅವಧೂತ ಪ್ರಜ್ಞೆಯ ಈ ಪರಂಪರೆಗಳು ಕರ್ನಾಟಕದ ಬಹುಮುಖಿ ಸಂಸ್ಕೃತಿಯ ಅನಂತ ವೈವಿಧ್ಯತೆಗಳನ್ನು ಮುಕ್ಕಾಗದಂತೆ ಕಾಪಿಟ್ಟುಕೊಳ್ಳುವಲ್ಲಿ ಸಫಲತೆ ಸಾಧಿಸಿವೆ.

ಈ ಸಂತರು ಎಲ್ಲ ಶಿಷ್ಟಮತ ಧರ್ಮಗಳನ್ನು ಮೀರಿನಿಂತು ಶುದ್ಧ ಜಾನಪದಿಯ ಅಪ್ಪಟ ಮನುಜಮತ ವಿಶ್ವಪಥವನ್ನು ಸಂಗತಗೊಳಿಸಿದರು. ಹರ-ಹರಿ-ಹಜರತ ಮಾರ್ಗವನ್ನು ಬಗಲಿಗೇರಿಸಿಕೊಂಡು ಹೊರಟ ಇವರ ಪ್ರಧಾನ ಕಾಳಜಿಯೆಂದರೆ ಜೀವಜಗತ್ತು.; ಇಹಲೋಕವೇ ಇವರಿಗೆ ಕರ್ತಾರನ ಕಮ್ಮಟ. ಪ್ರೀತಿಯೊಂದೇ ಎಲ್ಲ ಪೂಜೆಯ ಗುರಿ ಮತ್ತು ಗಮ್ಯ. ಧಾರವಾಡ ಜಿಲ್ಲೆಯ ಶಿಶುನಾಳ ಶರೀಫ ಸಾಹೇಬ ಹುಟ್ಟಿನಿಂದ ಮುಸಲ್ಮಾನ. ದೀಕ್ಷೆ ಕೊಟ್ಟ ಗುರುವು ಬ್ರಾಹ್ಮಣ ಮತದ ಗೋವಿಂದ ಭಟ್ಟನಾದರೆ, ಶರೀಫ ಬರೆದದ್ದೆಲ್ಲವೂ ವೀರಶೈವ ಶರಣ ಪರಂಪರೆಯ ಸಾಹಿತ್ಯ. ಅದರಂತೆಯೇ ಗುಲಬರ್ಗಾ ಜಿಲ್ಲೆಯ ಜೇವರ್ಗಿ ತಾಲ್ಲೂಕಿನ ಚನ್ನೂರಿನ ಜಲಾಲ ಸಾಹೇಬನ ಗುರು ವೀರಶೈವ ಅನುಯಾಯಿ ಕೂಡಲೂರು ಬಸಲಿಂಗಪ್ಪ, ಜಲಾಲಸಾಹೇಬರ ಸಾಹಿತ್ಯಕ ಗುರು ಕಡಕೋಳದ ಮಡಿವಾಳಪ್ಪ. ಇಂಥ ಜಲಾಲ ಸಾಹೇಬ ಬರೆದ ಒಂದು ಪದವನ್ನು ನೋಡಿದರು ಸಾಕು. ಕರ್ನಾಟಕದ ಧರ್ಮ ನಿರಪೇಕ್ಷ ನೆಲೆಯ ಪ್ರಬುದ್ಧ ಬದುಕಿನ ಭಿತ್ತಿಗಳು ಗೋಚರಿಸುತ್ತವೆ.

ಸಬ ಕಹತೆ ಹೈ ಈಶ್ವರ ಅಲ್ಲಾ
ಇದರ ಭೇದ ಯಾರಿಗೆ ತಿಳಿದಿಲ್ಲಾ ॥ಪ॥
ನಿರಾಕಾರಸೆ ಆಕಾರಹುವೆ
ವೇದಶಾಸ್ತ್ರಕೆ ನಿಲುಕಿಲ್ಲ
ಹಿಂದೂ ಮುಸ್ಲಮಾನ ಶಾಸ್ತ್ರ ಪಡತೆ ಹೈ
ಗುರುಮನೀಶೀಲ ಸಿಗಲಿಲ್ಲ ॥೧॥
ಲಾಯಕ್ ಗುರುಕೊ ಜಬ್ ಢೂಂಡಲಾಕೆ
ಏನು ಬೇಡಿದ್ದು ಕೊಡಬೇಕಲ್ಲಾ
ತನು ಮನ ಧನ ಸಬ ಲೋಭ ಛೋಡಕರ್
ಆಗಬೇಕು ಗುರುವಿನ ಚೇಲಾ॥
ಹಮ್ ಭೀ ಕಹತೆ ತುಮ್ ಭೀ ಕಹತೆ
ಮಾಡಬ್ಯಾಡರಿ ಮ್ಯಾಲಿನ ಶೀಲಾ
ಗುರು ಮಡಿವಾಳನ ಹೋಕರ್
ತೊಳೆಯಬೇಕರಿ ಒಳಗಿನ ಮೈಲಾ॥

ಒಂದು ಸಾಲು ಉರ್ದುವಿನಲ್ಲಿ ಇನ್ನೊಂದು ಸಾಲು ಕನ್ನಡದಲ್ಲಿ ಬರೆದ ಈ ಕೃತಿ ಕರ್ನಾಟಕ ಹಿಂದೂ-ಮುಸ್ಲಿಂ ಭಾವೈಕತ ಪರಂಪರೆಯ ಅಪ್ರತಿಮ ಉದಾಹರಣೆಯಾಗಿ ನಿಂತಿದೆ. ಕನ್ನಡ ತತ್ವಪದ ಸಾಹಿತ್ಯ ಪರಂಪರೆಯಲ್ಲಿ ಇಂಥ ನೂರಾರು ರಚನೆಗಳು ದೊರೆಯುತ್ತವೆ.

ಇದೇ ಪರಿಭಾವನೆಯನ್ನು ಬಿಂಬಿಸುವ ಕೃತಿಯೊಂದನ್ನು ಬೇನೂರು, ಹಜರತ್ ಕಾಕಿಪೀರ ಎಂಬ ಕವಿಯು ಬರೆದದ್ದು ಹೀಗಿದೆ.

ಕೈಸಾ ಬಾಬು ದೇಖಾ ಮೈ ಕನಸು ತೋಡಿ
ಕಮಲನೇತನೇ ಬಂದಿದ್ದ
ಪಕಡೋ ಹಾತೋಂಸೇ ಪಾಪದೋಷ
ಮುಲನ್ನಿ ಪರಿಹರಿಸಿ ತಾನೇ ಪೋದ॥
ಮುಝುಕೋ ಶರಮ್ ಆತಿ ಹೈ ಮಾಡಲು
ವಿಂಟಿ ಜನರು ಏನಂದಾರಲ್ಲ
ಬಾತೋಂಸೆ ಕ್ಯಾ ಕಾಮ್ ಭಯಮೇ ಮುನ್ನದಿ
ಸ್ವಾಮಿ ಭಗವಂತ ತಾನೇ ಬಲ್ಲ॥
ನೌದರವಾಜೇ ಖೋಲೆ ಥೇ ತೆಲಿಸಿ ತೆಲ್ಲವಾರಿನ
ವಿಧವಾಯಿತೆ
ದಸ್ಮೆ ದರವಾಜೆ ಮೇ ದೈವ ಸ್ವರೂಪಂಬು
ಕನಪಿಂಚಿ ಬೆಳಕಾಯಿತೆ॥
ಮುರುಷದ್ ಮೇರಾ ಸಚ್ ಹೈ ಸಚ್ಚಿನಾಡು ಸಾವು
ಬಾರದ ಮುನ್ನ
ಐಸಿ ಕರಾಮತ್ ಸತ್ಯ ಮುನ್ನದಿ ಸ್ವಾಮಿ ಸೇವೆ
ಮಾಡಲೋ ಮುನ್ನ॥
ಕರ್ತಿ ಕೋ ಕಲ್ ಪಾಂಚೆ ಥೇ ಪಿರನಸಾಬು
ಕನಸುಲೋ ಕವಿಕಟ್ಟಿದ
ಕರನೇ ಕು ನಯಿ ಚಿಂತಲೇದಯ್ಯರವಂತ ಕಮಲವು
ತೋರಿದ॥

ಇಂಥ ಚಮತ್ಕಾರಿಕ ಕೃತಿಗಳು ಉಕ್ತಿವೈಚಿತ್ರವನ್ನು ಬಿಂಬಿಸಲೆಂದೇ ರಚನೆಯಾಗಿರಬಹುದಾದರೂ ಆಂತರ್ಯದಲ್ಲಿ ಭಾಷಾ ಸಮನ್ವಯ ಮತ್ತು ಧರ್ಮ ಸಹಿಷ್ಣುತೆಗಳನ್ನು ಪೋಷಿಸುತ್ತವೆ. ಈ ಕೃತಿಯಲ್ಲಿ ಕನ್ನಡ, ಉರ್ದು, ತೆಲುಗು ಮೂರು ಭಾಷೆಗಳ ಸಂಗಮವಿದೆ. ಧರ್ಮಗಳ ಸಂಕುಚಿತ, ಗಡಿಯನ್ನು ಮೀರಿದ ಈ ಸಂತರು ಭಾಷಾ ಮಡಿವಂತಿಕೆ, ಪ್ರಾದೇಶಿಕ ನಿರ್ಬಂಧನೆಗಳನ್ನು ಕಿತ್ತೊಗೆದು ಪರಸ್ಪರ ಭಾವ ಸಂವೇದಿ ನೆಲೆಯಲ್ಲಿ ಬದುಕನ್ನು ಕಟ್ಟಿಕೊಟ್ಟರು.

ಧರ್ಮಗಳ ಸಂಕುಚಿತ, ಗಡಿಯನ್ನು ಮೀರಿದ ಈ ಸಂತರು ಭಾಷಾ ಮಡಿವಂತಿಕೆ, ಪ್ರಾದೇಶಿಕ ನಿರ್ಬಂಧನೆಗಳನ್ನು ಕಿತ್ತೊಗೆದು ಪರಸ್ಪರ ಭಾವ ಸಂವೇದಿ ನೆಲೆಯಲ್ಲಿ ಬದುಕನ್ನು ಕಟ್ಟಿಕೊಟ್ಟರು.

ಪ್ರಭುತ್ವದ ದಬ್ಬಾಳಿಕೆಯನ್ನು ಪ್ರತಿರೋಧಿಸಿ ನಿಂತು ಸಾಮಾನ್ಯ ಜನರ ಬದುಕಿನ ಬವಣೆಗಳನ್ನು ಕುರಿತು ಪದ ರಚಿಸಿದರು. ಜನರ ಕಷ್ಟ, ಕೋಟಲೆ, ದುಃಖ, ದುಮ್ಮಾನಗಳಿಗೆ ಕಾರಣೀಭೂತವಾದ ಸ್ಥಳೀಯ ಜಮೀನ್ದಾರಿ ವ್ಯವಸ್ಥೆಯ ವಿರುದ್ಧ ಸೆಡ್ಡು ಹೊಡೆದು ನಿಂತ ಇವರುಗಳು ಜಾನಪದರಿಗೆ ಜಗದ್ಗುರುಗಳಾಗಿ ಕಂಗೊಳಿಸಿರಲು ಸಾಕು. ಗುಲಬರ್ಗಾ ಜಿಲ್ಲೆಯ ಸುರಪೂರ ತಾಲ್ಲೂಕಿನ ಗೋನಾಲದ ಮೌನೇಶ್ವರನನ್ನು ಹಿಂದೂ-ಮುಸ್ಲೀಂ ಜನಾಂಗಗಳೆರಡೂ ಸಮಾನ ಗೌರವದಿಂದ ಪೂಜಿಸುತ್ತಿರುವುದಕ್ಕೂ ಇಂಥ ಜಾತ್ಯಾತೀತ ನಿಲುವೇ ಕಾರಣವಾಗಿದೆ. ಅಲ್ಲಾನ ಅವತಾರವೆಂದೇ ಭಾವಿಸಲಾಗುವ ತಿಂತಿಣಿ ಮೋನಪ್ಪಯ್ಯನನ್ನು ಉಘಡಿಸುವ ಪರಿಯೊಂದನ್ನು ಗಮನಿಸಬೇಕು.

ಓಂ ಐಂಸಿ ಚಾರಲಾಕ ಜೀತಾ ಪೀರ ಪೈಗಂಬರ್
ಜಗದ್ಗುರು ಮೌನೇಶ್ವರ ಕಾಶಿಪತಿ
ಹರಹರ ಗಂಗಾಧರ ಮಹಾದೇವ

ಇಂಥ ಆಕರ್ಷಕವಾದ ಘರಾಕುಗಳು ಮತ್ತು ಭಾವೈಕ್ಯತೆ ಬಿಂಬಿಸುವ ಆಚರಣೆಗಳು ಕನ್ನಡ ನಾಡಿನುದ್ದಕ್ಕೂ ದೊರೆಯುತ್ತವೆ.

ಬೆಳಗಾವಿ ಜಿಲ್ಲೆಯ ಸಾವಳಗಿ ಶಿವಲಿಂಗೇಶ್ವರ, ಶಿರಹಟ್ಟಿ ಫಕೀರೇಶ್ವರ, ಕೊಡೆಕಲ್ ಬಸವಣ್ಣ, ತಿಂಥಿಣಿ ಮೋನಪಯ್ಯ, ಆಳಂದ ಲಾಡ್ಲೆ ಮಸಾಕ್ ಮುಂತಾದ ಪೀಠಗಳಿಗೆ ಹಿಂದೂ, ಮುಸ್ಲಿಂ ಬಾಂಧವರು ತಮ್ಮ ತಮ್ಮ ಮತಧರ್ಮಾಚರಣೆಗೆ ಅನುಸಾರವಾಗಿ ಭಕ್ತಿ ಸಲ್ಲಿಸುತ್ತಾರೆ. ಅವರ ಪೂಜಾ ಕೈಂಕರ್ಯದಲ್ಲಿ ನಂಬಿಕೆಯ ಮೊತ್ತದಲ್ಲಾಗಲಿ ಯಾವತ್ತೂ ಚ್ಯುತಿ ಬಂದಿಲ್ಲ. ಪ್ರತಿ ಜಿಲ್ಲೆಗೊಂದರಂತೆ ಇಂಥ ಭಾವ ಸಮನ್ವಯ ತಾಣಗಳನ್ನು ಪಟ್ಟಿ ಮಾಡಬಹುದು. ಇಂಥ ಧರ್ಮ ಸಮನ್ವಯದ ಭಾವುಕ ನೆಲೆಗಳಿಂದಾಗಿಯೇ ಕರ್ನಾಟಕದಲ್ಲಿ ಇವತ್ತಿಗೂ ಸೌಹಾರ್ದ ಪರಂಪರೆ ಮುಕ್ಕಾಗದಂತೆ ಉಳಿದುಕೊಂಡು ಬಂದಿರಲು ಸಾಕು.

ಸೂಫಿ ಪರಂಪರೆಯಂತೂ ಕರ್ನಾಟಕದ ವೈಶಿಷ್ಟವೇ ಆಗಿದೆ. ಕ್ರಿ.ಶ. 1317-1423ರಲ್ಲಿ ಬಾಳಿದ ಕಲಬುರ್ಗಿಯ ಸಂತ ಕವಿ ಸೈಯದ್ ಮೊಹಮ್ಮದ್ ಗೇಸುದರಾಜ್‌ನೇ ಕರ್ನಾಟಕದ ಸೂಫಿ ಪರಂಪರೆಯ ಮೊದಲಿಗರಾಗಿದ್ದಾರೆ. ಖಾಜಾ ಬಂದಾ ನವಾಜ್ ಎಂದೇ ಪ್ರಸಿದ್ಧಿಗೆ ಬಂದಿರುವ ಈತ ಉತ್ತರ ಹಿಂದೂಸ್ತಾನದ ಖ್ವಾಜಾ ಮ್ಯೊನುದ್ದೀನ್ ಚಿಸ್ತಿ "ಯಾ" ಗರೀಬ್ ನವಾಜ್‌ಗೆ ಸಂವಾದಿಯಾಗಿ ನೆಲೆಸಿದ್ದಾರೆ.

ಇವರು ದಖನಿ ಶೈಲಿಯ ಉರ್ದುವಿನಲ್ಲಿ ಜೊತೆಗೆ ಫಾರಸಿ. ಅರಬ್ಬೀ ಹಾಗೂ ಸಂಸ್ಕೃತಗಳಲ್ಲಿಯೂ 100ಕ್ಕೂ ಮೇಲ್ಪಟ್ಟು ಕೃತಿಗಳನ್ನು ರಚಿಸಿದ್ದಾರೆ.

ಚಿಕ್ಕಮಗಳೂರಿನಲ್ಲಿರುವ ಬಾಬಾ ಬುಡನ್ ಸ್ವಾಮಿ ದರ್ಗಾ ದತ್ತಪೀಠವು ಹಿಂದೂ-ಮುಸ್ಲೀಂರಿಬ್ಬರ ಭಾವಸಂತುಷ್ಟಿಯ



ಕೋಮುವಾದಿ ಶಕ್ತಿಗಳು ಹಬ್ಬಿಸಬಯಸುವ ಕೋಮುಜ್ವಾಲೆ ಸೌಹಾರ್ದ ಜನಸಂಸ್ಕೃತಿಯನ್ನು ರಕ್ಷಿಸುವುದು, ಬೆಳೆಸುವುದೇ ಇದಕ್ಕೆ ಪರಿಹಾರ

ಆರಾಧನಾ ಕೇಂದ್ರ. ಭಾರತಕ್ಕೆ ಕಾಫಿ ಬೀಜವನ್ನು ತಂದ ಮುಸ್ಲಿಂ ಸಂತ ಬಾಬಾಬುಡನ್‌ನ ಹೆಸರನ್ನು ಈ ಗಿರಿ ಪ್ರತಿನಿಧಿಸುತ್ತದೆ. ಇಲ್ಲಿರುವ ಸಮಾಧಿ ಮತ್ತು ಪಾದುಕೆಗಳಿಗೆ ಹಿಂದೂಗಳು ಮುಸ್ಲೀಂರು ನಮಿಸುತ್ತಾರೆ. ಈ ಪೀಠದ ಮೇಲ್ಗಡೆಯಲ್ಲಿ ದಕ್ಷಿಣಕ್ಕೆ ಸ್ವಾಮಿಯ ಮಠವೊಂದು ಇದೆ. ಅದನ್ನು ಇಕ್ಕೇರಿಯ ರಾಣಿ ಚೆನ್ನಮ್ಮಾಜಿ ಕಟ್ಟಿಸಿದಳೆಂದು ಪ್ರತೀತಿ ಇದೆ. ಈ ಸ್ವಾಮಿಯ ಹೆಸರು ಸೈಯದ್ ಮುರ್ತೂಜಾ ಶಾಹು ಖಾದ್ರಿ ಸಜ್ಜಾದೇ ಎಂದಿದೆ. ಈತನ ಬಿರುದು ಶ್ರೀ ದತ್ತಾತ್ರೆಯ ಸ್ವಾಮಿ, ಬಾಬಾ ಬುಡನ್ ಸ್ವಾಮಿ ಜಗದ್ಗುರು ಎಂದೂ ಇದೆ. ಇಲ್ಲಿ ಎರಡೂ ಜನಾಂಗಗಳು ಈವರೆಗೆ ಯಾವುದೇ ಗುಮಾನಿ, ಗುಲ್ಲು, ಧರ್ಮಾಂಧತೆಗಳಿಲ್ಲದೆ ಸಮಾನ ಗೌರವಾದರಗಳಿಂದ ಪೂಜೆ, ಪ್ರಾರ್ಥನೆ ಸಲ್ಲಿಸುತ್ತ ಬಂದಿದ್ದಾರೆ. ಇತ್ತೀಚೆಗೆ ಹಿಂದೂ ಕೋಮುವಾದಿಗಳು ಬಾಬಾಬುಡನ್‌ಗಿರಿಯ ದರ್ಗಾ ದತ್ತಪೀಠದಲ್ಲಿ ಮತೀಯ ದ್ವೇಷ ಬಿತ್ತುವ ಕೆಲಸ ಮಾಡುತ್ತಿದ್ದಾರೆ. ಮತ್ತದೇ ಇತಿಹಾಸದ ಧರ್ಮಾಂಧತೆಯ ರಕ್ತಸಿಕ್ತ ಕರಾಳ ಕೈಗಳು ವರ್ತಮಾನದಲ್ಲೂ ತಲ್ಲಣ ಹುಟ್ಟಿಸುವ ಕುತಂತ್ರ ನಡೆಸುತ್ತಿವೆ. ಯಾವತ್ತೂ ಉನ್ನತ ದಾರ್ಶನಿಕ ಧಾರೆಯಲ್ಲಿ ನೆಲೆನಿಂತ ಕನ್ನಡಿಗರು ಮಾತ್ರ ಇಂಥ ಧರ್ಮಾಂಧರ ಹುಚ್ಚು ಆವೇಶಕ್ಕೆ ಕಿವಿಕೊಡಲಾರರು ಎಂಬುದೇ ಸಮಾಧಾನದ ಸಂಗತಿ.



ಖಾಜಾ ಬಂದೆ ನವಾಜ್ ದರ್ಗಾ, ಗುಲಬರ್ಗಾ

ಕರ್ನಾಟಕದುದ್ದಕ್ಕೂ ನೂರಾರು ದರ್ಗಾ, ದೇವಾಲಯ, ಮಠಗಳು ಮನೆತನಗಳು, ಭಾವೈಕ್ಯತೆಯ ಫಲಕುಗಳನ್ನು ಹೊತ್ತುಕೊಂಡು ನಿಂತಿವೆ. ಇಲ್ಲಿ ನಡೆಯುವ ಜಾತ್ರೆ, ಉತ್ಸವ, ಹಬ್ಬ, ಸಂತೆಗಳಲ್ಲಿ ಎಲ್ಲ ಜಾತಿಯ ಜನಾಂಗದವರಿಗೆ ಒಂದೊಂದು ಕೆಲಸಗಳು "ಬಾಜದಂತೆ" ಉಂಬಳಿಯಾಗಿ ಹಂಚಲ್ಪಟ್ಟಿವೆ. ಶಾಲು ಹೊದಿಸುವ, ಸಕ್ಕರೆ ಎಡೆ ಮಾಡುವ, ಗಂಧ ಹೂ ಅರ್ಪಿಸುವ, ಮೊಹರವ್‌ದ ಪೀರ್‌ಗಳನ್ನು ಹೊರುವ ಹೀಗೆ ಲೆಕ್ಕವಿಲ್ಲದಷ್ಟು ಬದುಕಿನ ಭಿತ್ತಿಗಳು ಪರಸ್ಪರ ಕೊಡುಕೊಳ್ಳುವ ಸಂಕೇತವಾಗಿ ಮೈದಾಳಿ ನಿಂತಿವೆ. ಇವುಗಳ ಹಿಂದೆ ಜಾತಿ, ಮತ, ಪಂಥಗಳನ್ನು ಮೀರಿಯೂ ಬದುಕು ದೊಡ್ಡದು ಮತ್ತು ಅದು ಶುದ್ಧ ಪ್ರೀತಿಗೆ ಮಾತ್ರ ದಕ್ಕುವಂಥದು ಎಂಬ ತತ್ವ ಇದೆ. ಈ ರೀತಿಯ ಕ್ರಿಯಾಚರಣೆ ಮತ್ತು ನಂಬಿಕೆಯ ನೆಲೆಗಳ ಹಿಂದೆ ಹಲವು ವೈರುಧ್ಯ, ಭಿನ್ನತೆಗಳ ನಡುವೆಯೂ ಬದುಕನ್ನು ನಿರಪೇಕ್ಷೆಯ ಸ್ತರದಲ್ಲಿ ಕಟ್ಟಿಕೊಳ್ಳುವ ಮಹತ್ವಾಕಾಂಕ್ಷೆ ಇದೆ. ಮಾನವಕೇಂದ್ರಿತ ಈ ಮಹತ್ವಾಕಾಂಕ್ಷೆಯನ್ನು ಇನ್ನಷ್ಟು ವಿಸ್ತರಿಸಿ ಸೃಷ್ಟಿಯ ಸಚರಾಚರ ಜೀವಸಂಕುಲ ಪರವಾಗಿ ಹಬ್ಬಿಸಿದವರು ಸಂತರು, ಶರಣರು, ಸೂಫಿಗಳು.

ಅಖಂಡ ಜೀವಪರ ತುಡಿತವನ್ನು ಮೈಗೂಡಿಸಿಕೊಂಡಿರುವ ಈ ಸಂತ-ಶರಣ-ಸೂಫಿಗಳನ್ನು ಜನತೆ ಇವತ್ತಿಗೂ ಅನುಸರಿಸಿಕೊಂಡು ಬರುತ್ತಿದೆ.

ಅಖಂಡ ಜೀವಪರ ತುಡಿತವನ್ನು ಮೈಗೂಡಿಸಿಕೊಂಡಿರುವ ಈ ಸಂತ-ಶರಣ-ಸೂಫಿಗಳನ್ನು ಜನತೆ ಇವತ್ತಿಗೂ ಅನುಸರಿಸಿಕೊಂಡು ಬರುತ್ತಿದೆ.

ಕರ್ನಾಟಕದಲ್ಲಿ ಪ್ರತ್ಯೇಕತಾ ಚಳುವಳಿಗಳು

ಡಾ॥ ತಂಬಂಡ ವಿಜಯ್ ಪೂಣಚ್ಚ ಅವರ ಸಂದರ್ಶನ



ಕರ್ನಾಟಕದ ಏಕೀಕರಣ ಆದ 50 ವರ್ಷಗಳ ಆಚರಣೆಯ ಸಂದರ್ಭದಲ್ಲಿ ಕೊಡಗು, ಉತ್ತರ ಕರ್ನಾಟಕಗಳನ್ನು ಪ್ರತ್ಯೇಕಗೊಳಿಸಿಕೊಳ್ಳಬೇಕೆಂಬ ಕೂಗನ್ನು ಕೇಳುತ್ತಿದ್ದೇವೆ. ಈ ವಾದದ ಹುರುಳೇನು? ಇದಕ್ಕೆ ಏನಾದರೂ ಸಮರ್ಥನೆ-ಆಧಾರಗಳಿವೆಯೇ? ಈ ಪ್ರತ್ಯೇಕತಾ ಚಳುವಳಿಗಳ ಹಿಂದಿನ ಕಾರಣ ಮತ್ತು ಪರಿಹಾರಗಳೇನು ಈ ಕುರಿತು ಕೊಡಗಿನ ಬಗ್ಗೆ, ಕೊಡಗಿನ ಪ್ರತ್ಯೇಕತಾವಾದಿ ಚಳುವಳಿಯ ಬಗ್ಗೆ ಹಂಪಿ ವಿಶ್ವವಿದ್ಯಾಲಯದ ಪ್ರಾಧ್ಯಾಪಕರೂ, ಖ್ಯಾತ ಇತಿಹಾಸಕಾರರೂ ಆದ ಡಾ॥ತಂಬಂಡ ವಿಜಯ್ ಪೂಣಚ್ಚ ಅವರ ಸಂದರ್ಶನ.

ಪ್ರಶ್ನೆ : ಕರ್ನಾಟಕ ಏಕೀಕರಣದ ಮೂಲ ಒತ್ತಡಗಳು – ಕಾರಣಗಳೇನು?

ಪೂಣಚ್ಚ : ಏಕೀಕರಣವನ್ನು ಇವತ್ತಿನ ಸಮಸ್ಯೆಯ ದೃಷ್ಟಿಯಲ್ಲಿ ನೋಡುವುದೇ ಬೇರೆ. ಏಕೀಕರಣವನ್ನು ಏಕೀಕರಣದ ರಾಜಕೀಯ ಇತಿಹಾಸದ ಒಳಗಡೆ ನೋಡುವುದೇ ಬೇರೆ. ಇವೆರಡೂ ಬೇರೆ ಬೇರೆ. ಏಕೀಕರಣ ಆಗುವ ಕಾಲಕ್ಕೆ ಏಕೀಕರಣ ಆಗೋವಾಗ ಈ ಸಮಸ್ಯೆ ಬರುತ್ತೆ ಅಂತ ಯಾರೂ ಅಂದುಕೊಂಡಿರೋದಿಲ್ವಲ್ಲ. ೮೦ರ ಮತ್ತು ೯೦ರ ದಶಕದ ಸಮಸ್ಯೆಗಳ ಹಿನ್ನೆಲೆಯಲ್ಲಿ ನಾವು ಇದನ್ನು ನೋಡಬೇಕು ಅಂತ ಅನಿಸುತ್ತೆ.

ಏಕೀಕರಣ ಏಕಾಯ್ತು ಅನ್ನುವುದು ಬಹಳ ದೊಡ್ಡ ಪ್ರಶ್ನೆ. ಬಹಳ ಮುಖ್ಯವಾಗಿ ಕನ್ನಡ ಭಾಷೆ ಮಾತನಾಡುವಂತಹ ಜನರು ಒಟ್ಟಿಗೆ ಬರಬೇಕು ಅನ್ನುವಂಥದ್ದು ಇದರ ಹಿಂದಿನ ಪ್ರೇರಣೆ. ಮೈಸೂರು ಪ್ರಾಂತ್ಯದಲ್ಲಿ ಏಕೀಕರಣಕ್ಕೆ ಅಷ್ಟು ಉತ್ಸಾಹ ಇರಲಿಲ್ಲ. ಉತ್ಸಾಹ ಇದ್ದದ್ದೇ ಧಾರವಾಡ ಕೇಂದ್ರಿತ ಚಳುವಳಿಗಾರರಲ್ಲಿ, ಒಂದಾಗಬೇಕು ಅಂತ. ಕೊನೆಗೂ ಅವರ ಪ್ರಯತ್ನವೇ ಇದಕ್ಕೆ ಬಹಳ ಮುಖ್ಯವಾದ ಕಾರಣವಾಯಿತು. ಏಕೀಕರಣ ಚಳುವಳಿಗೆ ಧಾರವಾಡ ಕೇಂದ್ರವಾಗಿತ್ತು. ಏಕೀಕರಣ ವಿಚಾರದಲ್ಲಿ ರಾಜಕೀಯವಾಗಿ ನಿಲುವು ತೆಗೆದುಕೊಂಡು–ಒಂದು ನಿಚ್ಚಳವಾದ ನಿಲುವು ತೆಗೆದುಕೊಂಡವರು ಕಮ್ಯುನಿಸ್ಟರು ಮಾತ್ರ. ಬಹಳ ಮುಖ್ಯವಾದ ಪ್ರಶ್ನೆಯೆಂದರೆ ಕಾಂಗ್ರೆಸ್‌ನಲ್ಲಿ ಈ ಬಗ್ಗೆ ಗೊಂದಲ ಇತ್ತು. ನನಗೆ ತಿಳಿದ ಹಾಗೆ ಪ್ರಮುಖವಾದ ಸಭೆಗಳಲ್ಲಿ ಈ ಬಗ್ಗೆ ಮಾತನಾಡುವುದಕ್ಕೇ ಕಾಂಗ್ರೆಸ್ ಪಕ್ಷ ಸ್ಥಳೀಯ ಕಾಂಗ್ರೆಸ್ಸಿಗರನ್ನು ಬಿಡ್ತಾ ಇರಲಿಲ್ಲ. ಜನಸಂಘಕ್ಕೆ ಈ ಬಗ್ಗೆ ಯಾವ ಅಜಂಡಾವು ಇರಲಿಲ್ಲ. ಹಿಂದುತ್ವದ ಶಕ್ತಿಗಳು ಅಂತ ಏನು ಕರೀತೇವೆ ಅವರ ಆದ್ಯತೆನೇ ಬೇರೆಯಾಗಿತ್ತು. ಕಾಂಗ್ರೆಸ್‌ನ ಕೆಲವರಿಗೆ ವೈಯಕ್ತಿಕವಾಗಿ ಆಸಕ್ತಿಯಿದ್ದರೂ ಸಾಂಸ್ಥಿಕವಾಗಿ ಅದಕ್ಕೆ ಒಂದು ಅಜೆಂಡಾ ಇರಲಿಲ್ಲ. ಕಮ್ಯೂನಿಸ್ಟ್ ಪಕ್ಷಕ್ಕೆ ಅದು ಇತ್ತು. ಅದು ಎಷ್ಟರಮಟ್ಟಿಗೆ ಪ್ರಭಾವ ಬೀರಿತು ಎಂಬುದು ಬೇರೆ ಪ್ರಶ್ನೆ.


ಪ್ರಶ್ನೆ : ಕರ್ನಾಟಕ ಏಕೀಕರಣದ ೫೦ನೇ ವರ್ಷಾಚರಣೆ ನಡೆಯುತ್ತಿದೆ. ಮತ್ತೊಂದೆಡೆ ರಾಜ್ಯದ ಕೊಡಗು, ಉತ್ತರ ಕರ್ನಾಟಕ ಮತ್ತು ಹೈದರಾಬಾದ್ ಕರ್ನಾಟಕಗಳು ಪ್ರತ್ಯೇಕಗೊಳ್ಳಬೇಕು ಎಂಬ ಪ್ರತ್ಯೇಕತಾ ಚಳುವಳಿಗಳೂ ನಡೆಯುತ್ತಿವೆ. ಈ ಪ್ರತ್ಯೇಕತಾ ಚಳುವಳಿಗಳ ಹಿಂದಿನ ಸಾಮಾಜಿಕ–ಆರ್ಥಿಕ ರಾಜಕೀಯ ಕಾರಣಗಳೇನು?

ಪೂಣಚ್ಚ : ಕರ್ನಾಟಕ ರಾಜ್ಯದಲ್ಲಿ ಪ್ರತ್ಯೇಕ ರಾಜ್ಯ ಚಳುವಳಿ ಅಂತ ಹೇಳೋದಕ್ಕೆ ಬರೋದೆ ಇಲ್ಲ. ಮೇಲ್ನೋಟಕ್ಕೆ ಪ್ರತ್ಯೇಕ ರಾಜ್ಯದ ಕೂಗನ್ನ ಹೈದರಾಬಾದ್ ಕರ್ನಾಟಕದಲ್ಲಿ, ಉತ್ತರ ಕರ್ನಾಟಕದಲ್ಲಿ, ಕೊಡಗಿನಲ್ಲಿ ಕಾಣುತ್ತೇವೆ. ಆದರೆ ಈ ಎಲ್ಲವೂ ಒಂದೇ ತರದ್ದಾಗಿರುವುದಿಲ್ಲ. ಇವನ್ನು ಒಂದೇ ಸೈದ್ಧಾಂತಿಕ ಹಿನ್ನೆಲೆಯಿಂದ ಒಂದೇ ದೃಷ್ಟಿಕೋನದಿಂದ ನೋಡಲಾಗದು. ಇತ್ತೀಚೆಗೆ ನಡೆದ ಚಳುವಳಿಯ ಸಂದರ್ಭದಲ್ಲಿ ಕೊಡಗಿನಲ್ಲಿ ಏನು ನಡೆಯಿತು ಅಂತ ಹೇಳಿ, ಆ ನಂತರ ಇತರೆ ವಿಚಾರ ಹೇಳ್ತೇನೆ. ಏಕೆಂದರೆ ಕೊಡಗಿನ ಚಳುವಳಿಗೆ ಹಳೆಯ ಇತಿಹಾಸವಿದೆ.

೧೯೫೬ರಲ್ಲಿ ಕರ್ನಾಟಕದ ಏಕೀಕರಣ ಆಗುವ ಸಂದರ್ಭದಲ್ಲಿ ಕೊಡಗಿನಲ್ಲಿ ಪ್ರತ್ಯೇಕ ರಾಜ್ಯ ಇರಬೇಕು ಅಂತ ವಾದ ಮಾಡಿದ ಗುಂಪು ಇತ್ತು, ಇದು ಆ ಕಾಲದಲ್ಲಿ ಕೊಡಗಿನ ರಾಜಕೀಯ ಅದರಲ್ಲೂ ಮುಖ್ಯವಾಗಿ ಕಾಂಗ್ರೆಸ್ ನಾಯಕರುಗಳ ನಡುವೆಯಿದ್ದ ರಾಜಕೀಯ ಭಿನ್ನಮತದಿಂದ ಉಂಟಾಗಿತ್ತು.

ಸಿ.ಐ.ಬೆಳ್ಳಿಯಪ್ಪ ಮತ್ತು ಕೊಡಗಿನ ಮುಖ್ಯಮಂತ್ರಿಗಳಾಗಿದ್ದ, ಭಾರತ ಸರ್ಕಾರದ ರೈಲ್ವೇ ಮಂತ್ರಿಗಳಾಗಿದ್ದ, ಬಿಹಾರ, ಮಧ್ಯ ಪ್ರದೇಶಗಳಲ್ಲಿ ರಾಜ್ಯಪಾಲರಾಗಿದ್ದ ಸಿ.ಎಂ.ಪೂಣಚ್ಚ ಇವರುಗಳು ಆಗಿನ ಕಾಲದ ದೊಡ್ಡ ನಾಯಕರು. ಸಿ.ಐ.ಬೆಳ್ಳಿಯಪ್ಪ ಇವರಲ್ಲಿ ಹಿರಿಯರು. ಕೊಡಗಿನಲ್ಲಿ 'ಸಿ'ಸ್ಟೇಟ್

ಇತ್ತು. ಅದಕ್ಕೊಬ್ಬ ಮುಖ್ಯಮಂತ್ರಿ ಯಾರಾಗಬೇಕು ಅಂತ ನಿರ್ಣಯವಾದಾಗ ಕಾಂಗ್ರೆಸ್ ನಾಯಕತ್ವವನ್ನು ಯಾರು ತೆಗೆದುಕೊಳ್ಳಬೇಕೆಂಬ ಪ್ರಶ್ನೆ ಬಂತು. ಕಾಂಗ್ರೆಸ್ ಹೈಕಮಾಂಡ್‌ನಿಂದ ಅದನ್ನು ಸಿ.ಎಂ.ಪೂಣಚ್ಚ ಅವರಿಗೆ ಕೊಡಲಾಯಿತು. ಇದರಿಂದ ಪಿ.ಐ. ಬೆಳ್ಳಿಯಪ್ಪನವರಿಗೆ ಬಹಳ ವೇದನೆಯಾಯಿತು. ಆಗ ಅವರು ಹುಟ್ಟುಹಾಕಿದ್ದೇ ಕಾಂಗ್ರೆಸ್ ಭಿನ್ನಮತೀಯರ ಪಕ್ಷ. ಅದು ಏಕೀಕರಣವನ್ನು ವಿರೋಧಿಸಿತು. ಆ ಪಕ್ಷದ ಹೆಸರು "ಪ್ರತ್ಯೇಕ ಪಕ್ಷ". ಆಗ ಅಲ್ಲಿದ್ದದ್ದು ಮುಖ್ಯವಾಗಿ ಎರಡೇ ಪಕ್ಷ. ಅವುಗಳಲ್ಲಿ ಒಂದು ಕಾಂಗ್ರೆಸ್ ಪಾರ್ಟಿ, ಇನ್ನೊಂದು ಸೆಪರೇಟಿಸ್ಟ್ ಪಾರ್ಟಿ. ನಿರೀಕ್ಷೆಯಂತೆ ಕಾಂಗ್ರೆಸ್ ಪಾರ್ಟಿಗೆ ಬಹುಮತ ಲಭಿಸಿತು. ಸೆಪೆರೇಟಿಸ್ಟ್ ಪಕ್ಷ ಬಹಳ ಕಡಿಮೆ ಮತಗಳನ್ನು ಗಳಿಸಿತು. ಆದರೂ ಕೂರ್ಗ್ ಅಸ್ಸೆಂಬ್ಲಿಯಲ್ಲಿ ೫-೬ ಸದಸ್ಯರನ್ನು ಪ್ರತ್ಯೇಕ ಪಕ್ಷ ಇಟ್ಟುಕೊಂಡಿತ್ತು. ಯಾರು ಪ್ರತ್ಯೇಕ ಪಕ್ಷದ ಹೆಸರಿನಲ್ಲಿ ಚುನಾಯಿತರಾದರೋ ಅವರೆಲ್ಲ ಕೊಡಗು ಕರ್ನಾಟಕದಲ್ಲಿ ವಿಲೀನ ಆಗುವುದು ಎಂಬ ನಿರ್ಣಯದ ಪರವಾಗಿ ಓಟು ಹಾಕಿದರು. ಏಕೆಂದರೆ ಆಗ ಕಾಂಗ್ರೆಸ್ ದೊಡ್ಡ ಫೋರ್ಸ್ (ಶಕ್ತಿ). ಅವರನ್ನೆಲ್ಲ ಏಕೀಕರಣದ ಪರವಾಗಿ Convince ಮಾಡಲಾಯಿತು. ಅವರೆಲ್ಲಾ ಹಳೆ ಕಾಂಗ್ರೆಸ್ಸಿಗರೆ. ಪ್ರತ್ಯೇಕ ಪಕ್ಷದಲ್ಲಿ ಒಬ್ಬರನ್ನು ಬಿಟ್ಟು ಎಲ್ಲರೂ ಏಕೀಕರಣದ ಪರವಾಗಿ ಕಾಂಗ್ರೆಸ್‌ನವರ ಜೊತೆ ಕೈಜೋಡಿಸಿದರು.



ಆಮೇಲೆ ೬೦-೭೦ ದಶಕದಲ್ಲಿ ಅಲ್ಲಲ್ಲಿ ಈ ಪಳೆಯುಳಿಕೆಗಳು ಇದ್ದವು. ಕೊಡಗು ಪ್ರತ್ಯೇಕ ರಾಜ್ಯವಾಗಿ ಉಳಕೋಬೇಕು ಅಂತ ಈ ಪಳೆಯುಳಿಕೆಗಳು ಮತ್ತೆ ಮತ್ತೆ ಉಸಿರುಬಿಡುತ್ತಿದ್ದವು. ಆದರೆ ಅದು ಅಂತ ದೊಡ್ಡಪ್ರಶ್ನೆಯೇನೂ ಆಗಿರಲಿಲ್ಲ. ಅವೆಲ್ಲಾ ಭೂಮಾಲೀಕರ ಪ್ರಶ್ನೆಯಾಗಿತ್ತು. ಇದರ ಹಿಂದೆ ಭೂಮಾಲೀಕರ ಗನ್ ಲೈಸನ್ಸ್‌ನ ಪ್ರಶ್ನೆ ಇತ್ತು. ಇವುಗಳ ಬಗ್ಗೆ ಈಗಾಗಲೆ ಲೇಖನಗಳನ್ನು ಪ್ರಕಟಿಸಿದ್ದೇನೆ. ಕೆಲವು ಸಣ್ಣ ಪುಟ್ಟ ಸಂಘಟನೆಗಳು ಕೊಡಗಿನ ಪ್ರಗತಿಯ ಬಗ್ಗೆ ಮಾತಾಡುತ್ತ ಕೊಡಗು ಹಿಂದುಳಿದಿದೆ. ವಿದ್ಯುತ್ ಸೌಕರ್ಯಗಳು ಸಮರ್ಪಕವಾಗಿಲ್ಲ. ರಸ್ತೆ ರಿಪೇರಿಯಾಗಿಲ್ಲ. ಇದು ರಿಪೇರಿ ಮಾಡದಿದ್ರೆ ನಾವು ಪ್ರತ್ಯೇಕ ಆಗ್ತೇವೆ ಅಂತ ಪ್ರತ್ಯೇಕತೆಯ ಕೂಗು ಎಬ್ಬಿಸಿದವು. ಅದಕ್ಕೆ ಯಾವುದೇ ಸೈದ್ಧಾಂತಿಕ ನೆಲೆಯಿರಲಿಲ್ಲ. ಅದಕ್ಕೆ ಪ್ರಾಮುಖ್ಯತೆ ಬಂದಿದ್ದೇ ಕೊಡಗು ರಾಜ್ಯ ಮುಕ್ತಿ ಮೋರ್ಚಾ (ಕೆ.ಆರ್.ಎಂ.ಎಂ.) ಎನ್ನುವ ಸಂಘಟನೆಯು ಬಂದ ಮೇಲೆ. ಅದನ್ನು ಮೊದಲು 'ಲಿಬರೇಷನ್ ವಾರಿಯರ್ಸ್ ಆಫ್ ಕೂರ್ಗ್' ಎನ್ನುತ್ತಿದ್ದರು. ಈ ಮಿಲಿಟೆಂಟ್ ಸಂಘಟನೆ ಕೊಡಗು ಪ್ರತ್ಯೇಕ ರಾಜ್ಯದ ಬೇಡಿಕೆ ಎತ್ತಿತ್ತು. ಇದಕ್ಕೆ ನೇರವಾಗಿ ಬೆಂಬಲಿಸಿದವರು ಕೆ.ವಿ.ಆರ್. (ಕರ್ನಾಟಕ ವಿಮೋಚನಾರಂಗ) ನವರು. ಇವರು ಪೀಪಲ್ಸ್ ವಾರ್ ಗ್ರೂಪ್ (ಪಿಡಬ್ಲ್ಯೂಜಿ) – ಗುಂಪಿನವರು. ಇವರು ಈ ಪ್ರತ್ಯೇಕತಾ ಚಳುವಳಿಗೆ ಸೈದಾಂತಿಕ ನಿಲುವು ಕೊಟ್ಟರು. ಭಾಷಿಕ ರಾಷ್ಟ್ರೀಯತೆಯ ಹಿನ್ನೆಲೆಯಲ್ಲಿ ಸ್ವಯಂ ನಿರ್ಣಯಾಧಿಕಾರದ ಹಕ್ಕನ್ನು ಕೊಡಗಿನಲ್ಲಿ ಪ್ರತಿಪಾದಿಸಲಾಯಿತು. ಕೆ.ವಿ.ಆರ್. ೮೦ ದಶಕದ ಕೊನೆಯಲ್ಲಿ ಶುರುವಾಯಿತು.

Right to self determination ಅಥವಾ ಸ್ವಯಂ ನಿರ್ಣಯಾಧಿಕಾರದ ಹಕ್ಕು ಅಂತ ಏನ್ ಕರೀತಾರೆ ಅದನ್ನು ಮುಖ್ಯವಾಗಿ ಕೆ.ವಿ.ಆರ್. ಪ್ರತಿಪಾದಿಸಿತು. ಯಾವುದೇ ಭಾಷೆ ಇನ್ನೊಂದು ಭಾಷೆಗೆ ಅಡಿಯಾಳಾಗಿ ಇರಬಾರದು. ಪ್ರತಿ ಭಾಷೆಗೂ ಸ್ವತಂತ್ರ ಇತಿಹಾಸ, ಸಂಸ್ಕೃತಿ ಇರುವುದರಿಂದ ಆಯಾಯ ಭಾಷೆಗಳು ತಮ್ಮ ಸ್ವಂತ Identity (ಗುರುತು)ಗಳನ್ನು ಉಳಿಸಿಕೊಳ್ಳುವುದು ಸರಿ ಎನ್ನುವುದು ಈ ವಾದದ ತಿರುಳು. ಅಂದರೆ ಒಂದು ಭಾಷೆಯ ಭಾಷಿಕರು ಇನ್ನೊಂದು ಭಾಷೆಯ ಭಾಷಿಕರನ್ನು ಅಡಿಯಾಳಾಗಿ ಮಾಡಬಾರದು. ತಮ್ಮ ಹಕ್ಕನ್ನು ತಾವೇ ಉಳಿಸಿಕೊಳ್ಳಬೇಕೆನ್ನುವ "ಹಕ್ಕಿಗೆ" ಸ್ವಯಂ ನಿರ್ಣಾಯಾಧಿಕಾರದ ಹಕ್ಕೆಂದು ಇವರು ಪ್ರತಿಪಾದಿಸಿದರು. ಕನ್ನಡ ಸಾಮ್ರಾಜ್ಯಶಾಹಿಗಳು ಕೊಡಗನ್ನು "ದಮನಿಸುತ್ತಿದ್ದಾರೆ" ಎನ್ನುವ ವಾದದ ಹಿನ್ನಲೆಯಲ್ಲಿ ಕೆ.ವಿ.ಆರ್.ನವರು ಕೊಡಗಿನ ಪ್ರತ್ಯೇಕತಾ ಹೋರಾಟಕ್ಕೆ ಬೆಂಬಲಿಸಿದರು. "ಕನ್ನಡ ರಾಷ್ಟ್ರೀಯತೆಯನ್ನು ಬಂಡವಾಳಗಾರರು, ರಾಜಕೀಯ ದಲ್ಲಾಳಿಗಳು ದೆಹಲಿಯ ಸಾಮ್ರಾಜ್ಯಶಾಹಿಗಳು ನಾಶಪಡಿಸಿದ್ದಾರೆ." ಇದು ಕನ್ನಡದ ಪ್ರಶ್ನೆ. ಈ ಸಾಮ್ರಾಜ್ಯಶಾಹಿಗಳಿಂದ "ಕರ್ನಾಟಕ ವಿಮೋಚನೆ" ಹೊಂದಬೇಕು. ತುಳು, ಕೊಡವ, ಭಾಷೆಗಳು ಚಾರಿತ್ರಿಕವಾಗಿ ಪ್ರತ್ಯೇಕತೆ ಇಟ್ಟುಕೊಂಡಿರುವಂಥವು. ಹಾಗಾಗಿ ಈ ಭಾಷಿಕ ಸಮುದಾಯಗಳು ವಿಮೋಚನೆಯಾಗಬೇಕು. ವಿಮೋಚನೆ ಪಡೆಯಬೇಕಾದುದು ಕರ್ನಾಟಕದ "ಸಾಮ್ರಾಜ್ಯಶಾಹಿಗಳಿಂದ", ಇದು ಎರಡನೆಯ ವಾದ. ಈ ಹಿನ್ನೆಲೆಯಲ್ಲಿ ಪ್ರತ್ಯೇಕ ರಾಜ್ಯವನ್ನೇ ಕೇಳಬೇಕು. ಆಗ ಮಾತ್ರ ಅವರು ತಮ್ಮ ಹಿತಾಸಕ್ತಿ ಇಟ್ಟುಕೊಳ್ಳಲು ಸಾಧ್ಯ ಎಂದು ವಾದಿಸಿ, ದಲಿತರು, ಹಿಂದುಳಿದವರು, ಬುಡಕಟ್ಟು ಜನರು, ಕೆಳವರ್ಗ ಎಲ್ಲರನ್ನೂ ಒಳಗೊಂಡ ಒಂದು ಚಳುವಳಿ ಆಗಬೇಕು ಎಂದು ಲಿವಾಕ್ ಹೊರಟಿತು. ಅವರಿಗೆಲ್ಲ ರಿಸರ್ವೇಶನ್ (ಮೀಸಲಾತಿ) ಕೊಡಬೇಕಂತ ಮಾಡಿದರು. ಅದೇ ಹೊತ್ತಿನಲ್ಲಿ ಅವರು ಕೊಡಗಿನ ಜನರಲ್ಲಿ "ಒಳಗಿನವರು" ಮತ್ತು "ಹೊರಗಿನವರು" ಎನ್ನುವ ಅಜೆಂಡಾವನ್ನು ತಂದರು. ಕೊಡಗಿನವರೆಲ್ಲಾ "ಒಳ್ಳೆಯವರು". ಹೊರಗಿನವರೆಲ್ಲಾ "ಕಳ್ಳಕಾಕರು, ಕಾಳಸಂತೆಕೋರರು, ಮರ ಲೂಟಿಗಾರರು" ಮತ್ತು ಇನ್ನೂ ಸ್ಪಷ್ಟವಾಗಿ "ಹೊರಗಿನವರು" ಯಾರೆಂದರೆ ಮಲೆಯಾಳಿಗಳು,

ಕೇರಳದವರು. ಕೇರಳದವರು ಎಂದರೆ "ವಿಲನ್‌ಗಳೆ". ಮತ್ತೆ ಕೇರಳದವರು ಎಂದರೆ ಮುಸ್ಲಿಮರೂ ಬರುತ್ತಾರೆ. ಆ ಕಾರಣಕ್ಕಾಗಿ ಬಿಜೆಪಿ ಕೂಡ ಇದನ್ನು ಸಪೋರ್ಟ್ ಮಾಡಿತು. ಬಿಜೆಪಿ ಎಂ.ಎಲ್.ಎ. ಒಬ್ಬರು ಆ ಸಂದರ್ಭದಲ್ಲಿ ಅವರ ಪರವಾದಂತಹ ಹೇಳಿಕೆಗಳನ್ನು ಕೊಟ್ಟರು. Armed Struggle (ಸಶಸ್ತ್ರ ಹೋರಾಟ) ಈ ನಿಟ್ಟಿನಲ್ಲಿ ಬಹಳ ಮುಖ್ಯವಾದ ದಾರಿ ತೋರಿಸುತ್ತೆ... ಎಲ್ಲಾ ಸಮಸ್ಯೆಗಳಿಗೂ ಅದೇ ಪರಿಹಾರ ಅಂತ ಪ್ರತ್ಯಾಕತಾವಾದಿಗಳು ವಾದ ಮಾಡಿದರು. ಅದಕ್ಕೆ ಸಂಬಂಧಪಟ್ಟ ಹಾಗೆ ಕ್ಯಾಂಪ್‌ಗಳನ್ನೆಲ್ಲಾ ಮಾಡಿದ್ದಾರೆ ಅನ್ನೋದರ ಬಗ್ಗೆ ಅನೇಕ ಹೇಳಿಕೆಗಳನ್ನು ನಾವು ನೋಡಬಹುದು. ಈ ಹಿನ್ನೆಲೆಯಲ್ಲಿ ಪ್ರತ್ಯೇಕತವಾದಿಗಳ ಅವರ ಸ್ವಯಂ ಸೇವಕರಿಂದ ಹಿಂಸೆ ಬಹಳ ಜಾಸ್ತಿಯಾಯಿತು ಹಾಗೂ "ಹೊರಗಿನವರು" ಅಂತ ಯಾರನ್ನ ಕರೀತಾರೋ ಅವರ ಕೈಯಿಂದ ಬಲಾತ್ಕಾರವಾಗಿ ದುಡ್ಡು ಕಿತ್ತುಕೊಳ್ಳುವ ರೀತಿಯ ಕ್ರಿಮಿನಲ್ ಚಟುವಟಿಕೆಗಳು ಹೆಚ್ಚಾದವು. ಲೀವಾಕ್‌ನ ಕಾರ್ಯಕರ್ತರಿಂದ ಈ ಸಂದರ್ಭದಲ್ಲಿ ಒಬ್ಬರ ಹತ್ಯೆ ಕೂಡಾ ಆಯಿತು. ಆ ಹತ್ಯೆಯ ಆಪಾದನೆ ಲಿವಾಕ್ ಸಂಘಟನೆಯ ಮುಖ್ಯಸ್ಥರ ಮೇಲೆ ಬಂದಿತು. ಅವರು ಅದರಲ್ಲಿ ಭಾಗಿಯಾಗಿದ್ದಾರೆ ಎಂದು ಅವರ ಮೇಲೆ ಮೊಕದ್ದಮೆ ಹಾಕಲಾಯಿತು. ಈ ಹಿನ್ನಲೆಯಲ್ಲಿ ಪ್ರತ್ಯೇಕತಾವಾದಿಗಳು ತಮ್ಮ ತಂತ್ರವನ್ನು ಬದಲು ಮಾಡಿದರು. ಪೊಲೀಸರು ಅವರನ್ನು ಉಗ್ರ ರೀತಿಯಲ್ಲಿ ದಮನ ಮಾಡ್ತಾರೆ ಅಂತ ಭಾವಿಸಿ ಭಾರತದ ಪ್ರಜಾಪ್ರಭುತ್ವದ frame workಗೆ ಹೊಂದಿಕೊಳ್ಳುವಂತ ಒಂದು ಹೊಸ ಸಂಘಟನೆಯನ್ನು – ಅಂದರೆ ಹಳೇ ಸಂಘಟನೆಯನ್ನೇ ಹೊಸ ಹೆಸರಿನಲ್ಲಿ ತಂದರು. ಅದರ ಹೆಸರು ಕೊಡಗು ರಾಜ್ಯ ಮುಕ್ತಿ ಮೋರ್ಚಾ (KRMM) ಅಂತ. ಅದು ಹೆಚ್ಚು ಕಡಿಮೆ ಜಾರ್ಖಂಡ್ ಮುಕ್ತಿ ಮೋರ್ಚಾಗೆ ಹೋಲಿಕೆಯಿರುವುದಾಗಿದೆ. ಅವರು ಮೊದಲು ದಲಿತರನ್ನು ಸೇರಿಸಿದಂತೆ "ನಾವೆಲ್ಲಾ ಒಂದೇ" ಅಂತ ಹೇಳಿದವರು, ನಂತರ ಭಿನ್ನ ವಾದವನ್ನು ತುಳಿದರು. ಕೊಡವ ಭಾಷೆ ಮಾತನಾಡೋವರಿಗೆ ಮಾತ್ರ ಕೊಡಗಿನ "ಹಕ್ಕನ್ನು" ಅಥವಾ ಸ್ವಯಂ ನಿರ್ಣಾಮಾಧಿಕಾರದ ಹಕ್ಕನ್ನು ನಿರ್ಧರಿಸುವ ಹಕ್ಕಿದೆ ಎಂದು "ಪ್ರತ್ಯೇಕವಾದಿಗಳು ಇನ್ನೊಂದು ವಾದ ಮುಂದಿಟ್ಟರು. ಕೊಡವ ಭಾಷೆ ಮಾತನಾಡುವ ದಲಿತರು, ಹಿಂದುಳಿದ ವರ್ಗಗಳು, ಕೊಡವರು, ಕೊಡವ ಭಾಷೆ ಮಾತನಾಡುವ ಜಮೀನ್ದಾರಿ ಜಾತಿಗಳು ಇವರೆಲ್ಲಾ ಈ ಹೊಸ ಪರಿಧಿಗೆ ಬಂದರು. ಬಾಕಿ ಇರುವವರನ್ನು "ವಲಸೆಗಾರರು" ಎಂದು ಬಿಂಬಿಸಲಾಯಿತು. ಇವುಗಳ ನಡುವಿನ ಸಂಘರ್ಷದಲ್ಲಿ "ಕೊಡವ ರಾಷ್ಟ್ರಿಯತೆ"ಯ ಹೋರಾಟ ಬಹುಮುಖ್ಯ ಎಂದು ಬಿಂಬಿಸಲಾಯಿತು. ಇದರ ಅಂತಿಮವಾಗಿ "ಒಳಗಿನವರ" ಮತ್ತು "ಹೊರಗಿನವರ" ನಡುವಿನ ಸಂಘರ್ಷವೆನ್ನಲಾಯಿತು. ಇವರು ಬೇರೆ ಬೇರೆ ಸಂಘಟನೆಗಳಿಂದ ಬೇರೆ ಬೇರೆ ಮಾದರಿಗಳನ್ನು ತಗೊಂಡು ಕೊಡಗಿಗೆ ಅದನ್ನು ಅನ್ವಯಿಸಿದರು. ಅಸ್ಸಾನಲ್ಲಿ ಆ ಬಗೆಯ ಮಾದರಿಗಳ ಸಕ್ಸಸ್ ಆಯ್ತು. ನಿಮಗೆ ನೆನಪಿರಬೇಕು. ಎಕ್ಸ್‌ಪೀರಿಯನ್ಸ್ (ಅನುಭವ) ಯಾರದೋ, ಟ್ಯಾಕ್ಟಿಕ್ಸ್ (ತಂತ್ರ) ಯಾರದೋ, ಒಳಗಿನವರು, ಹೊರಗಿನವರು ಅಂದರೆ ಅಸ್ಸಾಂನ ರಾಜಕೀಯದ ಸಂದರ್ಭದಲ್ಲಿ ಅದಕ್ಕೆ ಬೇರೆ ಅರ್ಥ. ಅಲ್ಲಿ ಬಾಂಗ್ಲಾ ಸಮಸ್ಯೆ ಇತ್ತು. ಇಲ್ಲಿ ಅ ಥರಾ ಸಮಸ್ಯೆ ಇಲ್ಲವಲ್ಲಾ. ಕೇರಳದವರೂ, ಇಂಡಿಯಾದವರು ತಾನೆ. ಪ್ರತ್ಯೇಕತಾವಾದಿಗಳಿಗೆ ಇದನ್ನು ಅರ್ಥ ಮಾಡಿಕೊಳ್ಳಲು ಮೆಚ್ಯೂರಿಟಿ (ಪ್ರಬುದ್ಧತೆ) ಕಡಿಮೆ. ಸುಮ್ನೆ ಯಾವುದನ್ನೋ ಇಮಿಟೇಟ್ ಮಾಡೋದು. ನಾನು ಅದಕ್ಕಾಗಿ ಅನೇಕ ಸಾರಿ ಹೇಳಿದ್ದೀನಿ. ಇದು "ಇಮಿಟೇಟಿಂಗ್ ರಾಷ್ಟ್ರೀಯತೆ" ಎಂದು ಇದು ಕೊಡವ ರಾಷ್ಟ್ರೀಯತೆ ಅಲ್ಲ–ಇಮಿಟೇಟಿಂಗ್ (ಅನುಕರಣೆ) ರಾಷ್ಟ್ರೀಯವಾದ ಎಂದು. ಇವೆಲ್ಲಾ ಎಕ್ಸ್‌ಪೆರಿಮೆಂಟ್ (ಪ್ರಯೋಗ) ಅಷ್ಟೆ. ಅಲ್ಲಿ ಯಾವುದೋ ಒಂದು ಕಡೆ ಇದು ಸಕ್ಸಸ್ ಆಯ್ತು ಅಂದರೆ ಅದನ್ನೇ ಇಲ್ಲಿ ಮಾಡೋದು. "ಕೊಡಗು ನ್ಯಾಷನಲ್ ಕೌನ್ಸಿಲ್" ಅಂತ ಈಗ ಅವರು ತಮ್ಮ ಸಂಘಟನೆಯ ಹೆಸರನ್ನು ಬದಲಾಯಿಸಿದ್ದಾರೆ. ಅಲ್ಲಿ ನಾಗಾಲ್ಯಾಂಡನಲ್ಲಿ "ನಾಗಾ ನ್ಯಾಷನಲ್ ಕೌನ್ಸಿಲ್" ಇದೆ. "ಮಣಿಪುರ ನ್ಯಾಷನಲ್ ಕೌನ್ಸಿಲ್" ಇದೆ. ಅವರು ಯಾವುದೋ ಕಾರಣಕ್ಕೆ ಅವುಗಳನ್ನು ಮಾಡ್ಕೊಂಡಿರ್ತಾರೆ. ಅವರ ಹಿಸ್ಟಾರಿಕಲ್ ಸಿಚುಯೇಶನ್ನೇ (ಚಾರಿತ್ರಿಕ ಸಂದರ್ಭ) ಬೇರೆ, ಕೊಡಗಿನದ್ದೇ ಬೇರೆ. ಕೊಡಗಿನವರು ಅವುಗಳನ್ನು ಮೀಮಿಕ್ರಿ ಮಾಡಿದರೆ ಅದು ಮೀಮಿಕ್ರಿ ರಾಷ್ಟ್ರೀಯತೆಯಲ್ಲದೆ ಬೇರೇನು? ರಾಷ್ಟ್ರೀಯತೆ ಹುಟ್ಟುವುದು ಜನರ ಮನದಲ್ಲಿ. ಅದು ಜನರ ಭಾವನಾತ್ಮಕ ಪ್ರಶ್ನೆ. ಅದು ಇಮಿಟೇಟ್ ಮಾಡೋದರಿಂದ ಬರುತ್ತದಾ..?

ಪ್ರಶ್ನೆ : ಕರ್ನಾಟಕದ ಐಕ್ಯತೆಯ ಪರವಾಗಿರುವವರು ಕೊಡಗಿನಲ್ಲಿ ಮತ್ತು ಇತರ ಭಾಗಗಳಲ್ಲಿ ಇದನ್ನು ಎದುರಿಸಿದ ಬಗೆ ಹೇಗೆ?

ಪೂಣಚ್ಚ : ಕರ್ನಾಟಕದ ಐಕ್ಯತೆ ಬಗ್ಗೆ ಮಾತಾಡಿದವರು ಯಾರೆಂದ್ರೆ ಅಲ್ಲಿನ ಕೊಡಗು ಭಾಷೆ ಮಾತನಾಡುವ ಹಿಂದುಳಿದವರು. ಕನ್ನಡ ಮಾತನಾಡುವ ಹಿಂದುಳಿದವರು. ಇವರೆಲ್ಲಾ ಸೇರ್ಬಿಟ್ಟು ಅಲ್ಲಿ 'ಕೊಡಗು ಪ್ರಜಾ ವೇದಿಕೆ' ಅಂತ ಸಂಘಟನೆ ಮಾಡಿದರು. ಇದಕ್ಕೆ ಸಿಪಿಐ(ಎಂ)ನ ಐಡಿಯಾಲಾಜಿಕಲ್(ಸೈದ್ಧಾಂತಿಕ) ಪರ್‌ಸ್ಪೆಕ್ಟಿವ್ (ದೃಷ್ಟಿಕೋನ) ಈ ವೇದಿಕೆಯ ಮೇಲೆ ಬಹಳಷ್ಟಿತ್ತು. ವೇದಿಕೆಯು ಜಾತ್ಯಾತೀತ ಆಗಿರಬೇಕು. ದಲಿತ ಪರವಾಗಿರಬೇಕು, ಹಿಂದುಳಿದವರ ಪರವಾಗಿರಬೇಕು ಎನ್ನುವ ಹೋರಾಟದ ಕಾಂಬಿನೇಷನ್(ಹೊಂದಾಣಿಕೆ) ಅದು. ಸಿಪಿಐ(ಎಂ) ಬಹಳ ಸ್ಟ್ರಾಂಗಾದ ಶಕ್ತಿಯಲ್ಲವಾದರೂ ಪರ್‌ಸ್ಪೆಕ್ಟಿವ್ ಅನ್ನು ಬೆಳೆಸಿಕೊಳ್ಳವುದರಲ್ಲಿ ಬಹಳ ಮುಖ್ಯವಾದ ಪಾತ್ರ ವಹಿಸಿತು. ಆದರೆ ಅಲ್ಲಿನ ಮುಖ್ಯವಾಹಿನಿ ಪತ್ರಿಕೆಗಳು ಈ ಬಗೆಯ ಎಡ ಪಂಥೀಯ ಹೋರಾಟಗಳನ್ನು ಸಪೋರ್ಟ್ ಮಾಡಲಿಲ್ಲ. 'ಕೊಡಗು ಸಮಾಚಾರ' ಅನ್ನೋ ಸಣ್ಣ ಪತ್ರಿಕೆ ವಿರಾಜಪೇಟೆಯಿಂದ ಬರುತ್ತದೆ. ಅವರು ಮಾತ್ರ ಈ ಥರದ ಕೆಳವರ್ಗ, ಕೆಳಜಾತಿಗಳ ಬಗ್ಗೆ ಬರೀತಿದ್ದರು.

ಆದರೆ ಉಳಿದ ಬಹುತೇಕ ಮೀಡಿಯಾಗಳಲ್ಲಿ ಕೂಡ ಒಂದೇ ಥರದ ಧ್ವನಿ ಇತ್ತು. ಅದು ಪ್ರತ್ಯೇಕತಾವಾದಿಗಳ ಪರವಾಗಿತ್ತು. ಮತ್ತೆ ಎಲ್ಲ ರಾಜಕೀಯ ಪಕ್ಷಗಳ ಒಂದು ವರ್ಗದ ಮುಂದಾಳುಗಳು ಪ್ರತ್ಯೇಕ ರಾಜ್ಯ ಹೋರಾಟವನ್ನು ಸಪೋರ್ಟ್ ಮಾಡಿದರು, ಏಕೆಂದರೆ ದಣಿಗಳ ಹೋರಾಟ ಅಲ್ವಾ ಅದು? ಎಲ್ಲಾ ಪಕ್ಷಗಳ ಮುಖಂಡರು–ಸಿಪಿಐ(ಎಂ) ಅನ್ನು ಹೊರತುಪಡಿಸಿ, ಪ್ರತ್ಯೇಕ ಹೋರಾಟಕ್ಕೆ ಬೆಂಬಲ ನೀಡಿದರು. ಆದರೆ ಅಧಿಕೃತವಾಗಿ ಇವರ್ಯಾರು ಸಪೋರ್ಟ್ ಮಾಡಲಿಲ್ಲ. ಇದನ್ನು ಯಾರೂ ಕಂಡೆಂ (ಖಂಡನೆ) ಕೂಡ ಮಾಡಲಿಲ್ಲ. ಉದಾಹರಣೆಗೆ ಆ ಕಾಲದಲ್ಲಿ ಎಂ.ಸಿ.ನಾಣಯ್ಯ ಅಂತ ಜಿಲ್ಲಾ ಉಸ್ತುವಾರಿ ಸಚಿವರಿದ್ದರು. ಕರ್ನಾಟಕ ರಾಜ್ಯದ ಕಾನೂನು ಮಂತ್ರಿಯಾಗಿದ್ದರು ಅವರು. "ಕೊಡಗು ಕರ್ನಾಟಕದ ಮೂಗುತಿ ಹಾಗೆ" ಅದನ್ನು ಸೆಪರೇಟ್ ಮಾಡೊದಕ್ಕೆ ಆಗುವುದಿಲ್ಲ ಅಂತ ಹೇಳ್ತಾ ಇದ್ದರು. ಆದರೆ "ಕೊಡವ ಸಾಹಿತ್ಯ ಅಕಾಡೆಮಿ" ಫಾರ್ಮೇಷನ್ (ರಚನೆ) ಮಾಡೋವಾಗ ಪ್ರತ್ಯೇಕತಾವಾದಿಗಳನ್ನು, ಹಿಂಬಾಲಕರನ್ನು ಮತ್ತು ತಮ್ಮ ಕುಲಬಾಂಧವರನ್ನು ಮಾತ್ರ ಅವರ ಅಧಿಕಾರಾವಧಿಯುದ್ದಕ್ಕೂ ತುಂಬಿಸಿದರು. ಹೀಗಾಗಿ ಯಾವ ಕರ್ನಾಟಕ ರಾಜ್ಯ ಸರ್ಕಾರ ಯಾವುದೂ ದಲಿತರ ಪರವಾಗಿ ಹಿಂದುಳಿದವರ ಪರವಾಗಿ ನಿಲ್ಲಬೇಕಾಗಿತ್ತೋ ಅದು ನಿಲ್ಲಲಿಲ್ಲ. ಅದು ಮತ್ತೆ ಕೂಡಾ ಜಮೀನ್ದಾರಿ ಶಕ್ತಿಗಳ ಜೊತೆ ಕೈಜೋಡಿಸಿತು. ಆಗಿನ ಜನತಾದಳ ಗೌವರ್ನಮೆಂಟ್ ಬಹಳ ಸೆಕ್ಯೂಲರ್ (ಜಾತ್ಯಾತೀತ) ಅಂತ ಹೇಳಿಕೊಂಡು ಜಾತೀಯತೆಯ ಛಾಪನ್ನ ಹಾಗೇ ಇಟ್ಟಕೊಂಡಿತ್ತು. ಸೆಕ್ಯೂಲರ್ ಆದವರು ಜಾತೀಯತೆ ಇಟ್ಕೋಬಾರ್ದು ಅಂತ ಏನೂ ಹೇಳೋದಿಲ್ಲವಲ್ಲ. ಆ ಟೈಂನಲ್ಲಿ ಅದು ಬಹಳ ನಿಚ್ಚಳವಾಗಿ ತನ್ನ ಜಾತೀಯ ಪ್ರಜ್ಞೆಯನ್ನು ಎಕ್ಸ್‌ಪ್ರೆಸ್ ಮಾಡಿದ್ದನ್ನ ನಾವು ನೋಡ್ತೇವೆ. ಪ್ರಜಾವೇದಿಕೆ ಇದನ್ನೆಲ್ಲ ಕಂಟೆಸ್ಟ್ (ಸವಾಲು) ಮಾಡಿತು.

ಪ್ರಜಾ ವೇದಿಕೆಯು ಆರಂಭದಲ್ಲಿ ೧೦–೧೫ ಜನರ ಸಣ್ಣ ವೇದಿಕೆಯಾಗಿತ್ತು. ವಕೀಲರು, ವಿಶ್ವವಿದ್ಯಾಲಯದ ಪ್ರಾಧ್ಯಾಪಕರು, ಕಾಫಿ ಬೆಳೆಗಾರರು ಇತರರು ಇದರಲ್ಲಿದ್ದರು. ಹೆಚ್ಚುಕಮ್ಮಿ ಮಧ್ಯಮ ವರ್ಗದ ಜನರು, ದಲಿತರೂ ಕೂಡ ಇದ್ದರು. ಆದರೆ ದಲಿತರ ಪಾರ್ಟಿಸಿಪೇಶನ್(ಭಾಗವಹಿಸುವಿಕೆ) ಅದರಲ್ಲಿ ಕಡಿಮೆಯಿತ್ತು. ದಲಿತ ಸಿಂಪಥೈಸರ್ಸ್ ಇದ್ದರು. ಆರಂಭದಲ್ಲಿ ಸಣ್ಣ ರೀತಿಯಲ್ಲಿ ಬೆಳೆದ ಈ ಪ್ರತ್ಯೇಕ ರಾಜ್ಯ ವಿರೋಧಿ ಹೋರಾಟ ದೊಡ್ಡ ಮೂವ್‌ಮೆಂಟ್(ಚಳುವಳಿ) ಆಗಿಬಿಡ್ತು ಕೊನೆಗೆ ಇಡೀ ೦೫–೧೦ ಸಾವಿರ ಜನರನ್ನು ಸೇರಿಸಲಿಕ್ಕೆ ಶುರು ಮಾಡಿತು. ಪ್ರತಿ ರ್‍ಯಾಲಿ–ಕೌಂಟರ್ ರ್‍ಯಾಲಿ ಮಾಡಿತು. ಎರಡೂ ಕಡೆಯೂ ಶಕ್ತಿ ಪ್ರದರ್ಶನ ಆಯಿತು. ಶಕ್ತಿ ಪ್ರದರ್ಶನ ಆಗಲೇಬೇಕಲ್ಲ. ಶಕ್ತಿ ಪ್ರದರ್ಶನದಲ್ಲಿ ಮೂಲಭೂತ ಪ್ರಶ್ನೆಗಳನ್ನು ಕೇಳಲಾಯ್ತು. ಮೂಲ ನಿವಾಸಿಗಳು ಯಾರು? ವಲಸೆಗಾರರು ಯಾರು ? ಕೇರಳದವರು ವಲಸೆಗಾರರು ಎಂದರೆ ಅವರೇನು ಪಾಕಿಸ್ತಾನದಿಂದ ಬಂದವರೆ? ಕೊಡಗಿನಲ್ಲಿ ಕೊಡವ ದೇವರುಗಳೆಲ್ಲಾ ಮಳೆಯಾಳ ಭಾಷೆ ಮಾತನಾಡುತ್ತವೆ. ಹಾಗಾದರೆ ಕೊಡಗಿನ ದೇವರಗಳನ್ನು ಓಡಿಸುತ್ತೀರೇನು?.. ಈ ಪ್ರಶ್ನೆಗಳನ್ನೆಲ್ಲಾ ನಾನೇ ಕೇಳಿದೆ. ಕೇರಳ ಲೂಟಿಗಾರರನ್ನು ಓಡಿಸಬಹುದು. ಕೇರಳ ಮೂಲದ ದೇವರುಗಳನ್ನು ಓಡಿಸಿದರೆ ಮತ್ತೇನು ಮಾಡುವುದು ?

ಕೊಡಗಿಗೆ ೬೦೦ ಕೋಟಿ ರೂಪಾಯಿ ಆದಾಯ ಇದೆ. ಆದರೆ ಕೊಡಗಿಗೆ ೩೨ ಲಕ್ಷ–೪೦ ಲಕ್ಷ ರೂಪಾಯಿಗಳನ್ನು ಕೊಡ್ತಾರೆ ಎಂದೂ, ಇನ್ನು ಉಳಿದೆಲ್ಲ ಹಣವನ್ನು ಕರ್ನಾಟಕದ ಅಧಿಕಾರಿಗಳು, ಕರ್ನಾಟಕದ ರಾಜಕಾರಣಿಗಳು ಕನ್ನಡದ ಅಧಿಕಾರಿಗಳು ತಿಂದುಹಾಕಿಬಿಡಿತ್ತಾರೆ ಅಂತ ಹೇಳಿದರು.

ಇವರಿಗೆ "ಆದಾಯಕ್ಕೂ" ಮತ್ತು "ತೆರಿಗೆಗೆ" ವ್ಯತ್ಯಾಸಗೊತ್ತಾಗಲಿಲ್ಲ. ಆಕ್ಚುಯಲಿ ನೋಡಿದರೆ–೬೦೦ ಕೋಟಿ "ಆದಾಯ". ೬೦೦ ಕೋಟಿ "ತೆರಿಗೆ" ಕೊಡುತ್ತಿದ್ದೇವೆ ಎಂದರೆ ಸುಳ್ಳಾಗುತ್ತೆ. ಆದರೆ ಸರ್ಕಾರ "ಆದಾಯಕ್ಕೂ", "ತೆರಿಗೆಗೂ" ವ್ಯತ್ಯಾಸಗೊತ್ತಾಗದವರು ಎಂತಹ ರಾಜ್ಯ ಕಟ್ಟುತ್ತಾರೆ! ಕೊಡಗು ಒಂದು ಕಾಲದಲ್ಲಿ ಬಹಳ ಪ್ರಾಚೀನವಾದಂತಹ ದೇಶ. ಇಲ್ಲಿ "ಸುವರ್ಣ ಕಾಲ" ಇತ್ತು "ರಾಮರಾಜ್ಯ" ಇತ್ತು. ಈಗ ಹೀನಾಯ ಸ್ಥಿತಿಗೆ ಬಂದಿದೆ ಎಂದು ಇವರೆಲ್ಲ ರೋದಿಸುತ್ತಿದ್ದರು. ೧೮–೧೯ನೇ ಶತಮಾನದಲ್ಲಿ ಕೊಡಗಿನಲ್ಲಿ ಗುಲಾಮರ ಮಾರಾಟ ನಡೆಯುತ್ತಿತ್ತು. ಗಂಡಿಗೆ ಹೆಣ್ಣಿಗೆ ಬೇರೆ ಬೇರೆ ಬೆಲೆ ನಿಗದಿ ಮಾಡಲಾಗಿತ್ತು. ಹಾಗಿದ್ದರೆ, "ಸುವರ್ಣಯುಗ" ಯಾರಿಗೆ? ಎಂಬ ಪ್ರಶ್ನೆಯನ್ನು ಕೇಳಲಾಯಿತು. ಪ್ರಜಾವೇದಿಕೆ ಇದನ್ನೆಲ್ಲ ಪ್ರಶ್ನೆ ಮಾಡಿತು. ಕೊಡಗಿನ ಜನಸಂಖ್ಯೆಯಲ್ಲಿ ಶೇ.೧೨% ಕೊಡವ ಭಾಷೆ ಮಾತನಾಡುವವರು ಇದ್ದಾರೆ. ಇವರಲ್ಲಿ ಯಾರನ್ನು ಮೇಲ್ಜಾತಿ ಅಂತ ಕರೆದುಕೊಳ್ಳೋರು ಇರೋದು ಸುಮಾರು ಶೇ.೧೩% ರಷ್ಟು. ಕೊಡವ ಭಾಷೆ ಮಾತನಾಡುವ ೧೨ ಪರ್ಸೆಂಟಲ್ಲೂ ಇನ್ನೂ ೪ ಪರ್ಸೆಂಟ್ ಕೊಡವ ಮೂಲಭೂತವಾದಿಗಳ ವಿರುದ್ಧನೇ ಇರೋದು. ಈ ೪ ಪರ್ಸೆಂಟ್ ಜನ ಎಂದೂ ಇವರ ಜೊತೆ ಇರ್ಲಿಲ್ಲ. ಹೆಸರಿಗೆ ಕೂಡ ಈ ೪ ಪರ್ಸೆಂಟ್ ಜನ ಕೊಡವ ಭಾಷಿಕರಾದರೂ, ಅವರು ಯಾವುದೇ ಅಧಿಕಾರದಲ್ಲಾಗಲಿ ಇಲ್ಲ, ಅವರಿಗೆ ಅಥವಾ ಸಂವಿಧಾನಬದ್ಧವಾದ ಸವಲತ್ತುಗಳಿಗೆ ಪಾಲೇನಿಲ್ಲ. ಹೀಗಾಗಿ ಇವರೆಲ್ಲಾ ತಮ್ಮ ಹಕ್ಕಿಗಾಗಿ ಹೋರಾಟ ಆರಂಭಿಸಿದರು.

ಕೊಡಗಿನ ಜನರಲ್ಲಿ ಶೇ.೨೨ ದಲಿತರು ಇದ್ದಾರೆ. ಶೇ.೧೨–೧೩ರಷ್ಟು ಜನರು ಪರಿಶಿಷ್ಟ ಪಂಗಡ (ಎಸ್.ಟಿ)ದವರು ಇದ್ದಾರೆ. ಆ ಕಾಲದಲ್ಲಿ ಎಂ.ಸಿ.ನಾಣಯ್ಯ ಅವರು ವಿಧಾನ ಪರಿಷತ್ ಸದಸ್ಯರು ಹಾಗೂ ಮಂತ್ರಿಗಳಾಗಿದ್ದರು. ಸಂಸದರಾಗಿ ಪ್ರೇಮ ಕಾರ್ಯಪ್ಪ, ಸೋಮವಾರಪೇಟೆ ಕ್ಷೇತ್ರದಿಂದ ಬಿಜೆಪಿಯ ರಂಜನ್ ಅಪ್ಪಚ್ಚು, ಮಡಿಕೇರಿ ಕ್ಷೇತ್ರದಿಂದ ಎಂ.ಎಂ.ನಾಣಯ್ಯ, ಇವರುಗಳು ಶಾಸಕರಾಗಿದ್ದರು. ಇವರೆಲ್ಲರೂ ಪ್ರತ್ಯೇಕ

"ಕೊಡವರೆ!" ಕೊಡಗಿನ ಬಲಿಷ್ಟ ಕೊಡವ ಜಾತಿಗೆ ಸೇರಿದವರು. ಪರಿಶಿಷ್ಟ ಪಂಗಡ(ಎಸ್.ಟಿ) ಮೀಸಲು ಕ್ಷೇತ್ರದಲ್ಲಿ ಮಾತ್ರ ಬೇರೆ ಜಾತಿಗಳಿಂದ ಬಂದ ಪ್ರತಿನಿಧಿಗಳು ಇದ್ದರು. ಇಷ್ಟೆಲ್ಲ ಇದ್ದೂ ಕೂಡ ಪ್ರತ್ಯೇಕತಾವಾದಿಗಳು ಹೇಳಿದರು : "ಕೊಡವರನ್ನು" ಕರ್ನಾಟಕ ತೀರಾ ಶೋಷಣೆ ಮಾಡುತ್ತಾ ಇದೆ; ಕೊಡವರಿಗೆ ಪ್ರಾತಿನಿಧ್ಯ ಇಲ್ಲ; ಕೊಡವರನ್ನು ಕರ್ನಾಟಕ ರಾಜ್ಯ ತುಳಿದು ಬಿಟ್ಟಿದೆ, ಇತ್ಯಾದಿ ಎನ್ನುವವರಿಗೆ ಕೊಡಗಿನ ಜನಸಂಖ್ಯೆಯ ಹದಿಮೂರು ಪರ್ಸೆಂಟ್ ಜನರಿಗೆ ಇಷ್ಟೊಂದು ಪ್ರಾತಿನಿಧ್ಯ ಸಾಲಲಿಲ್ಲವೇ ಎಂದೇಕೆ ಅನ್ನಿಸಲಿಲ್ಲ? ಆದರೆ ಜನಾಭಿಪ್ರಾಯ ನೋಡಿ. ಈ ಮೂಲಭೂತವಾದಿ ಜಾತಿವಾದಿಗಳನ್ನು ನೋಡಿ ಜನ ಒಂದು ತೀರ್ಮಾನ ತೆಗೆದುಕೊಂಡರು. ೨೦೦೪ರ ಚುನಾವಣೆಯಲಿ ಇವರಿಂದಾಗಿಯೇ ಒಬ್ಬನೇ ಕೊಡವ ಅಭ್ಯರ್ಥಿ ಗೆಲ್ಲಲಿಲ್ಲ. ಜನ ಸಹ ಒಬ್ಸರ್ವ್ ಮಾಡ್ತಾ ಇರ್‍ತಾರಲ್ಲ ? ಜನ ಇವರನ್ನ ಕೊಡವರು ಅಂತ ಯಾರನ್ನೂ ಗೆಲ್ಲಿಸಿರಲಿಲ್ಲ. ಎಲ್ಲರಿಗೂ ಪಾರ್ಟಿ ಇದೆ. ಅಜೆಂಡಾಗಳಿದ್ದಾವೆ. ಇದೆಲ್ಲಾ ಇದ್ದೂ ಏನು ಮಾಡ್ಲಿಲ್ಲ ಅಂತಂದ್ರೆ ಅದರ ಮೀನಿಂಗ್ ಎಂಥದ್ದು? ಮತ್ತೆ 'ಕೂರ್ಗ್ ನ್ಯಾಷನಲ್ ಕೌನ್ಸಿಲ್'ನ ವಿಷಯಕ್ಕೆ ಬರ್‍ತೇನೆ. ಕೂರ್ಗ್ ನ್ಯಾಷನಲ್ ಕೌನ್ಸಿಲ್‌ನಲ್ಲಿ ಪ್ರತ್ಯೇಕವಾದಿಗಳು ಜಾತೀಯತೆಯನ್ನು ತಮ್ಮ ಅಜಂಡಾವಾಗಿರಿಸಿದರು. ನೆಲ್ಸನ್ ಮಂಡೇಲಾ, ಫಿಡೆಲ್ ಕ್ಯಾಸ್ಟ್ರೊ ಹೆಸರು ಹೇಳಿಕೊಂಡಿದ್ದವರು 'ಜಾತಿ' ಆಧಾರಿತ ರಾಜಕೀಯ ಶುರುಮಾಡಿದರು. "ನಮಗೆ ಕೊಡವರ ಉದ್ಧಾರ ಬಹಳ ಮುಖ್ಯ" ಎನ್ನುವ ಇವರು ಪಾರ್ಲಿಮೆಂಟರಿ ಡೆಮಾಕ್ರಸಿಯಲ್ಲಿರುವ ಎಲೆಕ್ಷನ್ ಬಹಿಷ್ಕರಿಸುತ್ತಾರಂತೆ. ಇದರಲ್ಲಿ ಬಹಳ ಇಂಪಾರ್ಟೆಂಟ್ ಅಂದ್ರೆ, ಹಿರಿಯ ರಾಜಕಾರಣಿಗಳಾದ ಎ.ಕೆ.ಸುಬ್ಬಯ್ಯ ಅಂತಹವರು ಕೊಡವರಾದವರೂ ಕೂಡ, ಎಂ.ಎಲ್.ಸಿ ಅರುಣ ಮಾಚಯ್ಯರವರು ಕೊಡವರಾದರೂ ಇಂಥ ಸಣ್ಣತನದ ರಾಜಕೀಯವನ್ನು ವಿರೋಧಿಸಿದರು. ಅವರೆಲ್ಲಾ ಕೊಡವರೆ. ಕೊಡವರಲ್ಲಿ ಎಲ್ಲಾ ಕೊಡವರೂ ಏನು ಜಾತೀಯತೆಗೆ ಸಪೋರ್ಟ್ ಮಾಡಲಿಲ್ಲ. ಜಾತಿವಾದಿಗಳಿಗೆ ಸಪೋರ್ಟ್ ಮಾಡಲೇ ಇಲ್ಲ. ಎಲ್ಲಾ ಕೊಡವರನ್ನು ಇದರಲ್ಲಿ ಬಯ್ಯುವ ಪ್ರಶ್ನೆಯಿಲ್ಲ. ಕೊಡವರಲ್ಲಿ ಕೆಲವು ಫನಟಿಕ್‌ಗಳಿರ್‍ತಾರಲ್ಲ. ಅವರನ್ನು ಎದುರಿಸುವ ಶಕ್ತಿ ಅನೇಕ ಜನರಿಗಿರುವುದಿಲ್ಲ. ಅವರ ಪರವಾಗಿಲ್ಲದಿದದ್ದರೂ ಕೂಡ ಬಹುತೇಕರ "ಮೌನ"ವು ತಪ್ಪು ತೀರ್ಮಾನಗಳಿಗೆ ಕಾರಣವಾಗಿ ಬಿಡುತ್ತವೆ. ಇಂಥದಕ್ಕೆ ಎ.ಕೆ.ಸುಬ್ಬಯ್ಯನವರಂಥವರು ಅಪವಾದಗಳಾಗಿರುತ್ತಾರೆ.

ಈಗ ಕೂರ್ಗ್ ನ್ಯಾಷನಲ್ ಕೌನ್ಸಿಲ್‌ನವರು ಏನಂತಾರೆ? ನಮಗೆ ಅಟಾನಮಿ (ಸ್ವಾಯತ್ತತೆ)ಕೊಡಿ. ಕೊಡವರು ಕೊಡವರನ್ನೇ ಚುನಾವಣೆ ಮಾಡ್ಕೋತಾರೆ. ಅವರನ್ನು ಬೇರೆಯವರು ಚುನಾವಣೆ ಮಾಡುವ ಅಗತ್ಯವಿಲ್ಲ. ಅವರಿಗೆ ಪಾರ್ಲಿಮೆಂಟಿನಲ್ಲಿ ಅವಕಾಶ ಕೊಡಿ ಅನ್ನುತ್ತಾರೆ. ಈಗ ಪ್ರತ್ಯೇಕ ರಾಜ್ಯ ಹೋರಾಟ ಬಿಟ್ಟಿದ್ದೇವೆ ಎನ್ನುತ್ತಾ, ನಮಗೆ ಬೇಕಾಗಿರುವುದು "ಕೊಡವ ಸ್ವಾಯತ್ತತೆ" ಎನ್ನುತ್ತಾರೆ. ಈಗ ಅವರಿಗೆ ಕೊಡವ ಸ್ವಾಯತ್ತತೆ ಬೇಕು. ಯಾರು ನೆಲ್ಸನ್ ಮಂಡೇಲಾ, ಫಿಡೆಲ್ ಕ್ಯಾಸ್ಟ್ರೊ, ದಲಿತರ ಪರವಾಗಿ ಮಾತಾಡಿ, ರಾಷ್ಟ್ರೀಯತೆಗಳ ಬಗ್ಗೆ ಎಲ್ಲ ಮಾತಾಡಿ ಮಣ್ಣು ಮುಕ್ಕಿದರೊ ಅವರೆಲ್ಲ ಈಗ ಅಪ್ಪಟ ಜಾತಿ ಫ್ರೇಮ್‌ವರ್ಕ್‌ನ ಮೇಲೆ ಕೆಲಸ ಮಾಡುತ್ತಿರೋದೆ ವಿಪರ್ಯಾಸದ ಸಂಗತಿ.

ಪ್ರಶ್ನೆ : ಈ ಸ್ಟೇಜ್‌ನಲ್ಲಿ ಸಿಪಿಐ(ಎಂಎಲ್) ಗ್ರೂಪ್ ನವರ ನಿಲುವೇನು?

ಪೂಣಚ್ಚ: ಎಂ.ಎಲ್.ಗ್ರೂಪ್ ನವರು ಕನ್ಸಿಸ್ಟೆಂಟ್ ಆಗಿ ಪ್ರತ್ಯೇಕ ವಾದಿಗಳ ಹೋರಾಟದ ಎಲ್ಲಾ ಹಂತಗಳಲ್ಲಿ ಸಪೋರ್ಟ್ ಮಾಡಿದರು. ನಾವೆಲ್ಲಾ ಈ ಬಗ್ಗೆ ಪ್ರಶ್ನೆಗಳನ್ನು ಕೇಳಿದಾಗ ನೋಡಿ! ನಾವು ಅವರಿಗೆ ಸೈದ್ಧಾಂತಿಕವಾಗಿ ಸಪೋರ್ಟ್ ಮಾಡ್ತಾ ಇದ್ದೇವೆ. ಆದರೆ ಪ್ರತ್ಯೇಕವಾದಿಗಳು ಮಾಡಿದ್ದನ್ನೆಲ್ಲಾ ನಾವು ಒಪ್ಪಿಕೊಳ್ಳೋದಕ್ಕೆ ತಯಾರಿಲ್ಲ ಅಂತ ಅವರು ಹೇಳಿದರು.

ಒಂದು ಕಡೆಯಿಂದ ನೀವು ದಲಿತರ ಪರ ಅಂತ ರಾಯಚೂರಿನಲ್ಲಿ ಮಾತಾಡ್ತೀರಿ. ಆದರೆ ಕೊಡಗಿನಲ್ಲಿ ಹೀಗೇಕೆ ಅಂತ ಕೇಳಿದಾಗ, ಅವರು ಏನ್ ಹೇಳ್ತಾರಂದ್ರೆ ಈ ಹೊತ್ತಿನಲ್ಲಿ ಎಲ್ಲ ದಲಿತರು, ಕೆಳವರ್ಗದವರು, ಕೆಳಜಾತಿಗಳೆಲ್ಲಾ ಇವರನ್ನು ಸಪೋರ್ಟ್ ಮಾಡಬೇಕು. ಒಂದು ಸಾರಿ ಪ್ರತ್ಯೇಕ ವಾದಿಗಳನ್ನು ಸಪೋರ್ಟ್ ಮಾಡಿ ದೊಡ್ಡ ಎನಿಮಿ(ಶತ್ರು)ಯನ್ನು ಮುಗಿಸಿದ ಮೇಲೆ, ಪ್ರತ್ಯೇಕ ವಾದಿಗಳ ವಿರುದ್ಧ ಹೋರಾಟ ಮಾಡಬಹುದು ಅಂತ. ಇದರಲ್ಲಿ ರೀಸನಿಂಗ್ ಇಲ್ಲ. ಅದ್ಹೆಂಗ್ ಹೋರಾಟ ಮಾಡ್ತೀರಿ ಎಂಬ ಪ್ರಶ್ನೆಗಳಿಗೆಲ್ಲಾ ಅವರಿಂದಲೂ ಉತ್ತರ ಇಲ್ಲ.

ಅದೀಗ ಏನಾಯ್ತು. ಸಾಕೇತ್ ಪ್ರಕರಣ ಆದ ಮೇಲೆ ಅವರು ಆ್ಯಕ್ಟೀವ್ ಆಗಿ ಇಲ್ಲ. ಬೇರೆ ಹೆಸರಿನಲ್ಲಿ ಕೆಲಸ ಮಾಡ್ತಾ ಇದೆ. ಈಗ ಅದರ ಫೇಸ್ (ಮುಖ)ಗಳೇ ಬೇರೆ. ಪಿಡಬ್ಲ್ಯುಜಿ ಈಗ ಎಂ.ಸಿ.ಸಿ. ಜೊತೆ ಮರ್ಜ್(ವಿಲೀನ) ಆಗಿದೆ. ಮಾವೋಯಿಸ್ಟ್ ಅಂತ ಕರ್‍ಕೋತಾರೆ. ಹೊಸ ಫಾರ್ಮೇಷನ್ ಅದು. ಅದು ಫಾರ್ಮೇಷನ್ ಆಗೋ ಹೊತ್ತಿಗೆ ಪ್ರತ್ಯೇಕವಾದಿಗಳ ಆರ್ಭಟ ಬಿದ್ದು ಹೋಯಿತು. ಐಡಿಯಾಲಾಜಿಕಲ್ ಆಗಿ ಸಾಕೇತರಾಜನ್ ಅವರು ತಮ್ಮ 'ಮೇಕಿಂಗ್ ಹಿಸ್ಟರಿ' ಪಾರ್ಟ್೧. ಪಾರ್ಟ್ ೨ ಗಳಲ್ಲಿ ಕೊಡಗು ಪ್ರತ್ಯೇಕ ರಾಜ್ಯದ ಅಗತ್ಯ ಬಹಳ ಇದೆ. ಅದನ್ನು ಪೀಪಲ್ಸ್ ಮೂವ್‌ಮೆಂಟ್ ಅಂತ ಕರೆದರು. ಅವರು ಹೇಳೋ "ಪೀಪಲ್ಸ್ ಮೂವ್‌ಮೆಂಟ್" ಆಗಲೆ ಇಲ್ವಲ್ಲ. ಪೀಪಲ್ಸ್ ಮೂವ್ ಮೆಂಟ್ ಆಗಿದ್ದಿದ್ರೆ ನಾವೂ ಸಂತೋಷ ಪಡ್ತಾ ಇದ್ದಿ. ಜನರ ಚಳವಳಿ, ಜನರಿಗೆ ಬೇಕಾದರೆ ಯಾರು ಬೇಡಾ ಅಂತಾರೆ?

ನಾಲ್ಕು ಜನ ಕಾಫಿ ಪ್ಲಾಂಟರ್‌ಗಳು ತಮಗೇನೋಬೇಕು ಅಂತ ಹೇಳೀದಾಕ್ಷಣ ಅವರ ಕಡೆಯಿಂದನೇ ಶೋಷಣೆಗೆ ಒಳಗಾಗಿರೋವಂತ ಜನ ಅವರನ್ನು ಸಪೋರ್ಟ್ ಮಾಡೋದು ಹೇಗೆ? ನಾಲ್ಕು ಜನ

ವಿದ್ಯಾವಂತರಾದ ಕಾಫೀ ಪ್ಲಾಂಟರ್‌ಗಳು ಮಾತನಾಡಿದ ತಕ್ಷಣ ನಾಲ್ಕು ಕಾಸು ಕೊಟ್ಟ ತಕ್ಷಣ, ಏನೂ ಆಗಲ್ಲ. ಅಷ್ಟು ಅನಕ್ಷರತೆ ಏನೂ ಇಲ್ಲ ಕೊಡಗಿನಲ್ಲಿ ಜನರಿಗೆ ರಾಜಕೀಯ ಪ್ರಜ್ಞೆಯಿದೆ. ಇದಕ್ಕೆ ಇನ್ನೂ ಒಂದು ಕಾರಣವಿದೆ. ಅದೇನೆಂದರೆ ಈಗಾಗಲೇ ಚರ್ಚಿಸಿದ ಶೋಷಣೆಗಳ ವಿರುದ್ಧ ಸಂಘಟಿತವಾದ ಪ್ರತಿಭಟನೆ ನಡೆಯಿತು. ಸಂಘಟಿತವಾದ ಪ್ರತಿ ಹೋರಾಟ ನಡೆಯಿತು. ಆ ಪ್ರತಿ ಹೋರಾಟದಲ್ಲಿ ದಲಿತರು, ಹಿಂದುಳಿದ ವರ್ಗಗಳು ಮತ್ತು ಸಿಪಿಐ(ಎಂ) ಬಹಳ ಮುಖ್ಯವಾಗಿ ಒಂದು ಒಕ್ಕೂಟವನ್ನು ರಚಿಸಿದವು. ಈ ಮೈತ್ರಿಕೂಟ ಬಹಳ ಸ್ಟ್ರಾಂಗ್ ಇತ್ತು. ಪವರ್‌ಫುಲ್ ಇತ್ತು. ಒಂದು ಕಾಲದಲ್ಲಿ ಎಲ್ಲಾ ಪಾರ್ಟಿಯಲ್ಲಿ ಇರುವ ಒಂದು ಸೆಕ್ಷನ್‌ನ ಜನ ಹೇಗೆ ಕೆ.ಆರ್.ಎಮ್.ಎಮ್.ಗೆ ಸಪೋರ್ಟ್ ಮಾಡಿದರೋ ಹಾಗೆ ಎಲ್ಲಾ ಪಾರ್ಟಿಯಲ್ಲಿರುವ ಇನ್ನೊಂದು ವರ್ಗದ ಜನ ಈ ಚಳುವಳಿಗೆ ಸಪೋರ್ಟ್ ಮಾಡಿದರು. ಇದು ಒಂದು ಪಾರ್ಟಿಯ ಪ್ರಶ್ನೆ ಅಲ್ಲ. ಎಲ್ಲಾ ಪಾರ್ಟಿಗಳ ಒಳಗೆ ಲಾಭಿ ನಡೆದವು. ಆದರೆ ಸಿಪಿಐ(ಎಂ) ಆ ಥರ ಅಲ್ಲ. ಸಿಪಿಐ(ಎಂ) ಪೂರ್ತಿಯಾಗಿ ತನ್ನನ್ನು ಇದರಲ್ಲಿ ತೊಡಗಿಸಿಕೊಂಡಿತ್ತು. ಈ ವೇದಿಕೆಗೆ "ಕೊಡಗು ಪ್ರಜಾ ವೇದಿಕೆ" ಎಂದು ಹೆಸರು. ಕೆ.ಆರ್.ಎಂ.ಎಂ. ರೀತಿ ಇದೂ ಹಲವಾರು ಪ್ರತಿಭಟನಾ ರ್‍ಯಾಲಿಗಳನ್ನು ಏರ್ಪಡಿಸಿತ್ತು. ಪರಿಣಾಮವಾಗಿ, ಸಿ.ಪಿ.ಐ(ಎಂ.ಎಲ್) ಪಿ.ಡಬ್ಲ್ಯೂ.ಜಿ ಬೆಂಬಲಿಸಿದ ಪ್ರತ್ಯೇಕತಾ ಹೋರಾಟ ನೇಪಥ್ಯಕ್ಕೆ ಸರಿಯಿತು. ಆ ವೇಳೆಗಾಗಲೆ ಎಂ.ಎಲ್. ಪಾರ್ಟಿಗೂ ಕೊಡಗಿನ ಫ್ಯೂಡಲ್ ಹಿನ್ನೆಲೆಯ ಪ್ರತ್ಯೇಕತಾ ಹೋರಾಟದ ದಾರಿ ತಪ್ಪಿರುವುದು ಗೋಚರಿಸಿತು ಅಂತ ಕಾಣುತ್ತೆ ಅಥವಾ ಪ್ರತಿ ಹೋರಾಟ ಸಬಲ ಆಗಿದ್ದ ಕಾರಣವೂ ಇದಕ್ಕೆ ಕಾರಣವಾಗಿರಬಹುದು. ಈ ಪ್ರತಿ ಹೋರಾಟಕ್ಕೆ ಬೆಂಗಳೂರಿನ ಕನ್ನಡ ಸಂಘಟನೆಗಳು ಕೈ ಜೋಡಿಸಿದ್ದವು. ಪ್ರೊ.ಚಿದಾನಂದ ಮೂರ್ತಿಯವರು ಪ್ರಜಾವೇದಿಕೆಗೆ ತನ್ನ ಬೆಂಬಲ ವ್ಯಕ್ತಪಡಿಸಿದರು. ಆ ಹೊತ್ತಲ್ಲಿ ಬಿ.ಜೆ.ಪಿಯ ಪಾತ್ರವನ್ನು ಅವರು ಟೀಕಿಸಿ, ಸಿಪಿಎಂ ಅನ್ನು ಶ್ಲಾಘಿಸಿರುವುದನ್ನು ನಾವೆಲ್ಲ ಗಮನಿಸಬೇಕು. ಒಂದು ಕಾಲದಲ್ಲಿ ಕೊಡವ ಜಾತಿ ಸಂಘಟನೆಗಳು (ಕೊಡವ ಸಮಾಜ) ಪ್ರತ್ಯೇಕ ಚಳವಳಿಗೆ ಸಪೋರ್ಟ್ ಮಾಡಿತ್ತು. ಯಾವಾಗ ಬೇರೆಯವರೆಲ್ಲ ವಿರೋಧ ಮಾಡಿದರೋ ಆವಾಗ ಕೊಡವ ಸಮಾಜದವರು ಸಾರ್ವಜನಿಕವಾಗಿ ಅದಕ್ಕೆ ಬೆಂಬಲ ಕೊಡೋದನ್ನ ನಿಲ್ಲಿಸಿದ್ರು. ಅವರೆಲ್ಲ ಬೆಂಗಳೂರನಲ್ಲಿ ಬಾಂಬೆ, ದೆಹಲಿ, ಅಮೇರಿಕಾದಲ್ಲೆಲ್ಲ ಕೋಟಿಗಟ್ಟಲೆ ಹಣದ ಎಸ್ಟಾಬ್ಲಿಷ್‌ಮೆಂಟ್ ಇರೋರು, ಬಹಳ ಪವರ್‌ಫುಲ್ ಜನ. ಎಲ್ಲಿ ಬೇಕಾದ್ರು ಲಾಬಿ ಮಾಡುವ ಶಕ್ತಿ ಇರೋರು. ಕೊನೆಕೊನೆಗೆ ಅವರೂ ಕೂಡ ಸಪೋರ್ಟ್ ವಿತ್ ಡ್ರಾ (ಬೆಂಬಲ ವಾಪಸ್) ಮಾಡಿಕೊಂಡರು. ಇದೂ ಕೂಡ ಜನರ ಪ್ರತಿಭಟನೆಗೆ ಸಂದ ಗೌರವ. ಕೊನೆಗೆ ಬಿಜೆಪಿ ಕೂಡ ಬೆಂಬಲ ನಿಲ್ಲಿಸಿತು. ನಿವೃತ್ತ ಮಿಲಿಟರಿ ಅಧಿಕಾರಿಗಳು ಪ್ರತ್ಯೇಕವಾದಿಗಳಿಗೆ ಸಾರ್ವಜನಿಕವಾಗಿ ಸಪೋರ್ಟ್ ಮಾಡಿದ್ದರು. ಈಗಿವರು ಸಾರ್ವಜನಿಕ ಬೆಂಬಲ ನಿಲ್ಲಿಸಿರುವುದು ಕಂಡುಬಂದಿದೆ.

ಬಿಜೆಪಿಯ ಶಾಸಕರಾಗಿದ್ದ ಅಪ್ಪಚು ರಂಜನ್ ಪ್ರತ್ಯೇಕ ಚಳುವಳಿಗೆ ಬೆಂಬಲ ನೀಡಿದ್ದರು. ಆಗ ವಾಜಪೇಯಿ ಸರ್ಕಾರ ಇತ್ತು. ಇದೇ ಕೆ.ಆರ್.ಎಂ.ಎಂ. ಅದೇ ಕಾಲಕ್ಕೆ ವಾಜಪೇಯಿಯವರ ಬಗ್ಗೆ ಅಪಾರವಾದ ಗೌರವವನ್ನು ಸೂಚಿಸಿ ಲೇಖನಗಳನ್ನು ಬರೆದಿದ್ದು ಇವತ್ತು ಚರಿತ್ರೆ. ಒಂದು ಕಡೆ ಫಿಡೆಲ್ ಕ್ಯಾಸ್ಟ್ರೊ ಬಗ್ಗೆ ಮಾತಾಡೋದು. ಇನ್ನೊಂದೆಡೆ ವಾಜಪೇಯಿಗೆ ಬೆಂಬಲಿಸುವುದು, ಹೀಗೆಲ್ಲಾ ನಡೆದಿತ್ತು ಸೈದ್ಧಾಂತಿಕ ಎಡಬಿಡಂಗಿತ್ವಕ್ಕೆ ಇದಕ್ಕಿಂತ ಯಾವ ಉದಾಹರಣೆ ಬೇಕು?

ಪ್ರಶ್ನೆ : ಉತ್ತರ ಕರ್ನಾಟಕ-ಹೈದರಾಬಾದ್ ಕರ್ನಾಟಕದ ಪ್ರತ್ಯೇಕತಾ ಚಳುವಳಿಯ ಬಗ್ಗೆ ನಿಮ್ಮ ಅಭಿಪ್ರಾಯ?

ಪೂಣಚ್ಚ : ಉತ್ತರ ಕರ್ನಾಟಕ-ಹೈದರಾಬಾದ್ ಕರ್ನಾಟಕದ ಪ್ರತ್ಯೇಕತಾ ಚಳುವಳಿಗಳು ಮೂಲಭೂತವಾಗಿ ವಕೀಲರ ಚಳುವಳಿ. ಹೈಕೋರ್ಟ್ ಪೀಠ ಸ್ಥಾಪನೆ ಆಗಬೇಕು ಅನ್ನೋ ಪ್ರಶ್ನೆ ಅವರಿಗೆ ಬಹಳ ಮುಖ್ಯ. ಅದು ಸ್ಥಾಪನೆಯಾಗದಿದ್ದರೆ ನಾವು ಪ್ರತ್ಯೇಕ ರಾಜ್ಯಕೇಳ್ತೇವೆ. ಅದು ಬಿಟ್ಟರೆ, ಅವರದ್ದು ಬೇರೆ ಅಂದರೆ ಉತ್ತರ ಕರ್ನಾಟಕದ ಬಡಬಗ್ಗರ, ದಲಿತರ, ದೇವದಾಸಿಗಳ, ಕೆಳವರ್ಗಗಳ, ಕೆಳ ಜಾತಿಗಳ ಬಗೆಗೆ ಯಾವ ಸೊಲ್ಲು ಇಲ್ಲ. ಯಾವ ಐಡಿಯಾಲಜಿನೂ ಇಲ್ಲ. ಇವರಿಗೆ ಹೈಕೋರ್ಟ್ ಪೀಠ ಆಗಿಬಿಟ್ರೆ ಪ್ರತ್ಯೇಕ ರಾಜ್ಯ ಹೋರಾಟ ಇಲ್ಲ. ಹೈಕೋರ್ಟ್ ಪೀಠ ಎಲ್ಲಿ ಬೇಕೆಂಬ ಬಗ್ಗೆಯೂ ಒಮ್ಮತವಿಲ್ಲ. ಬೀದರ್‌ನಲ್ಲಿ ಆಗಬೇಕಾ. ಬಳ್ಳಾರಿಯಲ್ಲಿ ಆಗಬೇಕಾ, ಗುಲ್ಬರ್ಗಾದಲ್ಲಿ ಆಗಬೇಕಾ. ವಿಜಾಪುರದಲ್ಲಿ ಆಗಬೇಕಾ ಎನ್ನುವ ಗಲಾಟೆ ಬೇರೆ. ಕೊನೆಗೆ ಈ ಗಲಾಟೆಗಳು ಮುಗಿದು ಬೇರೆ ಸಮಸ್ಯೆ ಬಂದರೆ ಮತ್ತೆ ಪ್ರತ್ಯೇಕ ರಾಜ್ಯ....ಹೋರಾಟ.... ಉಪವಾಸ ಎಲ್ಲವೂ Stop! ಬೇರೆ ಟೈಂನಲ್ಲಿ ಇವರೆಲ್ಲಾ ಯಾಕೆ ಸುಮ್ಮನಿರ್ತಾರೆ? ಕನ್ಸಿಸ್ಟೆಂಟಾಗಿ ಮಾತನಾಡಬಹುದಲ್ಲ? ಎಂಬ ವಾದಗಳೆಲ್ಲಾ ಇವೆ.

ಪ್ರಶ್ನೆ : ಉತ್ತರ ಕರ್ನಾಟಕ ಹಿಂದುಳಿದಿರಲು ಕಾರಣಗಳೇನು ?

ಪೂಣಚ್ಚ : ಕೆಲವು ಮಾಜಿ ಎಂ.ಪಿ. ಗಳಿದ್ದಾರೆ, ಕೆಲಸ ಇಲ್ಲ ಇಗ ಅವರಿಗೆ. ಅವರೆಲ್ಲ ಅಧಿಕಾರದಲ್ಲಿ ಇದ್ದಾಗ ಯಾಕೆ ಪ್ರತ್ಯೇಕ ಉತ್ತರ ಕರ್ನಾಟಕ ಬೇಕಿರಲಿಲ್ಲ? ಉದಾಹರಣೆಗೆ ಪಾಟೀಲ ಪುಟ್ಟಪ್ಪನವರಿಗೆ ಸಂಬಂಧಪಟ್ಟದ್ದು. ಅವರು ಅಧಿಕಾರದಲ್ಲಿದ್ದರಲ್ಲ. ಏಕೆ ಆಗ ಅವರು "ಅಭಿವೃದ್ಧಿಗಾಗಿ ಶ್ರಮಿಸಲಿಲ್ಲ"?. ಅವರು ರಾಜ್ಯಸಭಾ ಸದಸ್ಯರಾಗಿದ್ದರು. ಕನ್ನಡ ಅಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷರಾಗಿದ್ದರು. ಆಗ ರಾಜಿನಾಮೆ ಕೊಟ್ಟುಬಿಟ್ಟು ಇದನ್ನು ಮಾತನಾಡಬಹುದಿತ್ತಲ್ಲ? ಅವರು ಏಕೀಕರಣಕ್ಕೆ ಹೋರಾಡಿದವರು. ಅಧಿಕಾರ ಕಳೆದುಕೊಂಡ ಮೇಲೆ ಯಾಕೆ ಮಾತನಾಡಬೇಕು ? ಅಧಿಕಾರದಲ್ಲಿದ್ದಾಗ ಏಕೆ ಇವು ಮುಖ್ಯವಾಗಿಲ್ಲ? ಕೊಡಗಿನ ಸಂದರ್ಭದಲ್ಲಿ ಕ್ಯಾಬಿನೆಟ್ ಸಚಿವರೊಬ್ಬರು ಇತ್ತೀಚಿಗೆ ಅಧಿಕಾರ ಕಳೆದುಕೊಂಡ ಮೇಲೆ ಕೊಡಗು ಪ್ರತ್ಯೇಕ ಆಗಬೇಕು ಎಂದು ಹಪಹಪಿಸುತ್ತ ಕೊಡಗು ಬಹಳ ಹಿಂದುಳಿದಿದೆ ಎಂದಿರುವುದೂ ಉಂಟು. ದಶಕಗಳವರೆಗೆ ಎಂ.ಎಲ್.ಎ., ಎಂ.ಎಲ್.ಸಿ,

ಮಂತ್ರಿ, ಜಿಲ್ಲಾ ಮಂತ್ರಿಗಳಾಗಿದ್ದ ಇವರೆಲ್ಲಾ ಹಾಗೆ ಮಾತಾಡುವುದರಿಂದ ಅವರ ವ್ಯಕ್ತಿತ್ವ ಬಯಲಾಯಿತು ಎನ್ನುವುದೇ ಸಮಾಧಾನಕರವಾದ ವಿಷಯ. ಇದೇ ಪಾಟೀಲ ಪುಟ್ಟಪ್ಪನವರ ಜೊತೆ ಉತ್ತರ ಕರ್ನಾಟಕಕ್ಕೆ ಪ್ರತ್ಯೇಕ ರಾಜ್ಯ ಬಂದರೆ ಸಮಸ್ಯೆ ಪರಿಹಾರವಾಗುತ್ತಾ ಅಂತ ಕೇಳಿದ್ದೆ ಒಂದು ಸಾರಿ. "ಈಗ ಕರ್ನಾಟಕ ಸರ್ಕಾರದವರು ಮಾಡಿದ ಸಾಲಗಳಿದ್ದಾವಲ್ಲ, ಸಾಲಗಳು ಕೂಡ ಡಿವೈಡ್ (ಭಾಗ) ಆಗ್ತಾವಲ್ಲ" ಅಂತ ಅವರೆಂದದ್ದನ್ನು ನಾನು ಈಗಲೂ ಮರೆತಿಲ್ಲ. ಆ ಸಾಲದಲ್ಲೆಲ್ಲ ಈಗ ಉದ್ದಾರ ಆಗಿರುವುದು ಬೆಂಗಳೂರು ಮತ್ತು ದಕ್ಷಿಣ ಕರ್ನಾಟಕ. ಅವರಿಗೆ ಲಾಭ ಬಂತು. ದುಡ್ಡು ಕಟ್ಟಕ್ಕೆ ಉತ್ತರ ಕರ್ನಾಟಕದವರೇ ಆಗಬೇಕೆ ಎನ್ನುವ ಮಾತನ್ನು ಪಾಟೀಲ ಪುಟ್ಟಪ್ಪನವರು ಆಡಿದ್ದುಂಟು. ಇದೊಂದು ಬಗೆಯ ambiguity.

ಈ ಕಡೆ ಭೀಮಣ್ಣ ಖಂಡ್ರೆ ಅವರು ಮಾತಾಡ್ತಾರೆ. ಅಲ್ಲೂ ಕೂಡ ಅಷ್ಟೇನೆ. ಅವರಿಗೆ ಕೆಳ ಸೆಕ್ಷನ್ ನಿಂದ ಸಪೋರ್ಟ್ ಇಲ್ಲವೇ ಇಲ್ಲ. ಕುರುಬರು, ಹೊಲೆಯರು ಎಲ್ಲಾ ಸೇರಿ ಎರಡು ವರ್ಷದ ಹಿಂದೆ ಪ್ರತ್ಯೇಕ ರಾಜ್ಯದ ಹೋರಾಟದ ವಿರುದ್ಧ ಮಾತನಾಡಿದ್ದರು. ಅಲ್ಲಿ ಜನರಲ್ ಕ್ಯಾಟಗರಿಯಲ್ಲಿ ಅಲ್ಲಿನ dominant (ಬಲಾಢ್ಯ) ಆದ ಮೇಲ್ಜಾತಿಯವರು ಮಾತ್ರ ರೆಪ್ರೆಸೆಂಟೇಶನ್ ಆಗ್ತಾರೆ. ಅವರ ಪಾಪ್ಯುಲೇಶನ್ (ಜನಸಂಖ್ಯೆ) ಇರುವುದು ೧೮ ಪರ್ಸೆಂಟ್. ಆದರೆ ಅವರಿಗೆ ಪೊಲಿಟಿಕಲ್ ರೆಪ್ರೆಸೆಂಟೇಶನ್– ರಾಜಕೀಯ ಪ್ರಾತಿನಿಧ್ಯ ಇರುವುದು ೭೫ ಪರ್ಸೆಂಟ್. ಅವರೇ ಇವತ್ತು "ಪ್ರತ್ಯೇಕ ರಾಜ್ಯದ" ಬಗ್ಗೆ ಮಾತಾಡ್ತಿದ್ದಾರೆ. ಪ್ರತ್ಯೇಕ ರಾಜ್ಯದ ಬಗ್ಗೆ ಯಾರು ಮಾತನಾಡಬೇಕೆಂದರೆ– ಅಲ್ಲಿ ಕೂಡ ಪ್ರಪೋರ್ಶನೇಟಾಗಿ ಹಿಂದುಳಿದವರು ಮತ್ತು ಮಾದಿಗರು ಇವರ ಸಂಖ್ಯೆ ಶೇ. ೭೫ ಪರ್ಸೆಂಟ್ ಆಗ್ತದೆ. ಅವರ ಕೈಗೆ ಅಧಿಕಾರ ಬರುವುದಾದರೆ ಅವರು ಉತ್ತರ ಕರ್ನಾಟಕದ ಪ್ರತ್ಯೇಕತೆ ಬಗ್ಗೆ ಮಾತಾಡಬಹುದು. ಈ ಭಾಗಕ್ಕೆ ನೀಡಿದ ದುಡ್ಡೆಷ್ಟು? ಎನ್ನುವುದು ಅಲ್ಲಿನ ದಲಿತರ ಮತ್ತು ಹಿಂದುಳಿದ ವರ್ಗಗಳ ನಿಲುವಾಗಿದೆ.. ರಾಜಕೀಯವಾಗಿ ಸಿಪಿಐ(ಎಂ) ಮತ್ತು ಸಿಪಿಐ ಪಕ್ಷಗಳು ಈ ಕುರಿತು ಸ್ಪಷ್ಟವಾಗಿ ಹೇಳಿವೆ. ಸ್ಪಷ್ಟವಾದ ನಿಲುವು ತೆಗೆದುಕೊಂಡಿವೆ. ಉಳಿದ ಪಾರ್ಟಿಗಳಿಗೆ ಈ ಬಗೆಯ ಯಾವ ನಿಲುವುಗಳಿಲ್ಲದಿರುವುದು ಕಂಡು ಬರುತ್ತದೆ.

ಪ್ರಶ್ನೆ : ಪ್ರಾದೇಶಿಕ ಅಸಮಾನತೆಗೆ ಕಾರಣವೇನು?

ಪೂಣಚ್ಚ : ಪ್ರಾದೇಶಿಕ ಅಸಮಾನತೆಗೆ ಕಾರಣ ಮುಖ್ಯವಾಗಿ ಜನರ ಇಚ್ಛಾಶಕ್ತಿ (Will). ಉತ್ತರ ಕರ್ನಾಟಕಕ್ಕಾಗಿ ಏನು ಕೊಡುಗೆ ನೀಡಿದೆ ಸರ್ಕಾರ ಎನ್ನುವುದು ಮುಖ್ಯ ಇಲ್ಲಿ. ಹೈದ್ರಾಬಾದ್ ಕರ್ನಾಟಕಕ್ಕೆ ಎಷ್ಟು ಹಣ ಹೋಗಿದೆ? ಸಾವಿರ ಸಾವಿರ ಕೋಟಿ ರೂಪಾಯಿ ಹೋಗಿದೆ. ಅದೇನಾಯ್ತು? ಅದರ ಬಗ್ಗೆ ಒಂದು ಶ್ವೇತಪತ್ರ ಹೊರಡಿಸಲಿ ನೋಡೋಣ. ಸ್ವಾತಂತ್ರ್ಯ ಬಂದಲಿಂದ ಇವತ್ತಿನವರೆಗೆ ಅಲ್ಲಿ ಕಾಲುವೆಗಳನ್ನು ಕಟ್ಟಸ್ತಾನೇ ಇದ್ದಾರೆ. ಯಾರು ಅಲ್ಲಿ ಆಣೆಕಟ್ಟು, ಕಾಲುವೆಗಳನ್ನು ಕಟ್ಟಿಸ್ತಾರೆ? ಇವೆಲ್ಲದರ ಕಾಂಟ್ರಾಕ್ಟ್ ಯಾರಿಗೆ ಹೋಗುತ್ತೆ? ನೂರು, ಇನ್ನೂರು ರೂಪಾಯಿ ಅಲ್ಲ, ಸಾವಿರ ಸಾವಿರ ಕೋಟಿ ರೂಪಾಯಿಗಳ ಪ್ರಶ್ನೆ. ಮತ್ತೆ ನಾಲೆಯಿಂದ ಇದರಲ್ಲಿ ಯಾರಿಗೆ ಲಾಭ ಆಗ್ತದೆ? ಬಡಬಗ್ಗರ್‍ಯಾರು ನೀರನ್ನು ತಗೊಳ್ಳಿಲ್ಲ. ಕೆಲವೇ ಕೆಲವು ಜಮೀನ್ದಾರಿ ಜನರು ಆ ನಾಲೆಗಳ ಪಕ್ಕದಲ್ಲಿರತಕ್ಕಂತ ಭೂಮಿಯನ್ನು ಇಟ್ಕೊಂಡಿದ್ದಾರೆ. ಹಾಗಾದರೆ ಅಧಿಕಾರದಲ್ಲಿ ಇಷ್ಟು ವರ್ಷ ಇದ್ದವರು ಸ್ವಯಂ ವಿಮರ್ಶೆ ಮಾಡ್ಕೋಬೇಕಲ್ವ? ಏನು ಡಿಸ್ಪಾರಿಟಿ (ತಾರತಮ್ಯ) ಅಂತ ಮಾತಾಡ್ತಾರಲ್ಲ, ಯಾಕೆ ಅಷ್ಟೊಂದು ಕರಪ್ಷನ್ (ಭ್ರಷ್ಟಾಚಾರ) ಆಗಿದ್ರೂ ಕೂಡ ವಿರೋಧ ಪಕ್ಷದವರಾಗಲೀ, ಆಡಳಿತ ಪಕ್ಷದವರಾಗಲೀ ಮಾತಾಡೋದಿಲ್ಲ? ಮಾಯ ಆಗಿಬಿಡ್ತದೇನು ದುಡ್ಡು? ಇವತ್ತು ಬಹಳ ಸಂಖ್ಯೆಯಲ್ಲಿ ಉತ್ತರ ಕರ್ನಾಟಕದ ಮಂತ್ರಿಗಳಾಗಿದ್ದ ವಿರೋಧ ಪಕ್ಷದಶಾಸಕರಿದ್ದಾರೆ. ಈಗ ಇದರ ಬಗ್ಗೆ ಶ್ವೇತ ಪತ್ರ ಏಕೆ ಹೊರಡಿಸಬಾರದು?

ಪ್ರಶ್ನೆ : ಹಿಂದುಳಿದಿರುವಿಕೆಗೆ ಏನಾದರೂ ಐತಿಹಾಸಿಕ ಕಾರಣಗಳಿರಬಹುದೇ?

ಪೂಣಚ್ಚ : ಇದಕ್ಕೆ ಮುಖ್ಯಕಾರಣ, ನಮ್ಮಲ್ಲಿ ರಾಜಕೀಯ ಇಚ್ಛಾಶಕ್ತಿಯ ಕೊರತೆ ಎದ್ದುಕಾಣುತ್ತಿದೆ. ಮುಖ್ಯವಾಗಿ ಮೇಲ್ಜಾತಿಗಳು ಮೇಲ್ವರ್ಗಗಳವರ ಹಿತಾಸಕ್ತಿಗಳೇನಿವೆ ಬಹುತೇಕವಾಗಿ ಎಲ್ಲ ಪಕ್ಷಗಳಲ್ಲಿ ಅದು ಎದ್ದು ಕಾಣುತ್ತವೆ ಮತ್ತು ಅವುಗಳೇ ರಾಜ್ಯ ವ್ಯವಸ್ಥೆಯಲ್ಲಿ ಬಹಳ ಮುಖ್ಯವಾದ ಸ್ಥಾನಗಳನ್ನು ಪಡೆದುಕೊಂಡಿವೆ. ಆಡಳಿತಶಾಹಿಗಳು ಕೂಡ ಅದೇ ವರ್ಗದವರಾಗಿರುವುದರಿಂದಾಗಿ ಅವರೆಲ್ಲಾ ವ್ಯವಸ್ಥೆಯ ಲಾಭಗಳನ್ನು ಪಡೆದುಕೊಂಡಿದ್ದಾರೆ. ಹೀಗಾಗಿ ತಮ್ಮ ಕಾರ್ಯವನ್ನು ನ್ಯಾಯಸಮ್ಮತ ಮಾಡಲಿಕ್ಕೆ ಸುಲಭವಾಗುತ್ತೆ. ಇಲ್ಲದಿದ್ದರೆ ಅಷ್ಟು ಅಪಾರವಾದ ಬಡತನವಿರುವುದಕ್ಕೆ ಸಾಧ್ಯವೇ ಇಲ್ಲ. ಜನರ ದುಡ್ಡೆಲ್ಲ ಕೆಲವೇ ಶ್ರೀಮಂತರ ಕೈಯಲ್ಲಿರುವುದರಿಂದ ಈ ರೀತಿ ಆಗಿದೆ.

ಈಗ ಕೊಡಗಿನಂತಹ ಜಾಗದಲ್ಲಿ ಐದಾರು ಲಕ್ಷ ಜನ ಇದ್ದಾರೆ. ೧೦ ರಿಂದ ೧೨ ನ್ಯೂಸ್‌ಪೇಪರ್‌ಗಳಿದ್ದಾವೆ. ಬಳ್ಳಾರಿಯಲ್ಲಿ ಎಷ್ಟಿದ್ದಾವೆ ? ಬರೀ ಹೊಸಪೇಟೆಯೊಂದರಲ್ಲೇ ೪–೫ ಲಕ್ಷ ಜನ ಇದ್ದಾರೆ. ಎರಡು ಪೇಪರ್ ಇದೆ ಯಾಕೆ? ಅದನ್ನೂ ಯಾರೂ ಓದೋದೇ ಇಲ್ಲ. ಯಾಕೆ? ಜನರಲ್ಲಿ ಒಂದು ಪಬ್ಲಿಕ್ ಒಪೀನಿಯನ್–ಸಾರ್ವಜನಿಕ ಅಭಿಪ್ರಾಯ ಅನ್ನೋದೆ ಇಲ್ಲ. ಪಬ್ಲಿಕ್ ಒಪಿನೀಯನ್ ಯಾಕಿಲ್ಲ ಅಂದ್ರೆ ಅಂತಹ ಸಂದರ್ಭಗಳನ್ನು ಸರ್ಕಾರ ಅಥವಾ ಅದರ ಏಜನ್ಸಿಗಳು ನಿರ್ಮಿಸಿಲ್ಲ. ಯಾವುದೇ ಜನರಾಗಲೀ ಅವರಷ್ಟಕ್ಕೆ ಅವರು ಮಾತಾಡೋದಿಲ್ಲ. ಅದಕ್ಕೆ ಅಂತಹ ಒಂದು ಸಂದರ್ಭ ನಿರ್ಮಾಣ ಮಾಡಬೇಕು. ಬರೀ ಗಣಿಗಾರಿಕೆಯಿಂದ ಬರುವ ದುಡ್ಡಿನಿಂದಲೇ ಬಳ್ಳಾರಿಯನ್ನು ಇಂಗ್ಲೆಂಡ್ ಮಾಡಬಹುದು. ಅಲ್ಲಿ ಈಗಲೂ – ಬಡತನ ರೇಖೆಯ ಕೆಳಗೆ ಜನ ಇನ್ನೂ ಯಾಕೆ ಇದ್ದಾರೆ. ಕಾಯಿಲೆ ಕಸಾಲೆಗಳು ಯಾಕೆ ಅಲ್ಲಿ ಜಾಸ್ತಿ? ಇದು ಆಡಳಿತ ಪಕ್ಷ ಮಾತ್ರವಲ್ಲ. ವಿರೋಧ ಪಕ್ಷಗಳಿಗೂ

ಸಂಬಂಧಿಸಿದ್ದು. ಬಹಳಷ್ಟು ಪ್ರತಿನಿಧಿಗಳು ಸ್ವಲ್ಪ ದಿನ ಇಲ್ಲಿರುತ್ತಾರೆ. ಬಹಳ ದಿನ ಬೆಂಗಳೂರಿನಲ್ಲಿರುತ್ತಾರೆ.

ಪ್ರಶ್ನೆ : ಸಣ್ಣ ರಾಜ್ಯಗಳಿಂದ ಅಭಿವೃದ್ಧಿ ಸಾಧ್ಯವೇ?

ಮೂಣಚ್ಚ : ಸಣ್ಣ ರಾಜ್ಯ ಮಾಡಬೇಕು ಅಂತ ಬಿಜೆಪಿ ಹೇಳಿದ್ದು ಮುಖ್ಯವಾಗಿ ಲಾಲು ಪ್ರಸಾದ್ ಯಾದವ್ ಇದ್ದಂತ ಬಿಹಾರ, ಮುಲಾಯಂ ಸಿಂಗ್ ಇದ್ದಂತ ಉತ್ತರ ಪ್ರದೇಶ, ಎಡರಂಗದ ಪಶ್ಚಿಮ ಬಂಗಾಳವನ್ನು ಒಡೆಯಬೇಕು. ತಮ್ಮ ಪಾರ್ಟಿ ಎಲ್ಲೆಲ್ಲಿ ಪ್ರಬಲವಾಗಿಲ್ಲ. ಅಲ್ಲೆಲ್ಲ ಓಟ್ ಬ್ಯಾಂಕ್‌ಗಳನ್ನು ಒಡೆಯುವುದು ಅವರ ಅಜೆಂಡಾವಾಗಿತ್ತು. ಅದನ್ನು ಬಿಟ್ಟರೆ ಬೇರೇನಿಲ್ಲ ಮತ್ತೆ ಅದರ ಎಕ್ಸ್‌ಪೆಂಡೀಚರ್ (ಖರ್ಚು) ಯಾರು ಕೊಡ್ತಾರೆ? ಮುಖ್ಯಮಂತ್ರಿ ಮುಖ್ಯಮಂತ್ರಿನೆ, ಜಿಲ್ಲಾಧಿಕಾರಿ ಹುದ್ದೆ ಕೊಡಗು ಜಿಲ್ಲೆಗಾದರೂ ಬೇಕು; ಬೆಂಗಳೂರಿಗಾದರೂ ಬೇಕು. ಕೊಡಗು ಜಿಲ್ಲೆ ರಾಜ್ಯವಾದರೆ ಚೀಫ್ ಮಿನಿಸ್ಟರ್ ಪದವಿಬೇಕು. ಅವರಿಗೆ ಹೆಲಿಕಾಪ್ಟರ್ ಕೊಡಬೇಕು, ಎಲ್ಲಿಂದ ಕೊಡುತ್ತೀರಿ? ಸಣ್ಣ ರಾಜ್ಯ ಅಂತ ಸಂಬಳ ಏನೂ ಕಡಿಮೆ ಕೊಡೋಕಾಗಲ್ಲ. ಸಂವಿಧಾನದಲ್ಲಿ ಏನಿದೆಯೋ ಅದನ್ನೆಲ್ಲ ಕೊಡಬೇಕು. ಹಂಗೆ ನೋಡೋಕೆ ಹೋದ್ರೆ ಕೊನೆಕೊನೆಗೆ ಕೊಡಗಿನ ಬಿಜೆಪಿ ನಾಯಕರೂ ಪ್ರತ್ಯೇಕ ರಾಜ್ಯ ಬೇಡಿಕೆಯನ್ನು ತಿರಸ್ಕಾರ ಮಾಡಿದರು. ಜನರಿಗೆ ಸಿ.ಎನ್.ಸಿ ಒಂದು ಜಾತಿ ಸಂಘಟನೆ ಅಂತ ಗೊತ್ತಾಗಿದೆ. ಈಗ ಅವರೇನಾದರೂ ಮಾಡಿಕೊಂಡು ಹೋಗಲಿ ಯಾರು ಅವರ ತಂಟೆಗೆ ಹೋಗುವುದಿಲ್ಲ. ಆದರೆ ಅವರು "ಪ್ರತ್ಯೇಕತೆ" ಅದು, ಇದು, ಅಂದ್ರೆ ಮಾತ್ರ ಮತ್ತೊಮ್ಮೆ ಶಾಂತಿ ಕದಡುವುದರಲ್ಲಿ ಸಂದೇಹವಿಲ್ಲ.

ಪ್ರಶ್ನೆ : ಈ ಪ್ರತ್ಯೇಕತೆಯ ಸಮಸ್ಯೆಗೆ ಪರಿಹಾರ ಏನು?

ಮೂಣಚ್ಚ : ಕೊಡಗಿನಲ್ಲಿ ಈಗದು ಸಮಸ್ಯೆಯಲ್ಲ. ಮುಂದೆ ಏನಾಗುತ್ತೆ ಯಾರೂ ಪ್ರಿಡಿಕ್ಟ್ (ಊಹೆ) ಮಾಡಕ್ಕಾಗಲ್ಲ. ಸದ್ಯಕ್ಕಂತೂ ಇದು ಬಹಳ ಇಂಪಾರ್ಟೆಂಟ್ ಆದ ಸಮಸ್ಯೆಯಲ್ಲ. ಅದು ಅದರ ಗ್ಲಾಮರ್ ಕಳೆದುಕೊಂಡಿದೆ. ಇಷ್ಟಕ್ಕೂ ಒಂದು ಮಾತು ಹೇಳಬೇಕು. ಯಾರು ಪ್ರತ್ಯೇಕ ಆಗಬೇಕು? ಏಕೆ ಆಗಬೇಕು ಅನ್ನೋದು ಬಹುಜನರ ನಿರೀಕ್ಷೆಯಾಗಿರಬೇಕು. ಅದು ಜನರ ಅಪೇಕ್ಷೆಯಾಗಿರಬೇಕು. ಇಡೀ ಸಮುದಾಯದ ಫೀಲಿಂಗ್ (ಭಾವನೆ) ಇರಬೇಕು. ಹಾಗೆಯೇ ಅದಕ್ಕೊಂದು ತಾತ್ವಿಕ ನೆಲೆಯಿರಬೇಕು. ಕೊಡಗಿಗೆ ಪ್ರತ್ಯೇಕ ರಾಜ್ಯದ ಸ್ಥಾನ ಕೇಳಿದ ಪ್ರತ್ಯೇಕತಾವಾದಿಗಳು ಇತ್ತೀಚೆಗೆ ತೀರಾ ಮಾನವ ವಿರೋಧಿಯಾದ, ಕ್ರೂರವಾದ ಮತ್ತು ಅಸಂವಿಧಾನಿಕವಾದ ವಾದಗಳನ್ನು ಮುಂದಿಡುತ್ತಿದ್ದಾರೆ. ಕೊಡವ ಜನಾಂಗದ ಮನುಷ್ಯರು ವಿಶೇಷ ಜೈವಿಕ ಲಕ್ಷಣಗಳನ್ನು ಅಂದರೆ ಎತ್ತರದ ನಿಲುವು, ಬಿಳಿ ಬಣ್ಣ, ವಿಶಾಲ ಹಣೆ. ಚೂಪು ಮೂಗು ಇತ್ಯಾದಿಗಳನ್ನು ಹೊಂದಿದ್ದಾರೆ. ಇದು ಕೊಡವ ಜನಾಂಗದ ಲಕ್ಷಣ ಎಂದು ಹೇಳುತ್ತಾ ತಾವು ಇತರರಿಗಿಂತ ಭಿನ್ನ, ಶ್ರೇಷ್ಠ ಎಂದು ಸಾಧಿಸುವ ಯತ್ನ ನಡೆದಿವೆ. ಇದಕ್ಕಾಗಿ ಕೊಡವರ ಡಿ.ಎನ್.ಎ.ಪರೀಕ್ಷೆ ನಡೆಸುವ ಯತ್ನ ನಡೆದಿದೆ. ಮದ್ರಾಸ್ ವಿಶ್ವವಿದ್ಯಾಲಯದ ಅಂಥ್ರಾಕಾಲಜಿ ವಿಭಾಗದ ಪ್ರೊ. ಅಬ್ದುಲ್ ಕಲಂ ಎನ್ನುವ ಮಹಾನುಭಾವ ಈ ಅಮೋಘ ಡಿಎನ್‌ಎ ಪರೀಕ್ಷೆಯ ನೇತೃತ್ವ ವಹಿಸಿದ್ದಾರೆ. ಹಾಗಿದ್ದರೆ ಕೊಡಗಿನಲ್ಲಿ ಕಪ್ಪಕ್ಕೆ, ಕುಳ್ಳಕ್ಕೆ ಇರುವವರು, ಚಪ್ಪಟೆ ಮೂಗಿನವರು ಅಥವಾ ಮೇಲಿನ ಗುಣಲಕ್ಷಣವಿರದ ಕೊಡವರು ಎಲ್ಲಿಗೆ ಹೋಗಬೇಕು? ಅವರೇನು ಕೊಡವರಲ್ಲವೇ? ಹಿಟ್ಲರನ ಜನಾಂಗೀಯ ವಾದವನ್ನು, ಜನಾಂಗೀಯ ದ್ವೇಷವನ್ನು ಹರಡುವ ಈ ಮಂದಿಯನ್ನು ಸರಕಾರದ ಪ್ರತಿನಿಧಿಗಳು ಪೆಚ್ಚಾಗಿ ನೋಡುತ್ತಿರುವುದೇ ಖೇದವಾದ ಸಂಗತಿಯಾಗಿದೆ.

ಪ್ರತ್ಯೇಕತಾವಾದಿಗಳ ಕೈಯಲ್ಲಿ ಅಧಿಕಾರ ಕೊಟ್ಟರೆ ನ್ಯಾಯ ಕೇಳಕ್ಕ ಜನರು ಡೆಲ್ಲಿಗೆ ಹೋಗಬೇಕು. ಬೆಂಗಳೂರಿಗಲ್ಲ. ಇಲ್ಲಿ (ಕೊಡಗು) ಹೈಕೋರ್ಟ್ ಇರತ್ತೆ. ಇಲ್ಲೇ ವಿಧಾನಸೌಧ ಇರ್‍ತದೆ. ಈಗಿರುವ ಪಟ್ಟಭದ್ರರೇ ಎಲ್ಲಾ ಕಡೆ ನುಗ್ಗಿಕೊಳ್ತಾರೆ. ಇವೆಲ್ಲಾ ಆಗಬಾರದು ಜನರ ಹಿತದೃಷ್ಟಿಯಲ್ಲಿ.

ಕೊಡಗು "ಪ್ರತ್ಯೇಕ ರಾಷ್ಟ್ರ" ಆಗೋದ್ರಲ್ಲಿ ಅನುಕೂಲಗಳಿವೆ ಅಂತ ಅನೇಕ ಸಾರಿ ಕೆ.ಆರ್.ಎಂ.ಎಂ.ವಾದ ಮಾಡಿತ್ತು ಮತ್ತು ತನ್ನ ರಾಜ್ಯದ ಬಜೆಟ್‌ಗಳನ್ನು ತಯಾರಿಸಿತ್ತು. ಕೊಡಗಿನ ಲಾಂಛನ ಎಲ್ಲ ಹಾಕಿ ಪ್ರತ್ಯೇಕ ಬಜೆಟ್ ಕೊಟ್ಟುಬಿಟ್ಟಿದ್ದರು. ಅದರಲ್ಲಿ ಕೊಡಗು ಲಾಂಛನ ಹಾಕಿದ್ದರು. ಆಗ ಸರ್ಕಾರ ಉದ್ದೇಶ ಪೂರ್ವಕವಾಗಿಯೇ ಇವರನ್ನು ನಿರ್ಲಕ್ಷ ಮಾಡಿತ್ತೋ ಅಥವಾ ಜನ ಪ್ರತಿನಿಧಿಗಳು ಸರಿಯಾದ ಮಾಹಿತಿಯನ್ನು ಸರಕಾರಕ್ಕೆ ನೀಡಲಿಲ್ಲವೋ! ಗೊತ್ತಿಲ್ಲ! ಇವರಿಗೆ ಇನ್ನೊಂದು ಸಿಮ್ಟಮ್ (ಲಕ್ಷಣ) ಇದೆ. ಲಿವಾಕ್ ಹುಟ್ಟು ಹಾಕಿದ ಸಮಯದಿಂದ ಇಲ್ಲಿಯವರೆಗೆ ಇವರು ಗಣರಾಜ್ಯೋತ್ಸವ, ಸ್ವಾತಂತ್ರ್ಯ ದಿನಾಚರಣೆ, ಸಾರ್ವತ್ರಿಕ ಚುನಾವಣೆಗಳನ್ನು ಬಹಿಷ್ಕಾರ ಹಾಕೋದು ಇವರ ಗುಣಲಕ್ಷಣವಾಗಿದೆ. ಇವರು ನಾಲ್ಕು ಜನ ಬಹಿಷ್ಕಾರ ಹಾಕಿದ್ರೆ ಏನೂ ಆಗೋದಿಲ್ಲ. ಆದರೆ "ಇನ್ ರೆಕಾರ್ಡ್ಸ್" ಇಂಟರ್‌ನ್ಯಾಷನಲ್ ಲೆವಲ್‌ನಲ್ಲಿ ಯಾರೋ ಶೋಷಿತರು, ಬಲಿಷ್ಟರಿಗೆ ಬಹಿಷ್ಕಾರ ಹಾಕಿರುತ್ತಾರೆ ಅಲ್ವಾ. ಅವರ ಜೊತೆ ಇವರೂ ಸೇರಿಕೊಂಡು ಹುನ್ನಾರ ಶುರುಮಾಡುತ್ತಾರೆ. ಜಮ್ಮು–ಕಾಶ್ಮೀರದಲ್ಲಿ ಹೆಚ್ಚು ಕಡಿಮೆ ಆಗಿರೋದೆ ಹಾಗೆ. ಹೂವಿನ ಜೊತೆಗೆ ನಾರೂ ಸ್ವರ್ಗಕ್ಕೆ ಹೋಗಬೇಕಲ್ವಾ? ಅಯ್ಯೋ! ಅಪ್ಪ! ಅಂತ ನೇಶನಲ್/ಇಂಟರ್‌ನೇಶನಲ್ ನೆಟ್‌ವರ್ಕ್‌ನ ಸಿಂಪಥಿ ತೆಗೆದುಕೊಳ್ಳಲು ಹಂಬಲಿಸುವವರಿಗೆ ಜನರೆ ಪಾಠ ಕಲಿಸಬೇಕು. ಮೊನ್ನೆವರೆಗೂ 'ಹ್ಯಾಟ್' ಹಾಕುತ್ತಿದ್ದ ಇವರ ಮುಖ್ಯಸ್ಥ ಈಗ ತಲೆಗೆ 'ವಸ್ತ್ರ' ಕಟ್ಟಿಕೊಂಡಾಕ್ಷಣ ಯಾಸರ್ ಅರಾಫತ್ ಆಗ್ತಾನಾ? ಇವರ ಮುಖ್ಯಸ್ಥ ಚುನಾವಣೆ ಬಹಿಷ್ಕಾರ ಹಾಕ್ತೇವಿ ಅಂತ ಹೇಳೋದು. ಇವರ ಹಿಂಬಾಲಕರು ಯಾವ ಯಾವ ಪಾರ್ಟಿಯಲ್ಲಿದ್ದರೋ ಅವರಿಗೆಲ್ಲಾ ಬಹಿರಂಗವಾಗಿ ಸಪೋರ್ಟ್ ಮಾಡೋದನ್ನು ನಾವು ನೋಡಿದ್ದೇವೆ. ಈ ಎಲ್ಲಾ ನಾಟಕಗಳನ್ನು ಕೊನೆಗಾಣಿಸಬೇಕು. ಆಗ ಮಾತ್ರ ಕೊಡಗಿನ ಮತ್ತು ಕರ್ನಾಟಕದ ಅಭಿವೃದ್ಧಿ ಸಾಧ್ಯ. ■

ಕರ್ನಾಟಕ ರಾಜ್ಯದಲ್ಲಿ ಭೂಮಿಯ ಪ್ರಶ್ನೆ



ಯು.ಬಸವರಾಜು

ಭೂಮಿ ನಮ್ಮ ಸಮಾಜದ ಜೀವನಾಧಾರಗಳಲ್ಲಿ ಬಹು ಮುಖ್ಯವಾದ ಅಂಶ. ನಮ್ಮ ಆರ್ಥಿಕತೆಯ ಮೂಲ ಆಧಾರಗಳಲ್ಲಿ ಅಗ್ರಸ್ಥಾನ ಪಡೆದಿದೆ. ಆದರೆ ಬೆವರು ಸುರಿಸಿ ದುಡಿಯುವ ಶ್ರಮಿಕರ, ರೈತರ ಶ್ರಮದ ಫಲವನ್ನು ದೋಚುವ ನಿಟ್ಟಿನಲ್ಲಿ ಅನಾದಿ ಕಾಲದಿಂದಲೂ ಭೂಮಿಯ ಮೇಲೆ ಸ್ಥಾಪಿತ ಹಿತಾಸಕ್ತಿಗಳು, ಪಟ್ಟಭದ್ರಶಕ್ತಿಗಳು ಹಿಡಿತ ಸಾಧಿಸುತ್ತಾ ಬಂದಿವೆ.

ಉಳುವವರೆ ಭೂಮಿಯ ಒಡೆಯರಾಗಬೇಕು. ಭೂಮಿಯನ್ನು ಶೋಷಕ ಪಾಳೇಗಾರಿ-ಜಮೀನ್ದಾರಿ ಶಕ್ತಿಗಳಿಂದ ಕಿತ್ತು ಬಡರೈತರು, ಭೂಹೀನ ಕೃಷಿ ಕೂಲಿಕಾರರು ಗೇಣಿದಾರರಿಗೆ ಹಂಚಬೇಕು ಎಂಬುದು ಒಂದು ಪ್ರಜಾಸತ್ತಾತ್ಮಕ ಆಶಯ. ಇಂತಹ ಒಂದು ಕ್ರಮ ಆರ್ಥಿಕ ಅಸಮಾನತೆಯ ನಿವಾರಣೆ-ಸಮಾಜದ ಒಟ್ಟಾರೆ ಆರ್ಥಿಕ ಬೆಳವಣಿಗೆಯನ್ನು ಸಾಧಿಸುವ ದೃಷ್ಟಿಯಿಂದ ತುಂಬ ಮಹತ್ವದ್ದು. ಇಷ್ಟು ಮಾತ್ರವಲ್ಲ ಪಾಳೆಗಾರಿ ವ್ಯವಸ್ಥೆ ಸಮಾಜದ ಮೇಲೆ ಹೇರಿರುವ ಅಸ್ಪೃಶ್ಯತೆ-ಜಾತಿ ತಾರತಮ್ಯಗಳಂತಹ ಸಾಮಾಜಿಕ ಅನಿಷ್ಟಗಳು ಇಂದಿಗೂ ಮುಂದುವರಿಯಲು ಕಾರಣವಾಗಿರುವ ದಲಿತ-ಹಿಂದುಳಿದ ಸಮುದಾಯಗಳ ಆರ್ಥಿಕ ಅಶಕ್ತತೆ, ಪರಾವಲಂಬನೆ ಹಾಗೂ ಈ ಸಾಮಾಜಿಕ ಅನಿಷ್ಟಗಳ ನಿವಾರಣೆಯ ಯತ್ನಗಳಿಗೆ ಚೈತನ್ಯ ತುಂಬಬಲ್ಲ ಮಹತ್ವದ ಕ್ರಮವೂ ಹೌದು.

ಇಂತಹ ಮಹತ್ವದ ಭೂಮಿಯ ಪ್ರಶ್ನೆಯು ಬ್ರಿಟಿಷ್ ಪೂರ್ವದಲ್ಲಿ, ಬ್ರಿಟೀಷರ ಕಾಲದಲ್ಲಿ ಹಾಗೂ ಸ್ವಾತಂತ್ರ್ಯಾನಂತರ ಮತ್ತು ಕರ್ನಾಟಕ ಏಕೀಕರಣದ ನಂತರದ ಕಾಲಘಟ್ಟದಲ್ಲಿ ಯಾವ ಯಾವ ಸ್ವರೂಪಗಳನ್ನು ಪಡೆದುಕೊಳ್ಳುತ್ತಾ ಬಂದಿದೆ. ಭಾರಿ ಕ್ರಾಂತಿಕಾರಕ ಎಂದು ಹೇಳಲಾದ ದೇವರಾಜ್ ಅರಸುರವರ ಭೂಸುಧಾರಣೆಯ ಸಾಧನೆ ಏನು ಭೂಮಿ ಪ್ರಶ್ನೆಯನ್ನು-ಸಮಸ್ಯೆಯನ್ನು ಬಗೆಹರಿಸಬೇಕಾದ ದಾರಿ ಯಾವುದು? ಈ ಕುರಿತು ಬರೆದಿದ್ದಾರೆ ಕರ್ನಾಟಕ ಪ್ರಾಂತ ರೈತ ಸಂಘದ ರಾಜ್ಯ ಸಹಕಾರ್ಯದರ್ಶಿಗಳಾದ ಕಾಂ.ಯು.ಬಸವರಾಜ್

ಕರ್ನಾಟಕ ರಾಜ್ಯದಲ್ಲಿ ಬಡರೈತ-ಕೂಲಿಕಾರರ ಪರವಾಗಿ ಭೂಮಿ ಪ್ರಶ್ನೆ ಇತ್ಯರ್ಥವಾಗದೇ, ರಾಜ್ಯದ ಬಡತನ, ಸಾಮಾಜಿಕ ಅಸಮಾನತೆ, ಅನಕ್ಷರತೆ, ಜಾತಿ ದೌರ್ಜನ್ಯ, ಅಸ್ಪೃಶ್ಯಾಚರಣೆಗಳನ್ನು ಅಲುಗಾಡಿಸಲು ಸಾಧ್ಯವಿಲ್ಲವಾಗಿದೆ. ಅದೇ ರೀತಿ ಕೈಗಾರಿಕೆಯ ಅಭಿವೃದ್ಧಿಗೆ ನೆಲೆಗಟ್ಟು ಒದಗಿಸಲು, ಆ ಮೂಲಕ ಅಭಿವೃದ್ಧಿಯನ್ನು ಸಾಧಿಸಲು ಅದು ಆಧಾರವಾಗುತ್ತದೆ. ಆದ್ದರಿಂದಲೇ ಸಿಪಿಐ(ಎಂ) ತಿಳಿಸಿದ ಹಾಗೆ, ಭೂಮಿಯ ಪ್ರಶ್ನೆ ಕೇಂದ್ರ ಪ್ರಶ್ನೆಯಾಗುತ್ತದೆ.

ಕರ್ನಾಟಕದಲ್ಲಿ ಭೂಮಿಯ ಪ್ರಶ್ನೆ ಬೆಳೆದು ಬಂದ ರೀತಿ.

ಬ್ರಿಟೀಷ್ ಪೂರ್ವ ಭೂಸಂಬಂಧಗಳು : ಕರ್ನಾಟಕವೆಂದು ರೂಪುಗೊಂಡುದೇ 1956ರಲ್ಲಿ. ಅದಕ್ಕೂ ಮುಂಚೆ ಈಗಿನ ಕರ್ನಾಟಕದ ಉತ್ತರಕನ್ನಡ, ವಿಜಾಪುರ, ಗದಗ, ಧಾರವಾಡ, ಬಾಗಲಕೋಟೆ, ಹಾವೇರಿ ಜಿಲ್ಲೆಗಳು ಬ್ರಿಟೀಷರ ನೇರ ಆಳ್ವಿಕೆಗೊಳಪಟ್ಟ ಮುಂಬಯಿ ಪ್ರಾಂತದಲ್ಲಿದ್ದರೆ ಗುಲ್ಬರ್ಗಾ, ರಾಯಚೂರು, ಬೀದರ್, ಕೊಪ್ಪಳ ಜಿಲ್ಲೆಗಳು ಹೈದ್ರಾಬಾದ್ ನಿಜಾಮರ ಆಳ್ವಿಕೆಗೊಳಗಾಗಿದ್ದವು. ಬಳ್ಳಾರಿ, ದ.ಕನ್ನಡ ಜಿಲ್ಲೆಗಳು ಬ್ರಿಟಿಷರ ನೇರ ಆಡಳಿತಕ್ಕೆ ಒಳಪಟ್ಟ ಮದ್ರಾಸ್ ಪ್ರಾಂತಕ್ಕೆ ಸೇರ್ಪಡೆಗೊಂಡಿದ್ದವು. ಉಳಿದದ್ದೆಲ್ಲಾ ಮೈಸೂರು ಸಂಸ್ಥಾನಕ್ಕೆ ಸೇರಿದ್ದವು. ಜಮಖಂಡಿ, ಸಂಡೂರು ಮುಂತಾದ ಚಿಕ್ಕ ಚಿಕ್ಕ ಸಂಸ್ಥಾನಗಳು ಉಳಿದಿದ್ದವು ! ಕೊಡಗು ಪ್ರತ್ಯೇಕವಿತ್ತು.

ಬ್ರಿಟೀಷರ ಪೂರ್ವದಲ್ಲಿ ರಾಜರ ರಾಜ್ಯಭಾರದಡಿ ಈ ಪ್ರದೇಶಗಳ ಸ್ಥಳೀಯ ಆಡಳಿತವು ಜಹಗೀರ್‌ದಾರರ, ಜಮೀನ್ದಾರರ, ದೇಸಾಯಿಗಳ, ದೇಶಮುಖಗಳ, ಪಟೇಲರು, ಮಾಲೀ ಪಾಟೀಲ, ಶೇತುಬಂಧಿ, ಘಟವಾರಿ, ಮುಂತಾದವರಿಂದ ಸಂಘಟಿಸಲಾಗಿತ್ತು. ಶಾನುಭೋಗ, ತಲಾಟಿ ಮುಂತಾದ ಕಂದಾಯ ಅಧಿಕಾರಿಗಳು ಇರುತ್ತಿದ್ದರು. ಅಂದಿನ ದೊರೆಗಳು ಇವರಿಗೆ ಸಂಬಳವಾಗಿ ಕೆಲ ಪ್ರದೇಶದ ಕಂದಾಯವನ್ನು ತೆಗೆದು ಕೊಳ್ಳಲು ಅನುಮತಿ ನೀಡಿದ್ದರು. ಅಂತಹ ಭೂಮಿಗಳನ್ನು ಇನಾಂ ಭೂಮಿ ಯೆಂದು ಕರೆಯ ಲಾಗುತ್ತಿತ್ತು.

ವಾರಸು ದಾರರಿಲ್ಲದ ಜಮೀನುಗಳು ಸ್ಥಳೀಯ ಆಡಳಿತಗಾರರ ಮೂಲಕ ಬೇರೆಯವರಿಗೆ ಸಾಗುಮಾಡಲು ವಹಿಸಿಕೊಡುವ ಸಾಮಾನ್ಯ ಪದ್ಧತಿ ಜಾರಿಯಲ್ಲಿತ್ತು.

ಆದರೆ ಕಂದಾಯವು ಕೆಲವೊಮ್ಮೆ ಉತ್ಪಾದನೆಯ ಅರ್ಧದಷ್ಟು ಮತ್ತು ಅದಕ್ಕೂ ಹೆಚ್ಚು ಇರುತ್ತಿತ್ತು. ಯದ್ಧ ನಡೆದಾಗ, ಯುದ್ಧದಲ್ಲಿ ಸಂಬಂಧಿಸಿದ ರಾಜರು ಸೋತಾಗ ಅಧಿಕ-ಕಂದಾಯವು ಬೀಳುತ್ತಿತ್ತು.

ಬ್ರಿಟೀಷ್ ಕಾಲದ ಭೂಸಂಬಂಧಗಳು: ನಂತರ ಬ್ರಿಟೀಷರು ಭಾರತ ದೇಶವನ್ನು ವಶಪಡಿಸಿಕೊಂಡು ತಮ್ಮ ಆಡಳಿತವನ್ನು ಮುಂದುವರಿಸಿದ ನಂತರ ಭೂ ನೀತಿ, ಭೂ ಕಂದಾಯದ ವಿಧಾನವನ್ನು ಬದಲಿಸಿತು. ಇನ್ನು ಮುಂದೆ ಹಣ ರೂಪದ ಕಂದಾಯ ನೀಡಬೇಕೆಂದು ಫರ್ಮಾನು ಹೊರಡಿಸಿತು.



ಹೊಸ ನೀತಿಯ ಪ್ರಕಾರ ಭೂಮಿಯನ್ನು ಜಾಗೀರ್‌ದಾರಿ, ಜಮೀಂದಾರಿ, ರೈತವಾರಿಯೆಂದು ವಿಭಜಿಸಲಾಯಿತು. ಹಾಗೂ ಭೂಮಿಯನ್ನು ಅಂದಿನ ಸ್ಥಳೀಯ ಆಡಳಿತಗಾರರಿಗೆ ಬಿಟ್ಟುಕೊಟ್ಟಿತು. ಈ ಮೂಲಕ ಸ್ಥಳೀಯ ಆಡಳಿತಗಾರರ ಬೆಂಬಲವನ್ನು ಪಡೆಯಿತು.

ಮೂರು ಪ್ರಾಂತಗಳನ್ನು ರಚಿಸಿ ತನ್ನ ನೇರ ಆಡಳಿತಕ್ಕೊಳಪಡಿಸಿಕೊಂಡರೆ ಬ್ರಿಟೀಷರು ಉಳಿದ ಪ್ರದೇಶಗಳನ್ನು ತನ್ನ ಸಾಮಂತ ಅರಸರಿಗೆ ತನ್ನ ಆಧಿಪತ್ಯದಲ್ಲಿ ಆಡಳಿತ ನಡೆಸಲು ಅವಕಾಶ ನೀಡಿತು.

ಈ ಎಲ್ಲದರ ಪರಿಣಾಮವಾಗಿಯೇ ಕರ್ನಾಟಕ ಏಕೀಕರಣ ಪೂರ್ವದ ಕನ್ನಡ ಮಾತನಾಡುವ ವಿವಿಧ ಪ್ರದೇಶಗಳಲ್ಲಿ ಭಿನ್ನ ಭಿನ್ನವಾದ ಭೂಸಂಬಂಧಗಳು ಬೆಳೆದುಬಂದವು. ಜಮೀನ್‌ದಾರಿ, ಜಹಗೀರ್‌ದಾರಿ ಪ್ರದೇಶಗಳಲ್ಲಿ ಭೂಮಿಗಳು ಹೊಸ ಮಾಲೀಕರ ಕೈವಶವಾದವು. ಮೈಸೂರು ಸಂಸ್ಥಾನವು ರೈತವಾರಿಗೊಳಗಾದರೂ ಇಲ್ಲಿ ಇನಾಂ ಪದ್ಧತಿಯ ಆಧಾರದಲ್ಲಿ ಜೋಡಿದಾರರು ಮುಂತಾದ ದೊಡ್ಡ ಭೂಮಾಲೀಕರು ಬೆಳೆದಿದ್ದರು. ಬೇಸಾಯಕ್ಕೆ ಬೇಕಾದ ಸಾಲವನ್ನು ಅಂದಿನ ಬಡ್ಡಿ ವ್ಯಾಪಾರಿಗಳು ಇಲ್ಲವೇ ದೊಡ್ಡ ಭೂಮಾಲಕರು ಒದಗಿಸುತ್ತಿದ್ದರು. ದುಬಾರಿ ಬಡ್ಡಿಯನ್ನು ಹೇರುತ್ತಿದ್ದರು. ಮಾರುಕಟ್ಟೆಯ ಏರಿಳಿತದಿಂದ ರೈತವಾರಿ ಪ್ರದೇಶದಲ್ಲಿ ಭೂಮಿಯು ರೈತರ ಕೈಬಿಟ್ಟು ಭೂಮಾಲಕರಲ್ಲಿ ಕೇಂದ್ರೀಕರಣಗೊಳ್ಳುತ್ತಿತ್ತು.

ಹೀಗೆ ಹೊಸ ಭೂರೀತಿಯಿಂದಾಗಿ ರೈತರು ಬ್ರಿಟೀಷರ ಆಡಳಿತದಲ್ಲಿ ದೇಶದ ಪ್ರಧಾನ ಭಾಗದಲ್ಲಿ ಗೇಣಿದಾರರಾಗಿ/ಬಟಾಯಿದಾರರಾಗಿ ಬದಲಾದರು.

ಅಂದಿನ ರೈತರು ಬ್ರಿಟೀಷರ ಹೊಸ ನೀತಿಯಿಂದಾಗಿ ಕಂದಾಯದ ಜೊತೆ ದುಬಾರಿ ಗೇಣಿಯನ್ನು ಮತ್ತು ಬಿಟ್ಟಿಚಾಕರಿಯನ್ನು ಮರಿ ದೊರೆಗಳಿಗಾಗಿ ಮಾಡಬೇಕಾಗಿ ಬಂತು.

ಉಳುವವರೇ ಭೂ ಒಡೆಯರು :

ಭೂಮಿಯ ಪರಬಾರೆ, ಬೆಲೆಗಳ ಏರಿಳಿತ, ಸ್ಥಳೀಯ ಮರಿದೊರೆಗಳ ದಬ್ಬಾಳಿಕೆ, ಹೊಸ ಗೇಣಿದಾರರನ್ನು- ಸಾಗುವಳಿದಾರರನ್ನು ತೀವ್ರ ಹಿಂಸೆಗೆ ಗುರಿಪಡಿಸಿತು. ಇದರ ಪರಿಣಾಮವಾಗಿಯೇ ದೇಶದಾದ್ಯಂತ ರೈತ ಹೋರಾಟಗಳು ಚಿಮ್ಮಿಬಂದವು, ಮಾತ್ರವಲ್ಲ ಆಮೂಲಕ ರೈತರಿಗೆ ಸ್ವಾತಂತ್ರ್ಯವೆಂದರೆ ಉಳುವವನು ಭೂಮಿಯ ಒಡೆಯ ನಾಗುವುದೆಂದು ತಿಳಿದುಬಂದಿತು. ಅಖಿಲ ಭಾರತ ಕಿಸಾನ್ ಸಭಾ ನೇತೃತ್ವದಲ್ಲಿ ಇಬ್ಬಗೆಯ ವೈರಿಗಳ ವಿರುದ್ಧ ಸಿಡಿದುನಿಂತರು. ಬಿಟ್ಟಿ ಚಾಕರಿ ನಿಲ್ಲಿಸಲು, ಗೇಣಿ ಕಡಿಮೆ ಮಾಡಲು, ಕಂದಾಯ ಕಡಿಮೆ ಮಾಡಲು ಮತ್ತು ದೌರ್ಜನ್ಯ ನಿಲ್ಲಿಸಲು ಸಂಘಟಿತರಾಗಿ ಹೋರಾಡಿದ್ದು ಸ್ವತಂತ್ರ ಆಂದೋಲನಕ್ಕೆ ಧುಮುಕಿದ್ದು ಇತಿಹಾಸ. ತೇಭಾಗ, ವೀರ ತೆಲಂಗಾಣ, ಸುರ್ಮಾ ಕಣಿವೆ ಹೋರಾಟ, ಕೈಯ್ಯೂರು ಹೋರಾಟಗಳನ್ನು ಈ ದಿಕ್ಕಿನಲ್ಲಿ ನೆನಪಿಸಿಕೊಳ್ಳಬಹುದು. ಇದರ ಪೂರ್ವದಲ್ಲಿ ನೀಲಿ ರೈತರ ದಂಗೆ, ಸಂತಾಲರ ಹೋರಾಟಗಳನ್ನು ಗುರುತಿಸಬಹುದು. ಅಖಿಲ ಭಾರತ ಕಿಸಾನ್ ಸಭಾ ಅಸಂಖ್ಯಾತ ಹೋರಾಟವನ್ನು ಸಂಘಟಿಸಿದೆ. 1944ರಿಂದ 1949ರವರೆಗೆ ಜರುಗಿದ ವೀರ ತೆಲಂಗಾಣ ಹೋರಾಟ ನಿಜಾಮನ ವಿರುದ್ಧ ಸಿಡಿದೆದ್ದಿತು. ಮಾತ್ರವಲ್ಲಾ ಸುಮಾರು 4 ಜಿಲ್ಲೆಗಳಲ್ಲಿ ರೈತರ ಗ್ರಾಮ ಸ್ವರಾಜ್ಯ ರಚಿಸಿತು. ಭೂಮಿತಿ ಘೋಷಿಸಿತು. ಮಾತ್ರವಲ್ಲ ಭೂಮಿಯನ್ನು ಹಂಚಿತು. ಗೇಣಿಯನ್ನು ರದ್ದುಪಡಿಸಿತು. ಬಿಟ್ಟಿ ಚಾಕರಿ ನಿರ್ಮೂಲನ ಮಾಡಿತು. ಈ ಹೋರಾಟದ ಅಲೆ ದೇಶದ ಮೂಲೆ ಮೂಲೆಯ ಅಂಚು ತಲುಪಿ; ಉಳುವವರೇ ಭೂ ಒಡೆಯರೆಂಬ ಘೋಷಣೆಯನ್ನು ಪ್ರಧಾನ ಪ್ರಶ್ನೆಯನ್ನಾಗಿಸಿತು.

ಸ್ವಾತಂತ್ರ್ಯ ಹೋರಾಟದ ಮುಂಚೂಣಿಯಲ್ಲಿದ್ದ ಕಾಂಗ್ರೆಸ್ ಪಕ್ಷವು ಅದಾಗಲೇ ದೇಶದ ಗೇಣಿದಾರರು, ರೈತರು ಸ್ಥಳೀಯ

ದೊರೆಗಳ ವಿರುದ್ಧ ಹೋರಾಡುವುದನ್ನು ತಿರಸ್ಕರಿಸಿತ್ತು. ಏನಿದ್ದರೂ ಬ್ರಿಟೀಷರ ವಿರುದ್ಧ ಮಾತ್ರವೇ ನಮ್ಮಯ ಹೋರಾಟವೆನ್ನುತ್ತಿತ್ತು ಹಾಗೂ ಸ್ವತಂತ್ರ್ಯ ಬಂದ ಕೂಡಲೇ ಹಳೆಯ ಸ್ಥಳೀಯ ದೊರೆಗಳನ್ನು (ಭೂಮಾಲಕರು) ಕಾಂಗ್ರೆಸ್ ಪಕ್ಷದ ಮುಖಂಡರಾಗಿ ಸೇರ್ಪಡೆ ಮಾಡಿಕೊಂಡಿತು ಮಾತ್ರವಲ್ಲ, ಬ್ರಿಟೀಷರ ಕುತಂತ್ರದಿಂದಾಗಿ ಹೈದ್ರಾಬಾದ್ ಸಂಸ್ಥಾನದ ನವಾಬ ನಿಜಾಮನು ಪ್ರತ್ಯೇಕ ದೇಶವಾಗಿ ಉಳಿಯಲು ಯತ್ನಿಸಿದರೆ, ಇದರ ವಿರುದ್ಧ ಹೋರಾಟ ನಡೆಸಿದ ಮತ್ತು ಉಳುವವನಿಗೆ ಭೂಮಿ ನೀಡಲು ಮುಂದಾದ ತೆಲಂಗಾಣ ರೈತ ಚಳುವಳಿಯನ್ನು ಬಂದೂಕಿನ ಮೂಲಕ ಅಡಗಿಸಿದ್ದು ಸ್ವತಂತ್ರ ಭಾರತದ ಕಾಂಗ್ರೆಸ್ ಪಕ್ಷದ ರಕ್ತ-ಸಿಕ್ತ ಇತಿಹಾಸವಾಗಿದೆ.

ಇದೇ ಸಂದರ್ಭದಲ್ಲಿ ಕಾಂಗ್ರೆಸ್ ಉದಾಸೀನ ಮಾಡಿದ್ದರೂ ಜನತೆಯು ಕಮ್ಯೂನಿಸ್ಟ್ ಪಕ್ಷ ಹಾಗೂ ಇತರರ ನೇತೃತ್ವದಲ್ಲಿ ಭಾಷಾವಾರು ಪ್ರಾಂತಗಳ ರಚನೆಯ ಹೋರಾಟಕ್ಕೆ ಧುಮುಕಿದರು. ಅದರಿಂದಾಗಿ ಭಾಷಾವಾರು ಪ್ರಾಂತಗಳು ರೂಪುಗೊಂಡಿದ್ದು ತಿಳಿದದ್ದೇ ಆಗಿದೆ.



ಕರ್ನಾಟಕ ಏಕೀಕರಣದ ಪೂರ್ವ ವಿವಿಧ ಪ್ರಾಂತಗಳಲ್ಲಿದ್ದ ಗೇಣಿ ಶಾಸನಗಳು- ರೈತ ಚಳುವಳಿಗಳು

ದೇಶದಲ್ಲಿ ಮಾತ್ರವಲ್ಲ ಮೈಸೂರು, ಹೈದ್ರಾಬಾದ್ ಮತ್ತು ಮುಂಬಯಿ ಪ್ರಾಂತಗಳಲ್ಲಿ ಮೊಳಗಿದ ರೈತ ಚಳುವಳಿಯ ಪರಿಣಾಮವಾಗಿ ಇಲ್ಲಿನ ಆಡಳಿತಗಳು ಗೇಣಿ ರಕ್ಷಣೆಗೆ ಸಂಬಂಧಿಸಿ ಶಾಸನಗಳನ್ನು ರೂಪಿಸುವ ಒತ್ತಾಯಕ್ಕೊಳಗಾಗಿದ್ದವು.

I. ಮೈಸೂರು ಪ್ರಾಂತದಲ್ಲಿ 1888ರ ಭೂಕಂದಾಯ ಸಂಹಿತೆಯಂತೆ ಖಾಯಂ ಹಕ್ಕುಳ್ಳ 3 ವಿಧದ ಗೇಣಿದಾರರಿದ್ದರು.

1. ಕೇವಲ ಕಂದಾಯ ನೀಡಿ ಕಾಯಂ ಹಕ್ಕು ಪಡೆದುಕೊಂಡ ಕಾದಿಮ್ ಗೇಣಿದಾರ

2. ಪರಬಾರೆಯಾದ ಮತ್ತು ಸರ್ಕಾರದ ಗ್ರಾಮಗಳಲ್ಲಿ 12 ವರ್ಷಕ್ಕಿಂತ ಹೆಚ್ಚು ಅವಧಿಯವರೆಗೆ ಜಮೀನು ವಶದಲ್ಲಿಟ್ಟುಕೊಂಡಂತಹ ಅಥವಾ ಹಾಗೆಂದು ನ್ಯಾಯಾಲಯ ಗುರುತಿಸಿದ ಕಾಯಂ ಗೇಣಿದಾರ.

3. ಐಚ್ಛಿಕ ಗೇಣಿದಾರ

ಅದೇ ರೀತಿ 1961 ಏಪ್ರಿಲ್ 1ರ ಪೂರ್ವದಲ್ಲಿ ಅನ್ವಯವಾಗುತ್ತಿದ್ದ 1952 ಮೈಸೂರು ಗೇಣಿದಾರ ಶಾಸನ ರೂಪುಗೊಂಡಿತು. ಇದರಂತೆ 12ಕ್ಕೂ ಅಧಿಕ ವರ್ಷ ಸಾಗುವಳಿಯಲ್ಲಿ ತೊಡಗಿದ್ದ ಗೇಣಿದಾರನಿಗೆ ಇನ್ನೂ 5 ವರ್ಷ ಮುಂದುವರೆಯಲು ರಕ್ಷಣೆ ಒದಗಿಸಿತು. ಅದೇ ರೀತಿ ಉತ್ಪನ್ನದ ಅರ್ಧ ಭಾಗವನ್ನು ಗರಿಷ್ಟ ಗೇಣಿಯೆಂದು ನಿರ್ಧರಿಸಲಾಗಿತ್ತು. ಸ್ವಂತ ಬೇಸಾಯದ ಹೆಸರಿನಲ್ಲಿ ಹಿಡುವಳಿಯ ಒಂದು ಭಾಗ ಬಿಡಿಸಲು ಅವರಿಗೆ ಹಕ್ಕನ್ನು ಒದಗಿಸಿತ್ತು.

ಇದೇ ಶಾಸನವನ್ನೇ ಆ ನಂತರ ಮದ್ರಾಸ್ ಪ್ರಾಂತದಿಂದ ಮೈಸೂರು ರಾಜ್ಯಕ್ಕೆ ಸೇರ್ಪಡೆಗೊಂಡ ಬಳ್ಳಾರಿ ಜಿಲ್ಲೆಗೆ 1955ರಲ್ಲಿ ಅನ್ವಯಿಸಲಾಯಿತು.

II. ಮುಂಬೈ ಪ್ರಾಂತದಲ್ಲಿ 1939ರಲ್ಲಿ ಗೇಣಿ ಸುಧಾರಣೆ ಶಾಸನ ಹೊರಡಿಸಲಾಯಿತು. ಇದರ ಪ್ರಕಾರ ಗೇಣಿದಾರನಿಗೆ ಅವಧಿ ನಿಗದಿಯಾಯಿತು. ಮಾತ್ರವಲ್ಲ ಗೇಣಿ ಎಷ್ಟಿರಬೇಕೆಂಬುದು ನಿಗದಿತವಾಯ್ತು. 1938ರ ಪೂರ್ವದಲ್ಲಿ ಆರು ವರ್ಷಗಳಿಗಿಂತ ಮುಂಚೆ ಸತತವಾಗಿ ಜಮೀನನ್ನು ತನ್ನ ವಶದಲ್ಲಿಟ್ಟುಕೊಂಡಿದ್ದವರನ್ನು ರಕ್ಷಿತ ಗೇಣಿದಾರನೆಂದು ಕರೆಯಿತು.

ಆದರೆ, ಇದನ್ನು ರಚಿಸಿದ ಸರ್ಕಾರ ರಾಜೀನಾಮೆ ನೀಡಿದ್ದರಿಂದ ರಾಜ್ಯದಾದ್ಯಂತ ಜಾರಿಗೆ ಬರಲಿಲ್ಲ. 1946ರಲ್ಲಿ ತಿದ್ದುಪಡಿಗೊಂಡು 1948ರಲ್ಲಿ ಸಮಗ್ರ ಶಾಸನ ರೂಪಿಸಲಾಯಿತು. ಪುನ: 1952 ತಿದ್ದುಪಡಿಗೊಂಡು 1955ರಲ್ಲಿ ಶಾಸನ ಕಾರ್ಯಾಚರಣೆ ದಿನ ನಿಗದಿಸಿತು.

ಇವರ ಪ್ರಕಾರ ಗೇಣಿದಾರರನ್ನು 1. ಕಾಯಂ ಗೇಣಿದಾರರು 2. ರಕ್ಷಿತ ಗೇಣಿದಾರರು. 3. ಸಾದಾ ಗೇಣಿದಾರರೆಂದು ಗುರುತಿಸಿತ್ತು.

ರಕ್ಷಿತ ಗೇಣಿದಾರರಿಗೆ ಸಮಂಜಸ ಬೆಲೆಯಲ್ಲಿ ಕಂತಿನ ರೂಪದಲ್ಲಿ ಸಂದಾಯಿಸಿ ಕೊಂಡುಕೊಳ್ಳುವ ಹಕ್ಕನ್ನು ನೀಡಿತಲ್ಲದೇ, ಭೂಮಾಲಕನು ರಕ್ಷಿತ ಗೇಣಿದಾರನ ಭೂಮಿಯನ್ನು ಸ್ವಂತ ಬೇಸಾಯಕ್ಕೆಂದು ಬಳಸುವುದನ್ನು ನಿಯಂತ್ರಣಕ್ಕೊಳಪಡಿಸಲಾಗಿತ್ತು. ಗೇಣಿದಾರ-ಭೂಮಾಲಕನ ನಡುವೆ ವಿವಾದ ಉಂಟಾದಾಗ ಸರ್ಕಾರವೇ ಹಿಡುವಳಿದಾರನ ಜಮೀನಿನ ವ್ಯವಹಾರ ವಹಿಸಿಕೊಳ್ಳುವುದು ಸೇರಿತ್ತು. ಭೂಮಾಲಕರ ಭೂಮಿಯ ಗರಿಷ್ಟ ಮಿತಿಯನ್ನು ನಿರಂತರ ನೀರಾವರಿಯಾಗುವ 4 ಎಕರೆ ಜಮೀನಿನ 3 ಪಟ್ಟು ಅಂದರೆ 12 ಎಕರೆಯೆಂದು ನಿಗದಿಸಿತ್ತು.

III.ಹೈದ್ರಾಬಾದ್ ಸಂಸ್ಥಾನದಲ್ಲಿ, 1945ರಲ್ಲಿ ಆಸಾಮಿ ಷಿಕ್ಮಿ ಶಾಸನ ಜಾರಿಗೊಳಿಸಲಾಯಿತು. 12 ವರ್ಷ ನಿರಂತರ

ಸಾಗುವಳಿ ಮಾಡಿದ ನಂತರ ಪಿಕ್ಕಿದಾರ ಅಥವಾ ಕಾಯಂ ಗೇಣಿದಾರನೆಂದು ಪರಿಗಣಿಸಿತು.

1948ರಲ್ಲಿ ಭಾರತ ಒಕ್ಕೂಟಕ್ಕೆ ಸೇರಿದ ನಂತರ ಗೊತ್ತುಪಡಿಸಿದ ಅವಧಿಯೊಳಗೆ ನಿರಂತರ 6 ವರ್ಷ ಸಾಗು ಮಾಡಿದ ಗೇಣಿದಾರರನ್ನು ರಕ್ಷಿತ ಗೇಣಿದಾರರೆಂದು ಘೋಷಿಸಿತು. 1950ರ ಹೈದ್ರಾಬಾದ್ ಗೇಣಿದಾರ ಶಾಸನ ಬಂದಿತು. 1951ರಲ್ಲಿ ತಿದ್ದುಪಡಿಯೊಂದಿಗೆ 1952ರಲ್ಲಿ ಹೊರಡೂಡಲ್ಪಟ್ಟ ಗೇಣಿದಾರರ ವಶಕ್ಕೆ ಜಮೀನು ಪಾವಾಸು ಕೊಡುವುದಕ್ಕಾಗಿ ಗೇಣಿದಾರರಿರುವ ಜಮೀನು ಮಾರಾಟ ಕಾನೂನು ಬಾಹಿರವೆಂದು ಘೋಷಿಸುವ 'ಹೈದ್ರಾಬಾದು ಒಕ್ಕಲೆಬ್ಬಿಸುವವರ ತಡೆ ಕಾಯ್ದೆ' ಜಾರಿಗೆ ಬಂತು.

IV. ಮದ್ರಾಸ್ ಪ್ರಾಂತಗಳಲ್ಲಿ (ದಕ್ಷಿಣ ಕನ್ನಡ-ಕೊಳ್ಳೆಗಾಲಗಳಲ್ಲಿ) ಪ್ರಾಂತೀಯ ಸರ್ಕಾರವು 1954ರ ಒಕ್ಕಲೆಬ್ಬಿಸುವವರ ತಡೆ ಕಾಯ್ದೆಯು, ಭೂಮಾಲಕರು ಮನಬಂದಂತೆ ಗೇಣಿದಾರರನ್ನು ಒಕ್ಕಲೆಬ್ಬಿಸುವುದನ್ನು ತಡೆಯಲು ಬಂದಿತು. ಇದನ್ನು 3 ವರ್ಷಗಳವರೆಗೆ ವಿಸ್ತರಿಸಲಾಯಿತು. 1956ರಲ್ಲಿ ನ್ಯಾಯ ಗೇಣಿಶಾಸನವು ಒಟ್ಟು ಉತ್ಪನ್ನದ ಶೇ.33.1/3 ಅಥವಾ 40 ಭಾಗವೆಂದು ಹೇಳಿತು.



ಈ ಎಲ್ಲಾ ಗೇಣಿ ಶಾಸನಗಳು ತನ್ನಿಂದ ತಾನೇ ರೂಪುಗೊಂಡಿದ್ದಲ್ಲ. ದೇಶದಾದ್ಯಂತ ರೈತ ಚಳುವಳಿ ಬೆಳೆದುಬಂದ ಹಿನ್ನೆಲೆಯಲ್ಲಿ ಈ ಪ್ರದೇಶಗಳಲ್ಲೂ ಚಳುವಳಿ ತೀವ್ರಗೊಂಡಿತ್ತು. ಉದಾಹರಣೆಗೆ

1. ವಾರಲೀ ರೈತ ಚಳುವಳಿಯಿಂದ ಸ್ಪೂರ್ತಿಗೊಂಡು, ಮುಂಬೈ ಪ್ರಾಂತದ ಉತ್ತರಕನ್ನಡ, ದಕ್ಷಿಣ ಕನ್ನಡ, ಧಾರವಾಡ, ಬಿಜಾಪುರ, ಬೆಳಗಾವಿ ಮುಂತಾದ ಜಿಲ್ಲೆಗಳಲ್ಲಿ ಅಖಿಲ ಭಾರತ ಕಿಸಾನ್ ಸಭಾ ನೇತೃತ್ವದಲ್ಲಿ, ಅಲ್ಲಿನ ಜಮೀಂದಾರಿ ಪದ್ಧತಿ ಹಾಗೂ ಬಿಟ್ಟಿ ಚಾಕರಿ ವಿರುದ್ಧ ಚಳುವಳಿ ಸಿಡಿದೆದ್ದಿತು. ಈ ಭಾಗದಲ್ಲಿ ಹರಡಿದ್ದ ರೈತ ಚಳುವಳಿಯಿಂದ ಹೆದರಿದ ಬ್ರಿಟೀಷರು ರೈತ ಚಳುವಳಿಯ ಅಂದಿನ ಮುಖಂಡರನ್ನು ಗಡಿಪಾರು ಮಾಡಿದರು. ಈ ಹೋರಾಟದಲ್ಲಿ ರಾಜೇಸಾಬ್ ಎಂಬ 60 ವರ್ಷದ ರೈತರೊಬ್ಬರು ಕೊಲೆಗೀಡಾಗಿದ್ದರು. ಅದೇ ರೀತಿ ಮಾರುತಿ ಪವಾರ್ ಎಂಬ ರೈತ ಮುಖಂಡರು ಅಂದು ಮಂತ್ರಿಯಾಗಿದ್ದ ಮಹಾಶಯನ ಗೂಂಡಾಗಳಿಂದ ಕೊಲ್ಲಲ್ಪಟ್ಟರು. ಹಳಗಾ ಗ್ರಾಮದಲ್ಲಿ ಕರೆಯಲಾಗಿದ್ದ ಕಾರವಾರ ಅಥವಾ ಉತ್ತರಕನ್ನಡ ಜಿಲ್ಲೆಯ ರೈತರ ಸಮ್ಮೇಳನಕ್ಕೆ ಹೆದರಿದ ಬ್ರಿಟೀಷ್ ಸರ್ಕಾರ, ಸಮ್ಮೇಳನ ನಡೆಸದಂತೆ ನಿರ್ಬಂಧ ವಿಧಿಸಿತ್ತು. ಪ್ರತಿ ಬಂಧಕಾಜ್ಞೆ ಮುರಿದ ನಾಯಕರನ್ನು 6 ತಿಂಗಳ ಕಾಲ ಜೈಲಿಗಟ್ಟಿತ್ತು. ಹೀಗೆ ನಾಶಿಕ್‌ನಿಂದ ಉತ್ತರಕನ್ನಡದವರೆಗೆ ಹರಡಿದ್ದ ಮುಂಬೈ ಪ್ರಾಂತದ ಗೇಣಿದಾರರ/ರೈತರ ಚಳುವಳಿಯ ಪರಿಣಾಮವಾಗಿ ಮುಂಬಯಿ ಟೆನೆಸ್ಸಿ ಕಾಯ್ದೆ ಜಾರಿಗೆ ಬಂದಿತು.

2. ಹಳೇ ಮೈಸೂರು ಪ್ರಾಂತದಲ್ಲಿ ರೈತವಾರಿ ಪದ್ಧತಿಯ ಜಾರಿಯ ನಂತರವೂ ಇನಾಂದಾರರ, ಜೋಡಿ ಇನಾಮತಿದಾರರ ಹಾಗೂ ಹೊಸದಾಗಿ ಬೆಳೆದುಬಂದ ಭೂಮಾಲಕರ ಹಾವಳಿಯನ್ನು ವಿರೋಧಿಸಿ ಚಳುವಳಿ ಬೆಳೆದುಬಂದಿತು. ರೈತರ ಸಮರಧೀರ ವೀರ ತೆಲಂಗಾಣ ಹೋರಾಟದ ಪ್ರಭಾವ ಈ ಪ್ರದೇಶದ ಮೇಲೆ ಬೀರಿದ ಪರಿಣಾಮವಾಗಿ ಚಳುವಳಿ ತೀವ್ರಗೊಂಡಿತ್ತು. ಶಿವಮೊಗ್ಗ ಜಿಲ್ಲೆಯ ಶಿಕಾರಿಪುರ ತಾಲೂಕಿನ 'ಈಸೂರು' ಗ್ರಾಮದಲ್ಲಿ ಚಳುವಳಿಯನ್ನು ದಮನ ಮಾಡಲು ಬಂದ ಅಧಿಕಾರಿಗಳು, ರೈತರ ಕೋಪಕ್ಕೆ ತುತ್ತಾಗಿ ಕೊಲೆಗೈಯ್ಯಲ್ಪಟ್ಟರೆ, ಸರ್ಕಾರ ಸದರಿ ರೈತರ ಮೇಲೆ ತೀವ್ರ ಧಾಳಿ ನಡೆಸಿ 6 ಜನರನ್ನು ಗಲ್ಲಿಗೇರಿಸಿತು. ಅಲ್ಲದೆ ಅನೇಕರಿಗೆ ಜೀವಾವಧಿ ಶಿಕ್ಷೆ ವಿಧಿಸಿತ್ತು. ಮಹಿಳೆಯರ ಮೇಲೆ ಅತ್ಯಾಚಾರ ನಡೆಯಿತು. ಪ್ರಸಿದ್ಧ ಕಾಗೋಡು ಚಳುವಳಿ ಇದೇ ಸಂದರ್ಭದಲ್ಲಿ ನಡೆಸಲಾಗಿದೆ. ಕೋಲಾರ ಜಿಲ್ಲೆಯಲ್ಲಿ ಜೋಡಿ ಇನಾಂದಾರರ ವಿರುದ್ಧ ಚಳುವಳಿ ತೀವ್ರವಾಗಿ ಬೆಳೆದುಬಂದಿತ್ತು.

3. ಕೇರಳದ ಮಲಬಾರಿನ ಜೆಮ್ಮಿಗಳ ವಿರೋಧಿ ಹೋರಾಟದ ಪ್ರಭಾವ ಮತ್ತು ಕಯ್ಯೂರು ರೈತ ಚಳುವಳಿಯ ದಟ್ಟ ಪ್ರಭಾವ ದಕ್ಷಿಣ ಕನ್ನಡ ಜಿಲ್ಲೆಯ ರೈತರ ಮೇಲಾಗಿ ಚಳುವಳಿ ಬೆಳೆದುಬಂದಿತು. "ನರಿ ಕೂಗು ಗಿರಿಮುಟ್ಟಲ್ಲ" ಎಂಬ ಗಾದೆಯನ್ನು ಮುಳ್ಳಿ ಸತ್ಯಾಗ್ರಹ ಸುಳ್ಳು ಮಾಡಿತು. ಒಕ್ಕಲೆಬ್ಬಿಸುವಿಕೆಯ ವಿರುದ್ಧ ಇಲ್ಲಿ ಗೇಣಿದಾರರು ಹೋರಾಡಿದರು.

ಈ ಎಲ್ಲಾ ಗೇಣಿ ಶಾಸನಗಳು ತನ್ನಿಂದ ತಾನೇ ರೂಪುಗೊಂಡಿದ್ದಲ್ಲ. ದೇಶದಾದ್ಯಂತ ರೈತ ಚಳುವಳಿ ಬೆಳೆದುಬಂದ ಹಿನ್ನೆಲೆಯಲ್ಲಿ ಈ ಪ್ರದೇಶಗಳಲ್ಲೂ ಚಳುವಳಿ ತೀವ್ರಗೊಂಡಿತ್ತು. ಉದಾಹರಣೆಗೆ

ಮೂರು ತಿಂಗಳ ಜೈಲು ಶಿಕ್ಷೆ ಅನುಭವಿಸಿದರಲ್ಲದೇ ಕೈದಿಗಳಾದ ರೈತರು ಹಾಗೂ ಮುಖಂಡರ ತಲೆ ಬೋಳಿಸಿ ಹಿಂಸೆ ನೀಡಿದ್ದನ್ನೂ ಅನುಭವಿಸಿ ಹೋರಾಟ ತೀವ್ರಗೊಳಿಸಿದ್ದು ಮತ್ತು ಅಂತಹ ಹೋರಾಟಗಳ ಪರಿಣಾಮ ಮದ್ರಾಸ್ ಟೆನೆನ್ಸಿ ಕಾಯ್ದೆ ಜಾರಿಗೆ ಬಂದಿತು.

ಆದರೆ ಈ ಕಾಯ್ದೆಗಳು ಜಾರಿಗೆ ಬರುವ ವೇಳೆಗಾಗಲೇ ಬಡ ರೈತರನ್ನು ದೌರ್ಜನ್ಯ ನಡೆಸುವ ಮೂಲಕ ಸಾಕಷ್ಟು ಪ್ರಮಾಣದಲ್ಲಿ ಒಕ್ಕಲೆಬ್ಬಿಸಲಾಗಿತ್ತು. ಈ ಕಾಯ್ದೆಗಳನ್ನು ಅಭ್ಯಸಿಸಿದ ಕರ್ನಾಟಕ ಪ್ರಾಂತ ರೈತ ಸಂಘ, ಮುಂಬೈ ಟೆನೆನ್ಸಿ ಕಾಯ್ದೆಯ ಜಾರಿಗಾಗಿ ಒತ್ತಾಯಿಸಿತು. ಮಾತ್ರವಲ್ಲ ಏಕೀಕೃತಗೊಂಡ ಕರ್ನಾಟಕದಲ್ಲಿ ಅದನ್ನು ಜಾರಿಗೆ ತರಲು ಬೇಡಿಕೆಯನ್ನು ಮಂಡಿಸಿತು.

ಆದರೆ ಏಕೀಕೃತಗೊಂಡ ರಾಜ್ಯ ಸರ್ಕಾರ, ಏಕೀಕೃತ ಕರ್ನಾಟಕದಲ್ಲಿ, ಬೇರೆ ಬೇರೆ ಭೂಸಂಬಂಧಿ ಕಾಯ್ದೆಗಳು ಬೇಡವೆಂದು ಒಂದೇ ಏಕರೂಪದ ಕಾಯ್ದೆ ಇರಲಿ ಎಂದು, ಅದಕ್ಕಾಗಿ1956ರಲ್ಲಿ ಶ್ರೀ ಬಿ.ಡಿ.ಜತ್ತಿಯವರ ನೇತೃತ್ವದಲ್ಲಿ ಸಮಿತಿಯೊಂದನ್ನು ನೇಮಿಸಿತು. ಪರಿಣಾಮವಾಗಿ ಏಕೀಕೃತ ಪೂರ್ವದ ವಿವಿಧ ಪ್ರದೇಶಗಳು, ಆಯಾ ಪ್ರದೇಶದಲ್ಲಿ ತರಲಾದ ಕಾಯ್ದೆಯ ಲಾಭವನ್ನು ಪಡೆಯಲಾಗಲಿಲ್ಲ. ಗೇಣಿದಾರರು ವಂಚಿಸಲ್ಪಟ್ಟರು.

ಏಕೀಕೃತ ಕರ್ನಾಟಕದಲ್ಲಿ ಭೂಮಾಲಕರ ವಿರೋಧ

ಅಂದು ರಾಜ್ಯಭಾರದಲ್ಲಿ ತೊಡಗಿದ್ದ ಕಾಂಗ್ರೆಸ್ ಪಕ್ಷದ ಶಾಸಕರಲ್ಲಿ, ಬಹುತೇಕರು ಭೂಸುಧಾರಣೆಯ ಕಾಯ್ದೆಗೆ ತೀವ್ರ ವಿರೋಧವನ್ನು ಹೊಂದಿದ್ದರು. ಅಂದಿನ ಮುಖ್ಯಮಂತ್ರಿಗಳಾಗಿದ್ದ ಶ್ರೀ ಕಡಿದಾಳ ಮಂಜಪ್ಪನವರು "ಈ ಭೂ ಕಾಯ್ದೆ ತರದಂತೆ ತಮ್ಮ ಮೇಲೆ ತೀವ್ರ ಒತ್ತಡವಿದೆಯೆಂದು, ಈ ಸಂಬಂಧ ಕೆಲವು ಪಟ್ಟಭದ್ರ ಹಿತಾಸಕ್ತಿಗಳು ಕೊಲೆ ಬೆದರಿಕೆಯ ಪತ್ರವನ್ನು ತಮಗೆ ಬರೆದಿದ್ದಾರೆ" ಎಂದು ಬಹಿರಂಗವಾಗಿ ಹೇಳಬೇಕಾಗಿ ಬಂದಿತು.

ಇದಕ್ಕೆ ಮುಂಚೆಯೇ ಉತ್ತರಕರ್ನಾಟಕದ ನಾಲ್ಕು ಜಿಲ್ಲೆಗಳ ಶಾಸಕರು 17-11-1956ರಂದು ಧಾರವಾಡದಲ್ಲಿ ಸಭೆ ಸೇರಿ ಟೆನೆನ್ಸಿ ಕಾಯ್ದೆ ಕುರಿತು ಚರ್ಚಿಸಿ ವಿರೋಧಿಸಿದರು. ಇವರಲ್ಲಿ 10 ಜನ ಮಾತ್ರ ಜಾರಿಗೆ ಬರಲಿ ಎಂದರು. ಸಂಯುಕ್ತ ಕರ್ನಾಟಕ ಪತ್ರಿಕೆಯು ಕಾಯಿದೆ ಶಾಸ್ತ್ರೀಯವಲ್ಲ ಎಂದು ಟೆನೆನ್ಸಿ ಕಾಯ್ದೆ ಜಾರಿ ವಿರೋಧಿಸಿತ್ತು.

ಅದೇ ರೀತಿ ಜತ್ತಿ ಸಮಿತಿಯು ರಾಜ್ಯದಾದ್ಯಂತ ಸಂಚರಿಸಿ ಜನತೆಯ ಅಭಿಪ್ರಾಯ ಪಡೆಯಲು ಮುಂದಾದಾಗ, ಕುಣಿಗಲ್ ಸಭೆಯಲ್ಲಿ ಭಾಗವಹಿಸಿದ್ದ ಭೂಮಾಲಕರೊಬ್ಬರು, ಮುಂದೇನಾಗಬಹುದೆಂದು? ದಿಗಿಲಿನಿಂದ ಪ್ರಶ್ನಿಸಿದಾಗ ಕರ್ನಾಟಕದಲ್ಲಿ ಅಷ್ಟಿಷ್ಟಾದರೂ ಮಾಡದೇ ಹೋದಲ್ಲಿ ಪಕ್ಕದ ಕೇರಳದ ಭೂತ ಇಲ್ಲಿಗೂ ಬಂದೀತು. ಅದು ಬಂದ ಮೇಲೆ ನಮ್ಮನ್ನೂ, ನಿಮ್ಮನ್ನೂ ಕೇಳದೇ ಶಾಸನ ಮಾಡಿಬಿಡುತ್ತದೆ." ಎಂದರು ಜತ್ತಿಯವರು, ಆ ದಿನ ಕೇರಳದಲ್ಲಿ ಅಧಿಕಾರಕ್ಕೆ ಬಂದಿದ್ದ ಕಮ್ಯೂನಿಸ್ಟ್ ಸರ್ಕಾರ ಮತ್ತು ಅದು ಬಂದೊಡನೆ ಗೇಣಿದಾರರನ್ನು ಒಕ್ಕಲೆಬ್ಬಿಸದಂತೆ ತಡೆ ತಂದ ಶಾಸನದ ಕುರಿತು ಅವರು ಆ ರೀತಿ ವಿವರಿಸಿದ್ದರು.

ಇದೇ ಜತ್ತಿ ಸಮಿತಿಗೆ ಅಂದಿನ ಕರ್ನಾಟಕ ಪ್ರಾಂತ ರೈತ ಸಂಘ ರಾಜ್ಯಸಮಿತಿ ಮತ್ತು ಬೇರೆ ಬೇರೆ ಜಿಲ್ಲೆಗಳ ಜಿಲ್ಲಾ ರೈತ ಸಂಘಗಳು ಮತ್ತು ಭಾರತ ಕಮ್ಯೂನಿಸ್ಟ್ ಪಕ್ಷ, ಪ್ರಗತಿಪರವಾದ ಮತ್ತು ಗೇಣಿದಾರರ ಪರವಾದ ಭೂಕಾಯ್ದೆ ರಚನೆಗೆ ಬೇಕಾದ ಸಲಹೆಗಳನ್ನು, ಟಿಪ್ಪಣಿಗಳನ್ನು ನೀಡಿದ್ದವು.

ಜತ್ತಿ ಸಮಿತಿಯು ತಾನು ನೇಮಕಗೊಂಡ 4 ತಿಂಗಳೊಳಗೆ ವರದಿಯನ್ನು ಸಲಹಾರೂಪದಲ್ಲಿ ರಾಜ್ಯಸರ್ಕಾರಕ್ಕೆ ಸಲ್ಲಿಸಿತು. ಆದರೆ ಈ ವರದಿಯು ಭೂಮಾಲಕರ ಪರವಾಗಿದ್ದು, ಗೇಣಿದಾರರ, ಬಡವರ ವಿರೋಧಿಯೆಂದು, ಇದರಲ್ಲಿ ಭೂಮಾಲಕ ಹಿತರಕ್ಷಣೆಯ ಭಾರೀ ದ್ವಂದ್ವಗಳಿವೆಯೆಂದು, ಕರ್ನಾಟಕ ಪ್ರಾಂತ ರೈತ ಸಂಘ ಮತ್ತು ಭಾರತ ಕಮ್ಯೂನಿಸ್ಟ್ ಪಕ್ಷಗಳಿಂದ ಬಲವಾಗಿ ಟೀಕೆಗೊಳಗಾಯಿತಲ್ಲದೆ ಇದರ ವಿರುದ್ಧ ರಾಜ್ಯದಾದ್ಯಂತ ಅವು ಹೋರಾಟ ಸಂಘಟಿಸಲು ಮುಂದಾದ ವರದಿಗಳಿವೆ. 1957ರಲ್ಲಿಯೇ ಈ ಸಲಹಾ ರೂಪದ ವರದಿಯನ್ನು ಜತ್ತಿ ಸಮಿತಿಯು ರಾಜ್ಯ ಸರ್ಕಾರಕ್ಕೆ ನೀಡಿದ್ದರೂ, ಅದರಲ್ಲಿರುವ ಲೋಪ ದೋಷ ತಿದ್ದಿ ಸೂಕ್ತ ಭೂಕಾಯ್ದೆ ತರುವಂತಹ ಒತ್ತಾಯವಿದ್ದರೂ, 1961ರವರೆಗೆ ಭೂ ಕಾಯ್ದೆಗಾಗಿ ಜನತೆ ಕಾಯುವ ಪರಿಸ್ಥಿತಿ ಬಂದಿತು.

ಆರಂಭದಲ್ಲಿ ದೊಡ್ಡ ಭೂಮಾಲಕರ ವಿರೋಧದಿಂದಾಗಿ ಮತ್ತು ಸರ್ಕಾರದ ಅರೆಮನಸ್ಸಿನ ಕ್ರಮದಿಂದಾಗಿ ವಿಳಂಬವಾದರೂ, ಆ ನಂತರ ಸ್ವತಃ ಶ್ರೀ ಬಿ.ಡಿ.ಜತ್ತಿಯವರೇ ಮುಖ್ಯಮಂತ್ರಿಯಾದರು ಮತ್ತು ಶ್ರೀ ಕಡಿದಾಳ ಮಂಜಪ್ಪನವರು ರೆವಿನ್ಯೂ ಮಂತ್ರಿಗಳಾದರೂ (1958ರಲ್ಲಿ) ವಿಳಂಬವಾದುದು ವಿಶೇಷ.

1961 ಭೂಸುಧಾರಣಾ ಕಾಯ್ದೆ

ಅಂತೂ ಕೊನೆಗೆ 1961ರಲ್ಲಿ ಕರ್ನಾಟಕ ಭೂಸುಧಾರಣೆ ಕಾಯ್ದೆ- 1961ನ್ನು ಅಂಗೀಕರಿಸಲಾಯಿತು. ಜತ್ತಿ ಸಮಿತಿ ನೇಮಕಗೊಂಡ 4 ತಿಂಗಳಲ್ಲಿ (1957) ವರದಿ ನೀಡಿದ್ದರೂ ಕಾಯ್ದೆಯಾಗಿ ರೂಪುಗೊಳ್ಳಲು 4 ವರ್ಷ ಕಾಯಬೇಕಾಯಿತು.

ಈ ಕಾಯಿದೆಯ ಕಲಂ 2, ಉಪಕಲಂ 12ರಂತೆ 10 ಜನರನ್ನೊಳಗೊಂಡ ಒಂದು ಕುಟುಂಬವು ಕಲಂ 63ರಂತೆ 54 ಸ್ಟ್ಯಾಂಡರ್ಡ್ ಎಕರೆ ಜಮೀನು ಹೊಂದಲು ಅವಕಾಶ ನೀಡುವ 'ಭೂಮಿತಿ'ಯನ್ನು ರೂಪಿಸಿತು. ಅದಕ್ಕೂ ಹೆಚ್ಚಿನ ಭೂಮಿಯನ್ನು ಹೊಂದಿರುವ ಮಾಲೀಕನಿಂದ ಜಮೀನನ್ನು ಸರ್ಕಾರ ವಶಪಡಿಸಿಕೊಂಡು ಮಾಲೀಕನಿಗೆ ಪರಿಹಾರ ನೀಡಲು ಹಾಗೂ ಗೇಣಿದಾರ ರೈತನಿಗೆ ಹಲವು ಕಂತುಗಳಲ್ಲಿ ಮಾರಾಟ ಮಾಡಲು ನಿರ್ಧರಿಸಿತು.

ಅದೇ ರೀತಿ, ಕುದುರೆ ಕಾವಲುಗಳು, ಸಹಕಾರಿ ಫಾರಂಗಳು, ಅನುಮತಿ ಪಡೆದ ಔದ್ಯಮಿಕ ಸಂಸ್ಥೆಗಳು, ದತ್ತಿ-ಮತ-ಧರ್ಮೀಯ ಸಂಸ್ಥೆಗಳು, ಸಾರ್ವಜನಿಕ ಶಿಕ್ಷಣ ಉದ್ದೇಶವುಳ್ಳ ಸಂಸ್ಥೆಗಳು ಮತ್ತು ನ್ಯಾಸ.... ಇವುಗಳು ಹೊಂದಿದ ಭೂಮಿಗೆ 'ಭೂಮಿತಿ' ಕಾಯಿದೆಯಿಂದ ವಿನಾಯಿತಿ ನೀಡಲಾಗಿತ್ತು ಹಾಗೂ ಸಕ್ಕರೆ ಕಾರ್ಖಾನೆಗೆ ಬೇಕಾಗುವ ಕಬ್ಬು ಬೆಳೆಯುವ ಪ್ರದೇಶದಲ್ಲಿ 1/6 ಪ್ರದೇಶವನ್ನು ಭೂಮಾಲಕರು ಹೊಂದಲು ಅವಕಾಶ ನೀಡಿತು.

ಈ ರೀತಿ ಭಾರಿ ರಂಧ್ರಗಳು ಹಾಗೂ ದೋಷಗಳಿಂದ ಕೂಡಿದ್ದ ಈ ಕಾಯ್ದೆಯು ಜಾರಿಗೆ ಬರಲು ಮರಳಿ ನಾಲ್ಕು ವರ್ಷಗಳನ್ನು ತೆಗೆದುಕೊಂಡಿತು. ಅಂತಿಮವಾಗಿ 1965ರಲ್ಲಿ ಜಾರಿಗೊಳಿಸಲಾಯಿತು.

ಕರ್ನಾಟಕ ರೂಪುಗೊಂಡಿದ್ದರಿಂದ ಏಕೀಕರಣ ಪೂರ್ವದ ಕಾಯ್ದೆಗಳಿಂದ ವಂಚಿತರಾಗಿದ್ದ ಗೇಣಿದಾರರು 1961ರ ಕಾಯ್ದೆ ಅಂಗೀಕಾರ ಮತ್ತು 1965ರಲ್ಲಿ ಅದರ ಜಾರಿಯ ಕ್ರಮದಿಂದ ಮತ್ತಷ್ಟು ವಂಚನೆಗೊಳಗಾಗಿದ್ದರು. ಏಕೀಕರಣ ಪೂರ್ವ ಕಾಯ್ದೆಗಳು ಬರುವ ಪೂರ್ವದಲ್ಲಿಯೇ ಗೇಣಿದಾರರ ವಿರುದ್ಧ ಭೂಮಾಲಕರು ಬಲಗೊಳ್ಳುತ್ತಿದ್ದರು. ಅವು ಜಾರಿಯಾಗಲಿಲ್ಲ ಮಾತ್ರವಲ್ಲ ಈ ಕಾಯ್ದೆ 1961 ರೂಪುಗೊಂಡು ಜಾರಿಯಾಗಲು ಸಿಕ್ಕ ಸಮಯ 8 ವರ್ಷಗಳಾಗಿತ್ತು. ಇದರಿಂದಾಗಿ ಭೂಮಾಲಕರು ಮತ್ತಷ್ಟು ಶಕ್ತಿಶಾಲಿಗಳಾಗಿದ್ದರು ಮಾತ್ರವಲ್ಲ ಈ ಕಾಯ್ದೆಯು: " 10 ಜನರ ಕುಟುಂಬವು 54 ಸ್ಟ್ಯಾಂಡರ್ಡ್ ಎಕರೆ ಜಮೀನು ಉಳಿಸಿಕೊಳ್ಳಲು ಅವಕಾಶ ನೀಡಿತ್ತು. ಅಂದರೆ, ಒಂದು ಸ್ಟ್ಯಾಂಡರ್ಡ್ ಎಕರೆ ಜಮೀನಿಗೆ ಇಂದಿನ 8 ಎಕರೆ ಖುಷ್ಕಿ ಜಮೀನು ಸಮಾನವೆನ್ನಲಾಗಿತ್ತು. ಇದರಂತೆ ಸುಮಾರು "432 ಎಕರೆ" "ಸ್ವಂತ ಬೇಸಾಯ"ದ ಹೆಸರಿನಲ್ಲಿ ಇಟ್ಟುಕೊಳ್ಳಲು ಅಪೂರ್ವ ಅವಕಾಶ ನೀಡಿತಲ್ಲದೇ ದತ್ತಿ ಮತ್ತು ಶಿಕ್ಷಣ ಸಂಸ್ಥೆಗಳ ಹೆಸರಿನಲ್ಲಿ ಇದರಷ್ಟೇ ಜಮೀನು ಹೊಂದಲು ಪರಮಾವಕಾಶ ನೀಡಿತ್ತು.

ಸಕ್ಕರೆ ಕಾರ್ಖಾನೆ ಮಾಲೀಕರಿಗಂತೂ ಸುವರ್ಣಾವಕಾಶವನ್ನೇ ನೀಡಿತ್ತು. ಇವರಿಗೆ ಕಬ್ಬು ಬೆಳೆಯುವ ಒಟ್ಟು ಪ್ರದೇಶದ 1/6 ಭಾಗ ಉಳಿಸಿಕೊಳ್ಳಬಹುದೆಂದಿತ್ತು. ಅಂದರೆ, ಉದಾಹರಣೆಗೆ, ಸಕ್ಕರೆ ಕಾರ್ಖಾನೆಗೆ ಬೇಕಾಗುವ ಕಬ್ಬು ಬೆಳೆಯುವ ಪ್ರದೇಶ 1.5 ಲಕ್ಷ ಎಕರೆ ಎಂದಿಟ್ಟುಕೊಂಡರೆ ಅದರ 1/6 ಭಾಗ, ಅಂದರೆ 25,000 ಎಕರೆ ಪ್ರದೇಶ ಉಳಿಸಿಕೊಳ್ಳಲು ಅನುಕೂಲ ಮಾಡಿತ್ತು!?

ಇದಲ್ಲದೇ ಪ್ಲಾಂಟೇಶನ್ ಬೆಳೆಗಳಿಗೆ ಮಿತಿಯೇ ಇರಲಿಲ್ಲ!!? ಹೀಗಾಗಿ ಕಾಯ್ದೆಯು ಭೂಸುಧಾರಣೆಯ ಹೆಸರಿನಲ್ಲಿ ಭೂಮಾಲಕರಿಗೆ ಭದ್ರತೆ ಮತ್ತು ರಕ್ಷಣೆ ಒದಗಿಸುವಂತಿತ್ತು. ಗೇಣಿದಾರರ ಪಾಲಿಗೆ ನಿರರ್ಥಕವಾಗಿತ್ತು. ಕೇಂದ್ರ ಸರ್ಕಾರದ ಸೂಚನೆಯ ಮೇರೆಗೆ 1974ರಲ್ಲಿ ತಿದ್ದುಪಡಿ ಕಾಯ್ದೆಯನ್ನು ಅಂಗೀಕರಿಸಲಾಯಿತು.

1974ರ ತಿದ್ದುಪಡಿ ಕಾಯ್ದೆ

ಈ ತಿದ್ದುಪಡಿ ಕಾಯ್ದೆಯ ಪ್ರಕಾರ, 1961ರ ಕಾಯ್ದೆಯಲ್ಲಿ ಭೂಮಾಲಕರ ಭೂಮಿತಿಯ ಭೂಮಿಯನ್ನು "ಸ್ಟ್ಯಾಂಡರ್ಡ್" ಎಕರೆಗಳೆಂದು ಗುರುತಿಸಿದರೆ ಈ ತಿದ್ದುಪಡಿ ಕಾಯ್ದೆಯು ಆ ಭೂಮಿಯನ್ನು "ಏಕಮಾನ" (unit)ಗಳಲ್ಲಿ ಗುರುತಿಸುತ್ತದೆ. ಅತ್ಯಂತ ಹೆಚ್ಚು ಬೆಲೆ ಬಾಳುವ ಭೂಮಿಯನ್ನು ಒಂದು ಏಕಮಾನವೆಂದಿತು ಮಾತ್ರವಲ್ಲ ಕನಿಷ್ಟ 5 ಜನರ ಕುಟುಂಬವನ್ನು "ಕುಟುಂಬ"ವೆಂದು ವ್ಯಾಖ್ಯಾನಿಸಿತಲ್ಲದೆ, 10 ಜನರ ಗರಿಷ್ಠ ಕುಟುಂಬವನ್ನು ಒಪ್ಪಿತು.

ಈ ಹತ್ತು ಜನರ ಕುಟುಂಬಕ್ಕೆ ಭೂಮಿತಿಯನ್ನು ಗರಿಷ್ಠ 20 ಏಕಮಾನಗಳೆಂದು ತಿದ್ದುಪಡಿ ಮಾಡಿತು. ಅದೇ ರೀತಿ ಭೂಮಿಯನ್ನು ರಾಜ್ಯದಲ್ಲಿ ಎ.ಬಿ.ಸಿ.ಡಿ. ವರ್ಗಗಳೆಂದು ವರ್ಗೀಕರಿಸಿತು. ಹಾಗೆ "ಸ್ವಂತ ಬೇಸಾಯ" ಎಂಬುದನ್ನು ಹಿಂದಿನಂತೆಯೇ "ಸಂಬಳ ಪಡೆದು ಕಾರ್ಯನಿರ್ವಹಿಸುವ ವ್ಯಕ್ತಿಯ ಮೇಲ್ವಿಚಾರಕ" ಎಂಬುದನ್ನು ಉಳಿಸಿಕೊಂಡಿತು. ಸಕ್ಕರೆ ಕಾರ್ಖಾನೆಯ ಮಾಲಿಕರು ಇಟ್ಟುಕೊಳ್ಳಬಹುದಾಗಿದ್ದ 1/6 ಭಾಗದಷ್ಟು ಜಮೀನಿನ ಬದಲಿಗೆ, 50 ಏಕಮಾನಗಳಷ್ಟು ಜಮೀನನ್ನು ಕಬ್ಬು ಬೆಳೆಯ ಸುಧಾರಿತ ಬೀಜ ಸಂಶೋಧನೆಗೆಂದು ಉಳಿಸಿಕೊಳ್ಳಲು ಅವಕಾಶ ನೀಡಿತು.

1961ರ ಕಾಯ್ದೆಯಂತೆ 1974ರ ತಿದ್ದುಪಡಿ ಕಾಯ್ದೆಯ ನಂತರವೂ ಸ್ವಂತ ಸಾಗುವಳಿ ಹೆಸರಿನಲ್ಲಿ ಭೂಮಿತಿಯ ಆಧಾರದಲ್ಲಿ ಭೂಮಿಯನ್ನು ಉಳಿಸಿಕೊಳ್ಳಲು ಅವಕಾಶ ಮುಂದುವರೆಸಿತು.

1961ರ ಕಾಯ್ದೆ ಗರಿಷ್ಠ 432 ಎಕರೆ ಉಳಿಸಿಕೊಳ್ಳಲು ಅವಕಾಶ ನೀಡಿತು. 1974ರ ತಿದ್ದುಪಡಿಯು 10 ಜನರ ಕುಟುಂಬಕ್ಕೆ ಗರಿಷ್ಠ 20 ಏಕಮಾನ ಭೂಮಿ (1 ಏಕಮಾನ 5.4 ಎಕರೆ

ಖುಷ್ಕಿ ಜಮೀನಿಗೆ ಸಮ ಭೂಮಿ ಅಂದರೆ 108 ಎಕರೆ ಖುಷ್ಕಿ ಜಮೀನು) ಉಳಿಸಿಕೊಳ್ಳುವ ಮಿತಿ ಹೇರಿತು. ಇದರ ನಂತರವೂ 1961ರಂತೆಯೇ ದತ್ತಿ-ಮತ್ತಿತರೆ ಶಿಕ್ಷಣ ಸಂಸ್ಥೆಗಳ ಹೆಸರಿನಲ್ಲಿ 20 ಏಕಮಾನ ಉಳಿಸಿಕೊಳ್ಳಲು ಅವಕಾಶ ನೀಡಿತು.

ಭೂ ನ್ಯಾಯ ಮಂಡಳಿಯನ್ನು ಸ್ಥಾಪಿಸಿತಲ್ಲದೇ ಯಾವುದೇ ಸಿವಿಲ್ ನ್ಯಾಯಾಲಯವು ಇವರ ತೀರ್ಪನ್ನು ಪ್ರಶ್ನಿಸಬಾರದೆಂದಿತು. ಮಾತ್ರವಲ್ಲ ಒಂದೆರಡು ವಿನಾಯಿತಿಗಳೊಂದಿಗೆ, ಗೇಣಿ ಪದ್ಧತಿಯನ್ನು ಈ ಹಿಂದಿನಂತೆಯೇ ನಿಷೇಧಿಸಿತು. ಅಂಗವಿಕಲರು, ವಿಧವೆಯರು, ಅಪ್ರಾಪ್ತ ವಯಸ್ಕರು ಭೂಮಿಯನ್ನು ತಮ್ಮ ಹೆಸರಿನಲ್ಲಿಟ್ಟುಕೊಂಡು ಗೇಣಿಗೆ ನೀಡುವ 1961ರ ಕಾಯ್ದೆಯ ಅವಕಾಶವನ್ನು ರದ್ದುಪಡಿಸಿ ಈ ಜನರಿಗೆ ನಿರ್ದಯಿಯಾಯಿತು.

ಈ ಭೂಸುಧಾರಣಾ ಕಾಯ್ದೆಯನ್ನು ದೇಶದಾದ್ಯಂತ ಕ್ರಾಂತಿಕಾರಕ ಭೂಸುಧಾರಣೆಯೆಂದು ವ್ಯಾಪಕವಾಗಿ ಸಾರಲಾಯಿತು. ಈ ಕಾಯ್ದೆಯು ದಿ:ಮಾಜಿ ಮುಖ್ಯಮಂತ್ರಿ ಶ್ರೀ ದೇವರಾಜ್ ಅರಸುರವರಿಗೆ ವ್ಯಾಪಕವಾದ ಪ್ರಚಾರವನ್ನು ತಂದುಕೊಟ್ಟಿತು.

1974 ತಿದ್ದುಪಡಿ ಹೊಂದಿದ ಭೂ ಸುಧಾರಣೆ ಕಾಯ್ದೆ ಜಾರಿ:

ಈ ಹೊಸ ಕಾಯ್ದೆಯಂತೆ 1984ರ ಡಿಸೆಂಬರ್‌ರವರೆಗೆ ಭೂಮಿಯ ವಶ ಕೋರಿ ಅಂದು ಗೇಣಿದಾರರಾಗಿದ್ದ ರೈತರಿಂದ ಸರ್ಕಾರ ರಚಿಸಿದ್ದ ಭೂ ನ್ಯಾಯ ಮಂಡಳಿಗೆ ಒಟ್ಟು 8.15,692 ಅರ್ಜಿಗಳು, ರಾಜ್ಯದಾದ್ಯಂತ ಬಂದವು. ಈ ಗೇಣಿದಾರರು ಕೋರಿದ್ದ ಭೂಮಿಯ ವಿಸ್ತೀರ್ಣ 45,39,310 ಎಕರೆ ಪ್ರದೇಶವಾಗಿತ್ತು.

31.12.1981ರವರೆಗೆ ರಾಜ್ಯ ಸರ್ಕಾರ ರಚಿಸಿದ್ದ ಒಟ್ಟು 292 ಭೂನ್ಯಾಯ ಮಂಡಳಿಗಳು, ಒಟ್ಟು 8,11,153 ಅರ್ಜಿಗಳನ್ನು ಆ ವೇಳೆಗೆ ಇತ್ಯರ್ಥಪಡಿಸಿದವು. ಇವುಗಳಲ್ಲಿ ಗೇಣಿದಾರರ ಪರವಾಗಿ 4,85,050 ಅರ್ಜಿಗಳು ಇತ್ಯರ್ಥವಾಗಿದ್ದವು. ಈ ಅರ್ಜಿಗಳಿಗೆ ದಕ್ಕಿದ ಭೂಮಿ ಒಟ್ಟು 20,94,115 ಎಕರೆಯಷ್ಟಾಗಿತ್ತು. ಆದರೆ ಇದೇ ಸಂದರ್ಭದಲ್ಲಿ 50,677 ರಿಟ್ ಅರ್ಜಿಗಳು ಹೈಕೋರ್ಟ್ (ಉಚ್ಚ ನ್ಯಾಯಾಲಯ)ನಲ್ಲಿ ದಾಖಲಾದವು.

ಈ ಭೂಮಿಯನ್ನು ಸರ್ಕಾರ ವಶಪಡಿಸಿಕೊಳ್ಳಲು ಭೂಮಾಲಕರಿಗೆ 1,91,326 ಜನರಿಗೆ, ಒಟ್ಟು 41.26 ಕೋಟಿ ರೂಪಾಯಿ ಪರಿಹಾರವನ್ನೂ ನೀಡಿತು.

ಅದೇ ಸಂದರ್ಭದಲ್ಲಿ ರಾಜ್ಯ ಸರ್ಕಾರ ನಿರ್ಧರಿಸಿದ ಭೂಮಿತಿಗಿಂತ ಹೆಚ್ಚಿನ ಭೂಮಿಯನ್ನು ಹೆಚ್ಚುವರಿಯೆಂದು ಗುರುತಿಸಲಾಗಿದ್ದು 2,96,355 ಎಕರೆಯಾಗಿತ್ತು. ಆದರೆ ಸರ್ಕಾರ ವಶಪಡಿಸಿಕೊಂಡಿರುವುದು 1,52,317 ಎಕರೆ ಮಾತ್ರ. ಸರಿಸುಮಾರು ಗುರುತಿಸಲಾದುದರಲ್ಲಿ ಶೇ.51% ಇದರಲ್ಲಿ 26 ಸಾವಿರ ಕುಟುಂಬಗಳಿಗೆ ಹಂಚಲಾದ ಜಮೀನು 1,15,661 ಎಕರೆಯಾಗಿದೆ. ಅಂದರೆ ಒಟ್ಟು ಗುರುತಿಸಲಾದ ಹೆಚ್ಚುವರಿ ಜಮೀನಿನ ಶೇ.40 ರಷ್ಟಾಗಿದೆ.

ಒಟ್ಟಾರೆ ಈ ಕಾಯ್ದೆಯಿಂದ ಲಾಭ ಪಡೆದ ಫಲಾನುಭವಿಗಳೆಂದರೆ, 4,85,050 ಗೇಣಿದಾರರು ಮತ್ತು 26,000 ಹೆಚ್ಚುವರಿ ಭೂಮಿ ಪಡೆದವರು. ಒಟ್ಟು 5,11,050 ಜನರಾಗಿದ್ದಾರೆ. ಅಥವಾ ಅಷ್ಟು ಕುಟುಂಬಗಳಾಗಿವೆ. ಇವರು ಪಡೆದ ಒಟ್ಟು ಜಮೀನು 21,09,776 ಎಕರೆಯಾಗುತ್ತದೆ. (ಹೈಕೋರ್ಟ್‌ನಲ್ಲಿ ರಿಟ್ ಸಲ್ಲಿಸಲಾದ ಫಲಾನುಭವಿಗಳನ್ನು ಇದು ಒಳಗೊಂಡಿದೆ)

"ಕ್ರಾಂತಿಕಾರಕ ಭೂಸುಧಾರಣೆ ಯಾರಿಗಾಗಿ...?"

1. ಭೂಮಾಲಕನಿಗಾದ ಲಾಭ

ಉಳುಮೆಯ ಕಾರ್ಯದಲ್ಲಿ ಯಾವುದೇ ರೀತಿಯಲ್ಲಿ ಭಾಗಿಯಾಗದೇ, 1980ರ ದಶಕದಂತೆ ಗರಿಷ್ಠ ಮೊತ್ತ 2 ಲಕ್ಷದಂತೆ ಭೂಮಾಲಕರು ಪಡೆದದ್ದೂ 41.26 ಕೋಟಿ ರೂಪಾಯಿಗಳ ಭಾರಿ ಮೊತ್ತ. ಅದೇ ತಲೆ ತಲಾಂತರಗಳಿಂದ ಸಾಗುಭೂಮಿಯನ್ನೇ ತಾಯಿಯೆಂದು ನಂಬಿ ಸಾಗು ಮಾಡುತ್ತಾ ಬಂದ ಗೇಣಿದಾರ ರೈತರು ಭೂಮಿ ಬಂಜರಾಗದಂತೆ ಕಾಪಾಡಿ ಅಭಿವೃದ್ಧಿಪಡಿಸಿ ಫಲವತ್ತತೆ ಪಡೆಯುವಂತೆ ಮಾಡಿದ್ದರು. ಅವರು ಆ ಭೂಮಿಯ ವಾರ್ಷಿಕ ಒಟ್ಟು ಆದಾಯದ 15-20 ಪಟ್ಟು ಹಣ ನೀಡಿ ಖರೀದಿಸಬೇಕಾಗಿ ಬಂದಿತು.

ಅದೇ ರೀತಿ ಪರಿಹಾರ ಪಡೆದ ಭೂಮಾಲಕರು ಸ್ವಂತ ಸಾಗುವಳಿಗಾಗಿ ಪಡೆದ ಜಮೀನು ಕಡಿಮೆಯದೇನಾಗಿಲ್ಲ. ಭೂಮಾಲಕರ 1,91,326 ಕುಟುಂಬಗಳು ಸರ್ಕಾರ ನಿಗದಿಸಿದ ಕನಿಷ್ಠ ಭೂಮಿತಿ 10 ಏಕಮಾನಗಳು. ಅಂದರೆ 54 ಎಕರೆ ಖುಷ್ಕಿ ಜಮೀನು, ಗರಿಷ್ಟ ಮಿತಿ 20 ಏಕಮಾನಗಳು. ಅಂದರೆ 108 ಎಕರೆ ಖುಷ್ಕಿ ಜಮೀನುವರೆಗೂ ಪಡೆಯುವ ಅವಕಾಶ.

ಇದೂ ಅಲ್ಲದೇ ಭೂಮಾಲಕರು ಭೂಮಿತಿಯಿಂದಾಚೆ, ಭೂಮಿತಿಗೊಳಪಡದ ಭೂಮಿಯನ್ನೂ ಶಿಕ್ಷಣ ಸಂಸ್ಥೆಗಳು ಮುಂತಾದ ಹೆಸರಿನಲ್ಲಿ ಉಳಿಸಿಕೊಂಡದ್ದು ಅದಕ್ಕಿಂತಲೂ ಕಡಿಮೆಯದೇನಾಗಿಲ್ಲ.

ಅನಧಿಕೃತ – ಅಧಿಕೃತ ಒಕ್ಕಲೆಬ್ಬಿಸುವಿಕೆ

ಸ್ವಾತಂತ್ರ್ಯ ಪೂರ್ವದಿಂದಲೂ ರೈತರು ಕೇಳುತ್ತಾ ಬಂದದ್ದು "ಉಳುವವರೇ ಹೊಲದೊಡೆಯ" ರಾಗಬೇಕೆಂಬುದು. ಆದರೆ

ಈ ಸುಧಾರಣೆ ಬಂದ ನಂತರ ಹೊರಳಿ ನೋಡುವಾಗ ಹೆಚ್ಚಿನ ಉಳುವವರು ಕೂಲಿಕಾರರಾಗಿ, ಸಂಬಳದಾಳುಗಳಾಗಿ ಬದಲಾದದ್ದು ವಿಪರ್ಯಾಸವಾಗಿದೆ.

ಕರ್ನಾಟಕ ಏಕೀಕರಣ ಪೂರ್ವದಲ್ಲಿಯೇ ವಿವಿಧ ಪ್ರಾಂತಗಳಲ್ಲಿ ಚಳುವಳಿ ಬೆಳೆದು ಗೇಣಿ ಶಾಸನಗಳು ರೂಪುಗೊಳ್ಳುವಾಗಲೇ ಲಕ್ಷಾಂತರ ಬಡ ಗೇಣಿದಾರರು, ಭೂಮಾಲಕರಿಂದ ಒಕ್ಕಲೆಬ್ಬಿಸಲ್ಪಟ್ಟು, ಕೂಲಿಕಾರರಾಗಿ ಬದಲಾದರು. ಆಗ ಗ್ರಾಮೀಣ ಪ್ರದೇಶದಲ್ಲಿ ಲಭ್ಯವಿದ್ದ ಕೂಲಿಕಾರರ ಸಂಖ್ಯೆ ಸರಿಸುಮಾರು ಶೇ.10ರಷ್ಟಾಗಿತ್ತು. ಆದರೆ ಈ ಒಕ್ಕಲೆಬ್ಬಿಸುವಿಕೆಯ ನಂತರ ಅದು ಬೆಳೆಯಿತು. ಮತ್ತೆ ಗೇಣಿ ಶಾಸನಗಳು ರೂಪುಗೊಂಡು ವಿವಿಧ ಪ್ರಾಂತಗಳಲ್ಲಿ ಗೇಣಿದಾರರನ್ನು ಕರ್ನಾಟಕ ಏಕೀಕರಣಗೊಂಡುದರಿಂದ ರಕ್ಷಿಸುವಲ್ಲಿ ವಿಫಲವಾದವು. ಮಾತ್ರವಲ್ಲ ದೊಡ್ಡ ಭೂಮಾಲಕರ ತೀವ್ರ ವಿರೋಧದ ನಡುವೆ 1969ರಲ್ಲಿ 1961 ಕಾಯ್ದೆ ಜಾರಿಯ ಕ್ರಮವರೆಗಿನ 8 ವರ್ಷಗಳ ಅವಧಿಯಲ್ಲಿ ವ್ಯಾಪಕವಾಗಿ ಸ್ವಂತ ಬೇಸಾಯದ ಹೆಸರಿನಲ್ಲಿ ಮರಳಿ ಲಕ್ಷಾಂತರ ಬಡ ಗೇಣಿದಾರರು ಭೂಮಿ ಬಿಟ್ಟು ಕೂಲಿಕಾರರಾಗಬೇಕಾಯಿತು. ಬಡ ಗೇಣಿದಾರರ ಹತ್ತಿರ ಗೇಣಿ ಮಾಡಿದಂತೆ ರಸೀದಿಗಳಿರುತ್ತಿರಲಿಲ್ಲವಾದ್ದರಿಂದ ತಿರುಗಿ ಬೀಳಲು ಶಕ್ತಿಯಿರುವವರಿಗೂ ಭೂಮಿಗೆ ಅಂಟಿಕೊಳ್ಳಲು ಸಾಧ್ಯವಾಗಲಿಲ್ಲ. ಈ ಅವಧಿಯಲ್ಲಿ ಒಕ್ಕಲೆಬ್ಬಿಸುವಿಕೆಯನ್ನು ತಡೆಯುವ ಯಾವುದೇ ಕಾಯ್ದೆಯನ್ನು ಕ್ರಮವನ್ನು ಸರ್ಕಾರ ಕೈಗೊಳ್ಳಲಿಲ್ಲ. ಇದೆಲ್ಲಾ ಅನಧಿಕೃತವಾಗಿ ನಡೆದರೆ, ಇನ್ನೂ 1961 ಕಾಯ್ದೆಯಂತೆ 1965ರ ಸುಮಾರಿಗೆ ಸಾವಿರಾರು ಎಕರೆ ಪ್ರದೇಶವನ್ನು ಸ್ವಂತ ಸಾಗುವಳಿ ಮತ್ತಿತರೆ ಹೆಸರಿನಲ್ಲಿ ಉಳಿಸಿಕೊಂಡಿದ್ದರಿಂದ ಗೇಣಿದಾರರನ್ನು ಅಧಿಕೃತವಾಗಿಯೇ ಹೊರದಬ್ಬಲಾಯಿತು. ಸುಮಾರು 25ರಿಂದ 30 ಲಕ್ಷ ಗೇಣಿದಾರರು ಒಕ್ಕಲೆಬ್ಬಿಸಲ್ಪಟ್ಟುದನ್ನು ಆಧಾರ ಪೂರ್ವಕವಾಗಿ ಗುರ್ತಿಸಬಹುದಾಗಿದೆ. ಪರಿಣಾಮವಾಗಿ ಕೃಷಿ ಕೂಲಿಕಾರರ ಸಂಖ್ಯೆಯಲ್ಲಿ 1985ರ ಹೊತ್ತಿಗೆ ಅಗಾಧ ಬೆಳವಣಿಗೆಯನ್ನು ಕಾಣಬಹುದು. 35 ಲಕ್ಷಕ್ಕೂ ಅಧಿಕ ಬೆಳವಣಿಗೆಯಾಗಿದೆ.

3. ಭೂಮಾಲಕರು ಕಾನೂನಿಗೆ ವಂಚಿಸಿದ್ದು :

1974ರ ತಿದ್ದುಪಡಿಯ ಕಾಯ್ದೆಯಲ್ಲಿಯೇ ಸಾಕಷ್ಟು ಜಮೀನು ಹೊಂದಲು ಬೇಕಾದಂತಹ ರಂಧ್ರಗಳಿದ್ದರೂ, ಭೂಮಾಲಕರು ರಾಜ್ಯದಲ್ಲಿ ಹಲವೆಡೆ ಕಾನೂನಿನ ಕಣ್ಣಿಗೆ ಮಣ್ಣೆರಚಿ ಭೂಮಿ ಕಬಳಿಸಿದ್ದು ಕೂಡ ಕಡಿಮೆಯದೇನಲ್ಲ.

1) ಪೋಟ್ಯಾ ರಾಮ-(ಗಿಳಿರಾಮ) ನಾರಾಯಣ (ನಾಯಿ?) ಮುಂತಾದ ಇಲ್ಲದ ವ್ಯಕ್ತಿಗಳ ಬೇನಾಮಿ ಹೆಸರಿನಲ್ಲಿ, ಅದೇ ರೀತಿ ಜೀತದಾಳುಗಳಿಗೆ ತಿಳಿಸದೇ ಗುಪ್ತವಾಗಿ ಅವರ ಹೆಸರಿನಲ್ಲಿ ಭೂಮಿಯನ್ನುಳಿಸಿಕೊಂಡ ಭೂಮಾಲಕರ ಸಂಖ್ಯೆ ಅದೆಷ್ಟು? ವಂಚಿಸಿ ಭೂಮಿ ಉಳಿಸಿಕೊಂಡಿದ್ದೆಷ್ಟು ಲೆಕ್ಕವಿದೆಯೇ?

2) ಒಂದೇ ಕುಟುಂಬದ ಬೇರೆ, ಬೇರೆ ವ್ಯಕ್ತಿಗಳನ್ನು ಪ್ರತ್ಯೇಕ-ಪ್ರತ್ಯೇಕ ಕುಟುಂಬಗಳೆಂದು ನೋಂದಾಯಿಸಿ ಭೂಮಿ ಉಳಿಸಿಕೊಂಡದ್ದೆಷ್ಟು?

3) ಕುಟುಂಬದವರೇ ಟ್ರಸ್ಟಿಗಳಾಗಿ ರಚಿಸಿಕೊಂಡ ಶಿಕ್ಷಣ ಸಂಸ್ಥೆಗಳು ದತ್ತಿಗಳೆಷ್ಟು? ಇದಕ್ಕಾಗಿ ಅಧಿಕೃತವಾಗಿ ಉಳಿಸಿಕೊಂಡ ಭೂಮಿಯ ಪ್ರಮಾಣವೆಷ್ಟು?

4. ಶಾನುಭೋಗರು ಕುಲಕರ್ಣಿಗಳೂ ತಲಾಟಿಗಳು ಅವರೇ ಆಗಿದ್ದು ಬಡ ಗೇಣಿದಾರರಿಗೆ ಪಹಣಿ ನೀಡದೇ ವಂಚಿಸಿದ್ದು, ಅದೇ ರೀತಿ ಗೇಣಿ ಭೂಮಿಯ ಗೇಣಿ ನೀಡಿದ್ದಕ್ಕೆ ರಸೀದಿ ನೀಡದೆ ವಂಚಿಸಿದ್ದಲ್ಲದೇ, ಅವರ ಹತ್ತಿರ ಯಾವುದೇ ರಿಕಾರ್ಡ್‌ಗಳಿಲ್ಲವೆಂದು ಒಕ್ಕಲೆಬ್ಬಿಸಿದ್ದು ಕಡಿಮೆ ಸಂಖ್ಯೆಯೇ? ಪ್ರಸಿದ್ಧ ಆರ್ಥಿಕ ತಜ್ಞೆ ಡಾ॥ ಉತ್ಸಾ ಪಟ್ನಾಯಕ್ ತಮ್ಮ ಲೇಖನದಲ್ಲಿ 46 ರೀತಿಯಲ್ಲಿ ದೇಶದಾದ್ಯಂತ ಗೇಣಿ ನಿರತರನ್ನು ಒಕ್ಕಲೆಬ್ಬಿಸಲಾಯಿತೆಂದು ವಿವರಿಸುತ್ತಾರೆ.

5) ಭೂಮಾಲಕರು ತನಗೆ ಬೇಕಾದವರಿಗೆ ಅಥವಾ ಹಣ ನೀಡಿ ಭೂಮಿ ಪಡೆಯುವವರಿಗೆ ರೆಕಾರ್ಡ್ ಇಲ್ಲದ ಬಡ ಗೇಣಿದಾರರನ್ನು ಒಕ್ಕಲೆಬ್ಬಿಸಿ, ಮಾರುಕಟ್ಟೆಯ ದರಕ್ಕೆ ಮಾರಾಟ ಮಾಡಿ, ಅವರನ್ನೇ ಗೇಣಿದಾರರೆಂದು ಅರ್ಜಿ ಹಾಕಿಸಿ ಇವರಿಗೆ ಭೂಮಿ ಸರ್ಕಾರದಿಂದ ಮಾರಾಟ ಮಾಡಿಸಿ, ಸರ್ಕಾರದಿಂದ ಭೂಮಾಲಕನ ಹಣ ಪಡೆದು ಒಂದೆಡೆ ಖರೀದಿಸಿದ ರೈತನಿಗೆ ಇನ್ನೊಂದೆಡೆ ಕಾಯ್ದೆ ತಂದ ಸರ್ಕಾರಕ್ಕೆ ನಾಮ ಹಾಕಿದ ಭೂಮಾಲಕರ ಸಂಖ್ಯೆ ಕಡಿಮೆಯದೇ? ಇದೆಲ್ಲಾ ಗೊತ್ತಿದ್ದು ಪಾಲು ಹಂಚಿಕೊಂಡ ಅಧಿಕಾರಿಗಳು ಭೂನ್ಯಾಯ ಮಂಡಳಿ ಸದಸ್ಯರ ಸಂಖ್ಯೆಯೇನಾದರೂ ಕಡಿಮೆಯದೇ...?

ಈಚೆಗೆ ಇಂತಹ ಭೂಮಿ ಪಡೆದ ರೈತರು ತಮ್ಮ ಭೂಮಿ ಮಾರಾಟ ಮಾಡಲು ಹೋದಾಗ ತಮಗಾದ ಮೋಸ ಅರ್ಥವಾಗುತ್ತಿದೆ. ಸರ್ಕಾರದ ಹೊಸ ನೀತಿ ಪ್ರಕಾರ ಭೂಮಿ ಪಡೆದ ಫಲಾನುಭವಿಗಳು ಸರ್ಕಾರದ ಪರವಾನಿಗಿ ಇಲ್ಲದೇ ಭೂಮಿ ಮಾರುವಂತಿಲ್ಲ.

6) ಭೂಮಿಯನ್ನು ಸರ್ಕಾರ ತಮ್ಮ ಹೆಸರಿಗೆ ನೀಡಿದೆಯೆಂದು ತಿಳಿದರೂ, ಭೂಮಿಯಲ್ಲಿ ಪ್ರವೇಶಿಸುವ ಧೈರ್ಯ ಬಡಜನತೆಗಿಲ್ಲ. ಭೂಮಾಲಕರ ದಬ್ಬಾಳಿಕೆ ಭೀತಿ ಒಂದೆಡೆಯಿದ್ದರೆ, ಅವರು ಗಳಿಸಿದ ಭೂಮಿಯನ್ನು ಅನ್ನ ಕೊಟ್ಟ ಧಣಿಗೆ ಮೋಸ ಮಾಡಿ ಭೂಮಿ ಪಡೆಯುವುದು ಸರಿಯಿಲ್ಲವೆಂಬ ಸ್ವಾಮಿ ಭಕ್ತಿ ಇನ್ನೊಂದೆಡೆ ಇದೆ. ಈಗಲೂ ಭೂಮಿಗೆ ಪಟ್ಟಾ

ನೀಡಿದ ಸರ್ಕಾರ ಭೂಮಿ ಎಲ್ಲಿದೆಯೆಂದು ಸರ್ವೆ ನಡೆಸಿ ತೋರಿಸಿಲ್ಲ. ಭೂಮಾಲಕರೊಂದಿಗೆ ಅಧಿಕಾರಿಗಳ ಶಾಮೀಲು ಇದ್ದೇ ಇದೆ. ಇಲ್ಲವೇ ಸುಳ್ಳು ಹೇಳಿ ಕಳುಹಿಸುವರು. ಇಂತಹ ಭೂಮಿಯ ವಂಚಿತರು ಹೆಚ್ಚಿನವರು ದಲಿತರಾಗಿದ್ದಾರೆ.

4. ಭೂ ಕಾಯ್ದೆಯ ನಂತರ ಗೇಣಿದಾರರು ಬಡವರು ಪಡೆದದ್ದೆಷ್ಟು?

ಕರ್ನಾಟಕವನ್ನು ವಲಯಗಳಾಗಿ ವಿಂಗಡಿಸಿ ಅಲ್ಲಲ್ಲಿ ಗೇಣಿಭೂಮಿ ಪಡೆದ ಫಲಾನುಭವಿಗಳ ಸಂಖ್ಯೆಯನ್ನು ಗಮನಿಸಿದರೆ ಕ್ರಾಂತಿಕಾರಕ ಭೂಸುಧಾರಣೆಯ ಒಳಮರ್ಮ ಬಟ್ಟಬಯಲಾಗುತ್ತದೆ.

ಅ) ಗೇಣಿ ಭೂಮಿಗಾಗಿ ಅರ್ಜಿಗಳನ್ನು ಸಲ್ಲಿಸಿದವರಲ್ಲಿ ಕರಾವಳಿಯ (ಈಗಿನ 3 ಜಿಲ್ಲೆಗಳು) ಅಂದಿನ 2 ಜಿಲ್ಲೆಗಳಾದ ದ.ಕನ್ನಡ ಮತ್ತು ಉ.ಕನ್ನಡ ಜಿಲ್ಲೆಗಳಿಂದ ಶೇ.35ರಷ್ಟು ಅರ್ಜಿದಾರರು ಕಂಡುಬರುತ್ತಾರೆ. ಮಾತ್ರವಲ್ಲ ಗೇಣಿ ಭೂಮಿ ಪಡೆದ ರಾಜ್ಯದ ಒಟ್ಟು ಫಲಾನುಭವಿಗಳಲ್ಲಿ ಶೇ.45ಕ್ಕೂ ಅಧಿಕ ಸಂಖ್ಯೆ ಈ ಜಿಲ್ಲೆಗಳದ್ದಾಗಿದೆ. ಹೀಗಾಗಿ ಉಳಿದ ರಾಜ್ಯದ ಈಗಿನ 28 ಜಿಲ್ಲೆಗಳಲ್ಲಿ ಈ 3 ಜಿಲ್ಲೆಗಳನ್ನು ಬಿಟ್ಟರೆ ಉಳಿದ 25 ಜಿಲ್ಲೆಗಳ ಫಲಾನುಭವಿಗಳು ಶೇ.55 ಮಾತ್ರವಾಗಿದೆ.

ಆ) ಮುಂಬೈ ಕರ್ನಾಟಕ ಪ್ರದೇಶಗಳಾದ ಬೆಳಗಾಂ, ಧಾರವಾಡ, ಬಿಜಾಪುರ (ಅಂದಿನ ಜಿಲ್ಲೆಗಳು) ಅರ್ಜಿ ಸಲ್ಲಿಸಿದವರ ಸಂಖ್ಯೆ ಶೇ.21ರಷ್ಟಾದರೆ ಫಲಾನುಭವಿಗಳಲ್ಲಿ ರಾಜ್ಯದ ಶೇ.23 ಪಾಲನ್ನು ಪಡೆದಿದೆ.

ಇ) ಹೈದ್ರಾಬಾದ್ ನಿಜಾಮನ ಆಳ್ವಿಕೆಗೊಳಗಾಗಿದ್ದ, ಹೈದ್ರಾಬಾದ್ ಕರ್ನಾಟಕದ ಪ್ರದೇಶಗಳಾದ ಬೀದರ್, ಗುಲ್ಬರ್ಗಾ, ರಾಯಚೂರು, ಕೊಪ್ಪಳ, ಬಳ್ಳಾರಿ ಜಿಲ್ಲೆಗಳು ಭೂನ್ಯಾಯಮಂಡಳಿಗಳಿಗೆ ಕೇವಲ ಒಟ್ಟು ಶೇ.12 ರಷ್ಟು ಮಾತ್ರವೇ ಅರ್ಜಿಗಳನ್ನು ಹಾಕಿದರೆ ಒಟ್ಟು ರಾಜ್ಯದ ಫಲಾನುಭವಿಗಳಲ್ಲಿ ಶೇ.5 ಮಾತ್ರದ ಪಾಲನ್ನು ಈ ಜಿಲ್ಲೆಗಳು ಪಡೆದಿವೆ.

ಈ ಜಿಲ್ಲೆಗಳಲ್ಲಿ ನಿಜಾಮನ ಕಾಲದಿಂದಲೂ ಜಾಗಿರ್‌ದಾರಿ-ಜಮೀಂದಾರಿ ಪದ್ಧತಿ ಜಾರಿಯಲ್ಲಿತ್ತು. ಆದರೂ ಈ ಜಿಲ್ಲೆಗಳಿಂದ ಅರ್ಜಿಗಳು ಬಂದಿದ್ದು, ಫಲಾನುಭವಿಗಳು ಪಡೆದಿದ್ದು ಅದಕ್ಕೆ ಹೋಲಿಸಿದರೆ ಅತ್ಯಲ್ಪವಾಗಿದೆ ಅಥವಾ ಇಲ್ಲವೆನ್ನುವಷ್ಟು ಕಡಿಮೆಯಾಗಿದೆ.

ದಕ್ಷಿಣ ಕರ್ನಾಟಕ ಜಿಲ್ಲೆಗಳ ಪರಿಸ್ಥಿತಿ ಇದಕ್ಕಿಂತ ಭಿನ್ನವಾಗೇನೂ ಇಲ್ಲ. ಕೋಲಾರ ಜಿಲ್ಲೆಯಲ್ಲಿ ಸರಿಸುಮಾರು 2,950 ಗ್ರಾಮ/ನಗರ/ಹೋಬಳಿ ಕೇಂದ್ರಗಳಿದ್ದು ಅದರಲ್ಲಿ 600ರಷ್ಟು ಜೋಡಿ ಇನಾಂತಿ ಗ್ರಾಮಗಳಿದ್ದರೂ ಅಲ್ಲಿಂದ ಹಾಕಲ್ಪಟ್ಟ ಅರ್ಜಿಗಳ ಸಂಖ್ಯೆ 24,503- ಫಲಾನುಭವಿಗಳ ಸಂಖ್ಯೆ 12,609 ಮಾತ್ರವೇ ಆಗಿದೆ.

ಒಟ್ಟಾರೆ ಈ ಭೂಸುಧಾರಣೆಯ ಹೆಚ್ಚಿನ ಲಾಭ ದಕ್ಷಿಣ ಕನ್ನಡ ಜಿಲ್ಲೆಗೆ ಸಿಕ್ಕಿದ್ದುಬಿಟ್ಟರೆ ಉಳಿದ ಜಿಲ್ಲೆಗಳಿಗೆ ಕಡಿಮೆಯೇ.

ಪಶ್ಚಿಮ ಬಂಗಾಳ ಮತ್ತು ಕರ್ನಾಟಕ ಭೂಸುಧಾರಣೆಗಳ ವ್ಯತ್ಯಾಸ ಮತ್ತು ಭಿನ್ನವಾದ ಪರಿಣಾಮಗಳು

1. ಪಶ್ಚಿಮ ಬಂಗಾಳ ಸರ್ಕಾರವು 10.69 ಲಕ್ಷ ಎಕರೆ ಜಮೀನನ್ನು ಭೂಮಾಲಕರಿಂದ ವಶಪಡಿಸಿಕೊಂಡು, ಒಟ್ಟು 26.43 ಲಕ್ಷ ಫಲಾನುಭವಿಗಳಿಗೆ ಹಂಚಿದೆ. ಇದರಲ್ಲಿ ಶೇ.56ರಷ್ಟು ಬಡಜನರು ಪರಿಶಿಸ್ಟ ಜಾತಿ, ಪರಿಶಿಷ್ಟ ಪಂಗಡ (ಎಸ್.ಸಿ/ಎಸ್.ಟಿ)ಕ್ಕೆ ಸೇರಿದ್ದಾರೆ.

ಅದೇ ರೀತಿ 15 ಲಕ್ಷ ಗೇಣಿದಾರರ ಹಕ್ಕುಗಳನ್ನು ದಾಖಲಿಸಲಾಗಿದೆ. ಮಾತ್ರವಲ್ಲ 11.08 ಲಕ್ಷ ಎಕರೆ ಭೂಮಿಯನ್ನೊಳಗೊಂಡಂತೆ 5.44 ಲಕ್ಷ ಬಡ ಕುಟುಂಬಗಳಿಗೆ ವಸತಿಗಾಗಿ ಭೂಮಿಯನ್ನೂ ನೀಡಲಾಗಿದೆ. ಇದರ ಪರಿಣಾಮವಾಗಿ ಒಟ್ಟಾರೆ ಕೃಷಿ ಭೂಮಿಯ ಶೇ.72ರಷ್ಟನ್ನು ಸಣ್ಣ ಮತ್ತು ಬಡ ರೈತ ಕುಟುಂಬಗಳು ನಿರ್ವಹಿಸುತ್ತಿರುವುದನ್ನು ಕಾಣುತ್ತೇವೆ.

ಇಷ್ಟು ಮಾತ್ರವೇ ಅಲ್ಲ. 1993ರಲ್ಲಿ ಭಾರತದ ಫಾರೆಸ್ಟ್ ಸರ್ವೆ ಪ್ರಕಟಿಸಿದ ಭಾರತ ಸರ್ಕಾರದ ಪರಿಸರ ಮತ್ತು ಅರಣ್ಯ ಇಲಾಖೆ ವರದಿಯಿಂದ ತಿಳಿಯುವುದೇನೆಂದರೆ, ಪಶ್ಚಿಮ ಬಂಗಾಳದಲ್ಲಿ 171 ಚದರ ಕಿ.ಮೀನಷ್ಟು ಕಾಡು ವಿಸ್ತರಿಸಲ್ಪಟ್ಟಿದೆ. ಇದೇ ಅವಧಿಯಲ್ಲಿ ದೇಶದಾದ್ಯಂತ ವಿಸ್ತರಿಸ್ಪಟ್ಟ ಕಾಡಿನ ಪ್ರಮಾಣ ಕೇವಲ 22 ಚದರ ಕಿ.ಮಿ.ಗಳಾಗಿವೆ. ಪಶ್ಚಿಮ ಬಂಗಾಳದ ಘನಸಾಧನೆಗೆ ಪಂಚಾಯತ್‌ರಾಜ್ ಸಂಸ್ಥೆಯ ಸಕ್ರಿಯ ಸಹಾಯದಿಂದ ಜನತೆಯ ವಿವಿಧ ವಿಭಾಗಗಳಲ್ಲಿ ಬೆಳೆಸಲಾದ "ವನಸಂಸ್ಕೃತಿ"ಯು ಕಾರಣವಾಗಿದೆ. 3000ಕ್ಕಿಂತಲೂ ಅಧಿಕವಾಗಿ ರಚಿಸಲಾದ ಅರಣ್ಯ ಸಂರಕ್ಷಣಾ ಸಂಸ್ಥೆಯಲ್ಲಿ 10 ಲಕ್ಷದಷ್ಟು ಆದಿವಾಸಿಗಳು ಹಿಂದುಳಿದ ವಿಭಾಗದ ಇತರ ಬಡಜನರಿದ್ದು, ಇವುಗಳ ಮೂಲಕ 3900 ಚ.ಕೀ.ಮೀ ವ್ಯಾಪ್ತಿಯ ಅರಣ್ಯದ ನಿಗಾವಹಿಸಲಾಗುತ್ತಿದೆ. ಇವರಿಗೆ ಪರಂಪರಾಗತ ಅರಣ್ಯದ ಹಕ್ಕುಗಳನ್ನು ಅಲ್ಲಿನ ಸರ್ಕಾರ ನೀಡಿದೆ.

2. ಭಾರೀ ಕ್ರಾಂತಿಕಾರಕ ಭೂಸುಧಾರಣೆಯೆಂದು ಕರೆಯಲಾದ ಕರ್ನಾಟಕದ ಭೂಕಾಯ್ದೆಯ ಮೂಲಕ ಲಾಭ ಪಡೆದ ಗೇಣಿದಾರರು-ಬಡವರ ಸಂಖ್ಯೆ ಕೇವಲ 5,11,050.

ಪಶ್ಚಿಮ ಬಂಗಾಳದಲ್ಲಿ ಇದರ ಸಂಖ್ಯೆ ಹೆಚ್ಚಿದ್ದು 41.43,000 ಲಕ್ಷ ದಾಟುತ್ತದೆ.

3. ಕರ್ನಾಟಕದಲ್ಲಿ ಈಗಲೂ ಸಣ್ಣ-ಅತಿ ಸಣ್ಣ ಹಿಡುವಳಿದಾರರ ಕೈಯಲ್ಲಿ ಶೇ.34ರಷ್ಟು ಮಾತ್ರವೇ ಭೂಮಿ ಇದೆ. (ಇದರಲ್ಲಿ ಸಣ್ಣ ರೈತರೆಂದು ಹೆಸರಿದ್ದವರೆಲ್ಲಾ ಬಡ ರೈತರಾಗಿಲ್ಲ) ಈಗಲೂ ಶೇ.1.11ರಷ್ಟಿರುವ ದೊಡ್ಡ ಹಿಡುವಳಿದಾರರ ಕೈಯಲ್ಲಿ ಶೇ.11 ರಷ್ಟು ಜಮೀನು ಉಳಿದಿದೆ.

4. ಪರಿಣಾಮವಾಗಿ ಕರ್ನಾಟಕ-ಪಂಚಾಯತ್‌ರಾಜ್ ಸಂಸ್ಥೆಗಳಲ್ಲಿ ಗ್ರಾಮೀಣ ಪ್ರದೇಶದ ಭೂಮಾಲಕರು/ ಬಡ್ಡಿ ವ್ಯಾಪಾರಸ್ಥರು/ ಕಾಂಟ್ರಾಕ್ಟ್‌ದಾರರ ವಶದಲ್ಲಿದ್ದರೇ, ಪಶ್ಚಿಮ ಬಂಗಾಳದಲ್ಲಿ ಪಂಚಾಯತ್‌ರಾಜ್ ಸಂಸ್ಥೆಯು ಶೇ.95ಕ್ಕೂ ಹೆಚ್ಚಿನ ಭಾಗ ಬಡರೈತರ ಕೂಲಿಕಾರರ ವಶದಲ್ಲಿವೆ.

5. ಕರ್ನಾಟಕ ರಾಜ್ಯದ ಭೂ ಸುಧಾರಣಾ ಕಾಯ್ದೆಯು ಗೇಣಿ ಪದ್ಧತಿಯನ್ನು ರದ್ದುಪಡಿಸಿ, ಗೇಣಿದಾರರಿಗೆ ಕಾನೂನು ರಕ್ಷಣೆ ಇಲ್ಲದಂತೆ ಮಾಡಿದೆ. ಈಗಲೂ ಕರ್ನಾಟಕದ ಗ್ರಾಮೀಣ ಪ್ರದೇಶದಲ್ಲಿ ವ್ಯಾಪಕವಾಗಿ ಅನಧಿಕೃತ ಗೇಣಿ ಪದ್ಧತಿ ಚಾಲ್ತಿಯಲ್ಲಿದೆ. ಇದರಿಂದ ಗೇಣಿದಾರರು ಭೂಮಾಲಕರ ಶೋಷಣೆಗೆ ವ್ಯಾಪಕವಾಗಿ ತುತ್ತಾಗಿದ್ದಾರೆ. ಆದರೆ ಪಶ್ಚಿಮ ಬಂಗಾಳದಲ್ಲಿ ಗೇಣಿ ಸಂರಕ್ಷಣೆಯನ್ನು ಜಾರಿಗೆ ತಂದಿದ್ದರಿಂದ ಈಗಲೂ ಗೇಣಿದಾರರಿಗೆ ಕಾನೂನಿನ ನೆರವು-ಸಂರಕ್ಷಣೆಗೆ ಹೊಂದಲು ಅವಕಾಶವಾಗಿದೆ.

6. ಕರ್ನಾಟಕದಲ್ಲಿ ದಿನೇ ದಿನೇ ದಲಿತರು, ಎಸ್.ಸಿ/ ಎಸ್.ಟಿಗಳು, ಅಲ್ಪಸಂಖ್ಯಾತರ ಮೇಲೆ ದೌರ್ಜನ್ಯ-ದಬ್ಬಾಳಿಕೆಗಳು ಹೆಚ್ಚುತ್ತಿವೆ. ಜಾತಿವಾದಿ-ಕೋಮುವಾದಿ ಶಕ್ತಿಗಳು ಮತ್ತು ಜಾತಿರಾಜಕಾರಣ ಬೆಳೆಯುತ್ತಿದೆ. ಜಾತಿ ಸಂಘಗಳನ್ನು ಕೋಮುವಾದಿಶಕ್ತಿಗಳು ಬಳಸಿ ಬೆಳೆಯುತ್ತಿವೆ.

ದಲಿತರಿಗೆ ಮಲ ತಿನ್ನಿಸುವ-ಮೂತ್ರ ಕುಡಿಸುವ ಅಮಾನವೀಯ ಘಟನೆಗಳು ನಡೆದಿವೆ. ದಲಿತರ ಕೇರಿಗಳಿಗೆ ಬೆಂಕಿ ಹಚ್ಚುವ, ಅವರನ್ನು ಸಾಮೂಹಿಕ, ಸಾಮಾಜಿಕ ಬಹಿಷ್ಕಾರಕ್ಕೊಳಪಡಿಸುವ ಕೆಲಸಗಳು ಈಗಲೂ ಎಗ್ಗಿಲ್ಲದೇ ಸಾಗಿವೆ. ಈಗಲೂ ದಲಿತರು ನಗರಗಳನ್ನು ಬಿಟ್ಟರೇ ಎಲ್ಲೆಡೆ ಪ್ರತ್ಯೇಕ ಕೇರಿಗಳಲ್ಲಿಯೇ ವಾಸಿಸುತ್ತಿದ್ದಾರೆ. ಸಾರ್ವಜನಿಕ ನೀರಿನ ಮೂಲಗಳ ಬಳಕೆ, ನೀರಿನಲ್ಲಿ, ದೇವಸ್ಥಾನಗಳು, ಟೀ ಹೋಟೆಲ್‌ಗಳು, ರೆಸ್ಟೋರೆಂಟ್‌ಗಳು, ಸಾರ್ವಜನಿಕ ಸ್ನಾನಗ್ರಹ, ರಸ್ತೆ ಮತ್ತಿತರೇ ಸಾಮಾಜಿಕ ಸೇವೆಗಳಲ್ಲಿ ಅಸ್ಪೃಶ್ಯಾಚರಣೆ ಮುಂದುವರೆದಿದೆ.

ಪಶ್ಚಿಮ ಬಂಗಾಳದಲ್ಲಿ ಬೆಳೆದ ಎಡಚಳುವಳಿ, ಎಡರಂಗ ಸರ್ಕಾರ, ಭೂಸುಧಾರಣೆಗಳಲ್ಲಿನ ಕ್ರಮಗಳು, ಇವುಗಳಿಂದಾಗಿ, ಇಂತಹ ಘಟನೆಗಳು ಇಲ್ಲವೇ ಇಲ್ಲವೆನ್ನುವಷ್ಟು ವಿರಳವಾಗಿದೆ. ತೀವ್ರವಾದ ಸೈದ್ಧಾಂತಿಕ ಪ್ರಚಾರಾಂದೋಲನಗಳಿಂದಾಗಿ, ಅಸ್ಪೃಶ್ಯತೆ, ಜಾತಿ ತಾರತಮ್ಯ ಜಾತಿದಬ್ಬಾಳಿಕೆಗಳನ್ನು ಬಹುಮಟ್ಟಿಗೆ ಕಡಿಮೆಗೊಳಿಸಲಾಗಿದೆ.

2001ರಲ್ಲಿ ಎಸ್.ಸಿ/ಎಸ್.ಟಿ.ಗಳ ಮೇಲಿನ ದಬ್ಬಾಳಿಕೆ. ಹಿನ್ನೆಲೆಯಲ್ಲಿ ದಾಖಲಿಸಲಾದ ಅಪರಾಧ ಮೊಕದ್ದಮೆಗಳ ಸಂಖ್ಯೆಯು ದೇಶದಲ್ಲಿ 33,503ರಷ್ಟಿದೆ. (ಅದರಲ್ಲಿ 716 ಕೊಲೆಗಳು, 1316 ಅಪರಾಧಗಳು, 400 ಅಪಹರಣಗಳು ಸೇರಿವೆ) ಪಶ್ಚಿಮ ಬಂಗಾಳದಲ್ಲಿ ಅದೇ ವರ್ಷ ಅಂತಹ ಅಪರಾಧಗಳ ಸಂಖ್ಯೆ ಕೇವಲ 10 ಮಾತ್ರವೇ ಆಗಿತ್ತು.

ಇದೇ ವರ್ಷ ಅಖಿಲ ಭಾರತ ಮಟ್ಟದಲ್ಲಿ ದಲಿತರು ಸೇರಿದಂತೆ ಎಸ್.ಸಿಗಳ ವಿರುದ್ಧ ಎಸಗಿರುವ ಅಪರಾಧಗಳ ಸಂಖ್ಯೆ 6,217ರಷ್ಟಿದ್ದರೆ (ಅದರಲ್ಲಿ 167 ಕೊಲೆಗಳು, 573 ಅತ್ಯಾಚಾರಗಳು, 67 ಅಪಹರಣಗಳು ಸೇರಿವೆ) ಪಶ್ಚಿಮ ಬಂಗಾಳದಲ್ಲಿ ಇಂತಹ ಅಪರಾಧಗಳ ಸಂಖ್ಯೆ ಕೇವಲ 02 ಮಾತ್ರವೇ ಆಗಿದೆ.

7. ಜಾಗತೀಕರಣ, ಉದಾರೀಕರಣ, ಖಾಸಗೀಕರಣ ನೀತಿಯ ಪರಿಣಾಮವಾಗಿ ಕರ್ನಾಟಕ ರಾಜ್ಯದಲ್ಲಿ 10 ಸಾವಿರಕ್ಕೂ ಹೆಚ್ಚು ರೈತರು ಆತ್ಮಹತ್ಯೆ ಮಾಡಿಕೊಂಡಿದ್ದಾರೆ. ಈಗಲೂ ಆತ್ಮಹತ್ಯೆಗಳು ಮುಂದುವರೆದಿವೆ. ಮಾತ್ರವಲ್ಲ ಕೂಲಿಕಾರರ-ಬಡವರ ಹಸಿವಿನ ಸಾವುಗಳು ಘಟಿಸಿವೆ. ಕೊಪ್ಪಳ ಜಿಲ್ಲೆಯ ರಾಂಪುರದಲ್ಲಿ 6 ಜನರ ಇಡೀ ಕುಟುಂಬವೇ ಹಸಿವಿನ ಬಾಧೆ ತಾಳಲಾಗದೇ ಆತ್ಮಹತ್ಯೆ ಮಾಡಿಕೊಂಡ ದುರಂತ ಸಂಭವಿಸಿತು.

ಆದರೆ ಪ.ಬಂಗಾಳದಲ್ಲಿ ಮಾತ್ರ ಇಲ್ಲಿಯವರೆಗೆ ಯಾವುದೇ ಇಂತಹ ಪ್ರಕರಣಗಳು ಘಟಿಸದಿರುವುದು ವಿಶೇಷ.

ಕರ್ನಾಟಕ ಭೂಸುಧಾರಣಾ ಕಾಯ್ದೆಗೆ 1995ರ ತಿದ್ದುಪಡಿ :ಕರ್ನಾಟಕದಲ್ಲಿ ಗೇಣಿದಾರರ ಮತ್ತು ಬಡಜನರ ಪರಿಸ್ಥಿತಿಯು ಈ ಮೇಲೆ ಚರ್ಚಿಸಿದಂತಿರುವಾಗಲೇ ಕರ್ನಾಟಕ ರಾಜ್ಯ ಸರ್ಕಾರ ಪುನಹ 1995ರಲ್ಲಿ ಭೂಮಾಲಕರ ಹಾಗೂ ಬಂಡವಾಳದಾರರ ಹತ್ತಿರ ಭೂಕೇಂದ್ರೀಕರಣವಾಗುವಂತೆ ತಿದ್ದುಪಡಿಯನ್ನು ಮಾಡಿದೆ. ಇದರಂತೆ ಮುಖ್ಯವಾಗಿ "ಕೃಷಿ"ಯ ಪರಿಕಲ್ಪನೆಯೊಳಗೆ ಅಕ್ವಾಕಲ್ಚರ್ (ಮೀನುಗಾರಿಕೆ) ಮತ್ತು ಹಾರ್ಟಿಕಲ್ಚರ್ (ತೋಟಗಾರಿಕೆ)ಗಳನ್ನು ಸೇರಿಸಲಾಗಿದೆ. ಇವುಗಳಿಗಾಗಿ ಭೂಮಿಯನ್ನು ಪಡೆಯಲು ಅವಕಾಶ ನೀಡಲಾಗಿದೆ.

ಅಕ್ವಕಲ್ಚರ್‌ಗಾಗಿ ಭೂಮಿಯನ್ನು ಗೇಣಿಗೆ ಪಡೆಯಲು ದಕ್ಷಿಣ ಕನ್ನಡ ಮತ್ತು ಉ.ಕನ್ನಡದ ಜಿಲ್ಲೆಗಳಿಗೆ ಮಿತಿಗೊಳಿಸಲಾಗಿದೆ.

ಗೇಣಿಗಾಗಿ ಭೂಮಿ ಪಡೆಯುವ ಒಪ್ಪಂದವು 20 ವರ್ಷಗಳವರೆಗೆ ಇರಬಹುದೆನ್ನಲಾಗಿದೆ. ಇಲ್ಲೂ ಕೂಡ ಗೇಣಿಗಾಗಿ ಪಡೆಯುವ ಭೂಮಿಯ ಮಿತಿಯನ್ನು ಇಂತಿಷ್ಟೆಂದು ನಮೂದಿಸಲಾಗಿಲ್ಲದಿರುವುದು ವಿಶೇಷ. ಕರ್ನಾಟಕ ಭೂಸುಧಾರಣೆ ಕಾಯ್ದೆ-1961ರಲ್ಲಿ ಕಲಂ 5ರ ಉಪಕಲಂ 2ರಲ್ಲಿ 'ಬಿ' ಎಂದು ಸೇರ್ಪಡೆ ಮಾಡಲಾಗಿದೆ.

ಕಲಂ 109ರಂತೆ ರಾಜ್ಯದ ಯಾವುದೇ ಭಾಗದಲ್ಲಿ ತೋಟಗಾರಿಕೆ ಹಾಗೂ ಹೂ ಬೇಸಾಯಕ್ಕಾಗಿ ಮತ್ತು ಕೃಷಿ ಆಧಾರಿತ ಕೈಗಾರಿಕೆಗಳಿಗಾಗಿ 20 ಏಕಮಾನಗಳಷ್ಟು ಅಂದರೆ 108 ಎಕರೆ ಖುಷ್ಕಿ ಜಮೀನು ಪಡೆಯಲು ಯಾವುದೇ ವ್ಯಕ್ತಿಗೆ ಪರವಾನಿಗೆ ನೀಡಲು ಸರ್ಕಾರ ಅಧಿಕಾರ ಹೊಂದಿದೆ.

ಅದೇ ರೀತಿ ಕೃಷಿ ಭೂಮಿಯನ್ನು ಹೊರತುಪಡಿಸಿದ 2 ಲಕ್ಷಗಳಷ್ಟು ಆದಾಯವಿರುವ ಯಾವುದೇ ವ್ಯಕ್ತಿ, ಕುಟುಂಬ, ಅಥವಾ ಜಂಟಿ ಕುಟುಂಬ ಭೂಮಿಯನ್ನು ಪಡೆಯಲು ಕಲಂ 79-ಎ ಮೂಲಕ ನೀಡಲಾಗಿನೆ.

ಈ ಎಲ್ಲಾ ತಿದ್ದುಪಡಿಗಳು ಭೂಕೇಂದ್ರೀಕರಣದ ಪರವಾಗಿವೆಯಲ್ಲದೇ ಬಡ ಕೃಷಿಕರ ಪರವಾಗಿಲ್ಲವೆಂಬುದು ಸ್ಪಷ್ಟವಾಗಿದೆ. ಈ ಮೂಲಕ ಭೂಮಾಲಕರ ಮತ್ತು ಭೂಮಾಲಕ-ಬಂಡವಾಳದಾರರ ಕುಟುಂಬಗಳು 1000ಕ್ಕಿಂತ ಹೆಚ್ಚು ಎಕರೆ ಜಮೀನು ಹೊಂದಲು ಅವಕಾಶಗಳನ್ನುಂಟುಮಾಡಿದೆ. ಹಾಗೂ ಭೂಮಾಲಕ-ಬಂಡವಾಳದಾರರ ಸಂಖ್ಯೆಯನ್ನು ಕೃಷಿ ಹಿಡುವಳಿಯಲ್ಲಿ ಹೆಚ್ಚಿಸುವ ಕ್ರಮವು ಇದಾಗಿದೆ.

ಪಶ್ಚಿಮ ಬಂಗಾಳದ ಮಾದರಿಯಲ್ಲಿ ಭೂಸುಧಾರಣೆ ತಿದ್ದುಪಡಿ ತರುವ ಬದಲು ಈ ರೀತಿಯ ಭೂಸುಧಾರಣೆಗೆ ಹೋದಲ್ಲಿ, ಗ್ರಾಮೀಣ ಪ್ರದೇಶದಲ್ಲಿ ಬಡತನ ಮತ್ತಷ್ಟು ವ್ಯಾಪಕವಾಗುವುದಲ್ಲದೇ, ಪಟ್ಟಭದ್ರ ಹಿತಾಸಕ್ತಿಗಳ ದೌರ್ಜನ್ಯಕ್ಕೆ, ಜನತೆಯ ತೀವ್ರತರವಾದ ಶೋಷಣೆಗೆ, ಕೆಳಗಡೆ ಕಾನೂನೇತರ ಸರ್ವಾಧಿಕಾರಕ್ಕೆ ಮತ್ತಷ್ಟು ಕುಮ್ಮಕ್ಕು ನೀಡಿದೆ.

ಉಪಸಂಹಾರ

ಕರ್ನಾಟಕ ರಾಜ್ಯ ಸಮಗ್ರ ಅಭಿವೃದ್ಧಿ ಸಾಧಿಸಬೇಕಾದರೆ, ಕರ್ನಾಟಕದಲ್ಲಿ ಅಸ್ಪೃಶ್ಯಾಚರಣೆ, ಜಾತಿ ತಾರತಮ್ಯ, ಜಾತಿ ದಬ್ಬಾಳಿಕೆ, ಮೂಢನಂಬಿಕೆ, ಕಂದಾಚಾರಗಳು ಕಡಿಮೆಯಾಗಬೇಕಾದರೆ, ಬಡತನ, ಅನಕ್ಷರತೆ, ದೇವದಾಸಿ ಪದ್ಧತಿ, ಬಾಲಕಾರ್ಮಿಕ ಪದ್ಧತಿ, ಜೀತಗಾರಿಕೆ ಮುಂತಾದ ಅನಿಷ್ಟ ತೊಲಗಬೇಕಾದರೆ, ತಳಹದಿಯಲ್ಲಿ ಭೂಮಿಯ ಪ್ರಶ್ನೆ ಬಂಗಾಳದ ಮಾದರಿಯಲ್ಲಿ ಇತ್ಯರ್ಥಗೊಳ್ಳುವುದೊಂದೇ ಪ್ರಧಾನಾಂಶವಾಗಿದೆ.

ಆದ್ದರಿಂದಲೇ ಸಿಪಿಐ(ಎಂ) ಪಕ್ಷದ ಕಾರ್ಯಕ್ರಮವು "ಉಳುವವರೇ ಭೂ ಒಡೆಯರಾಗುವುದು" ಪ್ರಗತಿಪರ ಭೂಸುಧಾರಣೆ ಜಾರಿಗೆ ತರುವುದು ಪ್ರಜಾಸತ್ತೆಯ ತಿರುಗುಣಿಯಾಗಿದೆ" ಎಂದು ಹೇಳಿದೆ.

ಕರ್ನಾಟಕ ಪ್ರಾಂತ ರೈತ ಸಂಘ ಸರಿಯಾಗಿಯೇ ಗುರುತಿಸಿದಂತೆ ಭೂಸುಧಾರಣಾ ಕಾಯ್ದೆಗೆ ತಿದ್ದುಪಡಿ ತರಬೇಕಾಗಿದೆ.

1. ರಾಜ್ಯಾದ್ಯಂತ ಈಗ ಸಾಗುವಳಿ ನಿರತರಾದ ಅನಧಿಕೃತ ಗೇಣಿದಾರರನ್ನು ಒಕ್ಕಲೆಬ್ಬಿಸದಂತೆ ತಡೆಯುವ ಶಾಸನ ರೂಪಿಸಬೇಕು ಮತ್ತು ಅವರನ್ನು ಕಾಲಮಿತಿಯಲ್ಲಿ ನೋಂದಾಯಿಸಿಕೊಳ್ಳುವ ಕ್ರಮಗಳಾಗಬೇಕು. ಗೇಣಿನಿರ್ಧಾರಕ ಹಾಗೂ ಗೇಣಿ ಸಂರಕ್ಷಣಾ ಕಾಯ್ದೆ ರೂಪಿಸಬೇಕು.

2. ಭೂ ದಾಖಲೆಗಳನ್ನು ರಾಜ್ಯಮಟ್ಟದಲ್ಲಿ ಕ್ರೋಢೀಕರಿಸಬೇಕು.

3. ಭೂನ್ಯಾಯ ಮಂಡಳಿಗಳು ಆಯಾ ಗ್ರಾಮದಲ್ಲಿಯೇ ಸಾರ್ವಜನಿಕರೆದುರು ಪಂಚಾಯ್ತಿ ನಡೆಸಿ ತೀರ್ಪು ನೀಡಬೇಕು. ಅದೇ ರೀತಿ ಗೇಣಿ ಹಕ್ಕಿಗೆ ರೆಕಾರ್ಡ್‌ಗಳನ್ನಷ್ಟೇ ಸಾಕ್ಷಿಗಳಾಗಿ ಪರಿಗಣಿಸಬಾರದು. ಭೂ ನ್ಯಾಯ ಮಂಡಳಿಯಲ್ಲಿ ಬಡ ರೈತ/ಕೂಲಿಕಾರರ ಗೇಣಿದಾರರ ಪ್ರತಿನಿಧಿಗಳಿರುವಂತೆ ಕ್ರಮಗಳಾಗಬೇಕು.

4. ಈ ಕಾಯ್ದೆಯಲ್ಲಿನ ಭೂಮಿ ಸೋರಿಕೆಯ ರಂಧ್ರಗಳನ್ನು ಮುಚ್ಚಬೇಕು.

5. ಕುಟುಂಬದ ವ್ಯಾಖ್ಯೆಯು ತಿದ್ದುಪಡಿಯಾಗಬೇಕು. ಈಗಿರುವ ವ್ಯಾಖ್ಯೆಯು ಭೂಕೇಂದ್ರೀಕರಣಕ್ಕೆ ನೆರವಾಗುತ್ತಿದೆ.

6. ಉಚ್ಛ ನ್ಯಾಯಾಲಯದಲ್ಲಿರುವ ಭೂಸಂಬಂಧಿ ಕೇಸುಗಳನ್ನು ಸಮಯಮಿತಿಯಲ್ಲಿ ಕೂಡಲೇ ವಿಲೇವಾರಿಯಾಗುವಂತೆ ಕ್ರಮವಹಿಸಬೇಕು.

7. ಭೂಹೀನ ಬಡವರು ಸಾಗು ಮಾಡುತ್ತಿರುವ ಅರಣ್ಯ ಭೂಮಿಯನ್ನು ಅವರ ವಶಕ್ಕೆ ನೀಡಲು 1981ರ ಅರಣ್ಯ ಕಾಯ್ದೆಗೆ ಸೂಕ್ತ ತಿದ್ದುಪಡಿಗೆ ಮುಂದಾಗಬೇಕು. ಅಲ್ಲಿಯವರೆಗೆ ಅವರನ್ನು ಒಕ್ಕಲೆಬ್ಬಿಸದಂತೆ ನೋಂದಾಯಿಸಿಕೊಳ್ಳಬೇಕು.

8. ಸಾಗುನಿರತ ಬಡರೈತ/ ಕೂಲಿಕಾರರು, ಸರ್ಕಾರದ ಅಕ್ರಮ ಸಾಗುವಳಿ ಭೂಮಿಯ ವಿತರಣೆ, ಸಾಗುನಿರತ ಬಡವರಿಗೆ ಆಗಬೇಕು. ಇವರನ್ನು ನೋಂದಾಯಿಸುವ ಕೆಲಸ ಕೂಡಲೇ ಆಗಬೇಕು. ಭೂವಿತರಣಾ ಸಮಿತಿಗಳು ಕೂಡಲೇ ಕೇಸುಗಳನ್ನು ವಿಲೇವಾರಿ ಮಾಡುವಂತೆ ಕ್ರಮವಹಿಸಬೇಕು. ಸರ್ಕಾರದ ನಿರುಪಯುಕ್ತ ಬಂಜರು ಜಮೀನು 20 ಲಕ್ಷದಷ್ಟಿದ್ದು

ಅದೇ ರೀತಿ ಉಪಯುಕ್ತ ಬಂಜರು ಜಮೀನು ಬಹಳಷ್ಟಿದ್ದು ಅದನ್ನು ಬಡರೈತರು, ಕೂಲಿಕಾರರು, ಗೇಣಿದಾರರಿಗೆ ಸೂಕ್ತ ನೆರವಿನೊಂದಿಗೆ ಅಭಿವೃದ್ಧಿಪಡಿಸಲು ನೀಡಬೇಕು. ಅಕ್ರಮ ಸಾಗುವಳಿನಿರತ ಬಡವರಿಗೆ ದಂಡ ಹಾಕುವುದನ್ನು ನಿಲ್ಲಿಸಬೇಕು.


9. ಅರಣ್ಯವಾಸಿಗಳ ಪರಂಪರಾಗತ-ಹಕ್ಕುಗಳನ್ನು ರಕ್ಷಿಸಬೇಕು. ಸಾಮಾಜಿಕ ಅರಣ್ಯ ಸಂರಕ್ಷಿಸಲು-ಬೆಳೆಸಲು ಬಡವರಿಗೆ ಉಚಿತ ಪಟ್ಟಾ ನೀಡಬೇಕು- ಭೂಮಿ ಹಂಚಬೇಕು. ಹಂಚಲಾದ ಭೂಮಿಯಲ್ಲಿ ಅರ್ಧದಷ್ಟು ಮರ ಬೆಳೆಸಲು ಇನ್ನರ್ಧ ಬೇಸಾಯಗೈಯ್ಯಲು ಅವಕಾಶವಿರಬೇಕು. ಅರಣ್ಯ ಬೆಳೆಸಲು ಸೂಕ್ತ ನೆರವು ಒದಗಿಸಬೇಕು.

10. ಈಗಿರುವ ಭೂಮಿತಿಯನ್ನು ಇನ್ನಷ್ಟು ಕಡಿಮೆ ಮಾಡಬೇಕು.

ಆಧಾರ ಗ್ರಂಥಗಳು

1. ಕರ್ನಾಟಕದಲ್ಲಿ ಭೂಸುಧಾರಣೆ-ಎಂ.ಎಸ್.ರಾಜನ್.
2. ಕರ್ನಾಟಕ ಪ್ರಾಂತ ರೈತ ಸಂಘದ ಚರಿತ್ರೆ-ಸಿ.ರಾಮಭದ್ರಯ್ಯ.
3. The Karnataka Land Reforms Act. 1961 (as amended by act 18 of 2004).
4. ಸ್ವಾತಂತ್ರ್ಯ ಗಂಗೆಯ ಸಾವಿರ ತೊರೆಗಳು-ಶ್ರೀ ಶಂಕರ ನಾರಾಯಣ.
5. ಪಂಚಾಯತಿ ರಾಜ್ ಸಂಸ್ಥೆಗಳು- ಸೂರ್ಯಕಾಂತ ಮಿಶ್ರ.
6. ಭೂ ಸುಧಾರಣೆಗಳು, ಪ್ರಸ್ತುತ ಸಂದರ್ಭದಲ್ಲಿ ಅವುಗಳ ಅವಶ್ಯಕತೆ.
7. ಅಖಿಲ ಭಾರತ ಕಿಸಾನ್ ಸಭಾದ ಚರಿತ್ರೆ.
8. ಸಿಪಿಐ(ಎಂ) ಪಕ್ಷದ ಕಾರ್ಯಕ್ರಮ.

With Best Compliments from :



ಕ್ರಾಂತಿಕಾರಿ ಶುಭಾಶಯಗಳೊಂದಿಗೆ,

ವಿಮಾ ನೌಕರರ ಸಂಘ,

ರಾಯಚೂರು ವಿಭಾಗ

Insurance Employees' Union



RAICHUR DIVISION

(Affiliated to AIIEA through SCZIEF)


(Regd. No. TUA/GD/19/87)

C/o L.I.C of India, Jeevan Prakash, Post Box No. 43,

Divisional Office, RAICHUR-584 101 Phone : (08532) - 230419

ಶುಭಾಶಯಗಳೊಂದಿಗೆ,

ವಿಪ್ರೋ ಕಾರ್ಮಿಕರ ಸಂಘ(ಸಿಐಟಿಯು)



' ವಿಪ್ರೋ ಕಾರ್ಮಿಕರ ಸಂಘ' ದ ಪದಾಧಿಕಾರಿಗಳು



ಬೆಳ್ಳಿ ಹಬ್ಬದ ಸಂದರ್ಭದಲ್ಲಿ ಪ್ರದರ್ಶಿಸಲಾದ 'ಹಸ್ತಾಂತರ'
ನಾಟಕದ ದೃಶ್ಯ, ಕಥೆ ನಾಟಕ
ರಚನೆ: ವಿ.ಕೆ.ಶ್ರೀನಿವಾಸ್ ನಿರ್ದೇಶನ: ಹೆಚ್.ಮಹೇಶ್‌ಕುಮಾರ್



ಜನವರಿ 22, 2006 ರಂದು ನಡೆದ 'ವಿಪ್ರೋ ಕಾರ್ಮಿಕ
ಸಂಘ'ದ ಬೆಳ್ಳಿಹಬ್ಬದ ಸಮಾರಂಭದ ವೇದಿಕೆ ಚಿತ್ರ

ಎಂ.ಎಸ್. ಮೀನಾಕ್ಷಿ ಸುಂದರಂ
ಅಧ್ಯಕ್ಷರು

ಟಿ. ಜಾಡರ್
ಉಪಾಧ್ಯಕ್ಷರು

ಇಕ್ಬಾಲ್ ಹುಸೇನ್
ಖಜಾಂಚಿ

ಸತೀಶ್‌ಕುಮಾರ್
ಪ್ರಧಾನ ಕಾರ್ಯದರ್ಶಿ

ಹೆಚ್. ಕೇಶವ ಸುಬ್ರಮಣ್ಯ
ಸಹ-ಕಾರ್ಯದರ್ಶಿ

ಕಾರ್ಯಕಾರಿ ಸಮಿತಿ ಸದಸ್ಯರು

ಶುಭಾಶಯಗಳೊಂದಿಗೆ,

ಕರ್ನಾಟಕ ರಾಜ್ಯ ಸರ್ಕಾರಿ ನೌಕರರ ಒಕ್ಕೂಟ (ರಿ)

ವಿಜಾಪುರ ಜಿಲ್ಲೆ



ಶುಭಾಶಯಗಳೊಂದಿಗೆ,

ನೋಂದಣಿ ಸಂಖ್ಯೆ: ಜಿ.ಆರ್.ಆರ್./7388/ಎ.ಓ.ಜಿ/87-88 ದೂರವಾಣಿ : 08532-231947

ರಾಯಚೂರು ಜಿಲ್ಲಾ ಸರಬರಾಜು ಮತ್ತು ಮಾರಾಟ ಸಹಕಾರ ಸಂಘ. ನಿಯಮಿತ.,

(ಕರ್ನಾಟಕ ಸರ್ಕಾರದ ಅಂಗ ಸಂಸ್ಥೆ)

ಮಹಿಳಾ ಸಮಾಜ ಎದುರುಗಡೆ, ರಾಯಚೂರು - 584 101

ಜೈ ಕುಮಾರ್, ಹೆಚ್.ಎಸ್
ವ್ಯವಸ್ಥಾಪಕ ನಿರ್ದೇಶಕರು

ಚನ್ನಬಸವನಗೌಡ
ಅಧ್ಯಕ್ಷರು

D.S.M.S., Raichur.

ಶುಭಾಶಯಗಳೊಂದಿಗೆ,

ಗ್ರಾಮ ಪಂಚಾಯತ್ ಬಗಲೂರ

ತಾ।। ಸಿಂದಗಿ **ಜಿ।। ವಿಜಾಪುರ**

ಸದಸ್ಯರ ಹೆಸರು	ಹುದ್ದೆ	ಗ್ರಾಮ
ಶ್ರೀಮತಿ ಮಾಂತಮ್ಮ ಬಿ.ಕಡಿಮನಿ	ಅಧ್ಯಕ್ಷರು	ಕುಳೆಕುಮಟಗಿ
ಶ್ರೀ ಕೆಂಚಪ್ಪ ಭೀ ಮಾಗಣಗೇರಿ	ಉಪಾಧ್ಯಕ್ಷರು	ಬಗಲೂರ
ಶ್ರೀ ಕಲ್ಲಪ್ಪ ಗಂ ಮುರಟಾವರ	ಸದಸ್ಯರು	ಬಗಲೂರ
ಶ್ರೀ ಹಣಮಂತ್ರಾಯ ಕ ಪಾಟೀಲ	ಸದಸ್ಯರು	ಬಗಲೂರ
ಶ್ರೀಮತಿ ಚೌರಮ್ಮ ಶಿ ಹಿಪ್ಪರಗಿ	ಸದಸ್ಯರು	ಬಗಲೂರ
ಶ್ರೀಮತಿ ಶರಣಮ್ಮ ಶಿ. ಕಲ್ಲೂರ	ಸದಸ್ಯರು	ಬಗಲೂರ
ಶ್ರೀಮತಿ ಜಯಶ್ರೀ ಧ. ಕಲಸೆಟ್ಟಿ	ಸದಸ್ಯರು	ಬಗಲೂರ
ಶ್ರೀ ಶಿವಣ್ಣಾ ಸೋಮರಾಯ ಪದ್ಮಾ	ಸದಸ್ಯರು	ಸಿರಸಗಿ
ಶ್ರೀ ಹಾವಣ್ಣ ಸಂಗಪ್ಪ ಹರಿಜನ	ಸದಸ್ಯರು	ಸಿರಸಗಿ
ಶ್ರೀ ಕಲಪ್ಪ ಭೀ. ದೇವಣಗಾಂ	ಸದಸ್ಯರು	ಕುಳೆಕುಮಟಗಿ
ಶ್ರೀ ಬಸವರಾಜ ಗು ಬಿರಾದಾರ	ಸದಸ್ಯರು	ಕುಳೆಕುಮಟಗಿ
ಶ್ರೀಮತಿ ಶಾಂತಾಬಾಯಿ ಈ. ಮಾನೆಗಾರ	ಸದಸ್ಯರು	ಕುಳೆಕುಮಟಗಿ
ಶ್ರೀ ಶಿಪ್ಪಣ್ಣಗೌಡ ಧ. ಪಾಟೀಲ	ಸದಸ್ಯರು	ಚಿಕ್ಕ ಹಾವಳಗಿ
ಶ್ರೀಮತಿ ಸುಶೀಲಾಬಾಯಿ ಧ. ಗಾಣೂರ	ಸದಸ್ಯರು	ಚಿಕ್ಕ ಹಾವಳಗಿ



ಶ್ರೀ ಐ.ಬಿ. ಬಗಲಿ
ಕಾರ್ಯದರ್ಶಿಗಳು







ಹಾರ್ದಿಕ ಶುಭಾಶಯಗಳೊಂದಿಗೆ,

ಕೋಟೆಕಾರು ವ್ಯವಸಾಯ ಸೇವಾ ಸಹಕಾರಿ ಬ್ಯಾಂಕು ನಿಯಮಿತ

ನಂ. ಡಿ.ಆರ್.ಜಿ/ಎಸ್/2551/76-77 'ರೈತ ಸದನ', ಅಂಚೆ : ಕೋಟೆಕಾರು - 575 022 (ದ.ಕ.)

KOTEKAR VYAVASAYA SEVA SAHAKARI BANK NIYAMITHA

No. DRG/S/2551/76-77 "Raitha Sadana" P.O. KOTEKAR - 575 022.(D.K.)

H.O. : KOTEKAR
Branch : ULLAL-PERMANNUR
Branch : DERALAKATTE

Phone H.O. : 2280824
Branch : 2466410
Branch : 2203547

ಶಾಖೆಗಳು :-

1. ಉಳ್ಳಾಲ ಪೆರ್ಮನ್ನೂರು – 2466410
2. ದೇರ್ಲಕಟ್ಟೆ – 2203547
3. ತಲಪಾಡಿ – 2280777

ಪ್ರಗತಿಯ ವಿವರಗಳು :

ಠೇವಣಾತಿ	:	ರೂ. 9.03,54,237-00
ಪಾಲು ಬಂಡವಾಳ	:	ರೂ. 40,50,975-00
ಸದಸ್ಯರ ಸಾಲ ಹೊರ ಬಾಕಿ	:	ರೂ. 8,29.24,053-00
ಒಟ್ಟು ವ್ಯವಹಾರ	:	ರೂ. 34,09,44.239-00
2004-05ನೇ ಸಾಲಿನ ಲಾಭ	:	ರೂ. 10,95,832-00

ಬ್ಯಾಂಕಿನಿಂದ ಸದಸ್ಯರಿಗೆ ಬೇಕಾಗುವ ಕೃಷಿ ಸಾಲ. ವಸತಿ ನಿರ್ಮಾಣ ಸಾಲ. ವಾಹನ ಖರೀದಿ ಸಾಲ. ಆಭರಣ ಈಡಿನ ಸಾಲ. ಇತ್ಯಾದಿ ಎಲ್ಲಾ ವಿಧದ ಕೃಷಿ ಸಾಲ ಹಾಗೂ ಕೃಷಿಯೇತರ ಸಾಲದ ಸೌಲಭ್ಯಗಳನ್ನು ನೀಡಲಾಗುತ್ತಿದೆ. ನವೋದಯ ಸ್ವಸಹಾಯ ಗುಂಪುಗಳ ರಚನೆ ಹಾಗೂ ಸ್ವಸಹಾಯ ಗುಂಪುಗಳಿಗೆ ಸಾಲವನ್ನು ನೀಡಿ ಗುಂಪಿನ ಸದಸ್ಯರ ಆರ್ಥಿಕ ಬೆಳವಣಿಗೆಗೆ ಸಹಾಯ ನೀಡುವುದು. ಬ್ಯಾಂಕಿನಿಂದ ಸದಸ್ಯರ ಪಾಲು ಬಂಡವಾಳದ ಮೇಲೆ ಶೇಕಡಾ 15 ಲಾಭಾಂಶವನ್ನು ಅನೇಕ ವರ್ಷಗಳಿಂದ ವಿತರಿಸಲಾಗುತ್ತಿದೆ. ಸದಸ್ಯರ ಠೇವಣಾತಿಯ ಮೇಲೆ ವಿಮಾ ಸೌಲಭ್ಯವಿರುವುದು.

ರಾಮಚಂದ್ರ ಉಚ್ಚಿಲ್
ಅಧ್ಯಕ್ಷರು

ಅಬ್ದುಲ್ ಅಜೀಜ್ .ಪಿ.ಇ.
ಉಪಾಧ್ಯಕ್ಷರು

ಯಚ್.ಆನಂದ
ವ್ಯವಸ್ಥಾಪಕರು



ಶುಭಾಶಯಗಳೊಂದಿಗೆ,

ಗ್ರಾಮ ಪಂಚಾಯತ್ ಮೋರಟಗಿ

ತಾ|| ಸಿಂದಗಿ **ಜಿ|| ವಿಜಾಪುರ**

2006 ನೇ ಇಸ್ವಿಯ ಪ್ರಗತಿಯ ಪಕ್ಷಿ ನೋಟ

- ಬಸ್ ನಿಲ್ದಾಣದಿಂದ -ವಾರಿಯವರೆಗೆ ಕಚ್ಚಾ ರಸ್ತೆ ನಿರ್ಮಾಣ
- 4ನೇ ವಾರ್ಡ್‌ನಲ್ಲಿ ಮುಖ್ಯರಸ್ತೆಯಿಂದ ಪರಿಶಿಷ್ಟ ಜಾತಿಯವರ ಓಣಿಗೆ - ಕಚ್ಚಾ ರಸ್ತೆ ನಿರ್ಮಾಣ
- ಟಿ.ಸಿ. ಕಟ್ಟೆ ನಿರ್ಮಾಣ
- ಬಸ್ ನಿಲ್ದಾಣದ ಕಟ್ಟಡ ನಿರ್ಮಾಣ ಮಾಡಿಸಲಾಗಿದೆ
- ಗಟಾರ ನೀರು ಹರಿದು ಹೋಗಲು ಪಾಯಿಪ ಜೋಡಣೆ
- ದರ್ಗಾದಿಂದ ಕೊಂಡವಾಡಿಯವರೆಗೆ ರಸ್ತೆ ನಿರ್ಮಾಣ
- ಪಂಚಾಯತ್ ಕಾರ್ಯಲಯಕ್ಕೆ (ಆಯಿಲ್ ಬಾಂಡ್) ಬಣ್ಣ ಮಾಡಿಸಲಾಗಿದೆ
- ಸ್ಮಶಾನ ಭೂಮಿಯಲ್ಲ ಜಂಗಲ್ ಕಂಟಿಂಗ್ ಮಾಡಲಾಗಿದೆ
- ರುದ್ರಭೂಮಿ ನಿರ್ಮಾಣ ಮಾಡಲಾಗಿದೆ
- ಎರಡನೇ ವಾರ್ಡ್‌ನಲ್ಲಿ ಚಿತ್ತವಾಡಗಿ ಯವರ ಮನೆಯಿಂದ ಭೀಮಶೇನಗೌಡರ ಮನೆಯವರೆಗೆ ಗಟಾರ ನಿರ್ಮಾಣ

ಮೋರಟಗಿ ಗ್ರಾಮ ಪಂಚಾಯತ್ ಕಮಿಟಿ

ಶ್ರೀ ಎಸ್.ಜಿ. ಕೊಲಾರ್	ಅಧ್ಯಕ್ಷರು	ಮೋರಟಗಿ	ಶ್ರೀಮತಿ ಸಿ.ಕೆ. ಮಾದರ	ಸದಸ್ಯರು	ಹಂಚನಾಳ
ಶ್ರೀಮತಿ ಬಿ.ಎಲ್.ಮಣಿಯಾರ	ಉಪಾಧ್ಯಕ್ಷರು	ಮೋರಟಗಿ	ಶ್ರೀ ಎಸ್.ವೈ. ಪಾಟೀಲ	ಸದಸ್ಯರು	ಕಕ್ಕಳಮೇಲಿ
ಶ್ರೀ ಬಿ.ಆರ್. ಕೆರಿಗೊಂಡ	ಸದಸ್ಯರು	ಮೋರಟಗಿ	ಶ್ರೀ ಎಸ್.ಜೆ. ಬಿರಾದಾರ	ಸದಸ್ಯರು	ಕಕ್ಕಳಮೇಲಿ
ಶ್ರೀ ಬಿ.ವೈ. ಹಡಪದ	ಸದಸ್ಯರು	ಮೋರಟಗಿ	ಶ್ರೀ ಎಸ್.ಕೆ. ಕೊನ್ನೂರ	ಸದಸ್ಯರು	ಕಕ್ಕಳಮೇಲಿ
ಶ್ರೀ ಬಿ.ಜೆ. ಪಾಟೀಲ	ಸದಸ್ಯರು	ಮೋರಟಗಿ	ಶ್ರೀ ಪಿ.ಬಿ. ಕೊಳಕೂರ	ಸದಸ್ಯರು	ಕಕ್ಕಳಮೇಲಿ
ಶ್ರೀ ಬಿ.ಎಸ್. ಸಿಂಗಾಡಿ	ಸದಸ್ಯರು	ಮೋರಟಗಿ	ಶ್ರೀ ಡಿ.ಆರ್. ರಾಠೋಡ	ಸದಸ್ಯರು	ಕಕ್ಕಳಮೇಲಿ
ಶ್ರೀ ಎನ್.ಬಿ. ಭಾಸಗಿ	ಸದಸ್ಯರು	ಮೋರಟಗಿ	ಶ್ರೀ ಆರ್.ವೈ. ಲಮಾಣಿ	ಸದಸ್ಯರು	ಕಕ್ಕಳಮೇಲಿ
ಶ್ರೀ ವೈ.ಎಸ್. ಯಂಕಂಚಿ	ಸದಸ್ಯರು	ಮೋರಟಗಿ	ಶ್ರೀ ಆರ್.ಎ. ಚವ್ಹಾಣ	ಸದಸ್ಯರು	ಕಕ್ಕಳಮೇಲಿ
ಶ್ರೀ ಸಿ.ಎಸ್. ಹೋಳಿ	ಸದಸ್ಯರು	ಮೋರಟಗಿ	ಶ್ರೀಮತಿ ಎಸ್.ಎನ್. ಇಂಡಿ	ಸದಸ್ಯರು	ಕಕ್ಕಳಮೇಲಿ
ಶ್ರೀಮತಿ ಎಸ್.ಎಸ್. ಕಡಣಿ	ಸದಸ್ಯರು	ಮೋರಟಗಿ	ಶ್ರೀಮತಿ ಪಿ.ಎನ್. ಮೆಳಕುಂದಿ	ಸದಸ್ಯರು	ಕಕ್ಕಳಮೇಲಿ
ಶ್ರೀಮತಿ ಎಸ್.ವಿ.ಸಾಲಿಮಠ	ಸದಸ್ಯರು	ಮೋರಟಗಿ	ಶ್ರೀ ಜಿ.ಎಸ್. ಸರಡಿ	ಸದಸ್ಯರು	ಕಕ್ಕಳಮೇಲಿ
ಶ್ರೀಮತಿ ಕೆ.ಸಿ. ಕಟ್ಟಿಮನಿ	ಸದಸ್ಯರು	ಮೋರಟಗಿ	ಶ್ರೀ ಎಸ್.ಎಸ್. ಗೂಜಿಕಲ್	ಸದಸ್ಯರು	ಕಕ್ಕಳಮೇಲಿ
ಶ್ರೀಮತಿ ಸಿ.ಎಂ. ಮಳಗಿ	ಸದಸ್ಯರು	ಮೋರಟಗಿ	ಶ್ರೀಮತಿ ಆರ್.ಎಸ್. ಹಳ್ಳೆಪ್ಪಗೋಳ	ಸದಸ್ಯರು	ಕಕ್ಕಳಮೇಲಿ
ಶ್ರೀ ಎಸ್.ಎಸ್. ಬಿರಾದಾರ	ಸದಸ್ಯರು	ಹಂಚನಾಳ	ಶ್ರೀಮತಿ ಡಿ.ಎಚ್. ಸುರಪುರ	ಸದಸ್ಯರು	ಕಕ್ಕಳಮೇಲಿ

ಶ್ರೀ ಐ.ಬಿ. ಬಗಲಿ
ಕಾರ್ಯದರ್ಶಿಗಳು

With Best Compliments from :

PES INSTITUTIONS

education for the real world

50 Feet Road, Hanumanthanagar, BSK 1st Stage, Bangalore - 560 050. Karnataka, India.





1. PES INSTITUTE OF MEDICAL SCIENCES & RESEARCH

Kuppam, Chittoor(dist.) A.P
(Affiliated to NTR University of Heath Sciences, recognized by MCI)
Course- MBBS

2. PES SCHOOL OF NURSING

(Recognised by govt. of A.P. Nursing & Midwifery council)

3. P.E.S. INSTITUTE OF TECHNOLOGY

(Recognised by AICTE, New Delhi & Affiliated to VTU)

B.E. – 4 Years Course

BRACHES:

a) Electronics & Communication Engineering
b) Information Science & Technology
c) Computer Science & Engineering
d) Tele-Communication Engineering
e) Mechanical Engineering
f) Bio-technology Engineering

4. P.E.S. DEGREE COLLEGE (Applied Science)

(Affiliated to Bangalore University)

B.Sc. – 3 Years Course

COMBINATIONS :

a) Bio –technology, Chemistry, Zoology
b) Microbiology, Chemistry, Zoology
c) Genetics, Bio-Chemistry, Zoology
d) Electronics, Maths, computer Science
e) Computer Science, Physics, Maths
f) Physics, Chemistry, Maths

B.C.A – Bachelor of Computer Applications
B.Com. –Bachelor degree in Commerce

5. P.E.S. POLYTECHNIC

(Recognised by govt. of Karnataka & AICTE, New Delhi)
Diploma – 3 Years Course
BRANCHES :

a) Computer Science & Engineering
b) Electronics & Communication Engineering
c) Mechanical Engineering
d) Automobile Engineering

6. P.E.S. INSTITUTE OF PHARMACY

(Recognised by Pharmacy Council of India & AICTE, New Delhi)
D. Pharma –2 Years Course

7. P.E.S. COLLEGE OF PHARMACY

(Recognised by Pharmacy Council of India, AICTE New Delhi & Affiliated to Rajiv Gandhi University of Heath Sciences)
B. Pharma – 4 Years Course

8. P.E.S. INSTITUTE OF HOTEL MANAGEMENT B.H.M – 4 Years Course

9. P.E.S. COLLEGE OF MANAGEMENT B.B.M. – 4 Years Course

10. P.E.S. POST-GRADUATE STUDIES IN MICRO-BIOLOGY & RESEARCH CENTRE (M. Sc.)

11. P.E.S. POST GRADUATE STUDIES IN BIO-TECHNOLOGY & RESEARCH CENTRE (M. Sc.)

12. P.E.S. SCHOOL OF MANAGEMENT (M.B.A)

13. P.E.S. POST-GRADUATE COLLEGE OF COMPUTER APPLICATION (M.C.A)

14. PRE-UNIVERSITY COURSES

(Affiliated to Pre-University Board, Recognised by govt of Karnataka)

Science: P.C.M.B., P.C.M.Cs., P.C.M.E.,

Commerce : G. E.BS.A., S.BS. A Cs., BM.S.A.BS.



Prof. M.R. DORESWAMY
Founder - Secretary
Phone:off : +91-80-26679646, 26529391, 26721983, 26722108.
E-mail : pesgroup@vsnl.net
Website : www.pes.edu





ಹೊನ್ನ ಹೊಸ್ತಿಲದ ಮುನ್ನಡೆಯಲ್ಲಿ ಏಕೀಕೃತ

ಕರ್ನಾಟಕ

ಕರುನಾಡ ಸಿರಿನುಡಿ - ಕನ್ನಡ
ಕಸ್ತೂರಿ ಪರಿಮಳದ ಕುಡಿ - ಕನ್ನಡ ನುಡಿ
ಹಾಲ್ಜೇನಿನ ಮಧುರ ಜಡಿ - ಕನ್ನಡ ನಾಣ್ನುಡಿ

2000 ವರ್ಷಕ್ಕೂ ಮಿಕ್ಕ ಇತಿಹಾಸವಿರುವ ಕನ್ನಡ ಭಾಷೆ, ಸಾಹಿತ್ಯ ಅನನ್ಯ ಮತ್ತು ಅನುಕರಣೀಯ. ಇಂದು ಕೂಡ ಕರ್ನಾಟಕ ಸಮಗ್ರ ಮಾಹಿತಿ ತಂತ್ರಜ್ಞಾನ, ಜೈವಿಕ ತಂತ್ರಜ್ಞಾನ, ಆಟೋಮೊಬೈಲ್ ಉದ್ಯಮ, ಸಿದ್ಧ ಉಡುಪು, ಆಭರಣಗಳು, ಕ್ರೀಡೆ, ಪುಷ್ಪೋದ್ಯಮದಂತಹ ಪ್ರಮುಖ ಕ್ಷೇತ್ರಗಳಲ್ಲಿ ಸಾಧಿಸಿದ ಪ್ರಗತಿಯೂ ಶ್ಲಾಘನೀಯ.

ಕರ್ನಾಟಕ ಭಾರತಕ್ಕಷ್ಟೇ ಮಾತ್ರವಲ್ಲ ಇಡೀ ವಿಶ್ವಕ್ಕೆ ಮಾದರಿ.

ಅಪಾರ ಕೀರ್ತಿ ಗಳಿಸಿ ಮೆರೆವ ಭವ್ಯನಾಡಿಗೆ, - ಇಂದು ಸುವರ್ಣ ಸಂಭ್ರಮ.

ಕರ್ನಾಟಕ ವಾರ್ತೆ

www.kiadb.com



Paving the way for Karnataka's Industrial Development.





If Karnataka is the land of opportunities, Karnataka Industrial Areas Development Board (KIADB) has been the single doorway responsible for ushering them in for over three decades.

We strive to give shape to our mission of developing industries in the State of Karnataka, thus participating in the development of our Nation by:

• Developing World class infrastructure in Industrial areas • Setting a benchmark by providing dedicated service to entrepreneurs • Expeditiously processing the requests of allotees • Encouraging environment friendly projects • Creating a conducive atmosphere for industrial growth.

Moulding our vision into a tangible identity, we strive to complete the following projects:

• World-class Apparel Technology Park at Doddabalapur to accelerate the growth and provide better infrastructure facilities for the garment industry • Electronic City, Phase 4 & 5 to accommodate the advent of more companies & facilitate expansion for the existing ones • EPIP Mangalore to provide civic amenity along with infrastructure facilities • Special Economic Zone at Hassan - the education & technology hub • Food Park at Jewargi, Maddur, Bagalkot, Shimoga & Mysore • Growth Centre at Dharwad, Raichur - to ensure infrastructure facilities as it's an ideal place for commercial & trade activities • We have endowed 93 industrial areas spread across Karnataka

KARNATAKA INDUSTRIAL AREAS DEVELOPMENT BOARD

(A Government of Karnataka Undertaking)

14/3, 2nd Floor, Rastrothana Parishat Building, Nrupathunga Road, Bangalore - 560 001.

Ph: 2215383, 2215679, 2210759, 2242006 Fax: 080-2217702 E-mail: bngudyog@kar.nic.in